ಇದುವೇ ಜೀವನ


# ಸಾಕ್ಷರತೆ

# TRUE EDUCATION

# ಸಂಗೀತ

ಡಾ|| ಸಿ. ರಾಮಸ್ವಾಮಿ. M.B.B.S., Ph.D., ( U.S.A. )

ಪುನರ್ಜನ್ಮ ಸಂಶೋಧನ ಕೇಂದ್ರ



# ಇದುವೇ ಜೀವನ ಸಾಕ್ಷರತೆ

# ಸಂಗೀತ ಶಾಸ್ತ್ರದ ಸೌರಭ !

## ಕನ್ನಡ ಸಾಹಿತ್ಯದ ಮಕರಂದ !!

## ಮಾನವ ಸಂಸ್ಕೃತಿಯ ಸಂದೇಶ !!!

**ಇದುವೇ ಮಾನವ ಬದುಕಿನ ಬಂಗಾರ.........**
**ಇದುವೇ ಮಾನವ ಜೀವನ ಸಾಕ್ಷಾತ್ಕಾರ.........**

ಪುನರ್ಜನ್ಮ ಪ್ರಕಾಶನದ ಈಸಂಗೀತ - ಸಾಹಿತ್ಯ -ಸಂಸ್ಕೃತಿಯ ಪ್ರಚಾರ ।
ವಿಶ್ವ ಸಾಹಿತ್ಯದ ವಿಶ್ವ ಮಾನವ ಸಂಸ್ಕೃತಿಯ ಝೇಂಕಾರ
ಇದುವೇ ಕನ್ನಡ ಸಾಹಿತ್ಯ ಶೃಂಗಾರ ॥

ಇದುವೇ ಮಾನವ ಬದುಕಿನ ಬಂಗಾರ ।
ಇದುವೇ ಮಾನವ ಜೀವನ ಸಾಕ್ಷಾತ್ಕಾರ ॥

ಪುನರ್ಜನ್ಮ ಸಂಶೋಧನ ಕೇಂದ್ರದ ಈ ಜನ್ಮಾಂತರ ಜ್ಞಾನಸಾರ ।
ಸರ್ವಧರ್ಮಗಳ ಸಹಿಷ್ಣುತೆಗೆ ನೀಡಲಿದೆ ವಿನೂತನ ಆಧಾರ
ಇದುವೇ ಭಾರತ ಸಂಸ್ಕೃತಿಯ ಶೃಂಗಾರ ॥

ಇದುವೇ ಮಾನವ ಬದುಕಿನ ಬಂಗಾರ ।
ಇದುವೇ ಮಾನವ ಜೀವನ ಸಾಕ್ಷಾತ್ಕಾರ ॥

ಪುರಾತನ ಕಾಲದ ಈ ಪುನರ್ಜನ್ಮ ಸುಜ್ಞಾನ ಸುವಿಚಾರ ।
ಮಾನವ ಕುಲಕ್ಕೆ ನೀಡಲಿದೆ ವಿನೂತನ ವಿಶ್ವಶಾಂತಿಯ ಆಧಾರ
ಇದುವೇ ವಿಶ್ವಶಾಂತಿಗೆ ವಿವೇಕಯುತ ನಿರ್ಧಾರ ॥

ಇದುವೇ ಮಾನವ ಬದುಕಿನ ಬಂಗಾರ ।
ಇದುವೇ ಮಾನವ ಜೀವನ ಸಾಕ್ಷಾತ್ಕಾರ ॥

ಪುನರ್ಜನ್ಮ ಸಂಶೋಧನ ಕೇಂದ್ರದ ಈ ಪುನರ್ಜನ್ಮ ಜ್ಞಾನಸಾರ।
ಸರ್ವದೇಶ ಧರ್ಮಗಳಿಗೂ ನೀಡಲಿದೆ ಸುಖಿನೋಭವ ಸಾಕ್ಷಾತ್ಕಾರ
ಇದುವೇ ಮಾನವ ಬದುಕಿನ ಬಾಳ ಬಂಗಾರ ॥

ಇದುವೇ ಮಾನವ ಬದುಕಿನ ಬಂಗಾರ ।
ಇದುವೇ ಮಾನವ ಜೀವನ ಸಾಕ್ಷಾತ್ಕಾರ ॥

ಜನುಮ ಜನುಮ ಜ್ಞಾನದ ಈ ಮಾನವ ಅಂತರ್‌ಜ್ಞಾನ ಸಂಸ್ಕಾರ ।
ವಿಶ್ವ ಜನತೆಗೆ ನೀಡಲಿದೆ ದಿವ್ಯ ಆತ್ಮಜ್ಞಾನದ ಸುಜ್ಞಾನ ಸಾಕ್ಷಾತ್ಕಾರ
ಇದುವೇ ಮಾನವ ಜೀವನ ಅಂತಿಮ ಸಾಕ್ಷಾತ್ಕಾರ ॥

**ಡಾ ॥ ಸಿ. ರಾಮಸ್ವಾಮಿ.**

# ಸಂಗೀತ ಸೌರಭ

## ಸಾ ಕ್ಷ ರ ತೆ ಯ ಮೊದಲನೇಯ ಭಾಗ

ಡಾ ॥ ಸಿ. ರಾಮಸ್ವಾಮಿ.


- ಲೇಖಕರು -

ಡಾ ॥ಸಿ. ರಾಮಸ್ವಾಮಿ. M.B.B.S., Ph.D., ( U.S.A. )
ಲೇಖಕ - ಸಂಪಾದಕ - ಪುನರ್ಜನ್ಮ ಸಂಶೋಧಕ
ನಿರ್ದೇಶಕ
ಪುನರ್ಜನ್ಮ ಸಂಶೋಧನ ಕೇಂದ್ರ
ನಂ. 101, ಶ್ರೀ ಅಪಾರ್ಟ್‌ಮೆಂಟ್ಸ್, ಕೃಷ್ಣ ಅಡ್ಡರಸ್ತೆ ,
ಬಸವನಗುಡಿ, ಬೆಂಗಳೂರು - 560 004.



- ಪ್ರಕಾಶಕರು -

ಶ್ರೀಮತಿ ಬಿ.ಎಲ್. ಮಂಗಳಗೌರಿ. B.Sc., B.Ed.
ಪುನರ್ಜನ್ಮ ಪ್ರಕಾಶನ
ನಂ. 101, ಶ್ರೀ ಅಪಾರ್ಟ್‌ಮೆಂಟ್ಸ್, ಕೃಷ್ಣ ಅಡ್ಡರಸ್ತೆ ,
ಬಸವನಗುಡಿ, ಬೆಂಗಳೂರು - 560 004.
ದೂರವಾಣಿ : 2661 5449

# ಸಂಗೀತ ಸೌರಭ

## ಸಾ ಕ್ಷ ರ ತೆ ಯ ಮೊದಲನೇಯ ಭಾಗ

ಡಾ ॥ ಸಿ. ರಾಮಸ್ವಾಮಿ.

**PUBLISHER**
**Smt. B. L. Mangala Gowri.** B.Sc. B.Ed.
**PUNARJANMA PUBLICATIONS**

**COPYRIGHT BY PUBLISHER / AUTHOR**
( Subjected to Bangalore Jurisdiction )

**First Edition :** August 2007
**Second Edition :** August 2013
**COPIES : Unlimited** Free distribution
Through E-Mail ; Web site & Print media

**PRICE :** Free distribution only

**ವಿಶ್ವಮಾನವ ಸಂಸ್ಕೃತಿಯ ಸಾಕ್ಷರತೆ, ಸಾರ್ಥಕತೆ, ಸಾಕ್ಷಾತ್ಕಾರ, ಮನಸ್ಸಿನ ರಹಸ್ಯ, ಮನೋರೋಗಗಳ ರಹಸ್ಯ, ಸೃಷ್ಟಿಯ ರಹಸ್ಯ ಮತ್ತು ಮನುಕುಲದ ಭವಿಷ್ಯ ಪುನರ್ಜನ್ಮ ಸಂಶೋಧನೆ ಮತ್ತು ಆತ್ಮದ ಅಸ್ತಿತ್ವ, ವಿಶ್ವಶಾಂತಿ ಮತ್ತುಮಾನವ ಜನಾಂಗದ ಪುನರುತ್ಥಾನ, ಈ ಜ್ಞಾನ-ವಿಜ್ಞಾನ-ಸುಜ್ಞಾನ-ದಿವ್ಯಜ್ಞಾನ ಸಂದೇಶವನ್ನೂ ಹಾಗೂ ವಿಶ್ವಶಾಂತಿಯ ಅಮರ ಆದೇಶವನ್ನೂ ಮಾನವಜನಾಂಗದಲ್ಲಿ ಪ್ರಸರಿಸುವ ಉದ್ದೇಶದಿಂದ ಪುನರ್ಜನ್ಮ ಸಂಶೋಧನ ಕೇಂದ್ರದ ಈಉಚಿತ ಪ್ರಕಟಣೆ.**

**GRAPHIC DESIGNER**
**Smt. R. Sushma**
**CRISSP VISIONS**

**PUBLISHED BY**
**PUNARJANMA PRAKASHNA**
**Shree apartments**
**Krishna Road Cross**
**Basavanagudi**
**Bangalore - 560 004**
**Karnataka**
**I N D I A**

# ಪ ರಿ ವಿ ಡಿ


| ಅಧ್ಯಾಯ | ವಿವರ | ಪುಟ |
|---|---|---|
| I | ಇದುವೇ ಜೀವನ ಸಾಕ್ಷರತೆ | 1 |
| II | ಸಂಗೀತ ಸೌರಭ | 4 |
| III | ಪರಿವಿಡಿ | 6 |
| IV | ಸಾಕ್ಷರತೆ | 7 |
| V | ಮೊದಲ ಮಾತು | 9 |
| VI | ನಿವೇದನೆ | 11 |
| VII | ಕೃತಜ್ಞತೆ | 13 |
| VIII | ಅರ್ಪಣೆ- ಸಮರ್ಪಣೆ | 14 |
| IX | ವಿಶ್ವಮಾನವ ಸಂಸ್ಕೃತಿಯ ಕನ್ನಡ ಕಹಳೆ ಮೊಳಗಲಿ | 15 |
| X | ಸ್ವಾಗತ - ಸುಸ್ವಾಗತ | 16 |


## ಸಂಗೀತದ ಶಾಸ್ತ್ರದ ಸೌರಭ !


| | | |
|---|---|---|
| 1. | ಸಂಗೀತ ಸೌರಭ | 17 |
| 2. | ಕಲೆಗಳು | 25 |
| 3. | ಸಂಗೀತ ಪವಾಡಗಳ ದರ್ಶನ - ಸಂದರ್ಶನ | 32 |
| 4. | ಸಂಗೀತದ ಶಾಸ್ತ್ರದ ಸೌರಭ ! | 35 |
| 5. | ನವರಸಗಳು | 37 |
| 6. | ಸಂಗೀತದ ಉಗಮ -ಸಾಹಿತ್ಯದ ಆಗಮ | 42 |
| 7. | ಜಾನಪದ ಗೀತೆಗಳು - ಕನ್ನಡದ ವೇದಗಳು ! | 45 |
| 8. | ಸುಗಮ ಸಂಗೀತಗಳು - ರಸಭಾವ ಚಿಲುಮೆಗಳು ! | 47 |
| 9. | ವಿಶ್ವ ಸಂಗೀತ ಪದ್ಧತಿಗಳು | 50 |
| 10. | ಕರ್ನಾಟಕ ಶಾಸ್ತ್ರೀಯ ಸಂಗೀತ | 53 |
| 11. | ಸಪ್ತ ಸ್ವರಗಳು | 63 |
| 12. | ರಾಗ | 67 |
| 13. | ತಾಳ ಮತ್ತು ಲಯ | 77 |
| 14. | ನಾದ | 84 |
| 15. | ಶಾಸ್ತ್ರದ ರಚನೆಗಳು - ಶಾಸ್ತ್ರದ ರಚನಾಕಾರರು | 86 |
| 16. | ಸಂಗೀತ ವಾದ್ಯಗಳು - ಸಂಗೀತ ವಾದ್ಯಕಾರರು | 92 |
| 17. | ನೃತ್ಯ | 95 |
| 18. | ಕನ್ನಡ ನಾಡಿನ ಭೂಸ್ವರ್ಗದಲ್ಲಿ ರಾಮು - ಶೀಲ | 100 |
| | ವಿಶ್ವಮಾನವ ಸಂಸ್ಕೃತಿಯನ್ನು ಬೆಳಗಿಸೋಣ ಬನ್ನಿ | 109 - 112 |

# ಸಾಕ್ಷರತೆ

ಓದಿ ವಿಷಯವನ್ನು ಗ್ರಹಿಸಿಕೊಳ್ಳುವುದರ ಜೊತೆಗೆ ನಿತ್ಯಜೀವನಕ್ಕೆ ಸಂಬಂಧಪಟ್ಟ ಲೌಕಿಕ ವಿಷಯವನ್ನು ಸರಳವಾದ ಶೈಲಿಯಲ್ಲಿ ಬರೆಯುವ ಅಕ್ಷರಜ್ಞಾನವನ್ನು ಹೊಂದುವುದು ಅಕ್ಷರತೆ ಅಂದರೆ ಲಿಟರಸಿ ಎನ್ನುತ್ತೇವೆ.ಆ ಅಕ್ಷರತೆಯ ಅಕ್ಷರಜ್ಞಾನವನ್ನು ತಿಳಿದವನನ್ನು ಅಕ್ಷರಸ್ಥನೆನ್ನುತ್ತಾರೆ ಅಂದರೆ ಲಿಟರೇಟ್ ಎನ್ನುತ್ತೇವೆ.ಆ ಅಕ್ಷರತೆಯೇ ಅಲೌಕಿಕ ಜ್ಞಾನಾರ್ಜನೆಯ ಸಾಧನವಾದಾಗ ಅದನ್ನೇ ಸಾಕ್ಷರತೆ ಎನ್ನುತ್ತೇವೆ.

ಆ ಸಾಕ್ಷರತೆ ಮಾನವನನ್ನು ಸುಶಿಕ್ಷಿತನನ್ನಾಗಿ ಮಾಡುತ್ತದೆಅಂದರೆ ಸುಸಂಸ್ಕೃತನನ್ನಾಗಿ ಮಾಡುತ್ತದೆ. ಇಂದಿನ ವಿದ್ಯಾರ್ಥಿಗಳಿಗೆ ದೊರೆಯುವ ಶಿಕ್ಷಣ ಕೇವಲ ಸರ್ಕಾರೀಯ ಅಥವ ಖಾಸಗಿ ಉದ್ಯೋಗವನ್ನು ಪಡೆದು ಹೊಟ್ಟೆ ಹೊರೆದುಕೊಳ್ಳುವ ಗುರಿಯನ್ನು ಹೊಂದಿ, ಇದರಿಂದ ನಮ್ಮ ಜೀವನ ಧನ್ಯ ಎಂದು ಭಾವಿಸುವ ಶಿಕ್ಷಣವಾಗಿದೆ. ಇಂದಿನ ಈ ರೀತಿಯ ದಾರಿತಪ್ಪಿದ ಶಿಕ್ಷಣ (Education)ನಮ್ಮ ಇಂದಿನ ಮಾನವ ಜೀವನವನ್ನು ಅಧಃಪತನಕ್ಕೆ ತಳ್ಳಿದೆ. Educationಎಂಬ ಪದವು ಲ್ಯಾಟಿನ್ ಭಾಷೆಯ Educare ಎಂಬ ಪದದ ಉತ್ಪತ್ತಿ. ಇದರ ಅರ್ಥ ದಾರಿತೋರಿಸು, ಅಭಿವೃದ್ಧಿಪಡಿಸು ಎಂದಾಗುತ್ತದೆ. ಶಿಕ್ಷಣ ಎನ್ನುವುದು ಬೆಳವಣಿಗೆ, ಅಭಿವೃದ್ಧಿಗಳಿಗೆ ಅನ್ವಯಿಸುವ ಪದ.

ನಿಜವಾದ ಶಿಕ್ಷಣವೆಂದರೆ ಕೇವಲ ವಿದ್ಯಾದಾನವಲ್ಲ ಅದು ಜ್ಞಾನದಾನವಾಗಬೇಕು ಅಂದರೆ ವಿದ್ಯಾರ್ಥಿಗೆ ದೊರೆಯುವ ಶಿಕ್ಷಣ ಕೇವಲ ಹೊಟ್ಟೆ ಹೊರೆದುಕೊಳ್ಳುವ ಗುರಿಯನ್ನು ಹೊಂದಿರುವ ಶಿಕ್ಷಣವಾಗಬಾರದು. ಸರ್ಕಾರಿ ಉದ್ಯೋಗವನ್ನು ಪಡೆದು ನಮ್ಮ ಜೀವನ ಧನ್ಯ ಎಂದು ಭಾವಿಸುವ ಶಿಕ್ಷಣವಾಗಬಾರದು. ಶಿಕ್ಷಣವೆಂದರೆ ಕೇವಲ ಗ್ರಂಥಗಳ ಅಧ್ಯಯನವೂ ಅಲ್ಲ, ವಿಷಯಗಳ ಸಂಗ್ರಹಣೆಯೂ ಅಲ್ಲ.ನಿಜವಾದ ಶಿಕ್ಷಣ ವ್ಯಕ್ತಿಯನ್ನು ಮಾನವನನ್ನಾಗಿಸುವ ಶಿಕ್ಷಣ ಆಗಿರಬೇಕು. ಅಂತಹ ಮಾನವನ ಹಾಗೂ ಮಾನವೀಯ ಗುಣಗಳು ಅಭಿವೃದ್ಧಿಯಾಗಲು ತಕ್ಕ ಅವಕಾಶ ಮುಕ್ತವಾಗಿ ಶಿಕ್ಷಣದಲ್ಲಿ ದೊರೆಯಬೇಕು.

ಮನುಷ್ಯ ಮೊದಲು ಮಾನವನಾಗಿರಬೇಕು. ನಂತರ ಅವನ ವಿಜ್ಞಾನಿಯೋ, ವೈದ್ಯನೋ, ಇಂಜಿನಿಯರೋ, ವಕೀಲನೋ ಕವಿಯೋ, ಕಲಾವಿದನೋ, ತತ್ವಶಾಸ್ತ್ರಜ್ಞನೋ, ಮತ್ತೊಂದೋ ಆಗಬಹುದು.

ಹಾಗಾದರೆ ಶಿಕ್ಷಣದ ಮಹತ್ತರ ಉದ್ದೇಶ ಏನಾಗಿರಬೇಕು ?

ಶಿಕ್ಷಣಕ್ಕೆ ಮಹತ್ವ ಬರುವುದು ಅದನ್ನು ನೀಡುವ ಉದ್ದೇಶ ಗುರಿ ಹಾಗೂ ವಿಧಾನಗಳಿಂದ ಮಾತ್ರ. ಶಿಕ್ಷಣವೆಂದರೆ ಕೇವಲ ವಿದ್ಯಾದಾನವೇ ? ಅದು ಕೇವಲ ವಿದ್ಯಾದಾನವಾಗಿದ್ದರೆ ಇಂದಿನ ಸಾಮಾಜಿಕ ರಾಷ್ಟ್ರೀಯ ಹಾಗೂ ವೈಯಕ್ತಿಕ ಬದುಕು ಏಕೆ ಹದಗೆಡಬೇಕಾಗಿತ್ತು ? ಲೌಕಿಕ ಬದುಕು ಉತ್ತಮಗೊಳ್ಳುತ್ತದೆಯೆಂದು ಕಂಡು ಬಂದರೂ ಮಾನವೀಯ ಬದುಕು ದಿನದಿಂದ ದಿನಕ್ಕೆ ಹದಗೆಡುತ್ತಿದೆ. ವಿದ್ಯಾವಂತರ ಸಂಖ್ಯೆ ಹೆಚ್ಚಿದಷ್ಟು ಚಾರಿತ್ರ್ಯ ಹಾಗೂ ಮಾನವ ಸಂಬಂಧಗಳು ನಿಧಾನವಾಗಿಮಾಯವಾಗುತ್ತಿವೆ. ಜೀವನದ ಸೌಲಭ್ಯಗಳು ಹೆಚ್ಚಿದಷ್ಟು ಜೀವಿಗಳ ಬಾಂಧವ್ಯ ಮರೆಯಾಗುತ್ತಿದೆ. ಅಂದರೆ ನಮಗೆ ದೊರಕುತ್ತಿರುವ ಶಿಕ್ಷಣ ದೋಷಪೂರ್ಣವಾಗಿರಬೇಕು ಅಥವಾ ಅರ್ಥಪೂರ್ಣವಾಗಿಲ್ಲದಿರಬೇಕು.

ಸಮಾಜದ ಸಂಘಟನೆಯಲ್ಲಿ ರಾಷ್ಟ್ರದ ಅಭಿವೃದ್ಧಿಯಲ್ಲಿ ಮಾನವನ ಶಿಕ್ಷಣ ಒಂದು ಪ್ರಮುಖ ಪ್ರಕ್ರಿಯೆ. ನಿಜವಾದ ಶಿಕ್ಷಣವೆಂದರೆ ಮನುಷ್ಯನ ಇಚ್ಛಾಶಕ್ತಿಯನ್ನು ಸರಿಯಾದ ಮತ್ತು ಸಮರ್ಥವಾದ ರೀತಿಯಲ್ಲಿ ಬಳಸುವಂತೆ ತರಬೇತಿ ನೀಡುವುದು. ವ್ಯಕ್ತಿಯಲ್ಲಿ ಸುಪ್ತವಾಗಿ ಅಡಗಿರುವ ಜ್ಞಾನ ಸಂಪತ್ತನ್ನು ಉತ್ತಮ ಪರಿಸರದಲ್ಲಿ ವೀಕ್ಷಿಸುವಂತೆ ಮಾಡಿ ವ್ಯಕ್ತಿಯಲ್ಲಿ ಶಿಸ್ತು, ಚತುರತೆ, ಸ್ವಾತಂತ್ರ್ಯ ಹಾಗೂ ವಿಧೇಯತೆ ಭಾವನೆಯನ್ನು ಬೆಳೆಸುವುದೇ ಶಿಕ್ಷಣ. ನಿಜವಾದ ದೈಹಿಕ ಬೌದ್ಧಿಕ ಹಾಗೂ ಭಾವನಾತ್ಮಕ ದೃಷ್ಟಿಗಳಿಂದ ವ್ಯಕ್ತಿಯು ಸಮನಾಗಿ ಬದಲಾವಣೆ ಹೊಂದುತ್ತ ಬೆಳವಣಿಗೆ ಹಾಗೂ ಅಭಿವೃದ್ಧಿಗಳನ್ನು ಸಾಧಿಸುತ್ತಾನೆ. ಇದನ್ನೇ ಶಿಕ್ಷಣ ಎನ್ನಬಹುದು.

ಜೀವನ ಪರ್ಯಂತ ಗಳಿಸುವ ಅನುಭವವೇ ಶಿಕ್ಷಣ. ನಿಜವಾದ ಶಿಕ್ಷಣ ಒಬ್ಬ ಕಾರ್ಯಗತ ವ್ಯಕ್ತಿಯಲ್ಲಿ ಪರಿವರ್ತನೆಯನ್ನುಂಟು ಮಾಡುತ್ತದೆ. ಇದೊಂದು ಜೀವನ ಪರ್ಯಂತ ನಡೆಯುವ ಕ್ರಿಯೆ. ಅದು ಹುಟ್ಟುಗುಣಗಳನ್ನು ವಿಕಾಸ ಮಾಡುತ್ತದೆ. ಉತ್ತಮ ಜೀವನ ನಡೆಸಲು ಸಹಾಯಕವಾಗತ್ತದೆ. ವ್ಯಕ್ತಿಯ ಸರ್ವತೋಮುಖ ಬೆಳವಣಿಗೆಗೆ ಕಾರಣೀಭೂತವಾಗುತ್ತದೆ.ಮನುಷ್ಯನಲ್ಲಿ ಆಗಲೇ ಇರುವ ಮಾನವೀಯತೆಯ ಬೆಳವಣಿಗೆಯ ಪೂರ್ಣತೆಯನ್ನು ವ್ಯಕ್ತಗೊಳಿಸುವುದೇ ನಿಜವಾದ ಶಿಕ್ಷಣ. ಶಿಕ್ಷಣ ಪಡೆದ ವ್ಯಕ್ತಿಯು ಹೃದಯದಲ್ಲಿ ಅಪರಿಮಿತ ಅನುಕಂಪ,

ಭಾವನೆಯನ್ನು ಕಾರ್ಯಗತಗೊಳಿಸುವ ದಕ್ಷತೆ ಹಾಗೂ ಹಿಡಿದ ಕಾರ್ಯವನ್ನು ಬಿಡದೆ ಸಾಧಿಸಬಲ್ಲ ಎದೆಗಾರಿಕೆ ಹೊಂದಿರಬೇಕು.

## ಇಂದಿನ ಶಿಕ್ಷಣವನ್ನು ನೀವು ಸಂಸ್ಕಾರಯುತವನ್ನಾಗಿ ಮಾಡಬೇಕು

ಸಂಸ್ಕಾರವೆಂಬುದು ಜೀವನದ ಕ್ರಮ. ಸಾಮಾಜಿಕ ಪರಂಪರೆ ಮತ್ತು ಸಾಮಾಜಿಕ ವಿಧಾನಗಳು ವ್ಯಕ್ತಿಯ ದೇಹಕ್ಕೆ ಸೌಂದರ್ಯಕ್ಕೆ ಒಂದು ಕಡೆ ಮೆರಗು ನೀಡಿದರೆ ಮತ್ತೊಂದೆಡೆ **ಸಂಗೀತ, ಕಲೆ, ಶಿಲ್ಪಕಲೆ, ಸಾಹಿತ್ಯ, ಸಂಸ್ಕೃತಿ** ಮುಂತಾದುವುಗಳ ಬೆಳವಣಿಗೆ ಮನಸ್ಸಿಗೆ ನೆಮ್ಮದಿ ನೀಡುತ್ತವೆ.

ಮಕ್ಕಳ ಗಮನವನ್ನು ಸಂಸ್ಕಾರವೆಂಬ ಶಬ್ದಾರ್ಥದ ಕಡೆಗೆ ಸೆಳೆದರೆ ಮಾತ್ರ ಅವರು ತಮ್ಮ ನಡವಳಿಕೆಗಳನ್ನು ಸುಧಾರಿಸಿಕೊಂಡು ಸಮಾಜವನ್ನು ಉನ್ನತೀಕರಿಸುತ್ತಾರೆ. ಸುಸಂಸ್ಕೃತವಾದ ಒಬ್ಬ ವ್ಯಕ್ತಿ ಬೆಲೆಕಟ್ಟಲಾಗದಂತಹ ಅತ್ಯುನ್ನತ ಮೌಲ್ಯವುಳ್ಳ ಸಮಾಜದ ಬಹುದೊಡ್ಡ ಆಸ್ತಿ. ಸಂಸ್ಕಾರವು ಒಂದು ರಾಷ್ಟ್ರದ ಜೀವನಾಡಿಯ ಪ್ರತೀಕ. ಆದ್ದರಿಂದಲೇ ಒಂದೊಂದು ರಾಷ್ಟ್ರವು ತನ್ನ ಸಾಂಸ್ಕೃತಿಕ ಹೆಸರನ್ನು ಹೇಳುತ್ತಾ ಬಂದಿದೆ. ಉದಾ: ಭಾರತೀಯ ಸಂಸ್ಕೃತಿ, ಬ್ರಿಟಿಷ್ ಸಂಸ್ಕೃತಿ, ಅಮೇರಿಕಾಸಂಸ್ಕೃತಿ, ಜಪಾನ ಸಂಸ್ಕೃತಿ ಇತ್ಯಾದಿ.

ಒಂದು ಜನಾಂಗದ ವೇಷ ಭೂಷಣಗಳು, ನಡವಳಿಕೆಗಳು ಆಚಾರ ವಿಚಾರಗಳು ಅವರ ಜ್ಞಾನ ಸಂಪತ್ತು, ಪ್ರತಿಭೆ, ನಾಗರೀಕ ಜನರ ಅಭಿಪ್ರಾಯ ಭಾವನೆಗಳೆಲ್ಲವೂ ಒಳಗೊಂಡಿರುವುದನ್ನು ಸಂಸ್ಕೃತಿ ಅಥವಾ ಸಂಸ್ಕಾರ ಎನ್ನುತ್ತೇವೆ. ಒಂದು ಜನಾಂಗದ ಸತತವಾದ ವ್ಯವಸಾಯದಿಂದ ಉದ್ಭವಿಸಿದ ಅನುಭವವೇ ಸಂಸ್ಕಾರ. ಒಂದು ಜನಾಂಗ ತನ್ನ ಮುಂದಿನ ಜನಾಂಗಕ್ಕೆ ಈ ಸಂಸ್ಕಾರವನ್ನು ವರ್ಗಾಯಿಸುತ್ತಾ ಹೋಗುತ್ತದೆ. ಜೀವನದ ಉತ್ತಮ ಸಂಸ್ಕಾರ ವ್ಯಕ್ತಿಯ ಅತ್ಯಂತ ಸೂಕ್ಷ್ಮನಡುವಳಿಗಳನ್ನು ಮತ್ತು ವೈಯಕ್ತಿಕ ವರ್ತನೆಗಳನ್ನು ವ್ಯಕ್ತಪಡಿಸುತ್ತದೆ. ಸುಸಂಸ್ಕೃನಾದ ವ್ಯಕ್ತಿ ಆದರ್ಶ ಭಾವನೆಯನ್ನು, ಕಲೆಯನ್ನು ಮೆಚ್ಚುವನಲ್ಲದೆ ವಿಶಾಲವಾದ ಮಾನವೀಯತೆಯಿಂದ ಕೂಡಿದ ಆಸಕ್ತಿಯನ್ನು ಹೊಂದಿ ಸಮಾಜ ಮೆಚ್ಚುವ ರೀತಿಯಲ್ಲಿ ನಡೆದುಕೊಳ್ಳುತ್ತಾನೆ.

ನಿಜವಾದ ಶಿಕ್ಷಣದ ಕಾರ್ಯವೆಂದರೆ ವ್ಯಕ್ತಿಯನ್ನು ಸಂಸ್ಕಾರವುಳ್ಳವನನ್ನಾಗಿ ಮಾಡುವುದು. ಸತ್ ಚಿಂತನೆಗೆ ಸತ್ ಕಾರ್ಯಕ್ಕೆ ಸದ್ ವರ್ತನೆಗಳು ಪ್ರೇರಕ ಶಕ್ತಿಯಾಗಿ ನಿಲ್ಲುವುದೇ ದಿವ್ಯ ಸಂಸ್ಕೃತಿಯ ಲಕ್ಷಣ. ನಿಜವಾದ ಶಿಕ್ಷಣ ವ್ಯಕ್ತಿಗೆ ಸಂಸ್ಕಾರವನ್ನು ನೀಡುತ್ತದೆ. ಸಂಸ್ಕಾರವೇ ಶಿಕ್ಷಣ, ಶಿಕ್ಷಣವೇ ಸಂಸ್ಕಾರ, ವ್ಯಕ್ತಿಯು ಜನನದಿಂದ ಮರಣದವರೆಗೆ ವಿವಿಧ ರೀತಿಯ ಸಂಸ್ಕಾರಗಳಿಗೆ ಒಳಗಾಗುತ್ತಾನೆ. ಹುಟ್ಟು ಮುಂಜಿ, ಮದುವೆ ಹಾಗೂ ಮರಣ ಇತ್ಯಾದಿಗಳಲ್ಲಿ ಸಂಸ್ಕಾರವೇ ಪ್ರಧಾನ. ಸಂಸ್ಕಾರ ವ್ಯಕ್ತಿಯ ಜೀವನವನ್ನು ಪಾವನವನ್ನಾಗಿ ಮಾಡುತ್ತದೆ.

ಸಂಸ್ಕಾರ ನಿರ್ಜೀವ ವಸ್ತುಗಳಲ್ಲಿ ದೈವೀಶಕ್ತಿಯನ್ನು ತುಂಬುತ್ತದೆ. ನಿರ್ಜೀವ ವಸ್ತುಗಳಿಗೆ ಸಂಸ್ಕಾರ ಕೊಡುತ್ತೇವೆ. ಅವುಗಳನ್ನು ಪೂಜ್ಯನೀಯವಾಗಿ ಆರಾಧಿಸುತ್ತೇವೆ. ಶಿಕ್ಷಣ ಮಾನವರಲ್ಲಿ ಸಂಸ್ಕಾರಯುಕ್ತ ಕ್ರಿಯೆಗಳನ್ನು ಪೂರೈಸಿ ವ್ಯಕ್ತಿಯನ್ನು ಪೂಜ್ಯನೀಯವಾಗಿ ಮಾಡುತ್ತದೆ. ಶಿಕ್ಷಣ ಮತ್ತು ಸಂಸ್ಕಾರಗಳೆರಡೂ ಮನುಷ್ಯನಿಗೆ ಇಂದು ಅನಿವಾರ್ಯವಾಗಿವೆ. ಪೂಜ್ಯ ಮತ್ತು ಪಾವನ ಶಕ್ತಿಯಪ್ರತೀಕವೇ ಸಂಸ್ಕಾರ. ಸಂಸ್ಕಾರ ಮತ್ತು ಶಿಕ್ಷಣ ಮಕ್ಕಳನ್ನು ಶಕ್ತಿಯುತರನ್ನಾಗಿ ಹಾಗೂ ಪಾವನರನ್ನಾಗಿ ಮಾಡುತ್ತವೆ.

ನಿಜವಾದ ಶಿಕ್ಷಣ ಕ್ಷೇತ್ರದಲ್ಲಿ ವಿಶ್ವವಿದ್ಯಾಲಯಗಳ ಕಾರ್ಯ ಇಂದು ಅತಿ ಮಹತ್ವದ್ದು. ಜೀವನದ ನೆಮ್ಮದಿಗಾಗಿ ವಿವಿಧ ರಂಗಗಳಲ್ಲಿ ಕಾರ್ಯವೆಸಗಲು ಯೋಗ್ಯ ನಾಯಕರನ್ನು ರೂಪಿಸುವ ಹೊಣೆ ವಿಶ್ವವಿದ್ಯಾಲಯಗಳ ಪವಿತ್ರ ಕರ್ತವ್ಯ ವಾಗಬೇಕು. ಅತ್ಯುತ್ತಮ ಶಿಕ್ಷಣ-ತರಬೇತಿ ಪಡೆದ ಯುವಜನ ನಿರ್ಮಾಣ ವಿಶ್ವವಿದ್ಯಾನಿಲಯಗಳ ಗುರಿಯಾಗಬೇಕು. ಈ ಶಿಕ್ಷಣ ಕೇವಲ ವಿದ್ಯಾರ್ಥಿಗಳಿಗೆ ಸೀಮಿತವಾಗಬಾರದು. ವಿಶ್ವವಿದ್ಯಾನಿಲಯದಲ್ಲಿ ಸಂಗ್ರಹವಾಗುವ ಜ್ಞಾನ ದೇಶದ ನಾಡಿನಾಡಿಯಲ್ಲೆಲ್ಲ ಪ್ರವಹಿಸುವಂತಾಗಬೇಕು. ಆಗ ಮಾತ್ರ ವಿಶ್ವವಿದ್ಯಾಲಯದ ಅಸ್ತಿತ್ವ ಸಾರ್ಥಕವಾಗುತ್ತದೆ. ಇದರಿಂದ ಒಟ್ಟಾರೆ ವೈಯಕ್ತಿಕ ಮತ್ತು ಸಮಾಜದ ಬಾಳು ಸುಖಮಯವಾಗುತ್ತೆ.

**ಈ ಪವಿತ್ರ ಕರ್ತವ್ಯವನ್ನು ನೇರವೇರಿಸಲು ವಿಶ್ವವಿದ್ಯಾಲಯಗಳು ಜ್ಞಾನದಾನ ಮತ್ತು ಪ್ರಸಾರದ ಜೊತೆಗೆ ಸಂಗೀತ, ಸಾಹಿತ್ಯ, ಸಂಸ್ಕೃತಿಯ ಪೋಷಣೆಮಾಡಬೇಕು.**

# ಮೊದಲ ಮಾತು

## ಪ್ರಿಯ ಓದುಗರೇ,

ಭಾರತದ ಭಕ್ತಿಮಾರ್ಗದಲ್ಲಿ ಸಂಗೀತದ ಪಾತ್ರ ಮಹತ್ವದಾಗಿದ್ದು. ಇದನ್ನು ಅನೇಕ ಭಕ್ತಿಸಂತರು, ಮುಕ್ತಿಮಾರ್ಗಕ್ಕಾಗಿಯೂ ಮತ್ತು ದೈವಸಾಕ್ಷಾತ್ಕಾರಕ್ಕಾಗಿಯೂ ಅನುಸರಿಸಿರುತ್ತಾರೆ. ಆದುದರಿಂದ ನನಗೆ ಸಂಗೀತದ ಆಳವನ್ನರಿಯಬೇಕೆಂಬ ಕುತೂಹಲವುಂಟಾಯಿತು.

ಈ ಕಾರಣದಿಂದ ನಾನು ಸಂಗೀತದ ಮೂಲವನ್ನು ತಿಳಿಯಲು ಹೊರಟೆ. ಆಗ ನಾನು ಮಾಡಿದ್ದು ಕರ್ನಾಟಕ ಸಂಗೀತದ ಬಗ್ಗೆ ಒಂದು ಆಳವಾದ ಅಧ್ಯಯನ. ಮನೋಶಾಸ್ತ್ರ, ಮನೋರೋಗಶಾಸ್ತ್ರ ಮತ್ತು ಪುನರ್ಜನ್ಮಸಂಶೋಧಕನಾದ ನನಗೆ ಈ ಆಳವಾದ ಅಧ್ಯಯನದಲ್ಲಿ ಸಂಗೀತದ ಅರಿವಲ್ಲದೆ, ಸಂಗೀತವು ಕರ್ಮಗಳಿಂದ ಮುಕ್ತಿಗೊಳಿಸುವ ಸಾಧನವೆಂದು ತಿಳಿಯಿತು. ನಾನು ಈ ದಿಕ್ಕಿನಲ್ಲೂ ಅಧ್ಯಯನವನ್ನು ಮುಂದುವರಿಸಿದೆ.

ಪುನರ್ಜನ್ಮ ಸಂಶೋಧನೆಯಲ್ಲಿ ನಮ್ಮ ಜನ್ಮಜನ್ಮಾಂತರದ ಸಂಸ್ಕಾರದ, ಕರ್ಮಪ್ರಭಾವವನ್ನು ಪರಿಣಾಮವನ್ನು ಕಾಣುತ್ತಿರುವ ನನಗೆ ಸಂಗೀತವು ಜನ್ಮಾಂತರ ಕರ್ಮವಿಮೋಚನೆಗೆ ಒಂದು ಮಾರ್ಗವು ಹೌದು ಎಂಬ ಸತ್ಯದ ಅರಿವಾಯಿತು.

ಕನ್ನಡ ಸಾಹಿತ್ಯ ಪರಿಷತ್ ಮತ್ತು ಕರ್ನಾಟಕ ರಾಜ್ಯ ಸರ್ಕಾರ ಅನೇಕ ಜಿಲ್ಲೆಗಳಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನಗಳನ್ನು ಮತ್ತು ವಿಶ್ವಸಾಹಿತ್ಯ ಸಮ್ಮೇಳನಗಳನ್ನು ನಡೆಸುತ್ತಿರುವುದು. ಇದ್ದನ್ನೆಲ್ಲ ನೋಡಿದ ನಾನು, ನನ್ನ ಮಾತೃಭಾಷೆಯಾದ ಕನ್ನಡದ ಉದ್ಧಾರಕ್ಕೆ ಏನು ಮಾಡಿದ್ದೇನೆ ? ಎಂದು ಮತ್ತೆ ಮತ್ತೆ ಪ್ರಶ್ನಿಸಿಕೊಂಡೆನು.

**" ತಿಳಿದಿರುವ ಜ್ಞಾನವನ್ನು ಮತ್ತೊಬ್ಬರಿಗೆ ತಿಳಿಸುವುದೇ ಮಾನವಜೀವನ "**

**- ತತ್ತ್ವಜ್ಞಾನಿ ಅರಿಸ್ಟಾಟಲ್**

## ಮಾನವ ನುಡಿ

ಮನುಷ್ಯ ದೀಪವಾದರೂ ಆಗಬೇಕು. ಕನ್ನಡಿಯಾದರೂ ಆಗಬೇಕು. ಒಂದು ಬೆಳಕನ್ನು ಕೊಡುತ್ತದೆ.ಮತ್ತೊಂದುಅದನ್ನು ಪ್ರತಿಬಿಂಬಿಸುತ್ತದೆ. ಪ್ರತಿಯೊಬ್ಬರೂ ದೀಪ ಆಗದೆ ಹೋಗಬಹುದು, ಆದರೆ ಕನ್ನಡಿಯಾಗಬಹುದು.

## ಹಣ - ಆಸ್ತಿ

ಮನುಷ್ಯರು ತಾವು ಸಂಪಾದಿಸಿದ ಹಣ ಮತ್ತು ಆಸ್ತಿಯನ್ನು ಬೇರೆಯವರಿಗೆ ಕೊಡಬಹುದು. ಆ ಹಣಮತ್ತು ಆಸ್ತಿಯನ್ನು ಬೇರೆಯವರಿಗೆ ಅವರು ಒಂದು ಸಾರಿ ದಾನಮಾಡಿದರೆ ಅವು ಅವರಿಗೆ ಒಂದು ಸಾರಿಮಾತ್ರ ಉಪಯೋಗವಾಗಿ ನಂತರ ಮತ್ತೊಮ್ಮೆ ಉಪಯೋಗಕ್ಕೆ ಬರುವುದಿಲ್ಲ. ಪುಸ್ತಕಗಳ ಜ್ಞಾನ ಓದುಗರ ಮನಸ್ಸಿನಲ್ಲಿ ಎಂದಿಗೂ ಬತ್ತದೆ ಅವರ ಜ್ಞಾನವನ್ನು ಬೆಳಗಿಸುತ್ತಿರುತ್ತದೆ. ಜ್ಞಾನಜ್ಯೋತಿಯ ಪುಸ್ತಕಗಳು ಬೇರೆ ಎಲ್ಲಾ ಉಡುಗೊರೆಗಳಿಗಿಂತ ಅತ್ಯುತ್ತಮ ಉಡುಗೊರೆಗಳು.

ಅದಕ್ಕೆನಾನು ನನ್ನ 40 ವರ್ಷಗಳ ಸಾಧನೆ-ಶೋಧನೆ-ಸಂಶೋಧನೆಗಳ; ಜ್ಞಾನ-ವಿಜ್ಞಾನ-ಸುಜ್ಞಾನ-ದಿವ್ಯಜ್ಞಾನ ಸಾರವನ್ನು, ಧಾರ್ಮಿಕ ಪ್ರಜ್ಞೆ, ಧರ್ಮ ಸಹಿಷ್ಣುತೆಯನ್ನು ಎತ್ತಿಹಿಡಿದಿರುವ ಕನ್ನಡ ಸಂಸ್ಕೃತಿನ್ನು ಬೆಳಗಿಸುವ ಉದ್ದೇಶದಿಂದ ಕಸ್ತೂರಿಯಾದ ಕನ್ನಡ ಭಾಷೆಯಲ್ಲಿ, ಮಕರಂದವಾದ ಕನ್ನಡ ಸಾಹಿತ್ಯದಲ್ಲಿ ಈ ಕೆಳಕಂಡ ಐದು ಕೃತಿಗಳನ್ನು ಹೃದಯ ತುಂಬಿ ರಚಿಸಿದೆ.

**1. ಸಾ ಕ್ಷ ರ ತೆ** – ಸಂಗೀತ - ಸಾಹಿತ್ಯ - ಸಂಸ್ಕೃತಿ – True Education

**2. ಸಾ ರ್ಥ ಕ ತೆ** – ನಿಜಜೀವನ ದರ್ಶನ - ಸಂದರ್ಶನ - ಸಮ್ಮಿಲನ –Right Living

**3. ಸಾ ಕ್ಷಾತ್ಕಾ ರ** – ದಿವ್ಯ ಆತ್ಮಜ್ಞಾನ ಸಾಕ್ಷಾತ್ಕಾರ – Self Realization

**4. ಮನಸ್ಸಿನ ರಹಸ್ಯ ಮತ್ತುಮನೋರೋಗಗಳ ರಹಸ್ಯ**– Mystery of Mind &Mystery of Mental diseases

**5. ಪುನರ್ಜನ್ಮ ಸಂಶೋಧನೆ ಮತ್ತು ಆತ್ಮದ ಅಸ್ತಿತ್ವ**–Research on Reincarnation and Survival of Soul **ಹಾಗೂ**

**ವಿಶ್ವಶಾಂತಿ ಸ್ಥಾಪನೆ ಮತ್ತುಮಾನವ ಜನಾಂಗದ ಪುನರುತ್ಥಾನ**– Establish World Peace and Resuscitate Humanity

ವಿಶ್ವಮಾನವ ಸಂಸ್ಕೃತಿಯನ್ನು ಬೆಳಗಿಸುವ ಉದ್ದೇಶದಿಂದ ಈ ಐದು ಸತ್ಕೃತಿಗಳನ್ನು ನಮ್ಮ ಪುನರ್ಜನ್ಮ ಸಂಶೋಧನ ಕೇಂದ್ರವು ಈಗ ಪ್ರಕಟಿಸಿ ಉಚಿತವಾಗಿ ಮನುಕುಲಕ್ಕೆ ನೀಡುತ್ತಿದೆ. ನನ್ನ ಹಾಗೆ ಪ್ರತಿಯೊಬ್ಬ ಕನ್ನಡಿಗರೂ ಹಾಗೂ ಮಾನವರೂ ತಾವು ಒಬ್ಬ ಮಾನವರಾಗಿ ಅವರವರ ಭಾಷೆಗೆ ಹಾಗೂ ಮಾನವ ಜನಾಂಗಕ್ಕೆ ಏನು ಮಾಡಿದ್ದೇವೆ ? ಎಂಬ ಪ್ರಶ್ನೆಯನ್ನು ತಾವೇ ಹಾಕಿಕೊಂಡು ಉತ್ತರ ನೀಡಿದರೆ,ಭಾಷೆ ಬೆಳೆಯುತ್ತದೆ, ಭಾಷೆ ಉಳಿಯುತ್ತದೆ, ವಿಶ್ವಮಾನವ ಸಂಸ್ಕೃತಿ ಬೆಳಗುತ್ತದೆ.ಉರಿಯುತ್ತಿರುವ ಒಂದೇ ಒಂದು ಜ್ಯೋತಿಯಿಂದ ನಾವು ಪ್ರಪಂಚಕ್ಕೆಲ್ಲಾ ಬೆಳಕನ್ನುನೀಡುವಷ್ಟುಅಸಂಖ್ಯಾತ ಸೊಡರುಗಳನ್ನು, ಅಂದರೆ ದೀಪಗಳನ್ನು ಹೊತ್ತಿಸಬಹುದು.ಈಗ ಈಶತಮಾನದ ಜ್ಞಾನ-ವಿಜ್ಞಾನ-ಸುಜ್ಞಾನ-ದಿವ್ಯಜ್ಞಾನಸಾರಾಮೃತವನ್ನೊಳ ಗೊಂಡ ಈ ಐದುಸತ್ಕೃತಿಗಳು ಮಾನವ ಜನಾಂಗಕ್ಕೆ ಸರ್ವಶ್ರೇಷ್ಠವಾದ ಅತ್ಯುತ್ತಮ ಉಡುಗೊರೆಗಳು.

ಈ ಕೃತಿಗಳನ್ನು ರಚಿಸುವಾಗ ನನಗೆ ರಸಾಸ್ವಾದನೆಯಿಂದ ಬಂದಿರುವ ರಸಸುಖದಲ್ಲಿ ಒಂದಿನಿತನ್ನಾದರೂ ಇದನ್ನು ಓದುವವರು ಸವಿದು ಅವರಿಗೆ ಸಂಗೀತ - ಸಾಹಿತ್ಯ - ಸಂಸ್ಕೃತಿ ಜ್ಞಾನ ಉಂಟಾಯಿತೆಂದು ಗೊತ್ತಾದರೆ ಈ ಕೃತಿ ಸಾರ್ಥಕವಾಯಿತೆಂದು ಭಾವಿಸುತ್ತೇನೆ.ಈ ಕೃತಿಗೆ ಸಂಬಂಧಪಟ್ಟಂತೆ ಯಾವುದೇ ಟೀಕೆ - ಟಿಪ್ಪಣಿಗಳಿದ್ದಲ್ಲಿ ಅದನ್ನು ಲಖಿತ ಮೂಲಕ ಅಥವಾ ಈ ಕೆಳಕಂಡ ಈ-ಮೇಲ್ ಮೂಲಕ ಲೇಖಕರಿಗೆ ತಿಳಿಸಬಹುದು.

**E-mail : reincarnationresearchcentre@gmail.com**

**ಬುದ್ಧಂ ಶರಣಂ ಗಚ್ಛಾಮಿ**
**ಸಂಘಂ ಶರಣಂ ಗಚ್ಛಾಮಿ**
**ಧಮ್ಮಂ ಶರಣಂ ಗಚ್ಛಾಮಿ**

**( Triple Gems of Buddhism )**

**- ಭಗವಾನ್ ಬುದ್ಧ**

**ಸಂಗೀತಂ ಶರಣಂ ಗಚ್ಛಾಮಿ**
**ಸಾಹಿತ್ಯಂ ಶರಣಂ ಗಚ್ಛಾಮಿ**
**ಸಂಸ್ಕೃತಿ ಶರಣಂ ಗಚ್ಛಾಮಿ**

**( Triple Gems of Humanity )**

**- ಡಾ ॥ ಸಿ. ರಾಮಸ್ವಾಮಿ.**

ಸಿರಿಗನ್ನಡಂ ಗೆಲ್ಗೆ ಸಿರಿಗನ್ನಡಂ ಬಾಳ್ಗೆ

# ನಿ ವೇ ದ ನೆ

ಧರೆಗಿಳಿದು ಬಂದ
ವಿಶ್ವಮಾನವರೆಲ್ಲರಿಂದ
ಮೂಡಿಹುದು ನೋಡಿ
ಮುನ್ನುಡಿಯ ಈ ಮೋಡಿ |
ದಿವ್ಯ ಪ್ರಾರ್ಥನೆಯ ತಾ ಮಾಡಿ
ಭವ್ಯ ಸುಸ್ವಾಗತವ ತಾ ನೀಡಿ
ಸಂಗೀತ ಶಾಸ್ತ್ರದ ಸೌರಭವ ಪರಿಚಯಿಸುತ್ತ ತಾ ಓಡಿ
ನವ್ಯ ನಿವೇದನೆಯ ಈ ಮುನ್ನುಡಿ ಹೇಗಿದೆ ಓದಿ ನೋಡಿ ||

ಸಂಗೀತ ಶಾಸ್ತ್ರದ ಸೌರಭ ಸತ್ಕೃತಿಯ ಆರಂಭದ ಅಮೃತ ಘಳಿಗೆಯಲ್ಲಿ ಆಕಾಶದಿಂದ ದೇವದೇವತೆಗಳು, ಋಷಿಮುನಿಗಳು ಹೂಮಳೆಗರೆದು ತಮ್ಮ ಅಭಯ ಹಸ್ತದಿಂದ ಆಶೀರ್ವಾದ ಮಾಡುತ್ತಿರುವುದನ್ನುನೋಡಿ ಆನಂದಪರವಶನಾಗಿ ನನ್ನ ಕಲ್ಪನೆಯ ನೈಜ ಕನಸು ಮತ್ತು ನನಸುಗಳ ಈ ಐದು ಸತ್ಕೃತಿಗಳು ಹೇಗೆ ವಿರಚಿತವಾಗಿ ಮೂಡಿ ಬರಬೇಕೆಂಬ ಹೆಬ್ಬಯಕೆಯನ್ನು ನಯ, ವಿನಯ, ಒಲುಮೆ, ನಲ್ಮೆಯಿಂದ ನಿವೇದಿಸುತ್ತಿದ್ದೇನೆ.

ಕಸ್ತೂರಿಯಂತೆ ಕಂಪನ್ನು ಬೀರುವ ಕನ್ನಡ ಭಾಷೆಯ ನುಡಿಮುತ್ತುಗಳಲ್ಲಿ ಈ ಸಂಗೀತ ಶಾಸ್ತ್ರದ ಸೌರಭ ಮೂಡಿ ಬರಲಿ. ಹಿಂದಿನ ಕಾಲದ ಸಾಹಿತಿಗಳು,ವಿದ್ವಾಂಸರು, ವಿಮರ್ಶಕರು, ಕವಿಪುಂಗವರು, ವ್ಯಾಕರಣಕಾರರು, ಅಲಂಕಾರಶಾಸ್ತ್ರಜ್ಞರು, ಪಂಡಿತರು ಬರೆದು ಎತ್ತಿ ಹಿಡಿದಿರುವ ಆದರ್ಶಗಳನ್ನು, ವಿಚಾರಲಹರಿಗಳನ್ನು, ಕಾವ್ಯ ಲಕ್ಷಣಗಳನ್ನು ಗ್ರಹಿಸಿ ಆ ಸತ್ಕವಿಗಳಿಗೆಲ್ಲ ನಮಿಸಿ ಅವರ ಆದರ ಪ್ರಶಂಸೆಗೆ ಪಾತ್ರವಾಗುವಂತೆ ರಮಣೀಯ ಕಾವ್ಯಧರ್ಮದಿಂದ, ಕಾವ್ಯ ಕೃಷಿಯಿಂದ ಈ ಸತ್ಕೃತಿಗಳು ರಚಿತವಾಗಲಿ.

ವಿಶ್ವಮಾನ್ಯವಾದ ಪಾತ್ರಸೃಷ್ಟಿ, ಆಕರ್ಷಕ ಕಥಾವಸ್ತು, ಉತ್ತಮೋತ್ತಮ ಪಾತ್ರ ಪೋಷಣೆ ಕುಶಲ ಸಂಭಾಷಣೆ, ಹೃದಯಂಗಮ ರಸಭಾವ ನಿರೂಪಣೆ, ಮನೋಹರವಾದ ಶೈಲಿ, ಪ್ರತಿಭಾಮಯವಾದ ವರ್ಣನೆ, ಉದಾರವೂ, ಗಂಭೀರವೂ, ಉಜ್ವಲವೂ ಆದ ಭಾವಗಳು, ಕಿವಿಗಿಂಪಾದ ಶಬ್ದಾಲಂಕಾರ, ಅರ್ಥಾಲಂಕಾರಗಳು, ಚಿತ್ತಪರಿಪಾಕವನ್ನುಂಟು ಮಾಡುವ ನೀತಿಬೋಧೆ, ಜೊತೆಗೆ ವಿದ್ವಾಂಸರನ್ನು, ಜಾಣರನ್ನು, ರಸಿಕರನ್ನು, ಸಾಹಿತಿಗಳನ್ನು ಕಲಾವಿದರನ್ನು ಮೆಚ್ಚಿಸುವ ಮಾಣಿಕ್ಯದಂತ ಮಾತುಗಳು, ರಸವತ್ತಾದ ಪದಪುಂಜಗಳು, ಸರಸವಾದ ಉಕ್ತಿಗಳ ಚಮತ್ಕಾರ, ಭಕ್ತಿಯ ಆವೇಶ, ಓಜಸ್ಸು, ತೇಜಸ್ಸುಗಳಿಂದ ತುಂಬಿ ತುಳುಕುವ ಕಥಾಕಥನ, ಭಾಷಾ ಮಾಧುರ್ಯಶೈಲಿ ಇವೆಲ್ಲವುಗಳ ಸಮೀಕರಣದಿಂದ ಮೈಗೂಡಿ, ಈ ಸಂಗೀತ ಶಾಸ್ತ್ರದ ಸೌರಭ ಮೂಡಿ ಬರಲಿ.

ಈ ಸಂಗೀತ ಶಾಸ್ತ್ರದ ಸೌರಭ ವಿನೂತನವಾದ, ನಿತ್ಯನೂತನವಾದ, ನವಚೇತನವನ್ನು ಬಾಳಿಗೆ ನೀಡುವ ಲೌಕಿಕ ಮತ್ತು ಪಾರಮಾರ್ಥಿಕ ಸತ್ವಗಳಿಂದ, ತಾತ್ವಿಕ ವಿಷಯಗಳಿಂದ ಸಿದ್ಧಾಂತಗಳ ಖನಿಯಾಗಿ, ಸ್ಪಟಿಕದಂತೆ, ವಿಚಾರಧಾರೆಗಳನ್ನು ಪ್ರತಿಬಿಂಬಿಸುತ್ತ, ರಸಧಾರೆಗಳ ಬುಗ್ಗೆಗಳನ್ನು, ರಸಕಾರಂಜಿಗಳನ್ನು ಸ್ಫುರಿಸುತ್ತ, ಮಾನವನ ಬಾಳಿನ ಆಂತರಿಕ ಹಾಗೂ ಬಹಿರಂಗ ಜೀವನದ ಕಿಲುಬನ್ನು ಶುದ್ಧಿಗೊಳಿಸುತ್ತಾ ಮಾನವ ವಾತಾವರಣವನ್ನು ಪರಿಶುದ್ಧಗೊಳಿಸಿ, ಜೀವನವನ್ನು ಪಾವನಗೊಳಿಸಲಿ.

ಈ ಸಂಗೀತಶಾಸ್ತ್ರದ ಸೌರಭ ಕಾವ್ಯಪ್ರಪಂಚದ ಕಲ್ಪವೃಕ್ಷವಾಗಿ, ರಸಿಕರ ಕಾಮಧೇನುವಾಗಿ, ಸಹೃದಯರ ಚಿಂತಾಮಣಿಯಾಗಿ, ಸೃಜನಶೀಲ ವಿಚಾರಧಾರೆಗಳಿಂದ ಮೂಡಿ ಬರಲಿ. ಪುಷ್ಪ ಸಮುದಾಯದಲ್ಲಿ ಗುಲಾಬಿ ಹೂವುಗಳ ಹಾಗೆ ಸೊಬಗು ಸುವಾಸನೆಗಳೆರಡನ್ನೂ ಏಕಕಾಲದಲ್ಲಿ ಪಡೆದು ಮೆರೆಯುವ ಭಾಗ್ಯ, ಕಾವ್ಯ ಸಮುದಾಯದಲ್ಲಿ ಈ ಸಂಗೀತ ಶಾಸ್ತ್ರದ ಸೌರಭಕ್ಕೆ ದೊರಕಲಿ.

ಕರ್ನಾಟಕ ಕವಿಗಳೆಂಬ ಮಾವಿನ ತೋಪಿನ ವಸಂತಮಾಸವೆಂಬ ಕೋಗಿಲೆ ಆಹ್ಲಾದಕರವಾಗಿ ಹಾಡಿದಂತೆ ಈಶ್ರೇಷ್ಠವೂ, ಪವಿತ್ರವೂ ಆದಈ ಸಂಗೀತ ಶಾಸ್ತ್ರದ ಸೌರಭ ಸಮಸ್ತ ವಿದ್ವನ್ಮಂಡಲಿಯು ವಿನಯದಿಂದ ಮೆಚ್ಚಿ

ನಲಿಯುವಂತೆ ಮೂಡಿ ಬರಲಿ. ಈ ಸಂಗೀತ ಶಾಸ್ತ್ರದ ಸೌರಭ ಮಕರಂದವುರಸಿಕರೆಂಬ ಗಿಳಿಗಳನ್ನೂ, ಗಮಕಿಗಳೆಂಬ ಕೋಗಿಲೆಗಳನ್ನೂ, ಸಹೃದಯರೆಂಬ ದುಂಬಿಗಳನ್ನೂ, ಜಿಜ್ಞಾಸುಗಳೆಂಬ ಜೀವ ಕೋಟಿಗಳನ್ನೂ ಸದಾತನ್ನೆಡೆಗೆ ಬರಮಾಡಿಕೊಳ್ಳಲಿ. ಓದುಗರೆಂಬ ದುಂಬಿಗಳು ಈ ಸತ್ಕೃತಿಯೆಂಬ ಹೂವಿನ ಮಧುರವಾದ ಮಕರಂದವನ್ನು ಹೀರಿ, ವಿದ್ವಾಂಸರ ಸಭೆಯೆಂಬ ಸರೋವರದಲ್ಲಿ ಸುಲಲಿತವಾಗಿ ಝೇಂಕರಿಸಲಿ.

ಹೃದಯ ಸಂವೇದನೆಯಂತೆ, ಸಂದೇಶದಂತೆ ಸತ್ಯತೆಯು ಸಾಬೀತಾಗಿ ಮಾನವಮತದ ವಿಶ್ವಪಥದ ಹಿರಿಮೆಗರಿಮೆಗಳನ್ನು ಸಾರುವ ಮಹಾಮೇರು ಕಾವ್ಯವಾಗಿ, ಕಾವ್ಯ ಪ್ರಪಂಚದಲ್ಲಿ ಈ ಸತ್ಕೃತಿಗಳು ಬೆಳಗಲಿ.

ಈ ಸಂಗೀತ ಶಾಸ್ತ್ರದ ಸೌರಭ ಭಾರತೀಯರ ಸಂಸ್ಕೃತಿಯ ಅಳತೆಗೋಲಾಗಿ ಭಾವಿಸಲ್ಪಟ್ಟು ಭಾರತೀಯ ಸಾಹಿತ್ಯ ಪ್ರಪಂಚದಲ್ಲಿ ಜನಪ್ರಿಯವಾಗಿ, ಭಾರತೀಯ ಕಾವ್ಯಾಮೃತವನ್ನು ಪಾನ ಮಾಡಬೇಕೆಂದು ಬಯಸುವ ವಿಶ್ವದ ಸಮಸ್ತ ಕೋಟಿ ಮಾನವರಿಗೂ ಹಾಲಿನ ಹೊಳೆಯಾಗಲಿ, ಅಮೃತ ಸಾಗರವಾಗಲಿ, ಪುಣ್ಯದ ಆಗರವಾಗಲಿ. ವಿಶ್ವಮಾನವರ, ಭಾರತೀಯರ ಹಾಗೂ ಕನ್ನಡಿಗರ ಅಭಿಮಾನವನ್ನು ಕೆರಳಿಸಿ, ಕನ್ನಡ ಸಾಹಿತ್ಯದ ಶೆಹನಾಯ್ ಊದಿ, ಕನ್ನಡ ಕಹಳೆ ಮೊಳಗಲಿ. ಈ ಸಂಗೀತ ಶಾಸ್ತ್ರದ ಸೌರಭದ ಕೀರ್ತಿಲತೆ ಕನ್ನಡ ನಾಡಿನಲ್ಲೆಲ್ಲಾ ಹಬ್ಬಿ, ಭಾರತದೇಶದಲ್ಲೆಲ್ಲಾ ಹರಡಿ, ವಿಶ್ವದಾದ್ಯಂತ ವ್ಯಾಪಿಸಲಿ.

**ಡಾ ॥ ಸಿ. ರಾಮಸ್ವಾಮಿ.**

**ಕನ್ನಡಕ್ಕಾಗಿ ಕೈಯೆತ್ತು , ನಿನ್ನ ಕೈ ಕಲ್ಪವೃಕ್ಷವಾಗುತ್ತದೆ.**

**ಕನ್ನಡಕ್ಕಾಗಿ ಕೊರಳೆತ್ತು , ಅಲ್ಲಿ ಪಾಂಚಜನ್ಯ ಮೂಡುತ್ತದೆ.**

**ಕನ್ನಡಕ್ಕಾಗಿ ಕಿರು ಬೆರಳೆತ್ತಿದ್ದರೂ ಸಾಕು,**

**ಅದೇ ಗೋವರ್ಧನ ಗಿರಿಯಾಗುತ್ತದೆ.**

**- ಕನ್ನಡದ ಕಂಪು ಕುವೆಂಪು.**

**ಸಂಗೀತಕ್ಕಾಗಿ ಕೊರಳೆತ್ತು, ನಿನ್ನ ಕಂಠಸ್ವರ ಕಾಮಧೇನುವಾಗುತ್ತದೆ**

**ಸಾಹಿತ್ಯಕ್ಕಾಗಿ ಕೈಯೆತ್ತು, ನಿನ್ನ ಕೈ ಕಲ್ಪವೃಕ್ಷವಾಗುತ್ತದೆ.**

**ಸಂಸ್ಕೃತಿಗಾಗಿ ಕಿರು ಬೆರಳೆತ್ತಿದ್ದರೂ ಸಾಕು,**

**ಅದೇ ವಿಶ್ವ ಶಾಂತಿಗೆ ನಾಂದಿಯಾಗುತ್ತದೆ.**

**- ಡಾ ॥ ಸಿ. ರಾಮಸ್ವಾಮಿ.**

# ಕೃತಜ್ಞತೆ

" ಸಂಗೀತ ಶಾಸ್ತ್ರದ ಸೌರಭ" ಈ ಸತ್ಕೃತಿಯ ರಚನೆಯಲ್ಲಿ ಕನ್ನಡ ಹಾಗೂ ಆಂಗ್ಲಭಾಷೆಯಹಲವಾರು ಗ್ರಂಥಗಳಿಂದ ಪ್ರಯೋಜನಪಡೆದಿದ್ದೇನೆ. ವಿವಿಧ ಕ್ಷೇತ್ರಗಳಲ್ಲಿ ದುಡಿಯುತ್ತಿರುವ ಕಿರಿಯರ - ಹಿರಿಯರ ಅನೇಕ ಜೀವನಾನುಭವಗಳನ್ನು ಕೇಳಿ, ಓದಿ ತಿಳಿದುಕೊಂಡಿರುವುದನ್ನು ಈ ಬರಹದಲ್ಲಿ ಬಳಸಿಕೊಂಡಿದ್ದೇನೆ.

ಅನೇಕ ಮಹನೀಯರ ಸದ್ಗ್ರಂಥಗಳ ಸದ್ವಿಚಾರಗಳನ್ನು ಅಳವಡಿಸಿಕೊಂಡಿರುತ್ತೇನೆ. ಆಯಾಯ ಸಂದರ್ಭಗಳಲ್ಲಿ ಗ್ರಂಥ - ಗ್ರಂಥಕರ್ತರ ಹೆಸರುಗಳನ್ನು ವಿಶದವಾಗಿ ಸೂಚಿಸಬಯಸಿದ್ದೆ. ಆದರೆ ಆ ಗ್ರಂಥಗಳ - ಗ್ರಂಥಕರ್ತರ ಹೆಸರುಗಳನ್ನು ಸ್ಥಳಾವಕಾಶದ ಕೊರತೆಯಿಂದ ಅಲ್ಲಲ್ಲೇ ಸೂಚಿಸಲು ಸಾಧ್ಯವಾಗಿಲ್ಲ. ಅವರೆಲ್ಲರಿಗೂ ನನ್ನ ಹೃತ್ಪೂರ್ವಕ ಕೃತಜ್ಞತೆಗಳನ್ನು ಅರ್ಪಿಸುತ್ತಿದ್ದೇನೆ. ಈ ಸತ್ಕೃತಿಯ ಹಸ್ತಪ್ರತಿಯನ್ನು ಓದಿ ತಮ್ಮ ಅಮೂಲ್ಯ ಸಲಹೆಗಳನ್ನು ನೀಡಿ ಶ್ರದ್ಧೆಯಿಂದ ಸಕಾಲದಲ್ಲಿ ಎಡಿಟ್ ಮಾಡಿದಓರಿಯನ್‌ಟಲ್ ಪ್ರೆಸ್‌ನ ಶ್ರೀಯುತ ಕುಮಾರರವರಿಗೂ, ಬಿ.ಕೆ.ಮರಿಯಪ್ಪ ಧರ್ಮಸಂಸ್ಥೆಯ ವ್ಯವಸ್ಥಾಪಕ ಧರ್ಮದರ್ಶಿ ಶ್ರೀ ಎನ್. ಪುಟ್ಟರುದ್ರರವರಿಗೂ, ಶ್ರೀ ಎಂ. ಆರ್. ನರೇಂದ್ರರವರಿಗೂ,ಶ್ರೀ ಡಿ.ಸಿ. ಸತ್ಯಮೂರ್ತಿಯವರಿಗೂ ಹಾಗೂಶ್ರೀನಗರೇಶ್ವರ ಪ್ರೆಸ್‌ನ ಮಾಲೀಕರಾದ ಶ್ರೀಯುತ ಎಸ್. ಸಿ. ಪುಟ್ಟಪ್ಪನವರಿಗೂ ನನ್ನ ಹೃತ್ಪೂರ್ವಕ ವಂದನೆಗಳು.

ಈ ಸತ್ಕೃತಿಯನ್ನು ಹೊರತರಲು ನನ್ನೊಡನೆ ಭಾಗಿಗಳಾದ ನನ್ನ ಧರ್ಮಪತ್ನಿ ಶ್ರೀಮತಿ ಬಿ.ಎಲ್. ಮಂಗಳಗೌರಿ, ನನ್ನ ಸುಪುತ್ರಿಯರಾದ ಶ್ರೀಮತಿ ಆರ್. ಸೌಮ್ಯ, ಶ್ರೀಮತಿ ಆರ್.ಸುಷ್ಮ, ಕುಮಾರಿ ಆರ್.ಸುಷುಪ್ತಿ - ಇವರುಗಳು ನೀಡಿದ ಸಹಕಾರವನ್ನು ನಾನು ಎಂದೆಂದಿಗೂ ಮರೆಯಲಾರೆ. ನಾನೀಗ ಅವರ ಸಹಾಯವನ್ನು ಕೃತಜ್ಞತೆಯಿಂದ ನೆನೆಯುತ್ತಿದ್ದೇನೆ.

**- ಡಾ ॥ ಸಿ. ರಾಮಸ್ವಾಮಿ.**

**" ಕುಮಾರವ್ಯಾಸನು ಹಾಡಿದನೆಂದರೆ**
**ಕಲಿಯುಗ ದ್ವಾಪರವಾಗುವುದು !**
**ಭಾರತ ಕಣ್ಣಲಿ ಕುಣಿಯುವುದು**
**ಮೈಯಲ್ಲಿ ಮಿಂಚಿನ ಹೊಳೆ ತುಳುಕಾಡುವುದು "**

**- ಕನ್ನಡದ ಕಂಪು ಕುವೆಂಪು**

**" ಪುನರ್ಜನ್ಮ ಸಂಶೋಧಕ ರಚಿಸಿದನೆಂದರೆ**
**ಕಲಿಯುಗ ಕೃತಯುಗವಾಗುವುದು !**
**ವಿಶ್ವಮಾನವ ಧರ್ಮ ಉದಯಿಸುವುದು**
**ಭೂಲೋಕದಲ್ಲಿ ಸಾಕ್ಷಾತ್ಕಾರ ಜ್ಞಾನ ಮಿಂಚುವುದು "**

**- ಡಾ ॥ ಸಿ. ರಾಮಸ್ವಾಮಿ.**

# ಅರ್ಪಣೆ - ಸಮರ್ಪಣೆ

**ಸಂಪತ್ತಿನ ಸಂಗ್ರಹದಲ್ಲಿ, ಸಲ್ಲದ ಸಲ್ಲಾಪದಲ್ಲಿ,**

**ಸಂಕಷ್ಟಗಳ ಸುಳಿಯಲ್ಲಿ ಸದಾ ಸುತ್ತುತ್ತಾ**

**ಸಂತೃಪ್ತರಾಗಿರುವ ಸಾಮಾನ್ಯರಿಗೆ,**

**ಸಿದ್ಧಹಸ್ತರಾಗಿ ಸಹಾಯ ಸಹಕಾರಗಳನ್ನು ಸಂವತ್ಸರಗಳಿಂದ**

**ಸನ್ಮಾರ್ಗದಿಂದ ಸದಾ ನೀಡುತ್ತಾ ಸತ್ಸಂಗದ ಸದ್ವಿಚಾರಗಳಿಂದ**

**ಸರ್ವರನ್ನೂ ತಮ್ಮೆಡೆಗೆ ಸೆಳೆಯುತ್ತಿದ್ದ**

**ನನ್ನ ಪರಮಪೂಜ್ಯ ಮಾತಾಪಿತೃಗಳಾದ**

**ಶ್ರೀಮತಿ ಸಿದ್ದಮ್ಮ ಮತ್ತು ಶ್ರೀ ಚನ್ನೇಗೌಡರ**



*ಪಾದಾರವಿಂದಗಳಿಗೆ*

*ಗೌರವ ಹೃತ್ಪೂರ್ವಕ*

***ಅರ್ಪಣೆ - ಸಮರ್ಪಣೆ***

# ವಿಶ್ವಮಾನವ ಸಂಸ್ಕೃತಿಯ ಕನ್ನಡ ಕಹಳೆ ಮೊಳಗಲಿ

ಕನ್ನಡದ ರವಿ ಮೂಡಿ ಬಂದ ಮುನ್ನಡೆವ ಬೆಳಕನ್ನು ತಾ ತಂದಾ
ವಿದ್ಯೆಯ ಕಲಿತು ವಿದ್ಯೆಯ ಕಲಿಸಿ ಜ್ಞಾನವಾ ಹರಡೋಣ
ಸತ್ಯ ಧರ್ಮ ನ್ಯಾಯದ ಮಾರ್ಗದಲ್ಲಿ ಮುಂದೆ ಸಾಗೋಣ
ಪ್ರೇಮ ಕರುಣೆಯ ಕಲಿಸಿ ಶಾಂತಿ ಸಹನೆಯ ಬೆಳೆಸೋಣ
ಜಾತಿ ಧರ್ಮ ಭೇದವ ತೊರೆದು ಒಂದಾಗಿ ಬಾಳೋಣ
ಒಂದೇ ಜಗವು ಒಂದೇ ಕುಲವು ಒಂದೇ ದೈವವು
ಸತ್ಯ ಧರ್ಮಗಳೆರಡು ನಮ್ಮ ಬಾಳಿನ ಕಣ್ಣಾಗಿರಲಿ
ಶಾಂತಿಯೆ ಉಸಿರಾಗಿರಲಿ ಸೇವೆಯೆ ಗುರಿಯಾಗಿರಲಿ
ಒಮ್ಮನದಿಂದ ಎಲ್ಲರು ದುಡಿದು ಜಗವನೆಗೆಲ್ಲೋಣ
ವಿಶ್ವಮಾನವ ಸಂಸ್ಕೃತಿಯ ನವಯುಗ ನಿರ್ಮಿಸೋಣ
ಸಿರಿಗನ್ನಡದ ಭಾಷಾಸಾಹಿತ್ಯವ ಸ್ವರ್ಣಾಕ್ಷರದಲ್ಲಿ ಬರೆಯೋಣ
ಲೋಕ ಸನ್ಮಾನಿತ ಸತ್ಯಯುಗ ಉದಯ ಚರಿತ್ರೆಯಸ್ವಾಗತಿಸೋಣ

**ಮೊಳಗಲಿ**

**ಮೊಳಗಲಿ**

**ಮೊಳಗಲಿ**

## ವಿಶ್ವಮಾನವ ಸಂಸ್ಕೃತಿಯ

## ಕನ್ನಡ ಕಹಳೆ ಮೊಳಗಲಿ

## ಇದು

## ಪುನರ್ಜನ್ಮ ಸಂಶೋಧನಾ ಕೇಂದ್ರ

## ಆಚರಿಸುತ್ತಿರುವ

## ಕನ್ನಡ ರಾಜ್ಯೋತ್ಸವ

## ಕನ್ನಡ ವಿಜಯೋತ್ಸವ

## ಸ್ವಾಗತ - ಸುಸ್ವಾಗತ






## ಸ್ವಾಗತ - ಸುಸ್ವಾಗತ

ಸರ್ವರನು ಸುಸ್ವಾಗತಿಸುವ ಸುಯೋಗದ ಸವಿನೆನಪಿನಲ್ಲಿ ನಾ ನಿಂದು
ಓದುಗರಿಗೆ ಹೊಸ ಹೊಸ ಆಸೆ - ಆಕಾಂಕ್ಷೆಯ ಸುಜ್ಞಾನ ಸಂದೇಶ ನಾ ತಂದು
ಮುಂದಿನ ಕೃತಯುಗದಲ್ಲಿ ಪಂಚಮ ವೇದಗಳೆಂದೇ ಕರೆಯಬಹುದಾದ ಈ ಸತ್ಕೃತಿಗಳ
ಜ್ಞಾನ, ವಿಜ್ಞಾನ, ಸುಜ್ಞಾನ, ದಿವ್ಯಜ್ಞಾನ ದೇಗುಲಕೆ
ಎಲ್ಲರೂ ಕೈಮುಗಿದು ಬನ್ನಿರೆಂದು
ವಿನಂತಿಸಿ ಸುಸ್ವಾಗತಿಸುವ ಕಾಲ ಸಮೀಪಿಸುತ್ತಿರುವುದು ನಿಮ್ಮೊಡನಿಂದು

ಇದೊಂದು ಶುಭಘಳಿಗೆ
ಅನೇಕ ಜನ್ಮಜನ್ಮಾಂತರಗಳಿಗೆ

ಒಮ್ಮೊಮ್ಮೆ ತಾ ಮೂಡಿ ಬರುವ ಸಾರ್ಥಕತೆಯ ಜ್ಞಾನಾನುಭವದ ಶುಭ ಘಳಿಗೆ

ಸರ್ವರೂ ಸವಿಯ ಬಯಸುವ ಸಾಕ್ಷಾತ್ಕಾರ ದಿವ್ಯಜ್ಞಾನಾಮೃತದ ಅಮರ ಘಳಿಗೆ

# 1. ಸಂಗೀತ ಸೌರಭ

## ಸಂಗೀತ ಶಾರದೆಯ ಚಾಲೆಂಜ್ !
## ಸಾಹಿತ್ಯ ಲೋಲನ ಪ್ರತಿ ಚಾಲೆಂಜ್ !!

ಲೋಕ ಪಿತಾಮಹನಿಂದ ಸೃಷ್ಟಿಯಾದ ವಿಶ್ವ ಐವತ್ತು ಕೋಟಿ ಕೋಟಿ ಯೋಜನ ವಿಸ್ತೀರ್ಣದಿಂದ ಥಳಥಳನೆ ಹೊಳೆಯುತ್ತ, ಕಣ್ಣುಗಳಿಗೆ ಅಂದವಾಗಿ ಕಾಣಿಸುತ್ತ ಶೋಭಿಸುತ್ತಿದೆ. ಈ ಬ್ರಹ್ಮಾಂಡ ಗೋಲದ ಮಧ್ಯದಲ್ಲಿ ಜಂಬೂ ದ್ವೀಪ ನಾಮಾಂಕಿತ ಭರತ ವರ್ಷದ ಭರತಖಂಡವು ಸಪ್ತಸಾಗರಗಳಿಂದ ಸುತ್ತುವರಿದು ಕಂಗೊಳಿಸುತ್ತಿದೆ. ಈ ಭರತಖಂಡ ಯುಗಯುಗಗಳಿಂದ ಜ್ಞಾನ, ಯೋಗ, ಆತ್ಮ ಸಾಕ್ಷಾತ್ಕಾರಗಳ ತಪೋಭೂಮಿಯಾಗಿ ಪುಣ್ಯಭೂಮಿಯೆಂದು ಪ್ರಸಿದ್ಧಿ ಪಡೆದು ಭೂಲೋಕದಲ್ಲಿ ಮೆರೆಯುತ್ತಿದೆ.

ಈ ಭಾರತಮಾತೆಯ ತನುಜಾತೆಯಾಗಿ ಅದರ ಮಡಿಲಲ್ಲಿ ಕರ್ನಾಟಕ ನಾಡು ಪ್ರಕೃತಿ ಸೌಂದರ್ಯದ ಬೀಡಾಗಿ ಭೂಸಿರಿಸಂಪತ್ತುಗಳಿಂದ ಶೋಭಿಸುತ್ತಿದೆ. ಈ ನಾಡಿನ ಪ್ರಕೃತಿ ಸೌಂದರ್ಯದ ತವರು ಮನೆಯಂತೆ ಕಂಗೊಳಿಸುತ್ತಿರುವ ಬೆಂಗಳೂರಿನ "ಲಾಲ್ ಬಾಗ್ ಸಸ್ಯಕಾಶಿ" ಜನಗಳ ಕಣ್ಮನ ಹೃದಯಗಳನ್ನು ತಣಿಸಿ ತೃಪ್ತಿಪಡಿಸುತ್ತಿದೆ. ಈ ಸಸ್ಯಕಾಶಿಗೆ ಸಮೀಪದಲ್ಲೇ "ಬೆಂಗಳೂರು ಮೆಡಿಕಲ್ ಕಾಲೇಜು" ಎಂಬ ಶಿರೋನಾಮೆ ಧರಿಸಿದ ವೈದ್ಯಕೀಯ ವಿಜ್ಞಾನಮಂದಿರ ಒಂದು ಸ್ಥಾಪಿತವಾಗಿದೆ. ಈ ಕಾಲೇಜಿಗೆ ಸೇರಿದ ವಿಕ್ಟೋರಿಯಾ ಆಸ್ಪತ್ರೆಯ ಎಲ್ಲಾ ಯೂನಿಟ್‌ಗಳ ಡಾಕ್ಟರ್‌ಗಳು ಆ ಭಾನುವಾರ ಕಾಲೇಜಿನ ಆಡಿಟೋರಿಯಂಲ್ಲಿ **" ಸಂಗೀತ ಶಾಸ್ತ್ರದ ಸೌರಭ "** ಮನರಂಜನೆ ಕಾರ್ಯಕ್ರಮದಲ್ಲಿ ಭಾಗವಹಿಸಲು ನೆರೆದಿದ್ದರು. ಆ ವೇಳೆಗೆ ಕಾಲೇಜಿನ ಡೀನ್ ಡಾ॥ ವ್ಯಾಸರಾಯರು ಮತ್ತು ಅವರ ಸಂಗಡಿಗರು ಅಲ್ಲಿ ಬಂದು ಸೇರಿದರು.

ಈ ವಾರ ಹಾಡು ಹೇಳುವ ಸರದಿ ಯಾವ ಯೂನಿಟಿನವರದು ಎಂದು ವಿಚಾರಮಾಡಿ ಮೆಡಿಕಲ್ ಸೈಡ್ ಯೂನಿಟ್‌ನ ಡಾಕ್ಟರಾದ ರಾಮುವನ್ನು ಹಾಡಲು ಒಪ್ಪಿಸಿದರು. ರಾಮು ಹಾಡುತ್ತಾನೆಂದು ತಿಳಿದ ಶೀಲಳ ಮುಖ ಹಿಗ್ಗಿನಿಂದ ಅರಳಿತು. ಆಗ ರಾಮುವಿನ ಇಂಗ್ಲೀಷ್ ಭಾಷೆಯ ವಿಶೇಷ ಸ್ಟೈಲ್ ಗೊತ್ತಿದ್ದ ಕೆಲವರು ರಾಮು ಇಂಗ್ಲೀಷ್ ಭಾಷೆಯಲ್ಲೇ ಹಾಡನ್ನು ಹಾಡಬೇಕೆಂದು ಒತ್ತಾಯಿಸಿದರು. ರಾಮು ಎಲ್ಲರತ್ತ ಒಮ್ಮೆ ನೋಡಿದ. ಶೀಲಳ ಮುಗುಳ್ನಗು ಅವನನ್ನು ಆಕರ್ಷಿಸಿತು. ಅವಳ ನಗುವಿನಲ್ಲಿದ್ದ ಅಂತರಾಳದ ಹೆಮ್ಮೆಯ ಸೊಬಗನ್ನು ಹೀರಿದ. ರಾಮು ಯಾವಕಡೆ ನೋಡಿದರೂ ಶೀಲಳ ನಗುಮುಖವೇ ಕಾಣತೊಡಗಿತು. ಅವಳ ನಗು ಮುಖವನ್ನು ನಗುಮುಖವಾಗಿ ನೋಡುತ್ತ ಉಣತೊಡಗಿದನು. ಅದರ ಇಂಗಿತದ ಗುಂಗಿನಲ್ಲಿ ಅವನು ಹಾಡು ಹೇಳಲು ಪ್ರಾರಂಭಿಸಿದ.

There is a girl sweet and kind
Nobody pleased so much my mind
I did but saw her passing by
Still I like her till I die.
She was very fair to the outword look
As many maidens be
Her loveliness I never knew
Until she smiled to me
She was good as she was pure
As pure in thought as angels are
To know her is to love her for ever
As she is an extraordinary divine flower.

ರಾಮು ಹಾಡು ನಿಲ್ಲಿಸಿದ ತಕ್ಷಣ ಕೈ ಚಪ್ಪಾಳೆಯ ಸುರಿಮಳೆ ಆಯಿತು. ಶೀಲಳಿಗೆ ಈ ಹಾಡು ತನ್ನನ್ನೇ ಕುರಿತು ಹಾಡಿದ್ದು ಎಂದು ಎನ್ನಿಸಿತು. ಕಾಲೇಜಿನ ದಿನಗಳಲ್ಲಿ ಸ್ನೇಹ ಸಲುಗೆಯಲ್ಲಿ ರಾಮು ಶೀಲಳಿಂದ ಹತ್ತಿರ - ಹತ್ತಿರ ಇರುವುದರ ಬದಲು ದೂರ - ದೂರ ಸರಿಯುತ್ತಿದ್ದನು. ಅದನ್ನು ಅರಿತಿದ್ದ ಶೀಲಳಿಗೆ ಈ ವರ್ತನೆ ಅಚ್ಚರಿಯುಂಟು ಮಾಡಿತು. ರಾಮು

ಹಾಡಿದ ಈ ಹಾಡನ್ನು ರಚಿಸಿದವರಾರು ? ಅದನ್ನು ತಿಳಿದುಕೊಳ್ಳಲು ಏಕೋ ಮನಸ್ಸು ಹಾತೊರೆಯಿತು. ಆಗ ರಾಮುವನ್ನು ಒಂದು ವಾಸ್ತವದ ಪ್ರಶ್ನೆ ಕೇಳಲು ನಿಶ್ಚಯಿಸಿದಳು.

ಶೀಲ : ಈಗ ನೀವು ಹಾಡಿದ ಹಾಡು ನಿಮ್ಮ ಸ್ವಂತ ಭಾವಕಲ್ಪನೆಯೇ ? ಇಲ್ಲ ಬೇರೆಯವರಿಂದ ರಚಿಸಲ್ಪಟ್ಟು ನೀವು ಅದನ್ನು ಹಾಡಿದಿರಾ ?

ರಾಮು : ಶೀಲ, ನೀವು ಒಬ್ಬ ಸುಮಧುರ ಸಂಗೀತಗಾರ್ತಿಯೆಂದು ನಾನು ಒಪ್ಪುತ್ತೇನೆ. ಆದರೆ ಬೇರೆ ಯಾರಿಗೂ ಸಂಗೀತದ ಅಭಿರುಚಿ ಹಾಗೂ ಸಾಹಿತ್ಯ ಜ್ಞಾನವೇ ಇಲ್ಲವೆಂದು ನೀವು ತಿಳಿದಿದ್ದರೆ ಅದು ನಿಮ್ಮ ದಡ್ಡತನ, ಅಜ್ಞಾನ ಮತ್ತು ಅಹಂ. ನಾನು ಹಾಡಿದ ಈ ಹಾಡು ನನ್ನದೆ ಭಾವ ಕಲ್ಪನೆ.

ಶೀಲ : ನೀವು ಬಹು ದೊಡ್ಡ ಸಂಗೀತ ಶಾಸ್ತ್ರದ ಪ್ರವೀಣರ ಹಾಗೆ ಮಾತನಾಡುತ್ತೀರಿ. ಸಂಗೀತ ಶಾಸ್ತ್ರದ ಜ್ಞಾನ ಒಂದು ಮಹಾಸಾಗರವೆಂದು ಬಹುಶಃ ನಿಮಗೆ ಗೊತ್ತಿಲ್ಲ. ನನಗೆ ಅಜ್ಞಾನ, ದಡ್ಡತನ ಮತ್ತು ಅಹಂ ಎಂದು ಹೇಳುವ ನೀವು ನಿಮ್ಮ ಸಂಗೀತ ಸಾಹಿತ್ಯ ಜ್ಞಾನವನ್ನು ಮತ್ತು ಜಾಣತನವನ್ನು ಕೃಪೆ ಮಾಡಿ ತೋರಿಸಿ, ನಾನು ಕೇಳುವ ಸಂಗೀತ ಶಾಸ್ತ್ರದ ಮೂಲಭೂತ ಪ್ರಶ್ನೆಗಳಿಗೆ ನಿಮ್ಮಲ್ಲಿ ಪ್ರವೀಣತೆ ಇದ್ದರೆ ಉತ್ತರಿಸಿ. ಇದು ನನ್ನ ಚಾಲೆಂಜ್. ಇಲ್ಲದಿದ್ದರೆ ನೀವು ಈಗ ಮಾತನಾಡಿದ ಧಾಟಿ ಸತ್ವವಿಲ್ಲದ ಸಂತನ ಹಾಗೆ ಬರೀ ಒಣಜಂಬದಹಾಗೆ.

ಆಗ ರಾಮುವಿಗೆ ಶೀಲಳ ಮಾತಿನ ವ್ಯಂಗ್ಯದ ಇಂಗಿತ ಅರಿತು ಅವಳ ಸವಾಲನ್ನು ಸ್ವೀಕರಿಸಲು ರಾಮು ನಿರ್ಧರಿಸಿದನು.

ರಾಮು : ನಿಮ್ಮ ಪ್ರಶ್ನೆಗಳು ಪ್ರಾರಂಭವಾಗಲಿ. ಇದು ನಿಮ್ಮ ಚಾಲೆಂಜ್‌ಗೆ ನನ್ನ ಪ್ರತಿ ಚಾಲೆಂಜ್.

ಆಗ ಶೀಲ ರಾಮುವಿಗೆ ನೇರವಾಗಿ ಎದುರಾಗಿ ಬಂದು ಕುಳಿತಳು. ಒಂದು ಕಡೆ ವಿನಯ, ಗಾಂಭೀರ್ಯ ಮತ್ತು ಸೌಂದರ್ಯಗಳ ಮೂರ್ತಿಯೇ ಆಗಿದ್ದ ರಾಮು ಸುಸಂಸ್ಕೃತ ತರುಣನಾಗಿ ಕುಳಿತಿದ್ದರೆ, ಇನ್ನೊಂದು ಕಡೆ ಸ್ಫುರದ್ರೂಪಿಣಿ ತರುಣಿಯಾದ ಶೀಲ ಸಂಭಾಷಣೆಗೆ ಮಂಡಿಸಿದಳು. ಅವರ ಪರಸ್ಪರವಾದ ಈ ವರ್ತನೆ ಎಲ್ಲರ ಊಹೆಗೂ ನಿಲುಕದ ಪವಾಡ ಸಂದರ್ಶನದಂತೆ ಕಂಡು ಕುತೂಹಲ ಮತ್ತು ಆತುರ ಉಕ್ಕಿಸಿತು. ಅವರೆಲ್ಲರೂ ಗುಂಪಾಗಿ, ತುಸು ದೂರವಾಗಿ ನಿಂತು ಹುಬ್ಬು ಏರಿಸಿ ನೋಡತೊಡಗಿದರು.

ಆಗ ರಾಮು ಕಣ್ಣುಮುಚ್ಚಿ ವಾಗ್ದೇವಿಯನ್ನು ನೆನೆದನು. ಕಾಲೇಜಿನ ಎದುರಿಗಿದ್ದ ಕೋಟೆ ವೆಂಕಟರಮಣಸ್ವಾಮಿ ದೇವಸ್ಥಾನದಲ್ಲಿ ಮಹಾಮಂಗಳಾರತಿಯ ಸಮಯದ ಅರ್ಚನೆಯ ಘಂಟಾರವವು ಜಾಗಟೆ, ಶಂಖನಾದದ ಧ್ವನಿ ವಾದ್ಯಗಳ ಘೋಷಣೆ ಜೊತೆಗೆ ಮೊಳಗುತ್ತಿತ್ತು.

ಶೀಲ : ಸಂಗೀತವೆಂದರೇನು ?

ರಾಮು : ಗೀತ - ವಾದ್ಯ - ನೃತ್ಯಗಳ ಸುಮಧುರ ಸಮ್ಮಿಲನದಿಂದ ರಾಗ - ಸ್ವರ - ತಾಳಗಳ ಚೌಕಟ್ಟಿನಲ್ಲಿ ಕಿವಿಗೆ ಇಂಪಾಗಿ, ಮನಸ್ಸಿಗೆ ಹಿತವಾಗಿ, ಹೃದಯಸ್ಪರ್ಶಿಯಾಗಿ, ಗಾಯಕನ ಅಂತರಾಳದಿಂದ ಹೊರ ಹೊಮ್ಮಿ ಆಲಿಸುವವರ ಮೈ-ಮನ ಹೃದಯಗಳಲ್ಲಿ ನಲಿವನ್ನುಂಟುಮಾಡುವ ಗೀತೆಯೇ - ಸಂಗೀತ.

ಶೀಲ : ಸಂಗೀತಕ್ಕೆ ಮೂಲವೇನು ?

ರಾಮು : ಮಹಾ ವಿಷ್ಣುವಿನ ಶಂಖದಿಂದ ಹೊರಟು ವಿಶ್ವವನ್ನೆಲ್ಲ ತುಂಬಿಕೊಂಡು ಪರಬ್ರಹ್ಮನಿಗೆ ಪ್ರಿಯವಾದ ಪ್ರಣವನಾದ ಅಂದರೆ ಓಂಕಾರವೇ ಸಂಗೀತಕ್ಕೆ ಮೂಲ.

ಶೀಲ : ಸಂಗೀತ ಶಾಸ್ತ್ರದ ಮೂಲಾಧಾರವೇನು ?

ರಾಮು : ಸಾಮವೇದದ ಸಪ್ತಸ್ವರಗಳಾದ ಸ, ರಿ, ಗ, ಮ, ಪ, ದ, ನಿ ಸಂಗೀತ ಶಾಸ್ತ್ರದ ಮೂಲಾಧಾರ.

ಶೀಲ : ಸಂಗೀತಶಾಸ್ತ್ರಕ್ಕೆ ಪ್ರಥಮ ಆಚಾರ್ಯ ಯಾರು ?

ರಾಮು : ಭರತ

ಶೀಲ : ಭರತನ ಅಂತರಾರ್ಥವೇನು ?

ರಾಮು : ಭ - ಭಾವ, ರ - ರಾಗ, ತ - ತಾಳ.

ಶೀಲ : ಸಂಗೀತ ಸೃಷ್ಟಿಯ ಮರ್ಮವೇನು ?

ರಾಮು : ಆಲಿಸಿದೊಡನೆ ನಲಿಯುವುದೇ ಸಂಗೀತ ಸೃಷ್ಟಿಯ ಮರ್ಮ.

ಶೀಲ : ಸಂಗೀತದ ಗುರಿ ಏನು ? ಉದ್ದೇಶವೇನು ?

ರಾಮು : ಮುಖ್ಯವಾದ ಗುರಿ - ಮಾನಸಿಕ ಸೌಖ್ಯ. ನೋವನ್ನು ಕಳೆದು ಆನಂದದ ಕಡೆಗೆ ಕೊಂಡೊಯ್ಯುವುದು ಸಂಗೀತದ ಉದ್ದೇಶ.

ಶೀಲ : ಮಾನವನಿಗೆ ಸಂಗೀತದ ಗುರು ಯಾರು ?

ರಾಮು : ಪ್ರಕೃತಿ

ಶೀಲ : ಸಂಗೀತದ ವಿಶೇಷತೆಯೇನು ?

ರಾಮು : ಸಂಗೀತ ಭಾವನೆಗಳ ಭಾಷೆ. ಇದು ಭಾವನೆಗಳ ಧ್ವನಿರೂಪದ ಕಲಾತ್ಮಕ ಪ್ರತಿಫಲನ. ಭಾವರಸ ಪ್ರಚೋದಕ ಮಾಡುವ ಈ ಕಲೆ ಭಾವ-ಭಾವನೆಗಳ ನವರಸಗಳನ್ನು ಉತ್ಪತ್ತಿ ಮಾಡುವ ಸಾಮರ್ಥ್ಯ ಹೊಂದಿದೆ. ಇದು ಗಾಯಕನ ಅಂತರಾಳದಿಂದ ಹೊರ ಹೊಮ್ಮುವ ಒಂದು ಅಲೌಕಿಕ ಅನುಭವ, ಇದು ವಾಸ್ತವಿಕ ಪ್ರಪಂಚವನ್ನು ಮಧುರ ಕಲ್ಪನಾ ಲೋಕವಾಗಿ ಪರಿವರ್ತಿಸುವ ಸಾಧನವಾಗಿದೆ, ಸಂಗೀತ ಭಾಷೆಯಿಂದ ಮನಸ್ಸಿನ ಭಾವೋದ್ವೇಗಗಳ ಸ್ಪಂದನಗಳನ್ನು ಸೂಕ್ಷ್ಮವಾದ ಅಭಿಪ್ರಾಯಗಳನ್ನು, ಧ್ವನಿಯ ಮೂಲಕ ವ್ಯಕ್ತಪಡಿಸಲೂ ಸಾಧ್ಯ.

ಶೀಲ : ಪ್ರತಿಭಾವಂತನಾದ ಸಂಗೀತಗಾರ ಯಾರು ?

ರಾಮು : ಪ್ರತಿಭಾಶಾಲಿಯಾದ ಕಲೆಗಾರ ತನ್ನ ಕಲೆಯಿಂದ ಬಹು ಜನರನ್ನು ಪ್ರಾಪಂಚಿಕ ಹವ್ಯಾಸಗಳಿಂದ ಕೆಲವು ಕಾಲವಾದರೂ ಬಿಡಿಸಿ, ತಾಮಸ ಮತ್ತು ರಾಜಸ ಸ್ತರಗಳಿಂದ ಅವರನ್ನು ಸಾತ್ತ್ವಿಕವಾದ ಆವರಣಕ್ಕೊಯ್ಯುತ್ತಾನೆ. ಅಂದರೆ ಯಾರು ಆನಂದಾನು ಭೂತಿಯ ಮಜಲಿಗೆ ಕೊಂಡೊಯ್ಯುತ್ತಾನೋ ಅವನೇ ನಿಜವಾದ ಕಲೆಗಾರ.

ಶೀಲ : ಹೇಗಿರುವುದು ಸಂಗೀತ ?

ರಾಮು : ಸೌಂದರ್ಯವು ನಾದದ ಮೂಲಕ ಅಭಿವ್ಯಕ್ತಿ ಹೊಂದಿ, ಕರ್ಣಾನಂದಕರ ಹಾಗೂ ಹೃದಯಸ್ಪರ್ಶಿಯಾದ ಗೀತೆಯಾದರೆ ಅದೇ ಸಂಗೀತ, ಅದು ಗಾಯಕ - ಶ್ರೋತೃ ಇಬ್ಬರಲ್ಲೂ ಏಕಕಾಲದಲ್ಲಿ ಚಿತ್ತೈಕಾಗ್ರತೆಯನ್ನುಂಟು ಮಾಡುವ ಶಕ್ತಿಯನ್ನು ಹೊಂದಿದೆ. ಸಂಗೀತವು ಇತರರ ಸುಖದುಃಖಗಳ ಸಮಭಾವನೆಯನ್ನು ಮನಸ್ಸಿನಲ್ಲಿ ಉದ್ದೀಪನಗೊಳಿಸಿ, ಉನ್ಮಾದ ಮತ್ತು ಉದ್ರೇಕಗಳನ್ನು ಶಮನಗೊಳಿಸಿ, ಹೃದಯವನ್ನು ಹಿಗ್ಗಿಸಿ, ಮಾನವನ ಮನಸ್ಸಿನ ಮೇಧಾಶಕ್ತಿಯಿಂದಲೂ ಹೃದಯ ಪರಿಪಾಕದಿಂದಲೂ ಸ್ಫೂರ್ತಿಗೊಂಡು ಆಂತರ್ಯ ಜೀವನಕ್ಕೆ ಸಂಬಂಧಪಟ್ಟು ಅಭಿವೃದ್ಧಿ ಹೊಂದಿದ ಕಲೆ.

ಶೀಲ : ಸಂಗೀತ ಕಲಾಭಿರುಚಿ ಹೊಂದಿದ ವ್ಯಕ್ತಿಗಳಲ್ಲಿ ಯಾವ ಪರಿವರ್ತನೆಗಳಾಗುತ್ತವೆ ?

ರಾಮು : ಮನಷ್ಯನಲ್ಲಿ ಕಲಾಭಿರುಚಿ ಮೂಡಿದಾಗ ಭಾವಾನುರಾಗವು ತಾನಾಗಿಯೆ ಬೆಳೆಯಲು ತೊಡಗಿ ಆವನ ಜೀವನದಲ್ಲಿ ಶಿಸ್ತು, ಸಹನೆ, ಸಹಜೀವನ, ಸಂಸ್ಕಾರ, ಸೌಮ್ಯತೆ, ಸ್ನೇಹಪರತೆ, ಏಕಾಗ್ರತೆ, ಶಾಂತಿ, ದೈವಿಕ ಶಕ್ತಿಯ ಅರಿವು ಮುಂತಾದವುಗಳು ಅಭಿವೃದ್ಧಿ ಹೊಂದಿ ಆತನನ್ನು ಸುಸಂಸ್ಕೃತನನ್ನಾಗಿ ವಿಶಾಲ ಹೃದಯದವನನ್ನಾಗಿ ಮಾಡುತ್ತದೆ. ಸಂಗೀತದ ರಾಗ - ರಸಕ್ಕೆ ಸಂಬಂಧಪಟ್ಟ ವಿಷಯಗಳು ನಮ್ಮನ್ನು ಮನಶಾಸ್ತ್ರದೆಡೆಗೂ, ತಾಳಕ್ಕೆ ಸಂಬಂಧಪಟ್ಟ ವಿಷಯಗಳು ನಮ್ಮನ್ನು ಗಣಿತ ಶಾಸ್ತ್ರದೆಡೆಗೂ ಕರೆದೊಯ್ಯುತ್ತವೆ. ಸಂಗೀತದಿಂದ ಭಾಷೆ, ಸಾಹಿತ್ಯ, ಛಂದಸ್ಸು, ತತ್ತ್ವ ಮೊದಲಾದವುಗಳ ಜ್ಞಾನ ಉದಯವಾಗುತ್ತದೆ. ಭೋಗ ಜೀವನ ಹಾಗೂ ಆಧ್ಯಾತ್ಮ ಜೀವನವನ್ನು ಒಂದು ಗೂಡಿಸುವ ಒಂದು ಸಾಧನೆ ಈ ಸಂಗೀತ.

ಶೀಲ : ಸಂಗೀತಗಾರರು ನಾದವನ್ನು ಏನೆಂದು ತಿಳಿದು ಉಪಾಸನೆ ಮಾಡುತ್ತಾರೆ ?

ರಾಮು : ಭಕ್ತಿ, ಶ್ರದ್ಧೆಯಿಂದ ಬ್ರಹ್ಮವೆಂದು ತಿಳಿದು ಉಪಾಸನೆ ಮಾಡುತ್ತಾರೆ. ಸಿರಿಕಂಠದವರು ಗಾಯನದಿಂದಲೂ ವಾದಕರು ಸಂಗೀತ ವಾದ್ಯಗಳ ವಾದನದಿಂದಲೂ ನಾದೋಪಾಸನೆಯನ್ನು ಮಾಡುವರು.

ಶೀಲ : ಸಂಗೀತ ಕಲೆ ಮನುಷ್ಯನ ಮೇಲೆ ಯಾವ ಪರಿಣಾಮ ಬೀರುತ್ತದೆ ?

ರಾಮು : ಸಂಗೀತದ ಪ್ರಭಾವ ಎಲ್ಲರಿಗೂ ಅವರವರ ಮಾನಸಿಕ ಭಾವುಕತೆಯ ಮಟ್ಟಕ್ಕೆ ತಕ್ಕಂತೆ ಪರಿಣಾಮ ಬೀರುತ್ತದೆ. ಆದರಿಂದ ಸಂಗೀತಾನಂದ ರಸ ಎಲ್ಲರ ಹೃದಯಗಳ ವೀಣೆಯನ್ನು ಮೀಟುತ್ತದೆ. ಮಾನವನು ಹಾಡಿದಾಗ ಆತನ ದೇಹ ಮನಸ್ಸುಗಳಲ್ಲಿ ನವಚೈತನ್ಯವು ವಿದ್ಯುತ್‌ಲಹರಿಯು ಹರಿಯುವಂತೆ ಹರಿಯುತ್ತದೆ. ಅದರಿಂದ ಉತ್ಸಾಹಗೊಂಡು ತನ್ನ ಹೃದಯದ ಪ್ರೇಮ, ಉಲ್ಲಾಸ, ನಿರಾಶೆ, ಜಿಗುಪ್ಸೆ, ಕೋಪ, ಭಯ, ಭರವಸೆ ಮೊದಲಾದ ಭಾವನೆಗಳನ್ನು ನಾದದ ತರಂಗಗಳಲ್ಲಿ ಹರಿಸಿ ಮನಸ್ಸನ್ನು ಹಗುರಾಗಿಸಬಹುದು. ಒಟ್ಟಿನಲ್ಲಿ ಸಂಗೀತ ದೇಹದ ದಣಿವನ್ನಾರಿಸಿ ಮನಸ್ಸಿಗೆ ಉಲ್ಲಾಸ ನೆಮ್ಮದಿಗಳನ್ನು ನೀಡುವ ಪ್ರಮುಖ ಸಾಧನ. ಇದು ಮನುಷ್ಯನ ಮನಸ್ಸಿಗೆ ತಂಪನ್ನೆರೆಯುವ ವೃಕ್ಷವಾಗಿ, ಕಂಪನ್ನು ಸೂಸುವ ಪುಷ್ಪವಾಗಿ, ಆನಂದವನ್ನೀಯುವ ಅಮೃತ ಬಿಂದುವಾಗಿ ಬೆಳಗುತ್ತದೆ. ಬದುಕಿಗೆ ಸ್ಫೂರ್ತಿದಾಯಕವಾಗಿ, ದಿವ್ಯ ಕಲೆಯಾಗಿ ಆತ್ಮೋನ್ನತಿಗೆ ಕಾರಣವಾದ ಮನಃಶಾಂತಿ ನೀಡುತ್ತದೆ.

ಶೀಲ : ಸಂಗೀತವು ಯಾವ ವೇದ ?

ರಾಮು : ಸಾಮವೇದದಲ್ಲಿ ಬರುವ ಗಾಂಧರ್ವ ವೇದ.

ಶೀಲ : ಸಂಗೀತ ಕಲೆಯಲ್ಲಿ ಯಾವ ಪಂಚೇಂದ್ರಿಯ ಪಾತ್ರವಹಿಸುತ್ತದೆ ?

ರಾಮು : ಶ್ರವಣೇಂದ್ರಿಯ. ಮನಸ್ಸಿನ ಭಾವನೆಯನ್ನು ಶ್ರವಣೇಂದ್ರಿಯದ ಮೂಲಕ ಪಡೆದು ಕಲಾವಿದ ಮತ್ತು ಶ್ರೋತೃ ಇಬ್ಬರೂ ಆನಂದ ಅನುಭವಿಸುತ್ತಾರೆ.

ಶೀಲ : ಸಂಗೀತದ ಆಧ್ಯಾತ್ಮಿಕ ಲಾಭ ಏನು ?

ರಾಮು : ಭಕ್ತಿ ಸಹಿತವಾದ ಸಂಗೀತದ ಮೂಲಕ ಆಧ್ಯಾತ್ಮಿಕ ಉನ್ನತಿ ಪಡೆದು ಪಾರಮಾರ್ಥ ಸಾಧನೆ ಮಾಡಿ ಮುಕ್ತಿಯನ್ನು ಪಡೆಯಲೂ ಸಾಧ್ಯ.

ಶೀಲ : ನಾದ ರೂಪವಾದ ಸಂಗೀತ ಕಲೆಯ ಎರಡು ಬಗೆಗಳಾವುವು ?

ರಾಮು : ಗಾನ ಸಂಗೀತ ಮತ್ತು ವಾದ್ಯ ಸಂಗೀತವಾಗಿ ಇವು ಪ್ರವಹಿಸಿ ತಮ್ಮ ನಾದ ಮಾಧುರ್ಯದಿಂದ ಮನಕ್ಕೆ ಆನಂದವನ್ನುಂಟುಮಾಡುತ್ತವೆ.

ಶೀಲ : ಸಂಗೀತಕ್ಕೆ ಸಂಬಂಧಪಟ್ಟ ಹಾಗೆ ನಮಗೆ ಲಭ್ಯವಾಗಿರುವ ಅತಿ ಪ್ರಾಚೀನ ಗ್ರಂಥ ಯಾವುದು ?

ರಾಮು : ಭರತನ ನಾಟ್ಯ ಶಾಸ್ತ್ರ.

ಶೀಲ : ಸಂಗೀತದ ಬಗ್ಗೆ ಗುರುಹಿರಿಯರ ಅನುಭವದ ಮಾತೇನು ?

ರಾಮು : ಸಂಗೀತ ಜ್ಞಾನವಿಲ್ಲದ ಜೀವನ ಬರಡು.

ಶೀಲ : ಸಂಗೀತ, ನೃತ್ಯ, ಕಲೆಗಳು ಸಾಮಾಜಿಕ, ಧಾರ್ಮಿಕ ಹಾಗೂ ರಾಷ್ಟ್ರೀಯ ನೆಲೆಗಟ್ಟುಗಳ ಮೇಲೆ ಯಾವ ಪರಿಣಾಮ ಉಂಟುಮಾಡುತ್ತವೆ ?

ರಾಮು : ಸಾಮಾಜಿಕ ಹಾಗೂ ಧಾರ್ಮಿಕ ಐಕ್ಯತೆಗಳನ್ನು ರಾಷ್ಟ್ರೀಯ ಭಾವೈಕ್ಯತೆಗಳನ್ನು ತರುವ ಸಾಧನಗಳು.

ಶೀಲ : ಸಂಗೀತ ಏನನ್ನು ಸಾರುತ್ತದೆ ? ಹೇಗೆ ಸಾರುತ್ತದೆ ?

ರಾಮು : ಅಮೂಲ್ಯವಾದ ಜೀವನ ಮೌಲ್ಯಗಳನ್ನು ರಸಭಾವಗಳ ಮೂಲಕ ಪರಿಣಾಮಕಾರಿಯಾಗಿ ಸಾರುತ್ತದೆ.

ಶೀಲ : ಸಂಗೀತದ ಹೆಗ್ಗಳಿಕೆ ಏನು ?

ರಾಮು : ಮನಸ್ಸಿನ ಭಾವನೆಗಳ ಧ್ವನಿ ನವರಸಗಳನ್ನು ಸ್ವರಗಳ ಮೂಲಕ ಹೊರಹೊಮ್ಮಿಸಿ ಆನಂದಾನುಭೂತಿಯನ್ನು ಉಂಟುಮಾಡುವುದು ಸಂಗೀತದ ಹೆಗ್ಗಳಿಕೆ.

ಶೀಲ : ಸಂಗೀತದ ಬಗ್ಗೆ ಆಕ್ಸ್‌ಫರ್ಡ್ ಡಿಕ್ಷನರಿಯ ನಿರೂಪಣೆಯೇನು ?

ರಾಮು : Music is the art of experiencing or stirring emotions by melodious and harmonious combination of sounds.

ಶೀಲ : ಮಾನವನು ಕಲಾವಿದನೋ, ಕಲಾರಾಧಕನೋ, ರಸಿಕನೋ ಏಕೆ ಆಗಬೇಕು ?

ರಾಮು : ಮಾನವನಲ್ಲಿನ ಸಹಜವಾದ, ಸುಮಧುರವಾದ ಭಾವನೆಗಳ ಬೆಳವಣಿಗೆ ಮಾಡಿಕೊಳ್ಳುವುದಕ್ಕಾಗಿ ಆಗಬೇಕು.

ಶೀಲ : ಪೋಷಕರು ಹಾಗೂ ಬೋಧಕರು ಎಳೆಯ ಮಕ್ಕಳಿಗೆ ಸಂಗೀತ, ನೃತ್ಯ, ಕಲೆಗಳ ವಿಚಾರದಲ್ಲಿ ಯಾವ ರೀತಿಯ ಕರ್ತವ್ಯ ನಿರ್ವಹಿಸಬೇಕು ?

ರಾಮು : ಎಳೆಯ ವಯಸ್ಸಿನಿಂದಲೇ ಮಕ್ಕಳಿಗೆ ಕಲೆಗಳಲ್ಲಿ ಆಸಕ್ತಿ ಮೂಡಿಸುವುದು, ತೊಡಗಿಸುವುದಲ್ಲದೆ ಕಲಾಭಿಮಾನಿಗಳಾಗಲು ಉತ್ತೇಜಿಸಬೇಕು.

ಶೀಲ : ಸಂಗೀತಕ್ಕೆ ಪ್ರಕೃತಿಯ ಪ್ರೇರಣೆ ಹೇಗೆ ?

ರಾಮು : ಹರಿಯುವ ನದಿಗಳ ನೀರಿನ ಕಲರವ ಶಬ್ದ, ಝುಳುಝುಳುನಾದ, ಜಲಪಾತದಿಂದ 'ಭೋ' ಎಂದು ಭೋರ್ಗರೆದು ಧುಮ್ಮಿಕ್ಕಿ ಹರಿಯುವ ನದಿಗಳ ಶಬ್ದ, ಸಾಗರದ ಮೊರೆತ ಗಿಡಮರಗಳ ಮರ್ಮರ, ಹಕ್ಕಿಗಳ ಚೀತ್ಕಾರ ಚಿಲಿಪಿಲಿಗುಟ್ಟುವ ಕಲ ಕಲ ಧ್ವನಿ, ಕಾಜಾಣಗಳ, ಕೋಗಿಲೆಗಳ ಆಲಾಪನೆ, ನವಿಲುಗಳ ನೃತ್ಯ, ದುಂಬಿಗಳ ಗುಮ್‌ಗುಮ್, ಜೇನು ನೊಣಗಳ ಓಂಕಾರದಂಥ ಝೇಂಕಾರ, ಕಾಡಾನೆಯ ಘೀಳಿನ ಸದ್ದು, ಹುಲಿಯ ಅಬ್ಬರ, ಹಕ್ಕಿಗಳು ಪಟಪಟನೆ ರೆಕ್ಕೆ ಬಡಿದು ಗರಿಗೆದರಿ ಮುಗಿಲಿನ ಎತ್ತರಕ್ಕೆ ಪುರ್ರನೆ ಹಾರಿ ಜರ್ರನೆ ಇಳಿಯುವ ಸದ್ದು.

ಶೀಲ : ಲಲಿತ ಕಲೆಗಳಲ್ಲಿ ಸಂಗೀತಕ್ಕೆ ಯಾವ ಸ್ಥಾನ ?

ರಾಮು : ಪ್ರಥಮ ಸ್ಥಾನ.

ಶೀಲ : ಏನಿಲ್ಲದಿದ್ದರೆ ಸಂಗೀತವಿಲ್ಲ ?

ರಾಮು : ಸ್ವರವಿಲ್ಲದಿದ್ದರೆ ಸಂಗೀತವಿಲ್ಲ.

ಶೀಲ : ಸಂಗೀತದ ಜೀವಾಳವೇನು ?

ರಾಮು : ಸುಸ್ವರ ಮತ್ತು ಸುನಾದ.

ಶೀಲ : ಭಾರತದಲ್ಲಿ ಸಂಗೀತವನ್ನು ಪೋಷಿಸಿ ಬೆಳೆಸಿದ ಕೇಂದ್ರಗಳಾವುವು ?

ರಾಮು : ದೇವಾಲಯಗಳು ಮತ್ತು ರಾಜರ ಆಸ್ಥಾನಗಳು.

ಶೀಲ : ಭಾರತದಲ್ಲಿ ಧರ್ಮಪ್ರಚಾರಕರು, ತತ್ತ್ವೋಪದೇಶಿಗಳು ಯಾವ ಮಾಧ್ಯಮದ ಮೂಲಕ ತಮ್ಮ ಉಪದೇಶಗಳನ್ನು ನೀಡುತ್ತ ಬಂದಿದ್ದಾರೆ ?

ರಾಮು : ಸಂಗೀತ ಮಾಧ್ಯಮದ ಮೂಲಕವೇ ಉಪದೇಶಗಳನ್ನು ನೀಡುತ್ತ ಬಂದಿರುವುದು ಸಾರ್ವಕಾಲಿಕ ಹಾಗೂ ಸರ್ವವಿಧಿತವಾದ ಅಂಶವಾಗಿದೆ. ಆಧ್ಯಾತ್ಮಿಕತೆಯ ಒಂದು ಮುಖವಾಗಿ ಮುನ್ನಡೆಯುತ್ತಿದೆ.

ಶೀಲ : ಸಂಗೀತ ಕಲೆಗೂ, ಇತರ ಲಲಿತ ಕಲೆಗಳಿಗೂ ಹಾಗೂ ಬೇರೆ ಕಲೆಗಳಿಗೂ ಯಾವ ರೀತಿಯ ಸಂಬಂಧವಿದೆ ?

ರಾಮು : ಸಂಗೀತ ಇತರ ಕಲೆಗಳಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಹಾಸುಹೊಕ್ಕಾಗಿದ್ದು, ರಸಿಕನ ಅನುಭವಕ್ಕೆ ಮಾತ್ರ ಸಿಲುಕುತ್ತದೆ.

ಶೀಲ : ಸಂಗೀತ ಕಲೆಯ ಕಲಿಕೆಯ ಮಹತ್ವ ಮತ್ತು ಹಿರಿಮೆಗಳೇನು ?

ರಾಮು : ಸಂಗೀತವನ್ನು ಯಾವ ಕಾಲಕ್ಕೂ, ಯಾವ ದೇಶದಲ್ಲೂ, ಯಾವ ವಯಸ್ಸಿನಲ್ಲಿಯೂ ಹಾಡಿಕೊಳ್ಳಲು ಅಥವಾ ನುಡಿಸಿಕೊಳ್ಳಲು ಸಾಧ್ಯವಾಗುವುದು. ಮಾನವನನ್ನು ಮಾನವತ್ವದಿಂದ ಅಮರತ್ವಕ್ಕೆ ಕೊಂಡೊಯ್ಯುವ ಶಕ್ತಿ ಪಡೆದಿರುವ ಸಂಗೀತ ಸುಸ್ವರ, ಸುನಾದದಿಂದ ಕೂಡಿ ಮಧುರವಾದ ಲಲಿತ ಕಲೆಯಾಗಿ ಹಿರಿಮೆಗೆ ಪಾತ್ರವಾಗಿದೆ. ಇದರಿಂದ ಎಲ್ಲ ಕಲೆಗಳಲ್ಲಿ ಸಂಗೀತಕ್ಕೆ ಹೆಚ್ಚಿನ ಪ್ರಾಶಸ್ತ್ಯವಿದೆ.

ಶೀಲ : ಸಂಗೀತಕ್ಕೂ ಮನೋವಿಜ್ಞಾನಕ್ಕೂ ಯಾವ ರೀತಿಯ ಸಂಬಂಧವಿದೆ.

ರಾಮು : ಸಂಗೀತವು ಮನಸ್ಸಿಗೆ ನೆಮ್ಮದಿಯನ್ನು ನೀಡುವ ಲಲಿತ ಕಲೆಗಳಲ್ಲಿ ಒಂದಾಗಿದೆ. ಸಂಗೀತವನ್ನು ಅಭ್ಯಾಸ ಮಾಡುವುದರಿಂದ ಏಕಾಗ್ರತೆ, ಗ್ರಹಣ ಶಕ್ತಿ, ಸ್ಮರಣಶಕ್ತಿ, ಚಿಂತನ ಶೀಲತೆ, ಸೃಜನ ಶೀಲತೆ ಹೆಚ್ಚುವುದರಿಂದ ಸಂಗೀತವನ್ನು ಅಭ್ಯಾಸ ಮಾಡುವವರ ಬುದ್ಧಿಶಕ್ತಿಯ ಮಟ್ಟವು ವೃದ್ಧಿಗೊಳ್ಳುತ್ತದೆ.

ಇತರ ವಿಷಯಗಳನ್ನು ಅಭ್ಯಾಸ ಮಾಡುವಾಗ ಉಂಟಾಗುವ ಬೇಸರಿಕೆಯನ್ನು ತೊಲಗಿಸಲು ಹಾಗೂ ಮೆದುಳಿಗೆ ವಿಶ್ರಾಂತಿ ದೊರಕುವಂತೆ ಮಾಡಲು ಸಂಗೀತ ಬಹು ಸಹಕಾರಿಯಾಗಿದೆ. ಈ ರೀತಿ ಮಾನಸಿಕ ಒತ್ತಡಗಳನ್ನು ಸಂಗೀತದ ಮೂಲಕ ಪರಿಹರಿಸಿಕೊಂಡಾಗ ಮಾನಸಿಕ ಬೆಳವಣಿಗೆಯು ಪುಷ್ಟಕರವಾಗಿ, ಸಂಗೀತ ಅಭ್ಯಾಸಿಗಳಲ್ಲಿ, ಶಿಸ್ತು ತಾನಾಗಿಯೇ ಅವಿರ್ಭವಿಸಿ ಜೀವನವು ಸುಖಮಯವಾಗುವುದು.

ಶೀಲ : ಸಂಗೀತವು ಹೇಗೆ ಸಿದ್ಧಿಸುವುದು ?

ರಾಮು : ಶಿಸ್ತಿನಿಂದ ಅಭ್ಯಾಸ ಮಾಡಿದರೆ ಮಾತ್ರ ಸಂಗೀತವು ಸಿದ್ಧಿಸುವುದು. ಇದರಿಂದ ಸಂಗೀತ ವಿದ್ಯಾರ್ಥಿಗೆ ತನ್ನ ದಿನಚರಿಯಲ್ಲಿ ಶಿಸ್ತು ಏರ್ಪಡುತ್ತದೆ. ಜೊತೆಗೆ ಕಾಠಿಣ್ಯವು ಕಡಿಮೆಯಾಗಿ, ಸಮಾಧಾನವು ಏರ್ಪಟ್ಟು, ಸಂಸ್ಕಾರವಂತರಾಗಲು ಸಂಗೀತ ಪೂರಕವಾಗುವುದು.

ಶೀಲ : ಸಂಗೀತಕ್ಕೂ ವಿಜ್ಞಾನಕ್ಕೂ ಯಾವ ಸಂಬಂಧವಿದೆ ?

ರಾಮು : ಸಂಗೀತ ಕಲೆಯು ವೈಜ್ಞಾನಿಕ ಹಿನ್ನಲೆಯಲ್ಲೇ ಬೆಳೆದು ಬಂದಿದೆ. ಮಾನವನ ಪ್ರತಿಯೊಂದು ಚಲನವಲನಗಳು ವೈಜ್ಞಾನಿಕವಾಗಿ, ವ್ಯವಸ್ಥಿತವಾಗಿದ್ದು, ಲಯಬದ್ಧವಾಗಿವೆ. ನಮ್ಮ ಅಂಗಾಂಗಗಳೂ ಸಹ ಲಯದಿಂದಲೇ ಕೂಡಿ ಸ್ಪಂದಿಸುತ್ತವೆ.

ಶೀಲ : ಮಾನವನ ಶರೀರದ ಬೆಳವಣಿಗೆಯಲ್ಲಿ ಸಂಗೀತದ ಪಾತ್ರವಿದೆಯೇ ?

ರಾಮು : ಮಾನವನ ಶರೀರದ ಬೆಳವಣಿಗೆಯಲ್ಲಿ ಸಂಗೀತ ಹಿರಿದಾದ ಪಾತ್ರವಹಿಸುತ್ತದೆ. ಪ್ರಕೃತಿದತ್ತವಾದ ಮಾನವ ಶರೀರದ ಹಲವಾರು ಅಂಗಗಳು ಮುಖ್ಯವಾಗಿ ಶಾರೀರ, ಶ್ರವಣೇಂದ್ರಿಯ, ಶ್ವಾಸಕೋಶಗಳು ಅಧಿಕೃತವಾಗಿ ಬಳಸಲ್ಪಡುತ್ತವೆ. ಶ್ವಾಸಕೋಶಗಳ ಆರೋಗ್ಯಕರ ಬೆಳವಣಿಗೆಗೆ, ಸಬಲವಾದ ಹೃದಯಕ್ಕೆ, ಸಮಸ್ಥಿತಿಯಲ್ಲಿರುವ ಮಾನಸಿಕ ಚೈತನ್ಯಕ್ಕೆ, ನರನಾಡಿಗಳ ಚಲನೆಗೆ, ಸಂಗೀತ ಸಾಧನೆಯು ಸಹಕರಿಸುತ್ತದೆ. ಇದು ಪ್ರಾಪಂಚಿಕ ನೆಲೆಯಿಂದ ಉತ್ಪನ್ನವಾಗುವಂಥ ಎಲ್ಲಾ ರೋಗರುಜಿನಗಳಿಗೂ ದಿವ್ಯೌಷಧಿ ಆದುದ್ದರಿಂದ ಮನುಷ್ಯನ ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಹತೋಟಿಯಲ್ಲಿಡುವ ಸುಲಭ ಮಾರ್ಗ ಸಂಗೀತ ಅಭ್ಯಾಸ.

ಶೀಲ : ಸಂಗೀತಕ್ಕೂ ಗಣಿತಶಾಸ್ತ್ರಕ್ಕೂ ಯಾವ ಸಂಬಂಧವಿದೆ ?

ರಾಮು : ಉಸಿರಿಲ್ಲದ ಸಜೀವ ವಸ್ತುಗಳಿಲ್ಲ, ಹಾಗೆಯೇ ತಾಳವಿಲ್ಲದ ಸಂಗೀತವಿಲ್ಲ. ಉಸಿರು ಒಡಲಿನಲ್ಲಿರುವಂತೆ ತಾಳವು ಸಂಗೀತದಲ್ಲಿ ಅಡಕವಾಗಿರುವುದು. ತಾಳದ ವ್ಯವಹಾರದಿಂದ ಕಲಾವಿದನ ಬುದ್ಧಿ ಮತ್ತೆ ಹೆಚ್ಚು ತೀಕ್ಷ್ಣವಾಗುವುದು.

ಶೀಲ : ಸಂಗೀತಕ್ಕೂ, ಭೌತಶಾಸ್ತ್ರಕ್ಕೂ ಯಾವ ಸಂಬಂಧವಿದೆ ?

ರಾಮು : ಸಂಗೀತಕ್ಕೆ ನಾದವೇ ಮೂಲ. ನಾದವು ಭೌತಶಾಸ್ತ್ರಕ್ಕೆ ಸಂಬಂಧಪಟ್ಟ ವಿಷಯ, ಹೀಗಾಗಿ ನಾದೋತ್ಪತ್ತಿ, ಸ್ವರ ಸ್ಥಾನಗಳು, ಸ್ಥಾಯಿಸ್ವರದ ಸೂಕ್ಷ್ಮ ಶ್ರುತಿಗಳು, ವಾದ್ಯಗಳ ರಚನೆ, ವಾದ್ಯಗಳ ನಾದದ ಗುಣಮಟ್ಟ, ಸಂಗೀತ ಪ್ರಸಾರ ಕಾರ್ಯಕ್ಕೆ ನೆರವಾಗುವ ಧ್ವನಿವರ್ಧಕ ಯಂತ್ರ, ಧ್ವನಿ ಮುದ್ರಣ ಯಂತ್ರ, ರೇಡಿಯೋ, ಗ್ರಾಮಫೋನ್, ಧ್ವನಿ ಮುದ್ರಿಸುವ ಸ್ಟುಡಿಯೋ, ಪ್ರತಿಧ್ವನಿಯು ಬರದಂತಹ ಸಂಗೀತ ಸಭಾಂಗಣ, ಮುಂತಾದವುಗಳು ಭೌತಶಾಸ್ತ್ರಕ್ಕೂ ಮತ್ತು ಸಂಗೀತ ಶಾಸ್ತ್ರಕ್ಕೂ ಸಂಪರ್ಕ ಕಲ್ಪಿಸುತ್ತವೆ.

ಶೀಲ : ಸಂಗೀತ ಮತ್ತು ಸಮಾಜ ಶಾಸ್ತ್ರದ ಸಂಬಂಧ ಹೇಗಿದೆ ?

ರಾಮು : ಸಂಗೀತವು ಸಮಾಜದ ಅವಿಭಾಜ್ಯ ಅಂಗವಾಗಿದೆ. ಜಾತಿ, ಮತ, ಭಾಷೆ, ಅಂತಸ್ತು, ಲಿಂಗ ಭೇದಗಳಿಲ್ಲದ ಭಾವೈಕ್ಯತೆಯನ್ನು ಸಾಧಿಸುವ ಕಲೆ ಸಂಗೀತ. ಇದಕ್ಕೆ ಮಾನವನನ್ನು ಸತ್ಪ್ರಜೆಯನ್ನಾಗಿ ಮಾರ್ಪಡಿಸುವ ಶಕ್ತಿ ಇದೆ.

ಆಗ ಶೀಲ ರಾಮುವಿನ ಕಾವ್ಯ ಮತ್ತು ಸಾಹಿತ್ಯದ ಜ್ಞಾನದ ಅಂತರಾಳವನ್ನು ಅರಿಯಲುಮತ್ತೆ ಮೂರು ಪ್ರಶ್ನೆಗಳನ್ನು ಕೇಳಿದಳು.

ಶೀಲ : ಕವಿ ಯಾರು ?

ರಾಮು : ಕವಿ ಒಬ್ಬ ಪೂರ್ಣ ಮಾನವನ ಸಂಕೇತವಾಗಿ ಅಪೂರ್ಣ ಮಾನವರ ನಡುವೆ ನಿಲ್ಲುತ್ತಾನೆ. ಅವನು ಓದುಗರನ್ನು ಒಂದು ಉನ್ನತ ಸಮಾಜದ ರೀತಿ ನೀತಿಗಳ ಮತ್ತು ಆಲೋಚನೆಯ ಉತ್ಕೃಷ್ಟ ಶೈಲಿಗೆ ಕರೆದೊಯ್ಯುತ್ತಾನೆ, ಇತರರು ಕನಸು ಕಾಣುವುದನ್ನು ಅವನು ಪ್ರತ್ಯಕ್ಷ ನೋಡುತ್ತಾನೆ. ಒಂದು ಸುಂದರವಾದ ಭವ್ಯವಾದ ಕಾವ್ಯವನ್ನು ಸೃಷ್ಟಿಸುವ ಕಾವ್ಯನಿರ್ಮಾತೃ ಕವಿ ಎನಿಸುತ್ತಾನೆ. "ಕವಿಃ ಕರೋತಿ ಕಾವ್ಯಂ".

ಶೀಲ : ಕಾವ್ಯವೆಂದರೇನು ?

ರಾಮು : ಆನಂದದೊಡನೆ ವಿಶಾಲವಾದ ಜ್ಞಾನವನ್ನು ತಂದುಕೊಡುವ ಸಾಧನವೇ ಕಾವ್ಯ. ಸತ್ಯ, ಸೌಂದರ್ಯ, ಶಕ್ತಿ, ತತ್ತ್ವಗಳನ್ನು ಮನಸ್ಸಿನ ಕಲ್ಪನೆ ಹಾಗೂ ಊಹೆಗಳಿಂದ ಕಾವ್ಯ ಮೂರ್ತೀಕರಿಸುತ್ತದೆ.

ವಿಶ್ವದಲ್ಲಿರತಕ್ಕದ್ದೆಲ್ಲ ಅದರ ಸಾಧನ, ಆನಂದ ಮತ್ತು ಉದಾತ್ತೀಕರಣ ಅದರ ಗುರಿ, ಅದು ನಮ್ಮನ್ನು ರೂಪಿಸುವ, ಪೋಷಿಸುವ ಮತ್ತು ಸಂತಸಗೊಳಿಸುವ ಶಕ್ತಿಯನ್ನು ಪಡೆದುಕೊಂಡಿರುತ್ತದೆ. ಬಾಹ್ಯ ಮತ್ತು ಆಧ್ಯಾತ್ಮಿಕ ಜಗತ್ತಿನ ಸುಖಾನುಭವವನ್ನು ಸಜೀವವಾಗಿರಿಸಿ ಪ್ರಕೃತಿ ಸಂಪ್ರದಾಯಗಳ ನಡುವೆ ಅದು ನಿಲ್ಲುತ್ತದೆ. ಕವಿಗೆ ಬಹಳ ಕೀರ್ತಿಯನ್ನು ಅಪಾರ ಆತ್ಮಶಾಂತಿಯನ್ನು ತಂದುಕೊಡುತ್ತದೆ. ಜೀವನ ಮತ್ತು ಕಾವ್ಯ ಎರಡೂ ಒಂದೇ ವಸ್ತುವಿನ ವಿಭಿನ್ನರೂಪಗಳೆನ್ನಬಹುದು. ಕಾವ್ಯ ಸೌಂದರ್ಯವೇ ಅಲಂಕಾರ. " ವಾಕ್ಯಂರಸಾತ್ಮಕಂ ಕಾವ್ಯಂ ". "ಜೇನು ತುಪ್ಪ ಸಿಹಿ, ಅದಕ್ಕಿಂತ ಸಿಹಿ ಅಮೃತ, ಅದಕ್ಕಿಂತ ಸಿಹಿ ಕವಿಯ ಮಾತು" ಎಂಬ ಕವಿ ನುಡಿಯಿಂದ ಕಾವ್ಯದ ಸವಿ, ಸೌಂದರ್ಯದ ಅರಿವಾಗುವುದು.

ಶೀಲ : ಸಾಹಿತ್ಯವೆಂದರೇನು ?

ರಾಮು : ಯಾವುದನ್ನು ಓದಿದರೆ ಅಥವಾ ಕೇಳಿದರೆ ಮಾನವನ ಹೃದಯದಲ್ಲಿ ಅನಿರ್ವಚನೀಯವಾದ ಚಲನೆಯ ಅನುಭವವುಂಟಾಗುತ್ತದೆಯೋ ಅದೇ ಸಾಹಿತ್ಯ.

ಸಾಹಿತ್ಯ ಜೀವನದ ಕನ್ನಡಿಯೂ ಹೌದು, ಜೀವನದ ವಿಮರ್ಶೆಯೂ ಹೌದು. ಮಾನವನು ಪ್ರಗತಿಯ ಕಡೆ ಹೋಗುವಾಗ ಸಾಹಿತ್ಯ ಅವನನ್ನು ಪ್ರಾಕೃತತನದ ಸಂಸ್ಕೃತಿಯ ಕಡೆಗೆ ಕರೆದೊಯ್ಯುತ್ತದೆ. ಸಾಹಿತ್ಯ ಅನಂತವಾದ ವ್ಯಾಪ್ತಿಯಿಂದ ಕೂಡಿ ನಾಟಕ, ಕಾದಂಬರಿ, ಕವನ ಅಥವಾ ಮಹಾಕಾವ್ಯದ ರೂಪದಲ್ಲಿರುತ್ತದೆ. ಸಾಹಿತ್ಯ ರಸ ಮನಸ್ಸಿಗೆ ಇಂಪಾಗಿ, ಜೀವಕ್ಕೆ ಸಂಸ್ಕಾರಕಾರಿಯಾಗಿದೆ. ಅದನ್ನು ಓದುತ್ತಿದ್ದರೆ ಸ್ವಂತ ನಮ್ಮಲ್ಲಿ ನಾವೇ ಏನೋ ಒಂದು ಹೊಸ ಉತ್ಸಾಹ, ಚೇತರಿಕೆ, ವ್ಯಕ್ತಿತ್ವವನ್ನು ಕ್ರಮೇಣ ಕಂಡುಕೊಳ್ಳಲು ಸಾಧ್ಯ. ಸಾಹಿತ್ಯದಿಂದ ಮನುಷ್ಯನ ತಿಳುವಳಿಕೆ, ನಂಬಿಕೆ, ಅನುಭವ, ಮನೋಭಾವ, ಬುದ್ಧಿ, ಪರಿಣಾಮಕಾರಿಯಾದ ಶಕ್ತಿಯಾಗಿ ಮಾನವನನ್ನು ವಿಶ್ವಮಾನವನನ್ನಾಗಿ, ದೇವಮಾನವನನ್ನಾಗಿ ಮಾಡುತ್ತದೆ.

ಈ ಸಂಭಾಷಣೆಯನ್ನು ಅಲ್ಲಿದ್ದವರೆಲ್ಲ ಆಸೆಯಿಂದ, ಪ್ರಶಂಸೆಯಿಂದ ಅವಲೋಕಿಸುತ್ತಾ ನಿಂತರು, ಕೂತರು, ಎದ್ದರು, ಓಡಾಡಿದರೂ, ಸುತ್ತಲೂ ಸುತ್ತಿಸುತ್ತಿ ಮತ್ತೆ ಮತ್ತೆ ಕೇಳುತ್ತ ವೀಕ್ಷಿಸಿದರು.

ರಾಮುವಿನ ಸ್ವಾರಸ್ಯವಾದ, ಸೊಗಸಾದ ಮತ್ತು ಅನುಭವದ ಕವಿಭಾಷೆಯ ಸಂಗೀತ ಸಾಹಿತ್ಯದ ನುಡಿಗಳನ್ನು ಕೇಳಿ 'ಹೋ' ಎಂದು ಜಯಘೋಷ ಮಾಡುವಂತೆ ನೆರೆದವರ ಆನಂದೋದ್ಗಾರವೆದ್ದಿತು. ಶೀಲ ಮನದಲ್ಲೇ ಹಿರಿಹಿರಿ ಹಿಗ್ಗಿದಳು.

ರಾಮುವಿನ ಸಂಗೀತ ಸಾಹಿತ್ಯದ ಆ ವಿದ್ವತ್ತು ಮತ್ತು ಪ್ರಜ್ಞೆಯ ಮಟ್ಟ, ಆ ಭಾಷೆ, ಆ ಭಾವ, ಆ ಪ್ರಾಸ, ಆ ಕಾವ್ಯವಸ್ತು, ವಿನ್ಯಾಸ, ಆ ಆಧ್ಯಾತ್ಮಿಕ ತತ್ತ್ವದ ಔನ್ನತ್ಯದಿಂದ ಶೀಲ ರೋಮಾಂಚಿತಳಾದಳು. ಆಗ ಅವಳು ರಾಮುವನ್ನು " ಯು ಆರ್ ರಿಯಲಿ ಏ ಜೀನಿಯಸ್ ಆ್ಯಂಡ್ ವರ್ಸಟೈಲ್" (ನೀವು ಅಸಾಧಾರಣ ಬುದ್ಧಿಶಕ್ತಿ, ಪ್ರತಿಭೆ, ಸರ್ವತೋಮುಖ ಪ್ರಜ್ಞೆ ಸಾಮರ್ಥ್ಯದ ಸಮ್ಮಿಲನವಾಗಿದ್ದೀರಿ ) ಎಂದು ಒಪ್ಪಿ ಅವಳ ಮನದಲ್ಲೇ ಅವನನ್ನು ಅಭಿನಂದಿಸಿದಳು.

ಆ ವೇಳೆಗೆ ಆ ದಿನದ ಕಾರ್ಯಕ್ರಮ ಮುಕ್ತಾಯವಾಗಿತ್ತು. ಡಾ॥ ವ್ಯಾಸರಾಯರು ನ್ಯೂಸ್ ಕೇಳಲು ಅಲ್ಲಿದ್ದ ರೇಡಿಯೋ ಆನ್ ಮಾಡಿದರು. ಆಗ ರೇಡಿಯೋದಲ್ಲಿ "ಭೂತಯ್ಯನ ಮಗ ಅಯ್ಯು" ಎಂಬ ಚಲನಚಿತ್ರದ ಈ ಹಾಡು ಬರುತ್ತಿತ್ತು.

ಗಂಡು : ಮಲೆನಾಡ ಹೆಣ್ಣ ಮೈ ಬಣ್ಣ ನೋಡೋಕೆ ಬಲು ಚೆನ್ನ। ಆ ನಡು ಸಣ್ಣ ಆಹ ಮನ ಸೋತೆ ನಾ ಚಿನ್ನಾ॥

ಹೆಣ್ಣು : ಬಯಲು ಸೀಮೆ ಗಂಡು ಬಲುಗುಂಡು ಜಗಮೊಂಡು ಹೂ ಚೆಂಡು। ನನ್ನ ಸರದಾರ ರಸಗುಂಡು॥

ಗಂಡು : ಮಾತು ನಿಂದು ಹುರಿದಾ ಹರಳು ಸಿಡಿದಂತೆ॥ ಕಣ್ಣುಗಳು ಮಿಂಚಂತೆ ನಿನ್ನ ನಗೆಯಲ್ಲೆ ಮನದಾಗ ನಿಂತಲ್ಲೆ॥

..........................................................................................

..........................................................................................

ಹೆಣ್ಣು : ಕಾಡಬೇಡ ನೋಡಿಯಾರು ನನ್ನೋರು ನನ್ನ ಹಿರಿಯೋರು ಬಿಡಿ ನನ್ನ ಕೈಯ ದಮ್ಮಯ್ಯಾ॥ ತುಂಟಾಟ ಸಾಕಯ್ಯ। ಈ ತುಂಟಾಟ ಸಾಕಯ್ಯ॥

ಗಂಡು : ದೂರದಿಂದ ಬಂದೆ ನಿನ್ನ ಹಂಬಲಿಸಿ ನಿನ್ನ ಗೆಳೆತನವ ನಾ ಬಯಸಿ ನಾ ಬಂದೆ।

ಹೆಣ್ಣು : ಅದ ನಾ ಬಲ್ಲೆ ನಾಚಿ ಮೊಗ್ಗಾದೆ ನಾನಿಲ್ಲೆ॥

ಶೀಲ ಈ ಹಾಡನ್ನು ಕೇಳುತ್ತ ಮುಗುಳ್ನಗೆಯ ಮೆರಗಿನಿಂದ ಮಿನುಗುತ್ತಿದ್ದಳು. ಸೌಂದರ್ಯದ ಅತಿ ಸುಂದರ ಚಿಹ್ನೆಯಾದ ಮೋಹಕ ಮುಗುಳ್ನಗೆ ಅವಳನ್ನು ಮತ್ತಷ್ಟು ಲಾವಣ್ಯಮಯಿಯಾಗಿ ಕಾಣುವಂತೆ ಮಾಡುತ್ತಿತ್ತು. ನಾಲಿಗೆ ನುಡಿಯಲಾರದ ನೂರು ಮಾತುಗಳನ್ನು ತುಟಿಯಂಚಿನ ಈ ಮನೋಹರ ಮುಗುಳ್ನಗೆ ತನ್ನದೇ ಆದ ರೀತಿಯಲ್ಲಿ ವಿಶಿಷ್ಟವಾಗಿ ಬಿಂಬಿಸುತ್ತಿತ್ತು. ಹೆಣ್ಣಿಗೆ ಮುಗುಳ್ನಗೆ ಸರ್ವೋತ್ತಮ ಭೂಷಣ ಆಭರಣ. ಮೋಹಕ ಸ್ತ್ರೀಯ ಮಾದಕ ಮುಗುಳ್ನಗೆ, ಅವಳ ಅಲಂಕಾರಕ್ಕೆ ಪುಟ್ಟವಿಟ್ಟ ಬಂಗಾರವಾಗುತ್ತದೆ. ಮುಗುಳ್ನಗೆಯನ್ನು ಶೃಂಗಾರ ರಸದ ಕವಿಗಳು ಹೆಣ್ಣಿನ ಬ್ರಹ್ಮಾಸ್ತ್ರವೆಂದು ವರ್ಣಿಸಿದ್ದಾರೆ. ಶೀಲ ಮೂರು ಬಗೆಯ ಮುಗುಳ್ನಗೆಗಳನ್ನು ಪ್ರದರ್ಶಿಸುವುದರಲ್ಲಿ ಪ್ರವೀಣೆಯಾಗಿದ್ದಳು. ಒಮ್ಮೆ ತುಟಿಯಂಚಿನಲ್ಲೇ ಕಿರುನಗೆ ಸೂಸುವುದು (ಸ್ಮಿತ). ಆಗ ಮುಗುಳ್ನಗುವಿನೊಂದಿಗೆ ಗಲ್ಲದ ಮೇಲೆ ಒಂದು ಕುಳಿಯೂ (ಡಿಂಪಲ್) ಉಂಟಾಗುತ್ತಿತ್ತು. ಇನ್ನೊಮ್ಮೆ ಮುಗುಳ್ನಗುವಿನೊಂದಿಗೆ ಸ್ವಲ್ಪ ದಾಳಿಂಬೆಯಂತ ದಂತ ಪಂಕ್ತಿಗಳನ್ನು ಪ್ರದರ್ಶಿಸುವುದು (ಹಸಿತ). ಮತ್ತೊಮ್ಮೆ ದಂತ ಪಂಕ್ತಿಗಳ ಪ್ರದರ್ಶನದೊಂದಿಗೆ ಲಘುವಾಗಿ ಮಧುರ ಧ್ವನಿಯನ್ನು ಹೊರಡಿಸುವುದು (ವಿಹಸಿತ). ಹೆಣ್ಣಿಗೆ ದೊರೆತ ಪ್ರಕೃತಿಯ ಈ ಅತ್ಯಮೂಲ್ಯ ಕೊಡುಗೆ ಶೀಲಳಿಗಂತೂ ಬಂಗಾರದ ಕಳಶವಿಟ್ಟಂತೆ ಕಾಣುತ್ತಿತ್ತು. ಏಕೆಂದರೆ ಈ ಮನೋಹರ ಕುಳಿ ಮಿಶ್ರಿತ ಮುಗುಳ್ನಗೆಯಿಂದ ಹುಣ್ಣಿಮೆ ಚಂದ್ರನ ಬೆಳದಿಂಗಳ ಕಾಂತಿ ಅವಳ ಮುಖದಲ್ಲಿ ಬೆಳಗುತ್ತಿತ್ತು. ಇಂಥ ಒಂದು ನಿರ್ಮಲ ಸಹಜ ಸೌಂದರ್ಯದ ಆಕರ್ಷಣೆಯಿಂದ ತಪ್ಪಿಸಿಕೊಳ್ಳುವುದು ಗಂಡಿಗೆ ಸುಲಭ ಸಾಧ್ಯವಲ್ಲ. ಏಕೆಂದರೆ ನೋಡಿದವರು ಮೋಡಿಗೊಳಗಾಗುತ್ತಾರೆ. ಅವಳ ಸಮ್ಮೋಹಕ ಮುಗುಳ್ನಗೆಯ ಆಕರ್ಷಣೆಯಿಂದ ರಾಮು ಕೂಡ ತಪ್ಪಿಸಿಕೊಳ್ಳಲು ಒಮ್ಮೊಮ್ಮೆ ಆಗುತ್ತಿರಲಿಲ್ಲ.

ರೇಡಿಯೋದಲ್ಲಿ ಚಲನಚಿತ್ರದ ಹಾಡು ಮುಗಿದ ತಕ್ಷಣ ಭಾರತ - ಪಾಕಿಸ್ಥಾನದ 20 20 ವಿಶ್ವಕಪ್ ಫೈನಲ್ಸ್‌ನಲ್ಲಿ ಪಾಕಿಸ್ಥಾನದ 10 ವಿಕೆಟ್‌ಗಳನ್ನು ಪಥನಗೊಳಿಸಿ ಭಾರತ ವಿಜಯ ಭೇರಿ ಸಾಧಿಸಿದ ಸುದ್ದಿ ಬಿತ್ತರಗೊಂಡಿತು. ಅಲ್ಲಿದ್ದವರೆಲ್ಲಾ ತುಂಬು ಹೃದಯದಿಂದ ಸಂತಸಗೊಂಡು ಕುಣಿದು - ಕುಪ್ಪಳಿಸಿದರು.

ಜೊತೆಗೆ ಆ ದಿನದ ಕಾರ್ಯಕ್ರಮದಿಂದ ಸಂತಸಗೊಂಡ ಡೀನ್ ಡಾ॥ ವ್ಯಾಸರಾಯರು ಮತ್ತು ಸಂಗಡಿಗರು ರಾಮು ಹಾಗೂ ಶೀಲಳನ್ನು ಅಭಿನಂದಿಸಿದರು. ಮುಂದಿನ ವಾರ "ಕಲೆಗಳು" ಎಂಬ ವಿಷಯವಾಗಿ ಮತ್ತೊಂದು ಚರ್ಚಾಕಾರ್ಯಕ್ರಮ ನಡೆಸಿಕೊಡಲು ಡಾ॥ ವ್ಯಾಸರಾಯರು ರಾಮು - ಶೀಲರಿಬ್ಬರನ್ನೂ ಒಪ್ಪಿಸಿದರು.



# 2.ಕಲೆಗಳು

## ನವರಸ ನಾಯಕನ ಚಾಲೆಂಜ್
## ವಿಶ್ವಕಲಾ ಸುಂದರಿ ಪ್ರತಿ ಚಾಲೆಂಜ್

ಅಂದು ಭಾನುವಾರ. ಬೆಂಗಳೂರು ಮೆಡಿಕಲ್ ಕಾಲೇಜಿನ ಆಡಿಟೋರಿಯಂನಲ್ಲಿ ಡೀನ್ ಡಾ|| ವ್ಯಾಸರಾಯರ ಅಧ್ಯಕ್ಷತೆಯಲ್ಲಿ "ಕಲೆಗಳು'' ಎಂಬ ವಿಷಯದ ಬಗ್ಗೆ ಚರ್ಚಾಕೂಟ ಪ್ರಾರಂಭವಾಯಿತು. ಆಡಿಟೋರಿಯಂನಲ್ಲಿ ಜನರು ಕಿಕ್ಕಿರಿದು ತುಂಬಿ ಚಪ್ಪಾಳೆಯ ಸುರಿಮಳೆಗೈದರು. ಈ ವಾರ ರಾಮುವಿನ ಪ್ರಶ್ನೆಗಳಿಗೆ ಶೀಲ ಉತ್ತರಿಸಬೇಕೆಂದು ನಿರ್ಧಾರವಾಯಿತು. ವೇದಿಕೆ ಮೇಲೆ ರಾಮು ನವರಸನಾಯಕನಂತೆ ಕಂಗೊಳಿಸಿದರೆ ಶೀಲ ವಿಶ್ವಕಲಾ ಸುಂದರಿಯಂತೆ ಮಿರುಗುತ್ತಿದ್ದಳು.

ರಾಮು : ಮಾನವ ಈ ಜೀವನದಲ್ಲಿ ಅಧ್ಯಯನ ಮಾಡುವ ಎಲ್ಲಾ ವಿಷಯಗಳನ್ನು ಏನೆಂದು ವಿಂಗಡಿಸಿದ್ದಾರೆ ?

ಶೀಲ : ಕಲೆಗಳು ಮತ್ತು ಶಾಸ್ತ್ರಗಳು.

ಸಂಗೀತ, ನೃತ್ಯ, ನಾಟಕ, ಚಿತ್ರಕಲೆ, ಇತಿಹಾಸ, ಅರ್ಥಶಾಸ್ತ್ರ, ತತ್ತ್ವಶಾಸ್ತ್ರ ಮುಂತಾದವುಗಳು ಕಲೆಗಳು.

ಭೌತಶಾಸ್ತ್ರ, ರಸಾಯನಶಾಸ್ತ್ರ, ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ ಮುಂತಾದವುಗಳು ವಿದ್ಯೆ ಅಂದರೆ ಶಾಸ್ತ್ರಗಳು.

ರಾಮು : ಕಲೆ ಎಂದರೇನು ?

ಶೀಲ : ಯಾವುದೇ ಒಂದು ವಿದ್ಯೆಯು ಮಾನವನ ಸುಖ ಸಾಧನೆಗೆ ಕಾರಣವಾಯಿತೆಂದರೆ ಅದು ಅವನ ದೃಷ್ಟಿಯಲ್ಲಿ ಕಲೆ ಎನಿಸಿಕೊಳ್ಳುವುದು.

ಇದು ಮನುಷ್ಯಸುಖಕ್ಕೆ ಮುಖ್ಯ ಸಾಧನವೆನ್ನಿಸುವ ಧನವನ್ನು ಸ್ವಲ್ಪ ಶ್ರಮದಿಂದಲೇ ಒದಗಿಸತಕ್ಕ ಒಂದು ಲೌಕಿಕ ವ್ಯವಹಾರ ಸಾಧಕವಾದ ಜ್ಞಾನ ಮಾರ್ಗ. ಮಾನವನ ಮನೋರಥಗಳನ್ನು ಈಡೇರಿಸುವ ಮೂಲಕವಾಗಿ ಅವನಿಗೆ ಅತಿಶಯವಾದ ಮನಸ್ಸಂತೋಷವನ್ನು ಕೊಡಬಲ್ಲ ವಿದ್ಯೆ.

ಮಾನವ ತನ್ನ ಭಾವನೆಯನ್ನು ಅಭಿವ್ಯಕ್ತಪಡಿಸುವ ಮಾಧ್ಯಮವೇ ಕಲೆ. ಅಂದರೆ ಸೌಂದರ್ಯಮಯವಾದ ಈ ಜಗತ್ತಿನಲ್ಲಿ ಬುದ್ಧಿಜೀವಿಯೂ ಭಾವುಕನೂ ಆದ ಮಾನವ, ತನ್ನ ಜೀವನದಲ್ಲಿ ನಡೆದ ಘಟನೆಗಳಿಂದ ಪ್ರೇರಿತನಾಗಿ, ನೈಸರ್ಗಿಕ ಸಾಧನೆಗಳಿಂದ ಆನಂದ ಪಡೆಯಲು, ತನ್ನ ಅನುಭವ ಮತ್ತು ಪ್ರತಿಭೆಗಳಿಂದ ಉಂಟಾಗುವ ವಿವಿಧ ಭಾವನೆಗಳಿಗೆ ತಕ್ಕಂತೆ ಒಂದು ರೂಪವನ್ನು ಕೊಡಬಯಸುವಾಗ ಹೊರಹೊಮ್ಮುವ ಭಾವನೆಗಳ ಬಾಹ್ಯರೂಪವೇ ಕಲೆ.

ರಾಮು : ಕಲೆಯ ಉಗಮ ಹೇಗಿರಬಹುದು ?

ಶೀಲ : ಆದಿಮಾನವ ಪ್ರಕೃತಿಯ ಅನೇಕ ದೃಷ್ಟಾಂತಗಳಿಂದ ಅಂದರೆ ಪ್ರಾಣಿ ಮತ್ತು ಪಕ್ಷಿವರ್ಗದ ಸಂಘ ಜೀವನ, ಪ್ರೇಮ ಬಂಧನ, ಮರಿಪೋಷಣೆ, ಸ್ವರಕ್ಷಣೆಗೆ ಗೂಡು ನಿರ್ಮಾಣ ಮುಂತಾದ ಜೀವನ ವೈವಿಧ್ಯಗಳನ್ನು ಮೆಚ್ಚಿ ತಿಳಿದುಕೊಂಡು ತನ್ನ ಉದರಾಭರಣಕ್ಕೂ ಸ್ವರಕ್ಷಣೆಗೂ ಸಾಧನಗಳನ್ನು ಕಲ್ಪಿಸಿಕೊಳ್ಳುವುದು ಅನಿವಾರ್ಯವೂ, ಅತ್ಯಾವಶ್ಯವೂ ಆದಾಗ, ಆ ಪ್ರಕೃತಿಯ ಆ ದೃಷ್ಟಾಂತಗಳೇ ದಾರಿ ತೋರಿದಾಗ, ಅವನ್ನೇ ಅನುಕರಿಸಿ ಸಂಘ ಜೀವಿಯಾಗಿ ಸುಖಜೀವಿಯಾಗಿರಲೂ ಪ್ರೇರಿತನಾದಾಗ ಕಲಾ ಪುರುಷನಾಗಿ ಕಲೆಯ ಉಗಮವಾಗಿರಬಹುದು.

ರಾಮು : ಕಲೆಗಳೆಷ್ಟು ? ವಿದ್ಯೆಗಳೆಷ್ಟು ?

ಶೀಲ : ನಾಲ್ಕು ವೇದಗಳಲ್ಲಿ 64 ಕಲೆಗಳಿವೆ (ಚತುಷ್ಷಿಕಲೆಗಳು). 32 ವಿದ್ಯೆಗಳಿವೆ.

ರಾಮು : ಕಲೆಗಳಲ್ಲಿ ಎಷ್ಟು ವಿಧ ?

ಶೀಲ : ಸಾಧಾರಣ ಕಲೆಗಳು ಮತ್ತು ಲಲಿತ ಕಲೆಗಳೆಂದು ವಿಂಗಡಿಸಬಹುದು.

ರಾಮು : ಸಾಧಾರಣ ಕಲೆಗಳಲ್ಲಿ ಎಷ್ಟು ವಿಧ ?

ಶೀಲ : ಎರಡು ವಿಧ. ವಿಜ್ಞಾನ ಕಲೆ ಮತ್ತು ವಾಣಿಜ್ಯ ಕಲೆ.

ಇತಿಹಾಸ, ತತ್ತ್ವಶಾಸ್ತ್ರ, ಅರ್ಥಶಾಸ್ತ್ರ, ವಾಸ್ತುಶಿಲ್ಪ ಮುಂತಾದವು ಸಾಧಾರಣ ವಿಜ್ಞಾನ ಕಲೆಗಳು.

ರೈಲು, ಮೋಟಾರು, ವಿಮಾನ, ಇತರ ಯಂತ್ರಗಳ ತಯಾರಿಕೆ ಹಾಗೂ ನಿತ್ಯೋಪಯೋಗಕ್ಕೆ ಬೇಕಾದ ಇತರ ಸಮಸ್ತ ವಸ್ತುಗಳ ತಯಾರಿಕೆ ಇವೂ ಕಲೆಗಳೇ. ಇವು ವಾಣಿಜ್ಯೋದ್ಯಮ ಮತ್ತು ಕೈಗಾರಿಕಾ ಕಲೆಗಳೆನಿಸುತ್ತವೆ. (Commercial and Industrial Arts)

ರಾಮು : ಲಲಿತಕಲೆಗಳಾವುವು ? (Fine Arts)

ಶೀಲ : ಸಂಗೀತಕಲೆ, ನೃತ್ಯಕಲೆ (ನಾಟ್ಯಕಲೆ), ಶಿಲ್ಪಕಲೆ, ಚಿತ್ರಕಲೆ, ನಾಟಕ, ಸಾಹಿತ್ಯ ಕಲೆ (ಕಾವ್ಯ) ಮೊದಲಾದವುಗಳು ನಿಸರ್ಗದ ಸತ್ಯ ಸೌಂದರ್ಯಾನುಭವವನ್ನುಂಟುಮಾಡಿ ಕೊಡುವ ಲಲಿತ ಕಲೆಗಳು.
ಈ ಲಲಿತ ಕಲಾ ಪ್ರಕಾರಗಳು ಸಂಸ್ಕಾರ ಮತ್ತು ಪ್ರತಿಭೆಯ ಮೂಲಕ ರೂಪಗೊಳ್ಳುತ್ತವೆ.

ರಾಮು : ಎಲ್ಲಾ ಕಲೆಗಳ ಉಗಮಕ್ಕೆ ಮೂಲ ಯಾವುದು ?

ಶೀಲ : ಪ್ರಕೃತಿ.

ರಾಮು : ಲಲಿತ ಕಲೆಯ ಕೆಲಸವೇನು ?

ಶೀಲ : ನಿಸರ್ಗ ಸಂಪರ್ಕದಲ್ಲಿದ್ದು ಪೂರ್ಣತೆಯನ್ನು (Perfection) ಬಯಸುವುದೇ ಲಲಿತ ಕಲೆಯ ಕೆಲಸ.

ರಾಮು : ಲಲಿತ ಕಲೆಗಳು ರೂಪಗೊಳ್ಳಲು ಅವಶ್ಯವಾದ ಸಾಮಗ್ರಿಗಳು ಯಾವುವು ?

ಶೀಲ : ಆದರ್ಶ ಕೃತಿಗಳ ಅಥವಾ ನಿಸರ್ಗದ ದೃಷ್ಟಾಂತಗಳ ಅನುಕರಣೆ ಜೊತೆಗೆ ಸತ್ಯ ಮತ್ತು ಸೌಂದರ್ಯದ ಅಚ್ಚಳಿಯದ ಮುದ್ರೆ.

ರಾಮು : ನಿಜವಾದ ಅರ್ಥದಲ್ಲಿ ಸತ್ಯ (Truth) ಮತ್ತು ಸೌಂದರ್ಯ (Beauty)ವೆಂದರೇನು ?

ಶೀಲ : ಮನುಷ್ಯನನ್ನು ಪೂರ್ಣತೆಯ ಕಡೆಗೆ ಒಯ್ಯುವುದೇ ಸತ್ಯ. (Real Truth)

ಚಿತ್ತಕ್ಕೆ ಆನಂದವನ್ನೊದಗಿಸುವುದೇ ಸೌಂದರ್ಯ. (Beauty)

ರಾಮು : ಸೌಂದರ್ಯದ ಬಗ್ಗೆ ವಿಶ್ಲೇಷಣೆ ಕೊಡಬಲ್ಲಿರ ?

ಶೀಲ : ...(ಶೀಲ ಉತ್ತರಿಸಲಿಲ್ಲ ಅವಳ ಮೌನ ಕಂಡು ಆಗ ರಾಮು) ನಾನೇ ಹೇಳುವೆ ಕೇಳಿ ಎಂದು ವಿಶ್ಲೇಷಿಸ ತೊಡಗಿದ -

ಸೌಂದರ್ಯ ಎನ್ನುವುದು ಒಂದು ಸಮ್ಮೋಹಕ ಶಕ್ತಿ. ಪ್ರಕೃತಿಯಲ್ಲಿ ವಸ್ತುಗಳ, ಸಸ್ಯಗಳ, ಪ್ರಾಣಿಗಳ, ಮಾನವರ ಸೌಂದರ್ಯೋಪಾಸನೆಯಿಂದ ಮನಸ್ಸಿಗೆ ಆನಂದ ಉಂಟಾಗುತ್ತದೆ. ಆದುದರಿಂದಲೇ ಸೌಂದರ್ಯ ಮತ್ತು ಪ್ರೇಮ ಮಾನವರ ಮನಸ್ಸನ್ನು ಆಕರ್ಷಿಸುತ್ತವೆ.

ಸೌಂದರ್ಯ ಎನ್ನುವುದು ವಸ್ತುಗಳ, ಸಸ್ಯಗಳ, ಪ್ರಾಣಿಗಳ, ಮಾನವರ ಮೂಲಕ ಮಿರುಗುವ, ಪ್ರಕಾಶಿಸುವ ಒಂದು ಒಂದು ಬೆಳಕು, ಒಂದು ಪ್ರತಿಭೆ. ಈ ಸೌಂದರ್ಯ ಪ್ರಭೆ ವಿಶ್ವಶಕ್ತಿಯ ಕಾಂತಿ ಮತ್ತು ದಿವ್ಯ ಚೇತನವನ್ನು ಅವುಗಳಿಂದ ರೂಪಿಸಲ್ಪಟ್ಟಿದೆ. ಈಚೇತನ ಮತ್ತು ಕಾಂತಿಗಳ ಮೂಲವೇ ಆತ್ಮ ಜ್ಯೋತಿ. ಆದುದರಿಂದ ಆತ್ಮಜ್ಯೋತಿಯೇ ಎಲ್ಲ ಸೌಂದರ್ಯಗಳ ಮೂಲ ಮತ್ತು ದಿವ್ಯಾನಂದದ ನಿಧಿ.

ವಿಶ್ವದಲ್ಲಿ ಸೌಂದರ್ಯಮಯವಾದ ಪರಿಪೂರ್ಣ ಕೃತಿಯೆಂದರೇನೇ ಸ್ತ್ರೀ. ಸೌಂದರ್ಯ ಕಾವ್ಯದಲ್ಲಿ ಮೃದು,ಮಧುರ ಕೋಮಲತೆಗಳಿಂದ ಕೂಡಿದ ಅವಳು ಸಾಮ್ರಾಜ್ಞಿ, ಏಕೆಂದರೆ ಅವಳ ಸೌಂದರ್ಯವೂ ಸದಕಾಲವೂ ಸುಖವನ್ನುಂಟು ಮಾಡಿ ನಾವೀನ್ಯತೆಯಿಂದ ಆಕರ್ಷಣ ಮಾಡಿ ಪ್ರಶಂಸಾತ್ಮಕ ಉದ್ಗಾರ ಹೊರಡಿಸುವ ವಸ್ತುವಾಗಿದೆ. ಸ್ತ್ರೀಯ ಅಪ್ರತಿಮ ಸೌಂದರ್ಯದಿಂದ ಮೋಹಿತರಾಗದ ಜನರೇ ಸಿಕ್ಕುವುದಿಲ್ಲ. ಅದಕ್ಕೆ ಹೇಳುವುದು -

ಸ್ತ್ರೀ ರೂಪಮೆ ರೂಪಂ
ಶೃಂಗಾರಮೆ ರಸಂ
ಸೌಂದರ್ಯಮೆ ಸಮ್ಮೋಹಕ ಶಕ್ತಿ
ಆತ್ಮ ಆತ್ಮಗಳ ಮಧುರಾಕರ್ಷಣೆಯೇ ಸಾಮರಸ್ಯವಾದ ಸಾಕ್ಷಾತ್ಕಾರ

ಸ್ತ್ರೀ ತನ್ನ ಶಾರೀರಿಕ ಮಹಾಶಕ್ತಿಯಾದ ಸೌಂದರ್ಯದ ಜೊತೆಗೆ ಅಂತಃಕರಣದ ಗುಣಗಳಾದ ಸದಾಚಾರ, ಲಜ್ಜೆ, ಮಮತೆ, ಮಧುರ ಸ್ವಭಾವ, ಶಿಷ್ಟತೆ, ಸಭ್ಯತನ ಹಾಗೂ ಸ್ನೇಹಾದಿ ಸದ್ಗುಣಗಳಿಂದ ಎಲ್ಲರನ್ನು ಮುಗ್ಧಗೊಳಿಸುವ ಅನುಪಮ ಸುಂದರಿಯಾಗುತ್ತಾಳೆ. ಜೊತೆಗೆ ಸ್ವಚ್ಛತೆ, ಶರೀರಕ ಆರೋಗ್ಯ, ಸಂಯಮ, ಶಾಂತಿ, ಮಿತಾಚಾರ

ಪಾಲನೆ, ಪ್ರಸನ್ನತೆ ಇತ್ಯಾದಿ ಗುಣಗಳಿಂದ ಸ್ತ್ರೀಯರಿಗೆ ವಿಶೇಷ ಶೋಭೆ ಉಂಟಾಗುತ್ತದೆ. ಸೌಂದರ್ಯ ಹೆಚ್ಚುತ್ತದೆ. ಹರ್ಷವಾಗಿಸುತ್ತದೆ.

(ಅಲ್ಲಿದ್ದವರಿಂದ ಚಪ್ಪಾಳೆಯ ಸುರಿಮಳೆಯಾಯಿತು)

ರಾಮು : ಲಲಿತ ಕಲೆಗಳು ಹೇಗೆ ರೂಪ ತಾಳುತ್ತವೆ ?

ಶೀಲ : ಸತ್ಯ ಮತ್ತು ಸೌಂದರ್ಯ ಮಿಲನ. ಅಂದರೆ ಸತ್ಯದಲ್ಲಡಗಿರುವ ಸೌಂದರ್ಯವನ್ನು ಹೊರಗೆಡಹಲು ಮನುಷ್ಯ ಪ್ರಯತ್ನಿಸಿದಾಗಲೇ ನಿಜವಾದ ಲಲಿತ ಕಲೆ ರೂಪತಾಳುತ್ತದೆ.

ರಾಮು : ಸೌಂದರ್ಯದಲ್ಲಿ ಎಷ್ಟು ವಿಧ ?

ಶೀಲ : ಬಾಹ್ಯ ಸೌಂದರ್ಯ ಮತ್ತು ಅಂತರ್ಗತ ಸೌಂದರ್ಯ.

ರಾಮು : ಬಾಹ್ಯ ಮತ್ತು ಅಂತರ್ಗತ ಸೌಂದರ್ಯಕ್ಕೆ ಯಾವ ಸಂಬಂಧವಿದೆ ?

ಶೀಲ : ನಿಕಟ ಸಂಬಂಧವಿದೆ. ಒಂದಕ್ಕೆ ಇನ್ನೊಂದು ಮೆರುಗು ಕೊಡುತ್ತದೆ. ಬಾಹ್ಯ ಸೌಂದರ್ಯ, ಅಂತರ್ಗತ ಸೌಂದರ್ಯ ಬೆಳವಣಿಗೆಗೆ ಸಹಾಯ ಮಾಡುತ್ತದೆಯಲ್ಲದೆ ಕಲಾಕೃತಿಯ ಆತ್ಮದ ಚಿಹ್ನೆಯೂ ಆಗಿರುತ್ತದೆ.

ರಾಮು : ಎಲ್ಲ ಕಲೆಗಳ ಗುರಿ ಏನು ?

ಶೀಲ : ರಸಾನುಭವವೇ ಈ ಎಲ್ಲ ಕಲೆಗಳ ಗುರಿ.

ರಾಮು : ಯಾವ ಯಾವ ಕಲೆ ಯಾವ ಯಾವ ಇಂದ್ರಿಯ ಹಾಗೂ ಪಂಚೇಂದ್ರಿಯಗಳಿಗೆ ಯಾವ ಯಾವ ರೀತಿಯ ರಸಾನುಭವ ಮತ್ತು ಆನಂದಾನುಭವ ಉಂಟುಮಾಡುತ್ತವೆ?

ಶೀಲ : 1. ಶಿಲ್ಪ ಮತ್ತು ಚಿತ್ರ ಕಲೆಗಳು ಕಣ್ಣುಗಳಿಗೆ ಆನಂದಾನುಭವವನ್ನು ಉಂಟು ಮಾಡುತ್ತವೆ.

2. ಶಿಲ್ಪಿ ಉಳಿಯಿಂದ ಶಿಲೆಯನ್ನು ಕಡೆದು ಒಂದು ಮೂರ್ತಿಯನ್ನು ನಿರ್ಮಿಸಿ ಅದಕ್ಕೆ ಜೀವಕಳೆಯನ್ನು ತುಂಬಿ ಕಣ್ಣುಗಳಿಗೆ ಆನಂದಾನುಭವ ಉಂಟುಮಾಡಿಸುತ್ತಾನೆ.

3. ಚಿತ್ರ ಕಲೆಗಾರ ಕುಂಚವನ್ನು ಹಿಡಿದು ವಿವಿಧ ಬಣ್ಣಗಳ ಸಂಮಿಶ್ರದಿಂದ ಪ್ರಕೃತಿಯ ಒಂದು ಸನ್ನಿವೇಶವನ್ನೋ, ವ್ಯಕ್ತಿ ಚಿತ್ರಗಳಲ್ಲಿ ವಿವಿಧ ಭಾವ ಭಂಗಿಗಳನ್ನೋ ಬಹುರಮ್ಯವಾಗಿ ಚಿತ್ರಿಸಿ ಕಣ್ಣುಗಳಿಗೆ ಆನಂದಾನುಭವ ಉಂಟುಮಾಡಿಸುತ್ತಾನೆ.

4. ನರ್ತನ, ಅಭಿನಯ, ಸಂಗೀತಗಳ ಜೊತೆ ತನು - ಮನಗಳನ್ನು ತಣಿಸುತ್ತದೆ.

5. ಸಂಗೀತ, ಶ್ರವಣೇಂದ್ರಿಯ (ಕಿವಿ)ಗಳಿಗೆ ಆನಂದಾನುಭವ ಉಂಟು ಮಾಡುತ್ತದೆ. ಸಂಗೀತಗಾರ ತನ್ನ ನಾದ ಮಾಧುರ್ಯದಿಂದ ಒಂದು ರಸಲೋಕವನ್ನು ನಿರ್ಮಿಸಿ ಶ್ರೋತೃಗಳನ್ನು ಆನಂದಸಾಗರದಲ್ಲಿ ಮುಳುಗಿಸಿ ರಸಾನುಭವ ಉಂಟುಮಾಡುತ್ತಾನೆ.

ಸಂಗೀತ, ನರ್ತನ, ಅಭಿನಯ ಇವುಗಳು ತ್ರಿವೇಣಿ ಸಂಗಮವಾಗಿ ಎಲ್ಲರ ಮನವನ್ನೂ ತಣಿಸುತ್ತದೆ.

ರಾಮು : ಕಲಾನೈಪುಣ್ಯದ ಫಲವೇನು ? ಅದರ ಮಾಧ್ಯಮಗಳು ಯಾವುವು ?

ಶೀಲ : ರಸೋಲ್ಲಾಸ. ಸ್ವರಗಳ ಮಾಧ್ಯಮದಲ್ಲಿ ಅಭಿವ್ಯಕ್ತವಾಗುವ ರಸಾನುಭವ ಸಂಗೀತ ವೆನಿಸುತ್ತದೆ. ಭಾಷಾಮಾಧ್ಯಮದಲ್ಲಿ ಅಭಿವ್ಯಕ್ತವಾಗುವ ರಸಾನುಭವ ಸಾಹಿತ್ಯವೆನಿಸುತ್ತದೆ. ಭಾವಭಂಗಿ, ಅಂಗವಿಕ್ಷೇಪಗಳಿಂದ ಅಭಿವ್ಯಕ್ತವಾಗುವ ರಸಾನುಭವ ನೃತ್ಯಕಲೆಯಾಗುವುದು. ಬಣ್ಣಗಳ ಮಾಧ್ಯಮದಲ್ಲಿ ಅಭಿವ್ಯಕ್ತವಾಗುವ ರಸಾನುಭವ ಚಿತ್ರಕಲೆಯಾಗುತ್ತದೆ.

ರಾಮು : ಲಲಿತ ಕಲೆಗಳ ಗುರಿಯೇನು ?

ಶೀಲ : ಸುಂದರ ಶಿಲ್ಪ ಕಲಾಕೃತಿಗಳಲ್ಲಿ, ವರ್ಣಚಿತ್ರಗಳಲ್ಲಿ ಸಂಗೀತ ನೃತ್ಯ ನಾಟಕ ಕಾವ್ಯಾದಿಗಳಲ್ಲಿ ಅಭಿವ್ಯಕ್ತವಾಗುವ ಆನಂದದ ಪರಿಪೂರ್ಣತೆ ಹಾಗೂ ನಿಸರ್ಗದಲ್ಲಿರುವ ಕಲಾನೈಪುಣ್ಯದ ಅರಿವನ್ನುಂಟು ಮಾಡುವುದೇ ಲಲಿತ ಕಲೆಗಳ ಗುರಿ.

ರಾಮು : ಕಲೆಯ ಬೆಳವಣಿಗೆಗೆ ಅಂಕುರ ಏನು ?

ಶೀಲ : ಅನುಕರಣೆ. ( imitation )

ರಾಮು : ಕಲಾಕೃತಿಗಳೆಂದರೇನು ?

ಶೀಲ : ಕಲಾವಿದನ ದೃಷ್ಟಿಪಥದಲ್ಲಿ ಉತ್ಪನ್ನವಾದ ಭಾವ, ಚಿತ್ರ, ಉತ್ಸಾಹ, ಅಪೇಕ್ಷೆ, ಇವುಗಳ ಶಬ್ದ ಅಥವಾ ಬಣ್ಣ, ಇವು ಆಕೃತಿ ರೂಪ ಹೊಂದಿದ ಪರಿವರ್ತನೆಗಳೇ ಕಲಾಕೃತಿಗಳೆಂದು ಹೇಳಬಹುದು.

ಅಂದರೆ ಕೃತಿಗಳಲ್ಲಿ ಕಲೆಯ ಆತ್ಮದ ಕುರುಹು ಕಂಡರೆ ಮಾತ್ರ ಅವನ್ನು ನಿಜವಾದ ಲಲಿತಕಲಾ ಕೃತಿಗಳೆಂದೂ ಹೇಳಬಹುದು. ಹಾಗೆಯೇ ಅವನ್ನು ಸೃಷ್ಟಿಸಿದವನನ್ನು ನಿಜವಾದ ಲಲಿತ ಕಲಾವಿದನೆಂದೂ ಹೇಳಬಹುದು.

ರಾಮು : ಬಾಹ್ಯ ಮತ್ತು ಅಂತರ್ಗತ ಸೌಂದರ್ಯಗಳ ಸಾಟಿಯಿಲ್ಲದ ಮಿಲನವಾಗಿರುವ ಉದಾಹರಣೆಗಳಿವೆಯೇ ?

ಶೀಲ : ರಾಜಾ ರವಿವರ್ಮರ ಸರಸ್ವತಿ ಮತ್ತು ಲಕ್ಷ್ಮೀ ವರ್ಣಚಿತ್ರಗಳಲ್ಲಿ ನೋಟದಿಂದ ಲಭಿಸುವ ನೇತ್ರಾನಂದಕ್ಕಿಂತ ಮಿಗಿಲಾಗಿ, ಆತ್ಮಾನಂದ ಕೊಡುವ ಅಂತರ್ಗತ ಸೌಂದರ್ಯ ಅಡಗಿದೆ.ಶ್ವೇತ ಪದ್ಮಾಸನೆಯೆಂದು ವರ್ಣಸಿರುವ ಸರಸ್ವತಿ, ರವಿವರ್ಮರ ಚಿತ್ರದಲ್ಲಿ ಶಿಲಾರೂಢೆಯಾಗಿದ್ದಾಳೆ. ಪದ್ಮಾಸನೆಯಾದ ಲಕ್ಷ್ಮೀ ಪದ್ಮದಲ್ಲಿ ನಿಂತು ಎಡಗಾಲ ಮುಂದಿನ ಹೆಜ್ಜೆ ಹಾಕುತ್ತಿರುವಂತೆ ಚಿತ್ರಿಸಲಾಗಿದೆ.

ಪ್ರಾಚೀನರ ಲಕ್ಷ್ಮೀ ಸರಸ್ವತಿಯರ ವರ್ಣನೆಗಳಿಗೆ ರವಿವರ್ಮರ ಈ ದೇವತೆಗಳ ಚಿತ್ರಣ ಭಿನ್ನವಾಗಿದೆ. ಆದರೆ ರವಿವರ್ಮರ ಈ ರೀತಿಯ ಭಿನ್ನಚಿತ್ರಣಗಳಲ್ಲಿ ಅವರ್ಣನೀಯವಾದ ಅಂತರ್ಗತ ಸೌಂದರ್ಯ ಅಡಗಿದೆ.

ವಿದ್ಯಾಧಿದೇವತೆ ಸರಸ್ವತಿ ಶಿಲಾರೂಢೆಯಾಗಿರುವುದು ವಿದ್ಯಾಧನವು ಮನುಷ್ಯನಿಗೆ ಸ್ಥಿರವಾದ ಆಸ್ತಿಯೆಂದೂ, ಲಕ್ಷ್ಮಿಯು ನಿಂತು ಹೆಜ್ಜೆಯಿಡುತ್ತಿರುವುದು ಲಕ್ಷ್ಮೀ ಚಂಚಲೆ, ಧನಭಾಗ್ಯ ಅಸ್ಥಿರವೆಂದೂ ಬೋಧಿಸುವ ಸಂಕೇತಗಳಾಗಿವೆ.

ಈ ಭಿನ್ನರೀತಿಯ ಚಿತ್ರಣಕ್ಕೆ ಕಾರಣವೆನೆಂದೂ ಊಹಿಸುವ ವ್ಯಕ್ತಿಗೆ ಈ ಅಂತರ್ಗತ ಸೌಂದರ್ಯ ಗೋಚರಿಸಿ ಆತ್ಮಾನಂದವಾಗುವುದು.

ಬೇಲೂರು ಶಿಲಾವಿಗ್ರಹಗಳೊಂದರಲ್ಲಿ ನವಯುವತಿ ತನ್ನ ಮೇಲುದುವನ್ನು ಕಿತ್ತೊಗೆಯಲು ಪ್ರಯತ್ನಿಸಿರುವಂತೆಯೂ ಅನತಿದೂರದಲ್ಲಿ ಒಂದು ಚೇಳು ಸರಿಯುತ್ತಿರುವಂತೆಯೂ ಕೆತ್ತನೆಯಿದೆ. ಈ ಕೃತಿ ಅಪೂರ್ವ ಕೈಕುಶಲತೆಯಿಂದ ನಿರ್ಮಿಸಲ್ಪಟ್ಟಿದೆ. ಆದರೆ ಇದಕ್ಕೂ ಮಿಗಿಲಾದ ಅಂತರ್ಗತ ಸೌಂದರ್ಯ ಅದರಲ್ಲಿ ಅಡಗಿದೆ.

ಅರಿಷಡ್ವರ್ಗಗಳೇ ವಿಷಪುಂಜದ ಚೇಳು. ಮಾಯೆಯೆಂಬುದೇ ಯುವತಿಯು ಕಿತ್ತೊಗೆಯಲು ಪ್ರಯತ್ನಿಸುತ್ತಿರುವ ಮುಸುಕು. ಇವೆರಡನ್ನೂ ಬದಿಗೊತ್ತಿ ದೋಷ ದೂರವಾಗುವ ಮನುಷ್ಯನಿಗೆ ದೈವಸಾಕ್ಷಾತ್ಕಾರ ಕಟ್ಟಿಟ್ಟ ಬುತ್ತಿ. ಈ ಕಲಾಕೃತಿ ಬಾಹ್ಯ ಮತ್ತು ಅಂತರ್ಗತ ಸೌಂದರ್ಯಗಳ ಸಾಟಿಯಿಲ್ಲದ ಮಿಲನ !

ರಾಮು : ನಿಜವಾದ ಕಲಾವಿದ ಯಾರು ?

ಶೀಲ : ಯಾವನು ಪ್ರಕೃತಿಯಲ್ಲಿ ಅಥವಾ ಸತ್ಯದಲ್ಲಿರುವ ಸೌಂದರ್ಯವನ್ನು ಸಂಶೋಧಿಸಿ ಅದರಲ್ಲಿ ಅಡಗಿರುವ ಭಾವವನ್ನು ಹೊರಗೆಡಹಲು ಪ್ರಯತ್ನಿಸುತ್ತಾನೋ ಅವನೇ ನಿಜವಾದ ಕಲಾವಿದ.

ರಾಮು : ನಿಜವಾದ ಕಲಾವಿದ ಭಗವಂತನ ಕೃಪಾಕಟಾಕ್ಷ ಹೊಂದಲು ಜನತೆಗೆ ಹೇಗೆ ಮಾರ್ಗದರ್ಶನವನ್ನು ಸೂಚಿಸುತ್ತಾನೆ.

ಶೀಲ : ಸತ್ಯ ಸಂಶೋಧನೆ ಕಲಾವಿದನನ್ನು ಭಾವ ಸಮಾಧಿಗೆ ಒಯ್ಯುತ್ತದೆ. ಅಲ್ಲಿ ಅವನು ಸತ್ಯದಲ್ಲಿ ಅಡಗಿರುವ ಸೌಂದರ್ಯಕಂಡು ತನ್ನ ಕೃತಿಯಲ್ಲಿ ಅದರ ಸೌಂದರ್ಯತ್ವದ ಕುರುಹುತೋರಿ ತನ್ನ ಕೃತಿಯ ಬಾಹ್ಯಸೌಂದರ್ಯದ ಮೂಲಕ ಪ್ರೇಕ್ಷಕರ ಅಥವಾ ಶ್ರಾವಕರ ಮನಸ್ಸನ್ನು ಜಗಸೃಷ್ಟಿಕರ್ತನ ಕಡೆಗೆ ತಿರುಗಿಸಿ ಅವನ ಅಪಾರವೂ

ಅವರ್ಣನೀಯವೂ ಆದ ಕಲಾನೈಪುಣ್ಯದ ಅರಿವನ್ನುಂಟು ಮಾಡುತ್ತಾನೆ. ಜೊತೆಗೆ ಕಲಾಕೃತಿಯದ್ವಾರ ಭಗವಂತನ ಕೃಪಾಕಟಾಕ್ಷ ಹೊಂದಲು ಮಾರ್ಗದರ್ಶನವನ್ನು ಸೂಚಿಸುತ್ತಾನೆ.

ರಾಮು : ಲಲಿತ ಕಲಾವಿದರ ಪ್ರಯತ್ನದ ಫಲಿತಾಂಶಗಳೇನು ?

ಶೀಲ : ಲಲಿತ ಕಲಾವಿದರು ತಮ್ಮ ಈ ಪ್ರಯತ್ನಗಳಲ್ಲಿ ಭಾವಜೀವಿಗಳಾಗಿ ಆತ್ಮವಿಕಾಸ ಹೊಂದಿ ಕೃತಿಗಳಲ್ಲಿ ತಮ್ಮ ಭಾವನಾಲಹರಿಯ ಮುದ್ರೆಯೊತ್ತಿರುತ್ತಾರೆ.

ಆ ಪ್ರಯತ್ನದ ಫಲಿತಾಂಶಗಳೇ ಶಿಲ್ಪಕಲಾಕೃತಿಗಳು, ಸಂಗೀತ ಕೃತಿಗಳು ಹಾಗೂ ಗುಡಿಗೋಪುರಗಳು.

ರಾಮು : ಗಾನ ಕಲೆ ಹಿಂದೂ ಸಮಾಜದಲ್ಲಿ ಹೇಗೆ ನಿತ್ಯ ಜೀವನದ ಹಾಸುಹೊಕ್ಕಾಗಿದೆ. ಜನ ಸಾಮಾನ್ಯರಿಗೆ ನವಶಕ್ತಿ ಚೈತನ್ಯ ಕೊಡುತ್ತದೆ. ?

ಶೀಲ : ಮದುವೆ ಮುಂತಾದ ಶುಭ ಸಮಾರಂಭಗಳಲ್ಲಿ ಸಂಗೀತದ ರಸದೌತಣ. ಸಕಲ ಪೂಜಾ ಕಾರ್ಯಗಳಲ್ಲಿ ಭಗವಂತನಿಗೆ ಸಂಗೀತ ಸೇವೆ. ಹಳ್ಳಿಗಳಲ್ಲಿ ಹೊಲ ಉಳುವಾಗ, ಬಂಡಿ ಹೊಡೆಯುವಾಗ, ದೋಣಿಯಲ್ಲಿ ನದಿದಾಟುವಾಗ, ಮಗು ನಿದ್ದೆ ಹೋಗಿಸಲು, ಜೋಗುಳ ಹಾಡುವಾಗ, ರಾಗಿ ಬೀಸುವಾಗ, ಕಾಳು ಬಿಡಿಸುವಾಗ, ಜಾತ್ರೆ ನಡೆಸುವಾಗ ಹೀಗೆ ಎಲ್ಲ ಸನ್ನಿವೇಶಗಳಲ್ಲೂ ನಿತ್ಯ ಜೀವನದ ಹಾಸುಹೊಕ್ಕಾಗಿ ದೇಹಶ್ರಮ ಪರಿಹರಿಸಿ, ಚಿತ್ತಕ್ಕೆ ಆನಂದ ಮತ್ತು ಶಾಂತಿಗಳನ್ನೊದಗಿಸಿ ಮುಂದಿನ ಕೆಲಸಕ್ಕೆ ನವಶಕ್ತಿ ಚೈತನ್ಯ ಕೊಡುತ್ತದೆ.

ಹಿಂದೂ ಸಮಾಜದಲ್ಲಿ ಸಂಗೀತವಿಲ್ಲದ ಸಮಾರಂಭವಿಲ್ಲ, ಅಲ್ಪಸ್ವಲ್ಪ ಸಂಗೀತವನ್ನಾದರೂ ಅರಿಯದ ಮಹಿಳೆಗೆ ಪುರಸ್ಕಾರವಿಲ್ಲ.

ರಾಮು : ಜಗತ್ತಿಗೆ ಜ್ಞಾನದೀವಿಗೆಯಾಗಿರುವ ಸಂಸ್ಕೃತಿ ಯಾವುದು ?

ಶೀಲ : ಭಾರತೀಯ ಸಂಸ್ಕೃತಿ

ರಾಮು : ಪಾಶ್ಚಾತ್ಯ ದೇಶಗಳು ಭಾರತೀಯ ಸಂಗೀತದಲ್ಲಿ ವಿಶೇಷ ಆಸಕ್ತಿ ಹೊಂದಲು ಕಾರಣಗಳೇನು ?

ಶೀಲ : ಸಂಗೀತದಲ್ಲಿರುವ ಅಂತಸ್ಸತ್ವ ಹಾಗೂ ಆಧ್ಯಾತ್ಮಿಕ ಮೌಲ್ಯಗಳು.

ರಾಮು : ಸಂಸ್ಕೃತಿ ಬೆಳೆಸಿಕೊಳ್ಳುವುದು ಹೇಗೆ ?

ಶೀಲ : ಭಾವಶುದ್ಧಿ, ಕಲಾಭಿಜ್ಞತೆ ಮತ್ತು ಸಭ್ಯತೆಗಳನ್ನು ಬೆಳಸಿಕೊಳ್ಳುವುದೇ ಸಂಸ್ಕೃತಿ.

ರಾಮು : ಸಂಸ್ಕೃತಿಗೂ, ನಾಗರಿಕತೆಗೂ ಇರುವ ವ್ಯತ್ಯಾಸವೇನು ?

ಶೀಲ : ಸಂಸ್ಕೃತಿ ನಮ್ಮ ಆಂತರಿಕ ಜೀವನವನ್ನು ಪ್ರತಿಬಿಂಬಿಸುತ್ತದೆ.
ನಾಗರಿಕತೆ ನಮ್ಮ ಬಾಹ್ಯ ಜೀವನವನ್ನು ಪ್ರತಿಬಿಂಬಿಸುತ್ತದೆ.

ರಾಮು : ಒಂದು ಸಭ್ಯ ಸಮಾಜ ನಿರ್ಮಾಣ ಹೇಗೆ ಸಾಧ್ಯವಾಗುವುದು ?

ಶೀಲ : ನಾಗರಿಕತೆ ಮತ್ತು ಸಂಸ್ಕೃತಿಗಳಿಂದ ಲಲಿತ ಕಲೆಗಳು ಬೆಳೆದಷ್ಟು ಒಂದು ದೇಶದ ಸಂಸ್ಕೃತಿ ಉನ್ನತ ಮಟ್ಟಕ್ಕೆ ಏರಿ ಸಭ್ಯ ಸಮಾಜವನ್ನು ನಿರ್ಮಾಣ ಮಾಡಲು ಸಾಧ್ಯವಾಗುತ್ತದೆ.

ರಾಮು : ಚಿತ್ರ ಕಲೆಗೆ ಸ್ಫೂರ್ತಿಯೇನು ?

ಶೀಲ : ಪ್ರಕೃತಿಯಲ್ಲಿ ಕಂಡುಬರುವ ಸೌಂದರ್ಯಮಯ ದೃಶ್ಯಗಳು, ಕಾಮನ ಬಿಲ್ಲಿನ ಹಾಗೂ ಆಕಾಶದ ವಿವಿಧ ಸೂಕ್ಷ್ಮ ವರ್ಣ ಛಾಯೆಗಳು, ಭೂಮಿ ನೀರು ಹಾಗೂ ಗಗನದ ವೈವಿಧ್ಯಪೂರ್ಣ ದೃಶ್ಯಗಳು, ಗಿಡ, ವೃಕ್ಷ, ಪುಷ್ಪಗಳ ವರ್ಣ ವೈವಿಧ್ಯ ಚಿತ್ರಕಲೆಗೆ ಸ್ಫೂರ್ತಿಯನ್ನು ನೀಡಿವೆ.

ರಾಮು : ಶಿಲ್ಪಕಲೆಗೆ ಸ್ಫೂರ್ತಿಯೇನು ?

ಶೀಲ : ಮನುಷ್ಯ ಮತ್ತು ಪ್ರಾಣಿಗಳಲ್ಲಿ ಅಡಗಿರುವ ಸೌಂದರ್ಯವನ್ನು ಕಂಡು ಶಿಲ್ಪಿ ಕಲ್ಲು, ಲೋಹಗಳಲ್ಲಿ ಅವುಗಳನ್ನು ಕಡೆದು ಅಮರಗೊಳಿಸಿದ್ದಾನೆ.

ರಾಮು : ಪ್ರಕೃತಿಯ ಅಧ್ಯಯನವನ್ನು ಪ್ರತಿಬಿಂಬಿಸುವ ಕಲೆಗಳು ಯಾವುವು ?

ಶೀಲ : ಚಿತ್ರಕಲೆ ಮತ್ತು ಶಿಲ್ಪಕಲೆ.

ರಾಮು : ಮಾನವನ ಪ್ರತಿಭೆ ಹಾಗೂ ಕಲ್ಪನೆಗಳಿಂದಲೇ ಉಗಮ ಮತ್ತು ವಿಕಾಸ ಹೊಂದುತ್ತಿರುವ ಕಲೆ ಯಾವುದು ?

ಶೀಲ : ಸಂಗೀತ.

ರಾಮು : ಸಂಗೀತ, ದೇವತೆಗಳಿಗೆ ಅತ್ಯಂತ ಪ್ರಿಯವಾದುದೆಂದು ಹೇಳುವುದಕ್ಕೆ ಆಧಾರ ಏನು ?

ಶೀಲ : ಸರಸ್ವತಿಯ ವೀಣೆ, ಕೃಷ್ಣನ ಕೊಳಲು, ವಿಷ್ಣುವಿನ ಶಂಖ, ಶಿವನ ಡಮರುಗ ಇತ್ಯಾದಿಗಳು.

ರಾಮು : ದೇವತೆಗಳಲ್ಲಿ ಸಂಗೀತ ತಜ್ಞರು ಯಾರು ?

ಶೀಲ : ನಾರದ, ಕಚ್ಛಪಿ, ನಂದಿ ಮುಂತಾದವರು.

ರಾಮು : ಸಂಗೀತ ಕಲೆಯೋ ? ಇಲ್ಲ ವಿದ್ಯೆಯೋ ?

ಶೀಲ : ಸಂಗೀತ ವಿದ್ಯೆಯೂ ಹೌದು. ಕಲೆಯೂ ಹೌದು.

ರಾಮು : ಯಾವ ಕಾರಣಗಳಿಂದ ಸಂಗೀತ ವಿದ್ಯೆ ಹಾಗೂ ಕಲೆಯಾಗಿ ಮೆರೆಯುತ್ತಿದೆ ?

ಶೀಲ : ಯಾವುದರ ನಿಷ್ಠಾಪೂರ್ವಕ ಅಧ್ಯಯನ - ಮನುಷ್ಯನಿಗೆ ದೇವರು, ಅವನ ಅಪಾರ ಮಹಿಮೆ ಮತ್ತು ಶಕ್ತಿ, ಪ್ರಪಂಚಕ್ಕೂ ಮನುಷ್ಯನಿಗೂ ಇರುವ ನಿಕಟ ಸಂಬಂಧ, ಪ್ರಪಂಚದಲ್ಲಿ ಮನುಷ್ಯನ ಸ್ಥಾನ ಮತ್ತು ಕರ್ತವ್ಯ ಇವುಗಳ ಅರಿವನ್ನು ಉಂಟು ಮಾಡುವುದೋ ಅದೇ ನಿಜವಾದ ವಿದ್ಯೆ ಎಂದು ನಮ್ಮ ಪೂರ್ವಜರು ಘೋಷಿಸಿದ್ದಾರೆ. ಈ ಮಹತ್ತರ ಅರಿವನ್ನುಂಟು ಮಾಡುವ ಶಕ್ತಿ ಸಂಗೀತಕ್ಕೆ ಇರುವ ಕಾರಣ ಸಂಗೀತ 'ವಿದ್ಯೆ' (Science).
ಸಂಗೀತ ಲಲಿತ ಕಲೆಗಳಲ್ಲಿ ಅಗ್ರಸ್ಥಾನ ಪಡೆದಿರುವ ಕಾರಣ ಇದು ಕಲೆ (Art).

ರಾಮು : ಮನುಷ್ಯನ ಜೀವನಕ್ಕೆ ಕಲೆಯ ಅವಶ್ಯಕತೆ ಇದೆಯೇ ?

ಶೀಲ : ಮಾನವ ತನ್ನ ಬದುಕನ್ನು ನಿರ್ವಹಿಸಲು ದೈಹಿಕ, ಮಾನಸಿಕ, ಬೌದ್ಧಿಕ ಶಿಕ್ಷಣಗಳನ್ನು ಅವಲಂಬಿಸುತ್ತಾನೆ.
ಮನುಷ್ಯನಿಗೆ ದೈಹಿಕ ಶಿಕ್ಷಣಗಳಿಂದ ದೇಹ ಪುಷ್ಟಿಗಳು, (Physical development)
ಕ್ರೀಡೆಗಳಿಂದ ಮನೋರಂಜನೆ (Mental Entertainment)
ಬೌದ್ಧಿಕ ಶಿಕ್ಷಣಗಳಿಂದ ಮನೋವಿಕಾಸ (Intellectual development)

ಉಂಟಾಗುವಂತೆ ಅವನ ಹೃದಯದ ಭಾವಾನುರಾಗ ಬೆಳವಣಿಗೆಗೆ ವ್ಯಕ್ತಿತ್ವವನ್ನು ಕಲಾತ್ಮಕವಾಗಿಸಿಕೊಂಡು ಆಧ್ಯಾತ್ಮದತ್ತ (Aesthetic development) ಸಾಗಲೂ ಒಂದು ಸಾಧನ ಬೇಕೇ ಬೇಕು. ಕಲೆಯೇ ಇದಕ್ಕೆ ಅದ್ವಿತೀಯ ಸಾಧನ.

ಆದುದರಿಂದ ಮಾನವ ಲಲಿತ ಕಲೆಗಳನ್ನು ಮಾಧ್ಯಮವಾಗಿ ಬಳಸಿಕೊಳ್ಳುವನು.

ಕಲಾಭಿರುಚಿ ಮೂಡಿದಾಗ ಮನುಷ್ಯನಲ್ಲಿ ಹೃದಯದ ಭಾವಾನುರಾಗ ಅಂಕುರಿಸಿ ಬೆಳೆಯುತ್ತದೆ. ಅವನ ಚಿತ್ತಕ್ಕೆ ಆನಂದವನ್ನುಂಟುಮಾಡಿ ಪರಿಪೂರ್ಣತೆಯ ಕಡೆಗೆ ಒಯ್ಯುತ್ತದೆ. ಇದರಿಂದ ಮನುಷ್ಯ ಜೀವನಕ್ಕೆ ಕಲೆಯ ಮಹತ್ವವಾದ ಅವಶ್ಯಕತೆ ಇದೆ.

ರಾಮು : ಲಲಿತ ಕಲೆಗಳಲ್ಲಿನ ಮಮತೆಯಿಂದ ಮನುಷ್ಯನಲ್ಲಿ ಆಗುವ ಪರಿವರ್ತನೆಗಳೇನು ?

ಶೀಲ : ಲಲಿತ ಕಲೆಗಳಲ್ಲಿನ ಮಮತೆ ಮನುಷ್ಯನಿಗೆ ನ್ಯಾಯಾನ್ಯಾಯ ವಿಮರ್ಶಾಜ್ಞಾನ, ದೈವಿಕ ಶಕ್ತಿಯ ಅರಿವು, ಜೀವನದಲ್ಲೊಂದು ಶಾಂತಿ, ಸಹನೆ, ಶಿಸ್ತು (Discipline) ಸ್ನೇಹ ಪರತೆ, ಮುಂತಾದುವನ್ನು ನೀಡಿ ಅವನನ್ನು ಸುಸಂಸ್ಕೃತನನ್ನಾಗಿ ಮಾಡಿವೆ.

ಈ ಕಾರ್ಯದಲ್ಲಿ ಲಲಿತ ಕಲೆಗಳಲ್ಲಿ ಸಂಗೀತ ಶಿಕ್ಷಣ ಅಗ್ರಸ್ಥಾನವನ್ನಲಂಕರಿಸಿ ಮನುಷ್ಯನು ಸುಸಂಸ್ಕೃತನಾಗಲು ಮಾರ್ಗದರ್ಶಿಯಾಗಿದೆ.

ರಾಮು : ತ್ರಿಭಗಿನೀ ಕಲೆಗಳಾವುವು ?

ಶೀಲ : ಸಂಗೀತ, ನೃತ್ಯ ಮತ್ತು ಪದ್ಯ (Music, Dance and Poetry) ಇವೇ ತ್ರಿಭಗಿನೀ ಕಲೆಗಳು.

ರಾಮು : ಇವು ಪ್ರತ್ಯೇಕ ಕಲೆಗಳೇ ಅಲ್ಲ. ಪರಸ್ಪರ ಸಹಾಯ ಹೊಂದಿವೆಯೇ ?

ಶೀಲ : ತ್ರಿಭಗಿನೀ ಕಲೆಗಳು ಒಂದೇ ಆಗಿ ಸಾಗಿಬಂದು, ಕಾಲಕ್ರಮೇಣ ಒಂದೊಂದೂ ಪ್ರತ್ಯೇಕ ಕಲಾವಾಹಿನಿಯಾಗಿ ಪ್ರವಹಿಸುತ್ತಿವೆ. ಇವುಗಳಲ್ಲಿ ಒಂದೊಂದೂ ಅಗಾಧವಾಗಿ ಬೆಳೆದು ಬಂದಿದ್ದರೂ ಅವು ಪರಸ್ಪರ ಸಹಾಯ ಹೊಂದಿವೆ.

ನೃತ್ಯವು ತನ್ನ ಸತ್ಯ ಸೌಂದರ್ಯ ಪ್ರಕಟವಾಗಿ ಪರಿಣಾಮಕಾರಿಯಾಗಿ ರಸಿಕರ ಚಿತ್ತದಲ್ಲಿ ಚಿರಸ್ಥಾಯಿಯಾಗಲು ಸಂಗೀತ ಕಲೆಯ ಸಹಾಯ ಅತ್ಯಾವಶ್ಯಕ. ಹಾಗೆಯೇ ಪದ್ಯ ತನ್ನಲ್ಲೇ ಸುಪ್ತ ಸಂಗೀತ ಹೊಂದಿದ್ದರೂ ಗಾನಕಲೆಯ ಸಹಾಯ ಪಡೆದ ಹೊರತು ಶೋಭಿಸಲಾರದು.

ರಾಮು : ಹಿಂದೂ ಸಮಾಜದಲ್ಲಿ ಸಂಗೀತ ಕಲೆಯನ್ನು ಯಾವ ರೀತಿ ಪರಿವರ್ತಿಸಿದ್ದಾರೆ ?

ಶೀಲ : ಹಿಂದೂ ಸಮಾಜದಲ್ಲಿ ಸಂಗೀತ ಕಲೆ ಭಗವದಾರಾಧನೆಗೆ ಮೀಸಲು. ನಾದೋಪಾಸನೆಯಿಂದ ಜೀವನ್ಮುಕ್ತಿ ಪಡೆಯಲು, ಜನತೆಯನ್ನು ಸನ್ಮಾರ್ಗಗಾಮಿಗಳನ್ನಾಗಿಸಲು, ಭಗವದ್ಭಕ್ತರನ್ನಾಗಿಸಲು, ಸಂಗೀತ ಕಲೆಯನ್ನು ಅಗಾಧವಾಗಿ ಪಲ್ಲವಿಸಿ, ದೊಡ್ಡ ಶಾಸ್ತ್ರವನ್ನಾಗಿ ನಮ್ಮ ಹಿರಿಯರು ಪರಿವರ್ತಿಸಿದ್ದಾರೆ.

ಚರ್ಚಾಕಾರ್ಯಕ್ರಮ ಅಂತ್ಯಗೊಂಡಾಗ ಅಲ್ಲಿದ್ದವರೆಲ್ಲ ಇವರಿಬ್ಬರ ವಿದ್ವತ್ತಿನ ಆಳ-ಅಗಲಗಳನ್ನು ತಿಳಿದು ವಿಸ್ಮಯ ಗೊಂಡರು. ಅವರ ದೃಷ್ಟಿಯಲ್ಲಿ ಶೀಲ ಕಲೆಗಳ ಕಾಮಧೇನುವಾಗಿ ಕಂಡರೆ ರಾಮು ಸಂಗೀತ - ಸಾಹಿತ್ಯ - ಸಂಸ್ಕೃತಿಯ ಕಲ್ಪವೃಕ್ಷವಾಗಿ ಕಂಗೊಳಿಸಿದನು.

"ಸಂಗೀತ ಪವಾಡ ಸದೃಶ್ಯವಾದದ್ದು" ಎಂದ ಅರಿತಿದ್ದ ಡಾ॥ ವ್ಯಾಸರಾಯರು ಈ ವಿಚಾರವಾಗಿ ರಾಮು ಶೀಲ ಮುಂದಿನವಾರ ಕೂಡ "ಸಂಗೀತ ಪವಾಡಗಳ ದರ್ಶನ - ಸಂದರ್ಶನಗಳು" ಎಂಬ ಚರ್ಚಾಕೂಟಕಾರ್ಯಕ್ರಮ ನಡೆಸಿಕೊಡಬೇಕೆಂದು ಇಬ್ಬರಲ್ಲೂ ವಿನಂತಿಸಿದರು. ಅವರ ಸಮ್ಮತಿ ದೊರತಾಗ ಸಭಿಕರು ಸಂತಸಗೊಂಡರು. ಪ್ರತಿವಾರ ಸಂಗೀತ ಶಾಸ್ತ್ರದ ಸೌರಭ ಚರ್ಚಾಕಾರ್ಯಕ್ರಮಗಳನ್ನು ಮುಂದುವರಿಸಬೇಕೆಂದು ಆತ್ಮೀಯತೆಯಿಂದ ಸಭಿಕರೆಲ್ಲರು ಬಿನ್ನವಿಸಿಕೊಂಡಾಗ ರಾಮು - ಶೀಲ ಒಪ್ಪಿದರು.



# 3. ಸಂಗೀತ ಪವಾಡಗಳ ದರ್ಶನ - ಸಂದರ್ಶನಗಳು

ಅಂದು ಡಾ॥ ವ್ಯಾಸರಾಯರು ಸಂಗೀತ ಪವಾಡಗಳನ್ನು ಒಂದಾದ ನಂತರ ಒಂದು ಅಂದರೆ ಶೀಲ ನಂತರ ರಾಮು, ರಾಮು ನಂತರ ಶೀಲ ವಿವರಿಸಬೇಕೆಂದು ಸಲಹೆ ಇತ್ತರು. ಅಂದರೆ. ಶೀಲಳ ಏಟು - ರಾಮುವಿನ ಎದುರೇಟು.

ಶೀಲ : ಮೇಘ ಮಲ್ಹಾರ ರಾಗವನ್ನು ಹಾಡಿ ಮಳೆಸುರಿಸಿದ ಚಮತ್ಕಾರಗಳಿವೆ.

ರಾಮು : ತಾನ್‌ಸೇನ್ ದೀಪಕ್‌ರಾಗ ಹಾಡಿದಾಗ ದೀಪಗಳು ತಂತಾನೆ ಹಚ್ಚಿಕೊಳತ್ತಿದ್ದವು.

ಶೀಲ : ಬೇಟೆಗಾರರು ರಾಮಾಯಣ ಕಾಲದಲ್ಲಿ ಗಾನದ ಬಲೆ ಬೀಸಿ ಜಿಂಕೆಗಳನ್ನು ಹಿಡಿಯುತ್ತಿದ್ದರಂತೆ.

ರಾಮು : ಘೋಷವತೀ ವೀಣೆಯನ್ನು ನುಡಿಸಿ ಉದಯ ರಾಜನು ಆನೆಯನ್ನು ಸೆರೆಹಿಡಿಯುತ್ತಿದ್ದನಂತೆ.

ಶೀಲ : ತ್ಯಾಗರಾಜರು 'ನಾಜೀವಾಧಾರ' ಎಂಬ ಬಿಲಹರಿ ರಾಗದ ಕೃತಿಯನ್ನು ರಚಿಸಿ ಮೃತನ ದೇಹವನ್ನು ಬದುಕಿಸಿದರು.

ರಾಮು : 'ಅಮೃತವರ್ಷಿಣಿ' ರಾಗದಿಂದ ಮುತ್ತುಸ್ವಾಮಿ ದೀಕ್ಷಿತರು ಮಳೆ ಬರುವಂತೆ ಮಾಡಿದರು.

ಶೀಲ : ಓಂಕಾರನಾಥ ಠಾಕೂರರು, ಸಿಂಹದ ಮುಂದೆ ಗಾಂಧಾರ ರಾಗವನ್ನು ಹಾಡಲಾಗಿ, ಅದರ ಕಣ್ಣಿನಲ್ಲಿದ್ದ ಹಿಂಸೆಭಾವವು ಮಾರ್ಪಟ್ಟು ಕೋಮಲತೆಯು ಮೂಡಿ ಸಿಂಹವೂ ನಾಯಿಯಂತೆ ಬಾಲವನ್ನು ಅಲ್ಲಾಡಿಸಿತು.

ರಾಮು : ಶ್ರೀ ಕೃಷ್ಣನ ಕೊಳಲಿನ ನಾದಕ್ಕೆ ಗೋಪಿಕೆಯರು ಮತ್ತು ಹಸುಗಳು ಮನಸೋತು ಮಂತ್ರಮುಗ್ಧರಾಗುತ್ತಿದ್ದರು. ಹಸುಗಳು ಮೇಯುವುದನ್ನು ಮರೆತು ಕಿವಿ ನಿಮಿರಿಸಿ ಗಾನದ ಸವಿಯನ್ನು ಸವಿಯುತ್ತಿದ್ದವಂತೆ.

ಶೀಲ : ಹಾವಾಡಿಗನ ಪುಂಗಿಯ ನಾದವಿಶೇಷಕ್ಕೆ ಸರ್ಪ ಸೋತು ಹೆಡೆಯಾಡಿಸುತ್ತ ಆನಂದಿಸುತ್ತದೆ.

ರಾಮು : ಸಂಗೀತವನ್ನಾಲಿಸುತ್ತಾ ಹಸುಗಳು ಹೆಚ್ಚಿಗೆ ಹಾಲನ್ನು ಕೊಡಬಲ್ಲವು.

ಶೀಲ : ಸಂಗೀತದಿಂದ ರೋಗಿಗಳ ಆಯಾಸ ಪರಿಹಾರವಾಗುತ್ತದೆ. ಮನಸ್ಸಿಗೆ ನೆಮ್ಮದಿ ನೀಡಿ ಎಷ್ಟೋ ಮನೋವಿಕಾರಗಳು ಕಡಿಮೆಯಾಗುತ್ತವೆ.

ರಾಮು : ಶಸ್ತ್ರಚಿಕಿತ್ಸೆಯ ವೇಳೆಯಲ್ಲಿ ಸಂಗೀತದ ಉಪಯೋಗದಿಂದ ರೋಗಿಯ ಮನಸ್ಸಿಗೆ ತಂಪನ್ನುಂಟುಮಾಡುವುದೆಂಬುದಾಗಿ ಕೆಲವು ವೈದ್ಯರ ಅಭಿಪ್ರಾಯ.

ಶೀಲ : ರಾಮಸ್ವಾಮಿ ದೀಕ್ಷಿತರು ಸಂಗೀತದ ಮೂಲಕ, ತಮ್ಮ ಮಗನು ಕಳೆದುಕೊಂಡಿದ್ದ ದೃಷ್ಟಿಯನ್ನು ಮತ್ತೆ ದೊರಕುವಂತೆ ಮಾಡಿದರು.

ರಾಮು : ವೃಂದಾವನದ ಹರಿದಾಸಸ್ವಾಮಿಯವರು ತಮ್ಮ ಸಂಗೀತದ ಮೂಲಕ ವ್ಯಾಧಿಗಳನ್ನು ಗುಣಪಡಿಸುತ್ತಿದ್ದುದಾಗಿ ಪ್ರತೀತಿ.

ಶೀಲ : ದೇಗುಲದ ಮುಂದೆ ಗಂಟೆಯ ಮಧುರ ಸ್ವರಕ್ಕೆ ಈಚಲ ಮರ ಆಗಾಗ ತಲೆಬಾಗಿಸುತ್ತಿದ್ದ ವರದಿ ಇದೆ.

ರಾಮು : ಜೆ. ಸಿ. ಬೋಸ್ ಪ್ರಯೋಗ ಶಾಲೆಯಲ್ಲಿ ಠಾಕೂರರ ಭೈರವಿ ರಾಗಾಲಾಪನೆಯಿಂದ ಅಲ್ಲಿನ ಗಿಡಗಳಿಗೆ ಹೊಸ ಹುರುಪು ಬಂದಿತು. ಮಧುರ ಸ್ವರಗಳನ್ನು ಕೇಳಿದಾಗ ಗಿಡಮರಗಳ ಫೋಟೋ ಪ್ಲಾಜಂನಲ್ಲಿರುವ ಕ್ಲೋರೋಫಿಲ್ ವಿಚಲಿತಗೊಂಡಿತು.

ಶೀಲ : ಕರ್ನಾಟಕ ಸಂಗೀತವನ್ನು ಸಸ್ಯಗಳ ಮೇಲೆ ಪ್ರಯೋಗಮಾಡಿ ಒಳ್ಳೆಯ ಸಂಗೀತ ಕೇಳಿ ಸಸ್ಯಗಳು ಹೆಚ್ಚಿನ ಫಲ ಕೊಡುವುದನ್ನು ಅಣ್ಣಾಮಲೈ ವಿಶ್ವವಿದ್ಯಾಲಯ ಪ್ರಕಟಿಸಿದೆ.

ರಾಮು : ಲಾಮ ಜಾಗಟೆಯನ್ನು (ಗಾಂಗ್) ಮರದ ಸುತ್ತಿಗೆಯಿಂದ ಬಾರಿಸತೊಡಗಿದಾಗ ಅದರ ಝೇಂಕಾರದಿಂದ ಹಸಿರು ಕಿರಣಗಳು ಉತ್ಪನ್ನವಾಗಿ ಪ್ರಕಾಶವುಂಟಾಯಿತು.

ಶೀಲ : ಆರ್‌ಪಿಯಸ್‌ನು ತನ್ನ ನಾದಮಾಧುರ್ಯದಿಂದ ಇಡೀ ಜಗತ್ತನ್ನೇ ಅಲುಗಾಡಿಸುತ್ತಿದ್ದನಂತೆ.

ರಾಮು : ಸಾಮಗಾನದ ಮೂಲಕವಾಗಿ ಯಜ್ಞದಲ್ಲಿ ಹವಿಸ್ಸನ್ನು ಸ್ವೀಕರಿಸಲು ದೇವತೆಗಳು ಬರುತ್ತಿದ್ದರು.

ಶೀಲ : ಸಂಗೀತ ಪ್ರಿಯರಲ್ಲದವರೂ ಸಹ ಮಾನವನ ಹುಟ್ಟುಗುಣಕ್ಕೆ ಅನುಸಾರವಾಗಿ ಮಧುರ ಕಂಠದಿಂದ ಬರುವ ತೀವ್ರಗತಿಯ ಹಾಡನ್ನಾಗಲಿ, ವಾದ್ಯಗೋಷ್ಠಿಯಿಂದ ಬರುವ ಗಾನವನ್ನಾಗಲೀ, ಕೇಳಿದಾಕ್ಷಣ ತಮಗರಿವಿಲ್ಲದೆಯೇ ತಾಳಹಾಕಿ ಆನಂದಿಸುವರು. ಪ್ರತಿಯೊಬ್ಬರೂ ಒಂದೇ ವಿಧವಾದ ಸಂಗೀತವನ್ನು ಇಚ್ಛಿಸದಿರಬಹುದು. ಆದರೂ

ಯಾವುದಾದರೊಂದು ರೀತಿಯ ಸಂಗೀತವನ್ನು ಬಯಸುತ್ತಾರೆ. ರಸಿಕರು ಶ್ರೇಷ್ಠವಾದ ಸಂಗೀತವನ್ನು ಬಯಸಿದರೆ, ಸಾಮಾನ್ಯರು ಜನಪ್ರಿಯವಾದ ಹಾಡುಗಳಿಗೆ ತಲೆದೂಗುತ್ತಾರೆ.

ರಾಮು : ಸಂಗೀತಕ್ಕೆ ನವರಸ ಭಾವಗಳನ್ನೂ ಹೊಮ್ಮಿಸುವ ಚೈತನ್ಯವಿದೆ. ಒಂದೊಂದು ರಾಗಕ್ಕೆ ಒಂದೊಂದು ಭಾವ, ಒಂದೊಂದು ರಸವಿದೆ. ಬೇರೆ ಬೇರೆ ರಸಗಳು ಬೇರೆ ಬೇರೆ ಭಾವಗಳನ್ನು ಸರ್ವೇ ಸಾಮಾನ್ಯವಾಗಿ ಎಲ್ಲರಲ್ಲೂ ಉಂಟುಮಾಡುತ್ತದೆ. ಅದು ಭಕ್ತಿಭಾವ ರಸಗಾನವಿರಲಿ, ಕರುಣಾರಸಗಾನವಿರಲಿ ಆಯಾಯ ಭಾವಗಳು ಆಯಾಯ ರಸಗಳನ್ನು ಉಕ್ಕಿಸಿ, ಅದರಲ್ಲುಂಟಾಗುವ ಆನಂದಾನುಭೂತಿಯಲ್ಲಿ ಒಂದಾಗುವಂತೆ ಮಾಡುತ್ತದೆ. ಭಕ್ತಿರಸ ಶ್ರವಣೇಂದ್ರಿಯದಿಂದ ಮೆದಳು ಹೃದಯವನ್ನು ಮುಟ್ಟಿ ಆನಂದ ರಸಾಬ್ಧಿಯಲ್ಲಿ ಮುಳುಗಿಸುವ ಚೈತನ್ಯ ಪಡೆದಿದೆ, ಈವೊಂದು ಅದ್ಭುತ ಶಕ್ತಿ ಸಂಗೀತಕ್ಕಿದೆ. ಕೇಳಿ ಮಂತ್ರಮುಗ್ಧರಾಗುತ್ತೇವೆ, ಕುಣಿಯುತ್ತೇವೆ, ನಲಿಯುತ್ತೇವೆ. ಕಣ್ಣೀರು ಸುರಿಸುತ್ತೇವೆ ಭಕ್ತಿಪರವಶರಾಗಿ ಮೈ ಮರೆತು ಆ ದೇವದೇವನ ಲೀಲಾ ವಿಲಾಸದಲ್ಲಿ ಐಕ್ಯರಾಗುತ್ತೇವೆ. ಈ ಸಂಗೀತ ಸುಧಾರಸವನ್ನು ಪಾನಮಾಡಿದ ದಿವ್ಯ ಚೇತನಗಳ ಬದುಕು ಸಾರ್ಥಕ ಹಾಗೂ ಧನ್ಯ.

ಶೀಲ : ಸಂಗೀತ ಸ್ವರಲಹರಿಯ ಮೋಡಿ, ಗಾನ ಮಾಧುರ್ಯ ಅಥವಾ ಅದರ ಸ್ವಾದವನ್ನು ವರ್ಣಿಸುವುದು ಆಗದ ಮಾತು. ಅದು ಮನಸ್ಸಿನ ಮೇಲೆ ಮಾಡುವ ಅದ್ಭುತ ಪರಿಣಾಮ ಅನುಭವ ವೇದ್ಯವೆ ಹೊರತು ವರ್ಣನೆಗೆ ಮೀರಿದ್ದು. ಮಾತಿಗೆ ಎಟುಕದುದು. Shelly ಮತ್ತು Keats ಅಂಥಹ ಮಹಾನ್ ಕವಿಗಳು ಹಕ್ಕಿಗಳ ಧ್ವನಿ ಮಾಧುರ್ಯದ ಮೋಹಕತೆಗೆ ಪರವಶರಾಗಿ ಅರಿಯದ ಯಾವುದೋ ದಿವ್ಯ ಲೋಕದ ದರ್ಶನ ಪಡೆದು ಅಜರಾಮದ ಕವನಗಳನ್ನೂ ಒಡಮೂಡಿಸಿದರು.

ರಾಮು : ದೇವಾಲಯಗಳಲ್ಲಿ ಹಾಡುವ ಮೇಳಗಾನ, ವೇದ ಮಂತ್ರ ಘೋಷಗಳು ಮಾನವರಲ್ಲಿ ಭಕ್ತಿ ಭಾವವನ್ನು ಉತ್ತೇಜಿಸಿ ಆ ಕ್ಷಣಕ್ಕಾದರೂ ಎಲ್ಲರಲ್ಲೂ ಭಕ್ತಿಭಾವವನ್ನು ತುಂಬಿ ಮೈಮರೆಯುವಂತೆ ಮಾಡುತವೆ. ಸಂತರು ಅವರ ಹೃದಯವನ್ನೇ ದೇವರಲ್ಲಿ ಅರ್ಪಿಸಿ ನಾದೋಪಾಸಕರಾಗಿ ಅನಂತತೆಯಲ್ಲಿ ಲೀನವಾಗುತ್ತಾರೆ. ಅವರದು ನಾದವೇ ಬದುಕು ಬದುಕೇ ನಾದ, ನಾದವೇ ಗುರಿ, ನಾದವೇ ಕೈವಲ್ಯವಾಗಿ ಒಂದು ಸುಂದರ ಪ್ರಪಂಚವನ್ನು ನಿರ್ಮಿಸಿಕೊಳ್ಳುತ್ತಾರೆ.

ಶೀಲ : ಸಂಗೀತಕ್ಕೆ ಮನಸ್ಸಿನ ಕಳವಳವನ್ನು ಹೋಗಲಾಡಿಸಿ ಶಾಂತಿ ನೀಡುವ ಶಕ್ತಿ ಇದೆ. ಎಂಥ ನೋವಿನ ಪ್ರಸಂಗದಲ್ಲಿಯೇ ಆಗಲಿ ಸಂಗೀತ ಅಮೃತ ಸೇಚನದಂತೆ ಬಾಳಿಗೇ ಹೊಸ ತಿರುವನ್ನು ಕೊಡುವ ಚೈತನ್ಯ ಪಡೆದಿದೆ. ಅಕ್ಬರ್ ಚಕ್ರವರ್ತಿ, ತಾನಸೇನ ಮಾರು ವೇಷ ಧರಿಸಿ ಮೀರಾಬಾಯಿಯ ಗಂಧರ್ವಗಾನ ಕೇಳಿ ಮಂತ್ರ ಮುಗ್ಧರಾಗುತ್ತಿದ್ದರು. ತಾನಸೇನನ ಗಂಧರ್ವಗಾನಕ್ಕೆ ಮಾರುಹೋದ ಅಕ್ಬರ್ ತನ್ನ ಸಾಮ್ರಾಜ್ಯವನ್ನೇ ಧಾರೆ ಎರೆಯ ಹೋದನಂತೆ.

ರಾಮು : ಪ್ರಖ್ಯಾತ ವಿಜ್ಞಾನಿ Einstein ಕೂಡ ತಮ್ಮ ಬೇಸರದ ಘಳಿಗೆಯಲ್ಲಿ ಸಂಗೀತದ ಮೊರೆ ಹೋಗುತ್ತಿದ್ದರು. King Suyal ಸೂಯಲ್ ಮನೋವಿಕಾರದಿಂದ ಬಳಲಿ ಹುಚ್ಚನಂತೆ ತೊಳಲಿದಾಗ, ಅವನ ಮನಃಶಾಂತಿಗೆ ನೆರವಾದದ್ದೂ ಸಂಗೀತ. King Charles IX(ಫ್ರಾನ್ಸ್) ಹೂಗೋನಾಟ್ಸ್ ಕೊಲೆಯನ್ನು ಕಂಡು ನೊಂದು ಮರುಗಿದಾಗ ಮನಸ್ಸಿಗೆ ನೆಮ್ಮದಿನೀಡಿದ್ದು ಸಂಗೀತ. Martin Luther Kingರಾಷ್ಟ್ರನಿರ್ಮಾಣ ಕಾರ್ಯದಲ್ಲಿ ಅವಿಶ್ರಾಂತವಾಗಿ ದುಡಿದು ಶಕ್ತಿಗುಂದಿದಾಗ ನವ ಚೈತನ್ಯಕ್ಕಾಗಿ ಸಂಗೀತದ ಮೊರೆ ಹೋಗುತ್ತಿದ್ದ.

ಶೀಲ : ಮದುವೆ, ಮುಂಜಿ ಉತ್ಸವಾದಿ ಮಂಗಳ ಕಾರ್ಯಗಳಲ್ಲಿ ಮಂಗಳಕರ ರಾಗಗಳು ಒಂದು ಶುಭದ ಸಂತಸದ ವಾತಾವರಣವನ್ನು ಸೃಷ್ಟಿಸುತ್ತವೆ .

ರಾಮು : ನೊಂದ ಮನಸ್ಸಿಗೆ, ಬೇಸರಗೊಂಡ ಜೀವಕ್ಕೆ ಶಾಂತಿ, ಸಮಾಧಾನಗಳನ್ನು ನೀಡುವ ಚೈತನ್ಯ ಸಂಗೀತಕ್ಕಿದೆ. ಸಂಗೀತವನ್ನು ಕೇಳುವಷ್ಟು ಹೊತ್ತಾದರೂ ರೋಗಿಗಳ ಮನಸ್ಸು ನೆಮ್ಮದಿಯ ನೆಲೆಯಲ್ಲಿ ನಿಂತಿರುತ್ತದೆ ಎನ್ನುವುದು Florence Nightingaleಅಭಿಮತ.

ಶೀಲ : "ಸಂಗೀತಕ್ಕೆ ಮಾರುಹೋಗದವನನ್ನು ನಂಬಬೇಡ. ಅವನ ಮನಸ್ಸು ದುರಾಲೋಚನೆಗಳ ಕೂಪ" ಎನ್ನುವುದು ವಿಲಿಯಂ ಷೇಕ್ಸ್‌ಪಿಯರ್ ಅಭಿಮತ.

ರಾಮು : ಯೋಧರಿಗೆ ಸಮರೋತ್ಸಾಹವನ್ನು ಉಕ್ಕಿಸಲು ರಣಗೀತೆಗಳು, ವೀರಗೀತೆಗಳು ಇವೆ.

ಶೀಲ : ಮನಸ್ಸು ಗಾನದಲ್ಲಿ ಲೀನವಾದಾಗ ದೈಹಿಕ ಕಷ್ಟ ಕಡಿಮೆ ಎನ್ನಿಸುತ್ತದೆ. ಆದುದರಿಂದ ಉಳುವಾಗ, ಬೀಸುವಾಗ, ಬಿತ್ತುವಾಗ, ಕುಟ್ಟುವಾಗ, ಹಿರಗೋಲ ಮೀಟುವಾಗ, ಗಾಡಿ ಹೊಡೆಯುವಾಗ ಕೆಲಸ ಕಷ್ಟಕಾಣದಿರಲು, ಬೇಸರ ಮರೆಯಲು ಹಾಡುತ್ತಿರುತ್ತಾರೆ.

ರಾಮು : ಹಿಂದೆ ರಾಜರುಗಳನ್ನು ಮಂಗಳವಾದ್ಯ ಘೋಷಗಳಿಂದ ಎಚ್ಚರಿಸುವ ಪದ್ಧತಿ ಇತ್ತು. ಸಾಮವೇದವನ್ನು ಸಂಗೀತ ರೂಪವಾಗಿ ಯಜ್ಞ ಯಾಗಾದಿಗಳಲ್ಲಿ ಹಾಡುತ್ತಿದ್ದರು. ಆತ್ಮಸಾಕ್ಷಾತ್ಕಾರ ದಾರಿಯಲ್ಲಿ ಸಂಗೀತದ ಪ್ರಭಾವ ಅದರ ಪರಿಣಾಮ ಅತಿಗಾಢವಾದದ್ದು. ಭಕ್ತರ ಜೀವನದಲ್ಲಿ ಭಗವಂತನಾಮ ಸಂಕೀರ್ತನೆಯೇ ಸಾಕ್ಷಾತ್ಕಾರದ ಒಂದು ದಿವ್ಯ ಸೋಪಾನ. ಮನಸ್ಸನ್ನು ಧರ್ಮದ ಕಡೆಗೆ, ಪಾರಮಾರ್ಥಿಕದ ಕಡೆಗೆ ಒಯ್ಯಲು ಸಂಗೀತ ಅತ್ಯಂತ ಸಹಕಾರಿ.

ಶೀಲ : ನವರಸ ಭರಿತವಾದ ನೃತ್ಯಗೀತವೂ ಸಂಗೀತದ ರೂಪ. ಸಂಗೀತವಿಲ್ಲದೆ ನೃತ್ಯವೇ ಇಲ್ಲ. ನೃತ್ಯವೆಂದರೆ ಅಭಿನಯ ಪೂರ್ಣವಾದ ಸಂಗೀತವೆನ್ನಬಹುದು. ಉತ್ಸವ ಮೂರ್ತಿಯ ಮೆರವಣಿಗೆಯಲ್ಲಂತೂ ನಾದಸ್ವರವಿಲ್ಲದ ಮೆರವಣಿಗೆಯೇ ಇಲ್ಲ. ಸಂಗೀತವಿಲ್ಲದ ಮಂಗಳಕಾರ್ಯ ಇಲ್ಲ. ಹಸೆಮಣೆಗೆ ಕೂರಿಸಿದರೆ ಒಂದು ಹಾಡು, ಆರತಿ ಎತ್ತಿದರೆ ಮತ್ತೊಂದು ಹಾಡು. ಮದುವೆ ಸಂಪ್ರದಾಯಗಳಲ್ಲಂತೂ ಲೆಖ್ಖವಿಲ್ಲದಷ್ಟು ಹಾಡು. ಮೋಜಿಗಾಗಿ ಬೀಗರ ಹಾಸ್ಯದ ಹಾಡುಗಳು. ಉರುಟಣೆ, ಉಯ್ಯಾಲೆ, ಚೆಂಡಾಡಿ, ನಾಗೋಲಿ ಶಾಸ್ತ್ರದ್ದು, ಬಾಗಿಲ ತಡೆದದ್ದು ಇತ್ಯಾದಿ ಹಾಡಿಲ್ಲದೆ ಯಾವ ಕೈಂಕರ್ಯವೂ ನಡೆಯುವುದೇ ಇಲ್ಲವೆನ್ನುವಷ್ಟು. ಇದರಿಂದ ಮಾನವ ಕೂತಲ್ಲಿ ಹಾಡು, ನಿಂತಲ್ಲಿ ಹಾಡು ಅವನ ಉಸಿರುಸಿರೂ ಹಾಡೆ. ಮಾನವ ಬದುಕೇ ಒಂದು ಸುಂದರ ಸುಮಧುರ ಹಾಡಾಗಿದೆ. "ಸಂಗೀತಂ ಮೋಹಿನೀ ರೂಪಂ" ಎಂದು ಸಂಗೀತವನ್ನು ಹೆಣ್ಣಿಗೆ ಹೋಲಿಸಿದ್ದಾರೆ.

ರಾಮು : ಮಾನವನ ಬಾಳಿನುದ್ದಕ್ಕೂ ಸಂಗೀತ ಬದುಕಿಗೊಂದು ಅರ್ಥನೀಡುತ್ತದೆ. ಸಾರ್ಥಕ್ಯ ಭಾವವನ್ನು ತಂದುಕೊಡುತ್ತದೆ. ಮಾನವ ಹಾಡುತ್ತಲೇ ಇರುತ್ತಾನೆ. ಅವನ ಬದುಕಿನಲ್ಲಿ ಸಂಗೀತ ರಸವಾಹಿನಿ ತುಂಬುತ್ತಲೇ ಇರುತ್ತದೆ. ಇದು ಸಹಜ ಸಂತೋಷ ಸಂತೃಪ್ತಿ ನೀಡುತ್ತಲೇ ಇರುತ್ತದೆ. ಸಂಗೀತವೆನ್ನುವುದೊಂದು ಇಲ್ಲದಿದ್ದರೆ ಬದುಕು ಎಷ್ಟು ಬರಡಾಗುತ್ತಿತ್ತು ಎನಿಸುತ್ತದೆ. ಸಂಗೀತವೇ ಬೇಡವೆನ್ನುವವರು ಜೀವನದ ಅತಿ ಮಧುರ ಕ್ಷಣಗಳನ್ನು ಕಳೆದುಕೊಳ್ಳುವವರು. ನಾಟ್ಯ, ಚಿತ್ರಕಲೆ, ಶಿಲ್ಪಕಲೆ, ನಟನೆ, ಕವಿತೆ ಮುಂತಾದ ಕಲೆಗಳು ಜಾತಿ, ಮತ, ಭಾಷೆ, ದೇಶ, ಸಂಸ್ಕೃತಿ ಈ ಎಲ್ಲಾ ಸಂಕೇತಗಳ ಮಿತಿಯನ್ನಾಧರಿಸಿ ರೂಪಗೊಂಡ ಕಲೆಗಳು. ಇವುಗಳಿಗೆ ಆನಂದಾನುಭೂತಿಗೆ ಒಂದು ಮಿತಿ ಇದೆ. ಆದರೆ ಈ ಎಲ್ಲ ಸಂಕೋಲೆಗಳನ್ನೂ ಹರಿದುಕೊಂಡು ಹೃದಯ ತಂತಿ ಮೀಟಬಲ್ಲಂಥ ಸಂಗೀತ ಕಲೆಯೊಂದೆ ಕಲೆಗಳಲ್ಲೆಲ್ಲ ರಾಜಕಲೆ. ಕಾರಣ ನಾದಕ್ಕೆ ಜಾತಿ, ಮತ, ದೇಶ, ಭಾಷೆ ಸಂಸ್ಕೃತಿಗಳಿಲ್ಲ. ಇಂಥ ಈ ದಿವ್ಯ ಸಂಗೀತದ ತೆರೆಗಳಿಗೆ ನಮ್ಮ ಕಿವಿದರೆಗಳು ಎಂದೆಂದೂ ತೆರೆದಿರಲಿ. ಈ ನಾದದ ಬಲದಿಂದ ಬಾಳು ತುಂಬಿ ಬರಲಿ. ಬದುಕು ಸಾರ್ಥಕವಾಗಲಿ.



# 4. ಸಂಗೀತದ ಶಾಸ್ತ್ರದ ಸೌರಭ !

ಅನೇಕ ಚಲನ ಚಿತ್ರಗಳ ಸುಮಧುರ ಹಾಡುಗಳನ್ನು ಈ ವಾರದ ಸಂಗೀತ ಸೌರಭದಲ್ಲಿ ಶೀಲ ಹಾಡಿ ಅವಳ ಕಂಠ ಮಾಧುರ್ಯವನ್ನು ಪ್ರದರ್ಶಿಸಬೇಕೆಂದು ಡಾ॥ ವ್ಯಾಸರಾಯರು ಸಲಹೆಯಿತ್ತರು. ಆಗ ಶೀಲ ರಾಮುವಿಗೆ ತನ್ನ ಸುಮಧುರ ಸಂದೇಶವೋ ಎಂಬಂತೆ 'ಅಮರ ಶಿಲ್ಪಿ ಜಕಣಾಚಾರಿ' ಚಲನಚಿತ್ರದ ಈ ಹಾಡನ್ನು ಅದ್ಭುತವಾಗಿ ಹಾಡತೊಡಗಿದಳು.

ಆಗ ಅವಳ ಕಂಠದಿಂದ ಮಧುರ ರಾಗಗಳ ಅದ್ಭುತ ಧ್ವನಿ ಹೊರಕ್ಕೊಮ್ಮಿತು. ಕೇಳುತ್ತಿದ್ದವರ ಮನಸ್ಸು ಪುಳಕಿತಗೊಂಡಿತು.

ಚೆಲುವಾಂತ ಚೆನ್ನಿಗನೇ ನಲಿದಾಡು ಬಾ ।
ಶೃಂಗಾರ ಶಿಲೆಯೊಡನೆ ಕುಣಿದಾಡು ಬಾರಾ ।
ತಾಳಮೇಳದೊಳು ಕಲೆಯುವ ಬಾರಾ ।
ಗಾಳಿ ಗಂಧದೊಳು ಸೇರುವ ಬಾರಾ ।
ಭಾವ ಭಂಗಿಯೊಳು ಬೆರೆಯುವ ಬಾರ ।
ಪ್ರೇಮ ನಂದನ ನೀ ತಾರ ।
..........................................................
..........................................................
ಚಂದ್ರ ತಾರೆಗಳ ಸೇರಿ ಕೇಳಿದೆ ಎಲ್ಲಡಗಿರುವೆ ಬಳಿ ಸಾರಾ ।
ಕಾರುಮೋಡವು ಕೊಡುತಲಿರಲು ।
ಘಲಿಘಲಿ ಕುಣಿವಾ ನೀಲಿಗಗನದೊಳು ।
ನಿನ್ನಲ್ಲಿ ಪರವಶಳಾಗಿಹೆ ನೀ ದಯವ ತೋರಿ ಬೇಗನೇ ಬೇಗನೆ ಬಾರಾ ॥

ಚಲನಚಿತ್ರದ ಈ ಹಾಡನ್ನು ಹಾಡಿದಾಗ ಅವಳ ಕಂಠದಲ್ಲಿ ಮಾಧುರ್ಯವಿದ್ದದ್ದು ಮಾತ್ರವಲ್ಲದೇ, ಸಂಗೀತದಲ್ಲಿ ಅವಳ ಪಾಂಡಿತ್ಯವೂ ಅಸದೃಶವಾಗಿತ್ತು. ನಾದಮಾಧುರ್ಯಕ್ಕೆ ಅರ್ಥದ ಚಾರುತ್ವವೂ ಕಾರಣವಾಗಿ ಅದನ್ನು ಅಭಿನಯ ಸಹಿತವಾಗಿ ಸೊಗಸಾಗಿ ಹಾಡಿದಾಗ ಅದರ ನಾದಕ್ಕೂ ಲಯಕ್ಕೂ ಅಲ್ಲಿದ್ದವರೆಲ್ಲ ಮಾರು ಹೋಗಿ ಬೆರಗಾಗಿ ಮರುಳಾಗಿಬಿಟ್ಟರು. ಹಾಡುವಾಗಿನ ಸರಳ ಭಂಗಿ, ಆ ಕಂಠಸ್ವರದ ಸ್ವಚ್ಛಂದ ಸರಳಗತಿ, ಮುಖದಲ್ಲಿ ತೇಲಿಸುವ ಹತ್ತಾರು ಅಪೂರ್ವ ಭಾವನೆಗಳೊಂದಿಗೆ ತನ್ನ ಸಂಗೀತದ ಅಮೃತ ಸೋನೆಯನ್ನು ಶೀಲ ಸುರಿಸಿ ಅಲ್ಲಿದ್ದವರ ಮನಸ್ಸನ್ನು ಭಾವ ಸಮಾಧಿಗೆ ಒಯ್ದು ಮುಗ್ಧಗೊಳಿಸಿದಳು. ಶೀಲ ಹಾಡಿದಾಗ ಅವಳ ಹಾಡನ್ನು ಕೇಳಿದವರ ಕಿವಿ ತಣಿಯುತ್ತಿತ್ತು. ಮನಸ್ಸು ಕುಣಿಯುತ್ತಿತ್ತು. ಸಂಗೀತ ಹೀಗೆ ಪ್ರತಿ ನಿಮಿಷವೂ ಭಾವಸಮಾಧಿಯಲ್ಲಿ ಮುಳುಗಿಸಿ ಹೃದಯವನ್ನು ಹರಿಸಬಲ್ಲದೆಂಬುದನ್ನು ಮೊದಲೇ ಅರಿತಿದ್ದ ರಾಮುವಿಗೆ ಶೀಲಳ ಹಾಡಿನ ವೈಖರಿ ಬಗ್ಗೆ ಅಭಿಮಾನ ತುಳುಕಾಡಿತು. ಸರಸ್ವತಿಯೇ ತನ್ನೆರಡು ಕೋಮಲ ಬಾಹುಗಳಿಂದ ಆಕೆಯನ್ನು ಆಶೀರ್ವದಿಸಿದಂತೆ ಕಂಡಿತು. ಸಂಗೀತ, ಸಾಹಿತ್ಯ, ನೃತ್ಯ, ಚಿತ್ರ ಅಭಿನಯಗಳಿಂದ ಜನ ಅದೆಷ್ಟು ಸಂತಸಪಡುತ್ತಾರೆ ಎಂದೆನಿಸಿತು. ಆಗ ರಾಮು ಶೀಲಳನ್ನು 'ಹಣ್ಣೆಲೆ ಚಿಗುರಿದಾಗ' ಚಲನಚಿತ್ರದ ಈ ಹಾಡನ್ನು ಹೇಳಲು ಪ್ರೇರೇಪಿಸಿದ. ಆಗ ಶೀಲ ಆ ಹಾಡನ್ನು ಪ್ರಾರಂಭಿಸಿದಳು. ರಾಮು ಅವಳ ಭಾವ, ರಾಗ, ತಾಳ, ಸ್ವರ ಪದಗಳ ಮೇಲೆ ಕಣ್ಣಿಟ್ಟನು.

ಹೂವು ಚೆಲುವೆಲ್ಲಾ ನಂದೆಂದಿತು ।
ಹೆಣ್ಣು ಹೂವು ಮುಡಿದು ಚೆಲುವೇ ತಾನೆಂದಿತು ।
ಕೋಗಿಲೆಯು ಗಾನದಲ್ಲಿ ತಾನೇ ದೊರೆಯೆಂದಿತು ।
ಕೊಳಲಿನ ದನಿ ವೀಣೆಯ ದನಿ ಇದೆಯೆಂದಿತು ।
..........................................................
..........................................................
ನೀಡುವೆ ಮಳೆ ತೊಳೆಯುವೆ ಕೊಳೆ ಸಮನಾರಿದೆಯೆಂದಿತು ॥
ಹೆಣ್ಣು ಪಾಪ ತೊಳೆವ ಸುರಗಂಗೆ ಹೆಣ್ಣೆಂದಿತು ।

ಸಭಿಕರು ಒಂದಾದ ಮೇಲೆ ಮತ್ತೊಂದು ಚಲನ ಚಿತ್ರದ ಹಾಡುಗಳನ್ನು ಕೇಳಿದಾಗ ಅವರ ಕೋರಿಕೆ ಮೇರೆಗೆ ಅನೇಕ ಹಾಡುಗಳನ್ನು ವಿವಿಧ ರಾಗಗಳಲ್ಲಿ ಹಾಡುತ್ತಾ ಹಾಡುತ್ತಾ ಗಾನಸುಧೆಯ ಹೊನಲನ್ನೇ ಹರಿಸಿದಳು. ಅವಳು

ಹಾಡುತ್ತಿದ್ದರೆ ಅವಳ ಜಾಣತನ, ಪ್ರತಿಭೆ, ಉಕ್ಕುತ್ತಿರುವಂತೆ ಪ್ರಕಾಶಿಸಿತು. ಸರಿಗಮಪದನಿ ಎಂಬ ಸಪ್ತಸ್ವರಗಳ ಜತಿಯನ್ನು ತಿಳಿದು ನಿಯಮಬದ್ಧವಾಗಿ ಹಾಡಿದಳು. ಆಯಾ ರಾಗಗಳಲ್ಲಿ ಮಂದ್ರ, ಮಧ್ಯ, ತಾರ ಎಂಬ ಸ್ಥಾನಾನುಗುಣಗಳನ್ನು ಅರಿತು ಅವುಗಳಿಗೆ ಅನುಗುಣವಾಗಿ ಸೊಗಸಾಗಿ, ಹೃದಯಂಗಮವಾಗಿ ಹಾಡಿ, ಸಂಗೀತ ಸುಧೆಯ ಹೊನಲನ್ನು ಶೀಲ ಹರಿಸಿದಳು, ಅತ್ಯಂತ ಜೋಕೆಯಿಂದ ಬಹಳ ಎಚ್ಚರಿಕೆಯಿಂದ ಸ್ವರಗಳ ಜೋಡಣೆ, ಕಾಲವನ್ನು ಅತಿಕ್ರಮಿಸುವ ಪ್ರಮಾಣ, ಲಲಿತವಾಗಿ ಸ್ವರವನ್ನು ಕಂಪಿಸುವುದು, ಹಾಡುವಿಕೆಯ ಆನಂದದಲ್ಲಿ ತಲ್ಲೀನಳಾಗುತ್ತ ಸ್ತಬ್ಧಳಾಗುವುದು, ಬೆಡಗು ಬಿನ್ನಾಣಗಳನ್ನು ಮೇಳಯಿಸಿ ಲಯಬದ್ಧವಾಗಿ ಹಾಡುತ್ತ, ಹಾಡುಗಾರಿಕೆಯಲ್ಲಿ ತನ್ನ ಕೌಶಲ್ಯ ತೋರಿಸಿ ಎಲ್ಲರ ಮೆಚ್ಚುಗೆಗೆ ಪಾತ್ರಳಾದಳು. ಸಂಗೀತ ಶಾಸ್ತ್ರದ ಆರೋಹಣ, ಅವರೋಹಣ, ವ್ಯಾಪ್ತಿ ಮೊದಲಾದ ಎಲ್ಲ ಅಂಗಗಳನ್ನು ತಿಳಿದು ಮೃದು ಮಧುರವಾಗಿ ಗಾಂಭೀರ್ಯದಿಂದ ಹೃದಯಂಗಮವಾಗಿ, ಮನೋಹರವಾಗಿ ಗಾನಮಾಧುರ್ಯವನ್ನು ಬೀರುತ್ತ ಶೀಲ ಹಾಡಿದಳು. ರಾಗೋಲ್ಲಾಸದಿಂದ ಶ್ರುತಿ, ತಾಳಬದ್ಧವಾಗಿ ಹಾಡಿದ ಅವಳ ನಾದೋಪಾಸನೆಯು ಸಾಕ್ಷಾತ್ ಗಾನದೇವತೆಯ ಗಾನ ಮಾಧುರ್ಯದ ತನಿರಸದಂತೆ ಸೊಗಸಾಗಿ ಕಿವಿಗಳಿಗೆ ಅಮೃತರಸದಂತೆ ಇಂಪಾಗಿತ್ತು. ಅಲ್ಲಿದ್ದವರೆಲ್ಲ ನಾದ ಮಾಧುರ್ಯ ಸರೋವರದಲ್ಲಿ ನಲಿದಾಡುತ್ತಿದ್ದಾಗ, ರಾಮು ಆಲಿಸಿ, ಆನಂದಪಟ್ಟು ಆಶ್ಚರ್ಯಪಟ್ಟು ಆನಂದಭರಿತನಾಗಿ "ಒಪ್ಪಿದೆ ಶೀಲ, ನೀನು ಪ್ರಾಜ್ಞಳು. ಶ್ರದ್ಧೆಯೆಂದರೆ ಹೀಗೆ ಇರಬೇಕು. ನಿನ್ನ ಭಾಷಾ ಉಚ್ಚಾರಣೆ, ಸಾಹಿತ್ಯಜ್ಞಾನ ಚೆನ್ನಾಗಿದೆ. ವ್ಯಾಕರಣ ಶುದ್ಧವಾಗಿದೆ. ತಾವರೆ ಹೂವಿನಂತೆ ಹೊಳೆಯುವ ನಿನ್ನ ಮುಖದಲ್ಲಿ ಇಂದು ವಾಣಿ, ಪದ್ಮೆ, ಉಮೆ ಈ ಮೂವರ ಕಳೆಗಳು ತುಂಬಿವೆ''. ಎಂದು ಬಹು ವಾತ್ಸಲ್ಯದಿಂದ ಬಹಳವಾಗಿ ಪ್ರಶಂಸಿಸಿ, ಮನಸ್ಸಿನಲ್ಲೇ ಶಹಭಾಷ್‌ಗಿರಿ ಕೊಟ್ಟನು.

ಡಾ॥ವ್ಯಾಸರಾಯರು ಅವರು ಸಂಗಡಿಗರು ತಮ್ಮ ಹೆಂಡತಿ, ಮಕ್ಕಳು, ಪರಿವಾರದವರ ಜೊತೆ ಈ ಕಾರ್ಯಕ್ರಮಕ್ಕೆ ಆಗಮಿಸಿದ್ದರು. ಸಂಗೀತಗಾರರ ಕುಟುಂಬಕ್ಕೆ ಸೇರಿದ ಅವರೆಲ್ಲ ಶೀಲಳ ನಾದ ಮಾಧುರ್ಯದ ಸರೋವರದಲ್ಲಿ ನಲಿದಾಡಿ ಆನಂದಭರಿತರಾಗಿ "ತುಂಬಾ ಚೆನ್ನಾಗಿ ಹಾಡಿದಿರಿ'' ಎಂದು ಶೀಲಳನ್ನು ಅಭಿನಂದಿಸಿದರು. ಜೊತೆಗೆ ಈ ಸಂಗೀತ ಚರ್ಚಾ ಕಾರ್ಯಕ್ರಮಗಳನ್ನು ಮುಂದುವರಿಸುವಂತೆ ರಾಮು ಶೀಲರನ್ನು ಒತ್ತಾಯಿಸಿದರು. ಸಂಗೀತದ ಎಲ್ಲ ಪ್ರಕಾರಗಳ ಬಗ್ಗೆ ಮುಂದಿನ ವಾರಗಳಲ್ಲಿ ನೀಡಬಹುದಾದ ಚರ್ಚಾ ಕಾರ್ಯಕ್ರಮದ ಪಟ್ಟಿಯನ್ನು ಡಾ॥ವ್ಯಾಸರಾಯರ ಮೂಲಕ ರಾಮು ಶೀಲಳಿಗೆ ಸಲ್ಲಿಸಿದರು. ಆ ಪಟ್ಟಿಯಲ್ಲಿ ಸಂಗೀತ ವಿಷಯಗಳಾದ ನವರಸಗಳು, ಸಂಗೀತದ ಉಗಮ - ಸಾಹಿತ್ಯದ ಆಗಮ, ಜಾನಪದ ಗೀತೆಗಳು, ಸುಗಮ ಸಂಗೀತಗಳು, ವಿಶ್ವ ಸಂಗೀತ ಪದ್ಧತಿಗಳು, ಕರ್ನಾಟಕ ಶಾಸ್ತ್ರೀಯ ಸಂಗೀತ, ಸಪ್ತಸ್ವರಗಳು, ರಾಗ, ತಾಳ ಮತ್ತು ಲಯ, ನಾದ, ಸಂಗೀತ ಶಾಸ್ತ್ರ ರಚನೆಗಳು - ರಚನಾಕಾರರು, ಸಂಗೀತ ವಾದ್ಯಗಳು - ವಾದ್ಯಕಾರರು, ನೃತ್ಯ ಈ ಎಲ್ಲಾ ವಿಷಯಗಳನ್ನು ಸೂಚಿಸಿದರು. ಆ ಪಟ್ಟಿಯ ವಿಷಯಗಳನ್ನು ಪರಿಶೀಲಿಸಿದ ಶೀಲ - ರಾಮು ಅದೇ ರೀತಿ ನಡೆಸಿಕೊಡಲು ಒಪ್ಪಿದಾಗ ಡಾ॥ ವ್ಯಾಸರಾಯರ ಪರಿವಾರ ಆನಂದದ ಕಡಲಲ್ಲಿ ಮುಳುಗಿದರು.

ರಾಮು - ಶೀಲ ಈ ಕಾರ್ಯಕ್ರಮದ ಬಗ್ಗೆ ಚರ್ಚಿಸಿ ಇದರ ರೂಪುರೇಷಗಳನ್ನು ಸಿದ್ಧಪಡಿಸಿದರು. ಅದರಂತೆ ಸಂಗೀತದ ಕಾರ್ಯಕ್ರಮಗಳು ಕ್ರಮವಾಗಿ ಪ್ರತಿ ಭಾನುವಾರ ಮುಂದುವರಿಯುತ್ತಿದ್ದುವು.



# 5. ನವರಸಗಳು

ಶೀಲ : 'ನವರಸ'ಗಳೆಂದರೇನು ?

ರಾಮು : ಲಲಿತ ಕಲೆಗಳಾದ ಸಂಗೀತ, ಸಾಹಿತ್ಯ, ನೃತ್ಯ, ಶಿಲ್ಪ, ಚಿತ್ರ, ನಾಟಕಗಳಲ್ಲಿ ಮೂಡಿಬರುವ ಒಂಬತ್ತು ವಿಧವಾದ ರಸಾನುಭವಗಳನ್ನು ನವರಸಗಳೆಂದು ಕರೆಯುತ್ತಾರೆ.

ಶೀಲ : ನವರಸಗಳಾವುವು ? ಅವು ಎಷ್ಟುವಿಧ ?

ರಾಮು : ಶೃಂಗಾರ ರಸ, ಹಾಸ್ಯರಸ, ವೀರರಸ, ಕರುಣರಸ, ಶಾಂತರಸ - ಈ ಐದು ರಸಗಳನ್ನು ಉತ್ಸಾಹಕರ ರಸಗಳೆಂದು ಪರಿಗಣಿಸಿದ್ದಾರೆ.

ಭಯಾನಕರಸ, ಬೀಭತ್ಸರಸ, ರೌದ್ರರಸ, ಅದ್ಭುತರಸ - ಈ ನಾಲ್ಕು ರಸಗಳನ್ನು ನಿರುತ್ಸಾಹಕರ ರಸಗಳೆಂದು ಪರಿಗಣಿಸಿದ್ದಾರೆ.

ಮುಂದೆ ಭಕ್ತಿರಸ, ಗಾನರಸ, ಆನಂದರಸಗಳನ್ನು ಸಂಗೀತದಲ್ಲಿ ಸೇರ್ಪಡಿಸಿದ್ದಾರೆ.

ಶೀಲ : 'ರಸ'ವೆಂದರೇನು ?

ರಾಮು : ಲಲಿತ ಕಲೆಗಳನ್ನು ಮಾನವನು ಆಸ್ವಾದಿಸುವಾಗ ಉಂಟಾಗುವ ಅನುಭವವೇ ರಸ. ಕಲಾರಸಿಕನೂ ಕಲೆಯೂ ಒಂದಾದಾಗ ಕಲೆಯ ಸಾರವೇ ರಸವಾಗಿ ಪರಿಣಮಿಸುತ್ತದೆ.

ಶೀಲ : ''ರಸಾನುಭವ'' ಎಂದರೇನು ?

ರಾಮು : ರಸಪ್ರತೀತಿಯಲ್ಲಿ ಚೈತನ್ಯ ಮತ್ತು ಅಂತಃಕರಣಗಳಾದ ಜ್ಞಾನ, ಮನಸ್ಸು, ಬುದ್ಧಿ, ಚಿತ್ತ, ಅಹಂಕಾರಗಳು ಒಂದಾದಾಗ ಬೇರೆ ಬೇರೆ ವೃತ್ತಿಗಳು ಹೊರಹೊಮ್ಮಿ ಆತ್ಮನು ಮರೆಯಾಗಿ ವೃತ್ತಿಗಳೇ ಮನಸ್ಸನ್ನು ಆವರಿಸುತ್ತವೆ. ಇಂತಹ ಅನುಭವವೇ ರಸಾನುಭವ.

ಉದಾಹರಣೆಗೆ : ಒಂದು ಚಿತ್ರವನ್ನು ವೀಕ್ಷಿಸುವಾಗ ಅದರ ಹಿಂಬದಿಯ ಗೋಡೆಯು ಮರೆಯಾಗಿ ಚಿತ್ರವೇ ಗೋಚರಿಸಿ ಮನಸ್ಸನ್ನು ಆ ಕ್ಷಣದಲ್ಲಿ ಲೀನವಾಗಿಸುತ್ತದೆ.

ಲಲಿತಕಲೆಗಳ ಆಸ್ವಾದನೆಯೂ ಮಾನವರನ್ನು ತನ್ನಿರುವನ್ನೇ ಮರೆತು ಆ ಕಲೆಯಲ್ಲಿ ಲೀನವಾಗುವಂತೆ ಮಾಡಿ, ತನ್ಮಯತೆಯನ್ನು ಉಂಟುಮಾಡಿ ಕಲಾರಸಿಕನೂ ಕಲೆಯು ಒಂದಾಗಿ ಭಾವವು ಅರಿವಿಗೆ ಬಂದು ಆಸ್ವಾದನೆಗೆ ಸಂದು, ಕಲೆಯ ಸಾರವೇ ರಸವಾಗಿ ಪರಿಣಮಿಸಿ ಸನ್ನಿವೇಶಕ್ಕನುಗುಣವಾದ ರಸವನ್ನಿತ್ತು, ಮನಸ್ಸು ಮತ್ತು ಆತ್ಮ ಚೈತನ್ಯ ಒಂದಾಗಿ ಹೃದ್ಗತವಾಗಿ ಆನಂದಾನುಭವವಾಗಿ ಆನಂದಿಸುವಂತೆ ಮಾಡುತ್ತವೆ.

ಶೀಲ : ರಸಾನುಭವದಿಂದ ಪ್ರಯೋಜನವೇನು ?

ರಾಮು : ರಸಾನುಭವದಿಂದ ಆನಂದ ಪ್ರಾಪ್ತಿಯಾಗುತ್ತದೆ. ಮಾನವರು ತಮ್ಮ ಇರುವಿಕೆಯನ್ನು ಮರೆತು ಆನಂದದಲ್ಲಿ ಮುಳುಗುವುದು ಬ್ರಹ್ಮಾನಂದ. ಇಂತಹ ಅನುಭವಗಳು ಲಲಿತ ಕಲೆಗಳಿಂದ ಉಂಟಾದಾಗ ಅದನ್ನೇ ರಸ ನಿಷ್ಪತ್ತಿಯೆಂದು, ಬ್ರಹ್ಮಾನಂದ ಸಹೋದರನೆಂದು, ಚೈತನ್ಯದಿಂದ ಕೂಡಿದ ಅಂತಃಕರಣ ಧರ್ಮವೆಂದು, ಆತ್ಮ ಚೈತನ್ಯ ವೆಂದು ಕರೆಯುತ್ತಾರೆ. ಅಂದರೆ ರಸಾನುಭವಕ್ಕೂ ಆತ್ಮಾನುಭವಕ್ಕೂ ನಿಕಟವಾದ ಸಂಪರ್ಕವಿದೆ.

ಶೀಲ : ಮಾನವರು ರಸಾನುಭವಿಯಾಗದಿರಲು ಸಾಧ್ಯವೇ ?

ರಾಮು : ಸಾಧ್ಯವಿಲ್ಲ. ಮಾನವರು ಚಿತ್ತವೃತ್ತಿಗಳಿಂದ ಕೂಡಿರುತ್ತಾರೆ. ಚಿತ್ತವೃತ್ತಿಗಳಿಲ್ಲದಿದ್ದರೆ ಮಾನವರು ಜನ್ಮ ಪಡೆಯುವುದಿಲ್ಲ. ಆದುದರಿಂದ ಚಿತ್ತವೃತ್ತಿಗಳಿಂದ ಕೂಡಿದ ಮಾನವರು ರಸಾನುಭವಿಗಳಾಗದೆ ಇರಲು ಸಾಧ್ಯವಿಲ್ಲ.

ಶೀಲ : ಯಾವ ಯಾವ ಹಿನ್ನೆಲೆಗಳನ್ನು ಅನುಸರಿಸಿ ರಸೋತ್ಪಾದನೆಯಾಗುತ್ತದೆ ?

ರಾಮು : ರಸೋತ್ಪಾದನೆ ಅಂದಿನ ಮಾನಸಿಕ ಹಿನ್ನೆಲೆ, ಅಲ್ಲಿನ ವಾತಾವರಣ, ಅಭಿರುಚಿ ಮತ್ತು ತೆರೆದ ಹೃದಯದಲ್ಲಡಗಿರುವ ಭಾವನೆಗಳನ್ನು ಅನುಸರಿಸಿ ಉತ್ಪತ್ತಿಯಾಗುತ್ತದೆ.

ಶೀಲ : ಷಡ್ರಸ ಮತ್ತು ನವರಸಗಳಿಗೂ ಯಾವ ರೀತಿ ಹೋಲಿಕೆ ವ್ಯತ್ಯಾಸಗಳಿವೆ ?

ರಾಮು : ಮಾನವನು ಸಂತೋಷ ಮತ್ತು ಆನಂದದಿಂದಿರಲೂ ಆಸ್ವಾದಿಸುವ ಹಾಗೂ ಆಸ್ವಾದಿಸಲು ತವಕಪಡುವ ಸಹಜ ಪ್ರವೃತ್ತಿಯಿಂದ ಕೂಡಿರುತ್ತಾನೆ. ಷಡ್ರಸಗಳು ಆರು : ಸಿಹಿ, ಕಹಿ, ಹುಳಿ, ಉಪ್ಪು, ಖಾರ ಮತ್ತು ಒಗರು. ಖಾದ್ಯ ಪದಾರ್ಥಗಳನ್ನು ಸವಿದು ರುಚಿಯನ್ನು ಅನುಭವಿಸಿ ಎಲ್ಲರೂ ಸಾಮಾನ್ಯವಾಗಿ ರಸಾನುಭವದ ಮೂಲಕ ಆನಂದವನ್ನು ಪಡೆಯುತ್ತಾರೆ. ಈ ಖಾದ್ಯದ ರಸ ಹಾಗೂ ರುಚಿ ಮನಸ್ಸಿನಲ್ಲಿ ಅಚ್ಚೊತ್ತಿ ಬಹುಕಾಲ ನೆನಪಿನಲ್ಲಿ ಉಳಿದರೂ ಸಹ ಕ್ಷಣಿಕ ಆನಂದವನ್ನು ಕೊಡಬಲ್ಲದು.

ಲಲಿತ ಕಲೆಗಳ ಆಸ್ವಾದನೆಯಿಂದ ಸ್ವರೂಪಾನಂದ ಉಂಟಾಗಿ ಚಿದಾನಂದ ಪ್ರಾಪ್ತಿಯಾಗುತ್ತದೆ. ಅಂದರೆ ಲಲಿತ ಕಲೆಗಳು ಸೂಕ್ಷ್ಮವಾದ ಹೃದಯದ ಗುಹೆಯಲ್ಲಿರುವಂತ, ಯಾವ ವೃತ್ತಿಯೂ, ವಿಕಾರವೂ, ವೈವಿಧ್ಯವೂ ಇರದೆ ಇರುವ ಚಿದಾಕಾಶದ ಆನಂದ ಸ್ವರೂಪವನ್ನು ಉಂಟುಮಾಡಿ ಸ್ವರೂಪಾನಂದದಿಂದ ಚಿದಾನಂದವನ್ನು ಪಾಪ್ತಿಮಾಡುತ್ತವೆ.

ಶೀಲ : ಕಲೆಯ ಸಾರವು ರಸವಾಗಿ ಪರಿಣಮಿಸಲೂ ಮೂಲ ಆಧಾರವೇನು ?

ರಾಮು : ಸ್ಥಾಯಿ ಭಾವ.

ಶೀಲ : ಸ್ಥಾಯಿ ಭಾವವೆಂದರೇನು ?

ರಾಮು : ಸ್ಥಾಯಿ ಭಾವವೆಂಬುದು ಮನುಷ್ಯನಲ್ಲಿ ನೆಲೆಯಾಗಿನಿಲ್ಲತಕ್ಕ ಭಾವ, ಸ್ಥಾಯಿಭಾವ ಮಾನವರಲ್ಲಿ ವಾಸನಾರೂಪದಲ್ಲಿದ್ದು, ಉದ್ಬೋಧಗೊಂಡು ತನ್ನತನವನ್ನು ಕಳೆದುಕೊಂಡು ಹೃದಯವನ್ನು ತುಂಬುತ್ತವೆ. ಆ ಕ್ಷಣದಲ್ಲಿ ಆ ಕಲೆಯಲ್ಲಿನ ಸ್ಥಾಯಿ ಭಾವವೊಂದೇ ಮನಸ್ಸಿನಲ್ಲಿ ಉಳಿದು, ಪ್ರಪಂಚದ ಉಳಿದೆಲ್ಲವೂ ಮರೆತಂತಾಗಿಬಿಡುತ್ತವೆ. ಹೀಗೆ ಅಭಿವ್ಯಕ್ತವಾಗಿ ಆಸ್ವಾದವಾಗುವ ಭಾವವೇ ರಸವಾಗಿ ಪರಿಣಮಿಸುತ್ತದೆ.

ಈ ರೀತಿ ಸ್ಥಾಯಿ ಭಾವಗಳು ರಸಗಳಾಗಿ ಪರಿವರ್ತನೆಗೊಳ್ಳುತ್ತವೆ. ಈ ಸ್ಥಾಯಿ ಭಾವವು ಸಂದರ್ಭಾನುಸಾರ ಬಂದು ಹೋಗುತ್ತವೆ. ಈ ಸ್ಥಾಯಿ ಭಾವವು ಒಂದು ವಿಧದಲ್ಲಿ ಧ್ಯಾನವೇ ಆಗಿರುತ್ತದೆ.

ಶೀಲ : ಯಾವ ಸಂಯೋಗದಿಂದ ರಸನಿಷ್ಪತ್ತಿಯಾಗುವುದೆಂದು ಭರತನು ಹೇಳುತ್ತಾನೆ ? ವಿವರಣೆಯೇನು ?

ರಾಮು : ವಿಭಾವ, ಅನುಭಾವ, ಸಂಚಾರಿ ಭಾವಗಳ ಸಂಯೋಗದಿಂದ ರಸನಿಷ್ಪತ್ತಿ ಯಾಗುವುದೆಂದು ಭರತನು ಹೇಳುತ್ತಾನೆ. ಭಾವವು ಯಾವುದರಿಂದ ಉಂಟಾಗುತ್ತದೆಯೋ ಅದು ವಿಭಾವ, ಭಾವದಿಂದ ನಡೆಯುವ ಕಾರ್ಯವನ್ನು ಅನುಭಾವ, ಒಂದು ಸ್ಥಾಯಿಭಾವವು ಸಂದರ್ಭಾನುಸಾರ ಬಂದು ಹೋಗುವುದಕ್ಕೆ ಸಂಚಾರಿ ಭಾವವೆನ್ನಲಾಗುತ್ತದೆ.

ಶೀಲ : ನವರಸಗಳಿಗೆ ಹೇಳಿರುವ ನವಸ್ಥಾಯಿ ಭಾವಗಳು ಯಾವವು ?

ರಾಮು : ರತಿ, ಹಾಸ, ಶೋಕ, ಕ್ರೋಧ, ಉತ್ಸಾಹ, ಭಯ, ಜುಗುಪ್ಸೆ, ವಿಸ್ಮಯ ಮತ್ತು ನಿರ್ವೇದಗಳೆಂದು ಒಂಬತ್ತು ಸ್ಥಾಯಿ ಭಾವಗಳಿಗೆ ಒಂಬತ್ತು ರಸಗಳನ್ನು ಹೇಳಲಾಗಿದೆ. ಶೃಂಗಾರಕ್ಕೆಸ್ಥಾಯಿ ಭಾವ ರತಿ

| | | |
|---|---|---|
| ಹಾಸ್ಯಕ್ಕೆ | ಸ್ಥಾಯಿ ಭಾವ | ಹಾಸ |
| ಕರುಣಕ್ಕೆ | ಸ್ಥಾಯಿ ಭಾವ | ಶೋಕ |
| ರೌದ್ರಕ್ಕೆ | ಸ್ಥಾಯಿ ಭಾವ | ಕ್ರೋಧ |
| ವೀರಕ್ಕೆ | ಸ್ಥಾಯಿ ಭಾವ | ಉತ್ಸಾಹ |
| ಭಯಾನಕಕ್ಕೆ | ಸ್ಥಾಯಿ ಭಾವ | ಭಯ |
| ಬೀಭತ್ಸಕ್ಕೆ | ಸ್ಥಾಯಿ ಭಾವ | ಜುಗುಪ್ಸೆ |
| ಅದ್ಭುತಕ್ಕೆ | ಸ್ಥಾಯಿ ಭಾವ | ವಿಸ್ಮಯ |
| ಶಾಂತರಸಕ್ಕೆ | ಸ್ಥಾಯಿ ಭಾವ | ನಿರ್ವೇದ |

ಭಕ್ತಿರಸ ಮತ್ತು ಆನಂದರಸಗಳು ನವರಸಗಳಿಗೆ ಹೊಂದುವುದಿಲ್ಲ. ಏಕೆಂದರೆ ಭಕ್ತಿರಸವು ಪ್ರಾಯೋಗಿಕವಲ್ಲ, ಆನಂದವು ಅನುಭವ ಪ್ರಾಧಾನವಾಗಿ ನವರಸಗಳ ಸಾರವೆನ್ನಬಹುದು.

ಶೀಲ : ನವರಸಗಳು ಲಲಿತ ಕಲೆಗಳಿಂದ ಹೇಗೆ ವ್ಯಕ್ತವಾಗುತ್ತವೆ ?

ರಾಮು : ಸಂಗೀತದಲ್ಲಿ ಧಾತು (ಸ್ವರ ಸಂಯೋಜನೆ) ಮಾತು, ಭಾವ, ವಿವಿಧ ವಾದ್ಯಗಳ ಸಂಯೋಜನೆಯಿಂದ ಮೂಡಿಬರುತ್ತದೆ.

ಸಾಹಿತ್ಯದಲ್ಲಿ ಪದಗಳ ಮೂಲಕ ವ್ಯಕ್ತವಾಗುತ್ತದೆ.

ನೃತ್ಯದಲ್ಲಿ ಕೇವಲ ಅಭಿನಯದ ಮೂಲಕ ನವರಸಗಳನ್ನು ಪ್ರದರ್ಶಿಸಬಹುದು.

ಚಿತ್ರವು ದೃಶ್ಯದ ಮೂಲಕ ವ್ಯಕ್ತವಾಗುತ್ತದೆ.

ನಾಟಕದಲ್ಲಿ ಮಾತುಗಳು ಹಾಗೂ ಅಭಿನಯದ ಮೂಲಕ ನವರಸಗಳನ್ನು ಪ್ರತಿ ಪಾದಿಸಬಹುದು.

ಶೀಲ : ನವರಸಗಳು ಯಾವ ಸಂದರ್ಭಗಳಲ್ಲಿ, ಸನ್ನಿವೇಶಗಳಲ್ಲಿ ಹೊರಹೊಮ್ಮುತ್ತವೆ ?

ರಾಮು : 1. **ಶೃಂಗಾರ ರಸವು 'ರತಿ'ಸ್ಥಾಯಿ ಭಾವದಿಂದ ಉಂಟಾಗುತ್ತದೆ.** ಅಂದರೆ ದುಃಖವನ್ನು ದ್ವೇಷಿಸಿ ಯಾವಾಗಲೂ ಸಂಗ ಸುಖದಲ್ಲೇ ಇರಬೇಕೆಂಬುದು ರತಿ. ಈ ಶೃಂಗಾರ ರಸವು ಸರಸ, ಸಲ್ಲಾಪ, ಸಲುಗೆ, ಸೊಗಸು, ವರವಸಂತದ ವರ್ಣನೆ, ವನ ವಿಹಾರ, ಮುಖ ಶರೀರ ವರ್ಣನೆ, ಹೃದಯದ ಹರುಷ ಹೆಚ್ಚುವ ಸಂಗೀತ, ಅಲಂಕಾರ, ವಿಲಾಸದ ಉಡುಗೆ, ರಸಿಕವೇಷ, ಶೃಂಗಾರ ಚೇಷ್ಟೆ, ಪ್ರಣಯವನ್ನು ವ್ಯಕ್ತಪಡಿಸುವ ಹಾವಭಾವ, ಕಾಮಚೇಷ್ಟೆ, ಹರ್ಷ ಮತ್ತು ಅನುಗ್ರಹಗಳನ್ನು ತೋರಿಸುವಾಗ, ಅಲಂಕೃತವಾಗುವಾಗ ಉಂಟಾಗುತ್ತದೆ.

ಶೃಂಗಾರ ಚೇಷ್ಟೆಗಳು ಅವರವರ ರುಚಿ - ಅಭಿರುಚಿಗಳನ್ನು ಅವರವರ ಬುದ್ಧಿ ಚಾತುರ್ಯಗಳನ್ನು ಅವಲಂಬಿಸಿರುತ್ತವೆ. ಮನಸೆಳೆವ ಹಾವಭಾವ, ಸವಿಯಾದ ಮಾತುಗಾರಿಕೆ, ಕಡೆಗಣ್ಣನೋಟ, ಸಲಿಗೆಯ ಚೇಷ್ಟೆಗಳು, ಪ್ರೇಮ ಪ್ರಸಂಗದ ಆಲಾಪಗಳು, ಸ್ಪರ್ಶ, ಆಲಿಂಗನ, ಚುಂಬನ ಇತ್ಯಾದಿಗಳೆಲ್ಲವು ಶೃಂಗಾರ ಚೇಷ್ಟೆಗಳು. ಸ್ವಚ್ಛತೆ, ಅಚ್ಚುಕಟ್ಟುತನಗಳಿಲ್ಲದೆ ಹೋದರೆ ಸುಂದರಿಯರು ಕೂಡ ತಮ್ಮ ರೂಪ ಸಂಪತ್ತನ್ನು ನಿರರ್ಥಕಗೊಳಿಸುವರು, ಕಳೆದುಕೊಳ್ಳುವರು. ಏಕೆಂದರೆ ಸ್ವಚ್ಛತೆ, ಅಚ್ಚುಕಟ್ಟುತನಗಳು ಸೌಂದರ್ಯವನ್ನು ಹೆಚ್ಚಿಸುತ್ತವೆ. ಜನರ ದೃಷ್ಟಿಯೆಲ್ಲ ಶೃಂಗರಿಸಿ ಕೊಂಡಿರುವ ಹೆಣ್ಣಿನ ಮೇಲೆಯೇ ನಾಟಿರುತ್ತದೆ. ಹೆಣ್ಣು ತಾನು ಸಿಂಗರಿಸಿಕೊಂಡ ಶರೀರವನ್ನು ಸುಗಂಧಮಯ ಮಾಡಿದಾಗಲೇ ಅವಳು ಸುಂದರಿಯೆನ್ನಿಸಿಕೊಳ್ಳುವುದು, ಅವಳದೇ ಆದ ಪ್ರತ್ಯೇಕ ಸುವಾಸನೆಯಿಂದ ಗುರುತಿಸಲ್ಪಡುವುದು. ತೋಟದಲ್ಲಿ ಅರಳಿರುವ ಬಣ್ಣ ಬಣ್ಣದ ಹೂವುಗಳ ಸುವಾಸನೆ ಹೇಗೆ ವಾತಾವರಣವನ್ನು ಪ್ರಫುಲ್ಲತೆಯಾಗಿ ಮಾಡುತ್ತದೋ ಹಾಗೆ ಹೆಣ್ಣಿನ ಶರೀರದಿಂದ ಹೊರಹೊಮ್ಮುವ ಮೋಹಕ ಸುಗಂಧದ ಸುವಾಸನೆ ಕೂಡ ಗಂಡಸರಲ್ಲಿ ಪ್ರಫುಲ್ಲತೆಯನ್ನು ತರುತ್ತದೆ. ಮನಸ್ಸನ್ನು ಸಹಜವಾಗಿ ಅರಳಿಸುತ್ತದೆ. ಆದುದರಿಂದ ಪುರುಷನ ಕಣ್ಣುಗಳು ಅರೆಅರಳಿದ ಚೆಲುವು ಮತ್ತು ನಗುವ ಮೊಗ್ಗುಗಳು ಬೇಕೆನ್ನುವುವು ಬೇಡುವುವು, ಒಂದು ಪುಷ್ಪದ ಮಧುವನ್ನು ಸೇವಿಸಿ, ಇನ್ನೊಂದು ಪುಷ್ಪಕ್ಕೆ ಭ್ರಮರ ಹಾರುವಂತೆ, ಒಬ್ಬ ಸ್ತ್ರೀಯ ಲಾವಣ್ಯವನ್ನು ಅನುಭವಿಸಿ, ಇನ್ನೊಬ್ಬ ಸುಂದರಿ ಕಡೆ ಹೊರಳುವುದು ಪುರುಷನ ಸ್ವಭಾವ. ಶೃಂಗಾರದ ಹಾವಭಾವ, ಚಂಚಲತೆ, ಆಕರ್ಷಣೆ, ಸೌಂದರ್ಯಗಳ ಅಭಾವ ಅವರ ಮನೆಯಲ್ಲಿ ಉಂಟಾದಾಗ ನೂರಾರು ಪುರುಷರು, ನಿರಾಶೆಗೊಂಡು ಅದನ್ನು ಪಡೆಯಲೂ ಶೃಂಗಾರಿಗಳ ಬಾಗಿಲನ್ನು ಬಜಾರಿನಲ್ಲಿ ತಟ್ಟುವರು. ಏಕೆಂದರೆ ಪುರುಷನು ತನ್ನ ಸ್ತ್ರೀಯನ್ನು ಬಣ್ಣದ ಸಿಂಗಾರಿಯ ರೂಪದಲ್ಲಿ ನೋಡಲು ಅಪೇಕ್ಷಿಸುತ್ತಾನೆ, ಅದಕ್ಕಾಗಿ ಸ್ತ್ರೀಯರು ಪುರುಷನ ಭ್ರಮರದ ಅಭಿರುಚಿ ಗಮನಿಸಿ ಶೃಂಗಾರ ಮಾಡಿಕೊಳ್ಳಲು ಕಲಿಯುತ್ತಾರೆ.

2. **ಹಾಸ್ಯರಸವು 'ಹಾಸ'ಸ್ಥಾಯಿ ಭಾವದಿಂದ ಉಂಟಾಗುತ್ತದೆ** ಅಂದರೆ ಸುಖವಾಗಿರುವವನು ತಾನು ದುಃಖಿಯೆಂಬಂತೆ ನಟಿಸುವುದು ಹಾಸ್ಯ. ಈ ಹಾಸ್ಯರಸವು ಬಲುವಿಚಿತ್ರ ವೇಷ ಭಾಷೆ, ಬಲುವಿಕಾರದ ಡಂಭನಡಿಗೆ, ಸಲುಗೆಮಾತು, ಬೆದರುಮನದ ವಿವೇಕ ನುಡಿಗಳು, ತಿಳಿನಗೆಯ ದೃಶ್ಯಗಳು, ಗಳಿಗಳಿಗೆ

ಬಣ್ಣ ತಿರುಗುವ, ಹಾಸ್ಯದ ಚೆಲವು ಹೊದ್ದಿಕೆಗಳು, ನಗೆ ನಗು, ಉಲ್ಲಾಸ, ನಲಿವು, ಸಂತೋಷ, ಅಂಗವಿಕಾರಾದಿ ದರ್ಶನದಿಂದ ಉಂಟಾಗುವ ಚಿತ್ತ ವಿಕಾಸದಿಂದ ಉಂಟಾಗುತ್ತದೆ.

3. **ಕರುಣರಸವು 'ಶೋಕ'ಸ್ಥಾಯಿಭಾವದಿಂದ ಉಂಟಾಗುತ್ತದೆ** ಅಂದರೆ ತನಗೆ ಒದಗಿ ಬಂದಿರುವ ಸುಖಕ್ಕೆ ಕಷ್ಟವು ಎದುರಾಗಬಹುದೆಂದು ಶೋಕಿಸುವುದೇ ಶೋಕ. ಈ ಕರುಣ ರಸವು ನಷ್ಟ ಸುಖಕಾಲದಲ್ಲಿ, ಬಹಳ ಆಪ್ತ, ಇಷ್ಟ ಬಂಧು ವಿಯೋಗದಲ್ಲಿ, ಬಲುಕಷ್ಟ ಪಡುವಲ್ಲಿ, ಶಾಪಕೋಪಕ್ಕೆ ಸಿಕ್ಕಿ ಮರುಗುವಲ್ಲಿ, ಕವಿಹೃದಯ ಭಾವವ ಪುಷ್ಟಿಗೊಳಿಸಲು ರೋದನ ಧ್ವನಿಗೊಟ್ಟು, ಜನರೆದೆ ಕರಗಿಸುವ ಸಂದರ್ಭಗಳಲ್ಲಿ ಉಂಟಾಗುತ್ತದೆ.

4. **ವೀರರಸವು ಉತ್ಸಾಹ ಸ್ಥಾಯಿಭಾವದಿಂದ ಉಂಟಾಗುತ್ತದೆ.** ಅಂದರೆ ಅಪಾಯಗಳನ್ನು ಪರಿಹರಿಸುವುದರಲ್ಲಿ ಉತ್ಸಾಹವನ್ನು ತೋರಿಸುವುದೇ ಉತ್ಸಾಹ. ಈ ಉತ್ಸಾಹ ರಸವು ಸುಖದ ಪರಮೋತ್ಸಾಹದಲ್ಲಿ, ನಿಜ ಶಕ್ತಿ ಯುಕ್ತಿಯ ಬಲದಿ ಕಾರ್ಯಸಕ್ತರಾಗಿ ವಿಜೃಂಭಿಸುವ, ನಿಜ ವಿಜಯ ಸಂಭ್ರಮದಿ, ಮುಖವ ಕೆಂಪೇರುವಲ್ಲಿ, ಸಮರೋನ್ಮುಖ ಸಮಯದಲ್ಲಿ , ಹೂಂಕರಿಸುವಲ್ಲಿ, ಸೆಕೆಯುಸಿರ ರಸಿಕರಿಗೆ ಬರಿಸುವ ಸನ್ನಿವೇಶಗಳಲ್ಲಿ ಉಂಟಾಗುವುದು.

5. **ರೌದ್ರ ರಸವು 'ಕ್ರೋಧ' ಸ್ಥಾಯಿ ಭಾವದಿಂದ ಉಂಟಾಗುತ್ತದೆ.** ಅಂದರೆ ಅಪಾಯಗಳನ್ನು ಕುರಿತು ಕೋಪಿಸಿಕೊಳ್ಳುವುದೇ ಕ್ರೋಧ. ಈ ರೌದ್ರ ರಸವು ಭಯಂಕರ, ಭೀಕರ ಉಗ್ರವಾದ ಸನ್ನಿವೇಶಗಳಲ್ಲಿ ಭೀಕರವಾದ ಯುದ್ಧ, ಖಡ್ಗ ತಿವಿತದ, ಬಾಣ ಹೊಡೆತದ, ನಡುನಡುಗಿಸುವ, ನುಡಿಘಾತದಲ್ಲಿ ಹಾಡುವ, ಘುಡುಘುಡಿಪ ರೋಷದ ಶತೃ ಶಿರವಿಚ್ಛೇದನವಗೈವ, ಕೋಪ ದುಗುಡದ ಸನ್ನಿವೇಶಗಳಲ್ಲಿ ಉಂಟಾಗುತ್ತದೆ.

6. **ಭಯಾನಕ ರಸವು 'ಭಯ' ಸ್ಥಾಯಿಭಾವದಿಂದ ಉಂಟಾಗುತ್ತದೆ.**ಅಂದರೆ ಅಪಾಯವು ಬರುವುದೆಂದು ಹೆದರುವುದು ಭಯ. ಈ ಭಯಾನಕ ರಸವು ಹೆದರಿಕೆ, ಭೀತಿ, ಘೋರ, ಹಿರಿಯರ ಉಪಚಾರದಲ್ಲಿ ಬಲುಭಯದ ಗರಹೊಡೆದು ನಡುನಡುಗಿ ಬೀಳ್ವಲಿ ನಿಜಜೀವ ಹರಣವೈದುವುದೆಂದು ತಿಳಿವಲ್ಲಿ, ಹರಣರಕ್ಷಣೆಯಿಲ್ಲದೆಡೆಯಲ್ಲಿ, ನಿರುತ ಕಂಪನ ನಿರುಕಿಸಿದ ಸಂಕಟ ಪರಂಪರೆಯೊದಗಿದ ಸನ್ನಿವೇಶಗಳಲ್ಲಿ ಉಂಟಾಗುವುದು.

7. **ಬೀಭತ್ಸರಸವು 'ಜುಗುಪ್ಸೆ' ಸ್ಥಾಯಿಭಾವದಿಂದ ಉಂಟಾಗುತ್ತದೆ** ಅಂದರೆ ತಾನು ಮಾಡಿದ್ದು ಚೆನ್ನಾಗಿಲ್ಲವೆಂದು ಹಳಿಯುವುದು ಜುಗುಪ್ಸೆ. ಈ ಬೀಭತ್ಸರವು ಅಸಹ್ಯದ ಅನುಭವ, ಜುಗುಪ್ಸೆಯ ಅನುಭೂತಿ ಹೇಸಿಕೆಯನ್ನುಂಟುಮಾಡುವ, ಮನಕೆ ಬೇಡದ, ತನುವಿಗಾಗದ, ತನಗೆ ರುಚಿಸದ, ನೋಡಲಾಗದ, ನೆನೆಯಲಾಗದ, ವಸ್ತು, ವಾಸನೆ, ರುಚಿ, ಸ್ಪರ್ಶ, ಬೇಸರದ ಧ್ವನಿ, ತೀವ್ರಗತಿಯಲಿ ಮನಮರೆಸುವ ಸನ್ನಿವೇಶಗಳಲ್ಲಿ ಉಂಟಾಗುತ್ತದೆ.

8. **ಅದ್ಭುತ ರಸವು 'ವಿಸ್ಮಯ' ಸ್ಥಾಯಿಭಾವದಿಂದ ಉಂಟಾಗುತ್ತದೆ.** ಅಂದರೆ ತನ್ನ ಮತ್ತು ಇತರರಿಂದ ಆದ ಕಾರ್ಯಗಳ ವಿಚಿತ್ರವಾದ ದರ್ಶನದಿಂದ ವಿಸ್ಮಯ ಪಡುವುದು. ಈ ಅದ್ಭುತ ರಸವು ಅಹಹ !, ಎಂದೆನಿಪದ್ಭುತದ ಪದಸಹಿತಕೂಡಿದ ಸನ್ನಿವೇಶ, ಸಹಜ ಗುಣದ ವಿಶೇಷ ಹೊಗಳಿಕೆ, ಮಹಿಮೆ ವಿಸ್ತಾರದಲ್ಲಿ, ಕೃತಿಪದ ಬಹಳ ರೂಪದ, ನಂಬುವಂದದ ವರ್ಣನೆಗಳಲ್ಲಿ ಸಂದರ್ಭಗಳಲ್ಲಿ ಉಂಟಾಗುತ್ತದೆ.

9. **ಶಾಂತ ರಸವು 'ನಿರ್ವೇದ'ವೆಂಬ ಸ್ಥಾಯಿಭಾವದಿಂದ ಉಂಟಾಗುತ್ತದೆ.** ಅಂದರೆ ತಾನು ಎಲ್ಲವನ್ನು ತ್ಯಾಗ ಮಾಡುವುದರಲ್ಲಿ ವೈರಾಗ್ಯದಿಂದ ಶಾಂತತೆಯನ್ನು ಆರಾಧಿಸಿ ಶಮದಿಂದ ಕೂಡಿರುವ ನೆಮ್ಮದಿಯೇ 'ನಿರ್ವೇದ'. ಈಶಾಂತರಸವು ಸಮಾಧಾನ ಹೊಂದಿದ, ತಳಮಳವಿಲ್ಲದ, ಉಪಶಮನಗೊಂಡ, ಅಂತ್ಯವಾದ, ಕೊನೆಗೊಂಡ, ನಿಶ್ಯಬ್ದವಾದ, ಸದ್ದಿಲ್ಲದ ಸನ್ನಿವೇಶದಲ್ಲಿ ಉಂಟಾಗುತ್ತದೆ. ನಿರ್ವೇದಭಾವದಿಂದ ಸೃಹೃದಯನು ಯೋಗಿಯಂತೆಯೇ ಧ್ಯಾನ ಸಮಾಧಿಯಲ್ಲಿದ್ದು ಬಯಕೆ, ದುಗುಡ, ಅರಿವು ಮುಂತಾದ ಯಾವುದೇ ಸ್ಥಿತಿಯನ್ನು ಹೊಂದಿರದೆ ನೆಮ್ಮದಿಯನ್ನು ಅನುಭವಿಸುತ್ತಾನೆ.

ಶೀಲ : ಯಾವಯಾವ ರಾಗಗಳು ಯಾವ ಯಾವ ರಸಗಳನ್ನು ಮೂಡಿಸುತ್ತವೆ ?

ರಾಮು : 1. **ಶೃಂಗಾರ ರಸವು** - ಕಲ್ಯಾಣಿರಾಗ, ಕಮಚ್‌ರಾಗ ಮತ್ತು ವಸಂತರಾಗಗಳಿಂದ ಮೂಡಿಬರುತ್ತದೆ.

2. **ಹಾಸ್ಯ ರಸವು** - ಕಾಂಭೋಜಿರಾಗ, ಬೇಹಾಗ್ ರಾಗಗಳಲ್ಲಿ ಮೂಡಿಬರುತ್ತದೆ.

3. **ಕರುಣ ರಸವು** - ಕಾನಡರಾಗ, ಭೈರವಿರಾಗ, ಆನಂದ ಭೈರವಿ ರಾಗ, ವರಾಳಿರಾಗ, ಯದುಕುಲ ಕಾಂಭೋಜಿರಾಗಗಳಲ್ಲಿ ಮೂಡಿಬರುತ್ತದೆ.

4. **ರೌದ್ರ ರಸವು** - ಅಠಾಣ ರಾಗ, ಕಮಲಾಮನೋಹರಿ ರಾಗಗಳಲ್ಲಿ ಮೂಡಿಬರುತ್ತದೆ.

5. **ವೀರ ರಸವು** - ಕೇದಾರ ರಾಗ, ನಾಟರಾಗ, ಗಂಭೀರನಾಟರಾಗ, ದರ್ಬಾರ್‌ರಾಗ, ರೀತಿಗಾಳ ರಾಗಗಳಲ್ಲಿ ಮೂಡಿಬರುತ್ತದೆ.

6. **ಭಯಾನಕ ರಸವು** - ಸಾಲಗರಾಗ, ಊರ್ಮಿಕರಾಗ, ಗವಾಂ ಭೋದಿ ರಾಗಗಳಲ್ಲಿ ಮೂಡಿಬರುತ್ತದೆ.

7. **ಬೀಭತ್ಸ ರಸವು** - ಜಲಾರ್ಣವರಾಗ, ಆಹಿರಿ ರಾಗಗಳಲ್ಲಿ ಮೂಡಿಬರುತ್ತದೆ.

8. **ಅದ್ಭುತ ರಸವು** - ಘರ್ಬುರಾಗ, ಆರಭಿರಾಗಗಳಲ್ಲಿ ಮೂಡಿಬರುತ್ತದೆ.

9. **ಶಾಂತ ರಸವು** - ದೇವಗಾಂಧಾರಿ ರಾಗ, ನೀಲಾಂಬರಿ ರಾಗ, ಸಾಮರಾಗಗಳಲ್ಲಿ ಮೂಡಿಬರುತ್ತದೆ.

ಆಯಾ ರಾಗಗಳನ್ನು ಆಯಾ ರಸಕ್ಕೆ ಹೊಂದಿಸಲು ಪ್ರಯತ್ನಿಸಿದರೂ ಅನೇಕ ವೇಳೆ ಆಯಾ ಪರಿಸರಕ್ಕನುಗುಣವಾಗಿ ಬೇರೆ ರಸಗಳು ಅವೇ ರಾಗಗಳಲ್ಲಿ ಮೂಡಿಬರಲು ಸಾಧ್ಯ. ಒಂದೇ ರಾಗದಲ್ಲಿ ಎರಡು, ಮೂರು ರಸಗಳ ಉತ್ಪಾದನೆಯು ಸಾಧ್ಯವಾಗುತ್ತದೆ.



# 6. ಸಂಗೀತದ ಉಗಮ - ಸಾಹಿತ್ಯದ ಆಗಮ

ಶೀಲ : ಸಂಗೀತದ ಉಗಮ ಹೇಗೆ ?

ರಾಮು : ಸಂಗೀತ ಹೇಗೆ ಹುಟ್ಟಿತೆಂದು ವಿದ್ವಾಂಸರಲ್ಲೇ ಭಿನ್ನಾಭಿಪ್ರಾಯಗಳಿವೆ. ಹೀಗೇ ಹುಟ್ಟಿತೆಂದು ನಿರ್ದಿಷ್ಟವಾಗಿ ಹೇಳಲು ಸಾಧ್ಯವಿಲ್ಲ. ಆದರೆ ಸಂಗೀತದ ಹುಟ್ಟಿನ ಮೂಲದ ಬಗೆಗೆ ಹಲವಾರು ದಂತ ಕಥೆಗಳೂ, ಧಾರ್ಮಿಕ ನಂಬಿಕೆಗಳೂ ಇವೆ.

ಶೀಲ : ಸಂಗೀತದ ಉಗಮದ ಬಗೆಗಿರುವ ಧಾರ್ಮಿಕ ನಂಬಿಕೆಗಳು ದಂತ ಕಥೆಗಳಾವುವು ?

ರಾಮು :

1. ಪ್ರಥಮವಾಗಿ ಮಹಾವಿಷ್ಣು ಬ್ರಹ್ಮದೇವನಿಗೆ ಸಂಗೀತ ವಿದ್ಯೆ ಕಲಿಸಿದನು. ಅಲ್ಲಿಂದ ಮುಂದೆ ಬ್ರಹ್ಮದೇವ, ಶಿವ, ಸರಸ್ವತಿಯರಿಗೆ ಈ ವಿದ್ಯೆ ಪ್ರದಾನ ಮಾಡಿದನು. ಸರಸ್ವತಿ ನಾರದರಿಗೆ, ನಾರದರು ಭರತ, ಹನುಮಾನ್, ಯಕ್ಷ, ಕಿನ್ನರ, ಗಂಧರ್ವರಿಗೆ ಈ ವಿದ್ಯೆಧಾರೆ ಎರೆದರು. ಈ ಸಂಗೀತ ಕಲೆಯ ಪ್ರಚಾರಾರ್ಥವಾಗಿ ಸ್ವರ್ಗ ಲೋಕದಿಂದ ಭರತ, ಹನುಮಾನ್, ನಾರದ ಭೂಮಿಯಲ್ಲಿ ಹುಟ್ಟಿದರೆಂಬ ನಂಬಿಕೆ ಪ್ರಚಲಿತದಲ್ಲಿದೆ.
2. ಸಂಗೀತದ ಹುಟ್ಟು 'ಓಂ' ಎಂಬ ನಾದದ ಗರ್ಭದಿಂದ ಉಂಟಾಯಿತು.
3. ನಾರದರ ಅನೇಕ ವರ್ಷಗಳ ತಪಸ್ಸಿನ ಫಲವಾಗಿ ಶಿವನು ನಾರದರಿಗೆ ಸಂಗೀತ ಕಲೆಯನ್ನು ವರವಾಗಿ ಇತ್ತನು.
4. ಪಶು ಪಕ್ಷಿಗಳ ಬೇರೆ ಬೇರೆ ಸ್ವರಗಳೇ ಸಂಗೀತಕ್ಕೆ ಆಧಾರವೆಂದಿದ್ದಾರೆ.
5. ಪ್ಲೇಟೋ ಹಾಗೂ ಅರಿಸ್ಟಾಟಲರ ಪ್ರಕಾರ ಮನುಷ್ಯರಲ್ಲಿ ಬೇರೆ ಬೇರೆ ಮನೋಭಾವಗಳ ಹುಟ್ಟುವಿಕೆಯೇ ಸಂಗೀತದ ಮೂಲ.
6. ಬ್ರಹ್ಮನ ಮುಖದಿಂದ ಹೊರಟ 'ಪ್ರಣವ' ಮಹಾನಾದದ ಸ್ಪಂದನದಿಂದ ಶೂನ್ಯವೂ ಕಂಪನಕ್ಕೊಳಗಾಗಿ ಸೃಷ್ಟಿಯು ಪ್ರಾರಂಭವಾಯಿತು. ಹಾಗಾಗಿ ಜಗತ್ತಿನ ಸೃಷ್ಟಿ, ಸ್ಥಿತಿಗಳಿಗೆ ನಾದವೇ ಮೂಲವಾಗಿ ಈ ನಾದವೇ ಸಂಗೀತದ ಉಗಮಕ್ಕೆ ಕಾರಣವಾಯಿತು.
7. ಹಿಂದೆ ಆರ್ಯರು 'ಋಕ್' ಎಂಬ ಸ್ತೋತ್ರಗಳನ್ನು ಸಂಗೀತದ ಮೂಲಕ ಹಾಡಿದರೆ "ದೈವ ಸಂತೃಪ್ತಿ" ಬೇಗ ಎಂಬ ಸತ್ಯವನ್ನು ಮನಗೊಂಡಿದ್ದರು. 'ಋಕ್'ಗಳನ್ನು ರಾಗತಾಳಬದ್ಧವಾಗಿ ಹಾಡತೊಡಗಿದರು. ಹೀಗೆ ಭಾರತದ ಸಂಗೀತ ವೇದದಿಂದ ಅಂದರೆ ಸಾಮವೇದದಿಂದ ಉತ್ಪತಿಯಾಗಿತ್ತು.

ಶೀಲ : ನಾದಲಯಗಳು ಪ್ರಕೃತಿ, ಪ್ರಾಣಿ ಮತ್ತು ಮಾನವ ಜೀವನದ ಅವಿಭಾಜ್ಯ ರೂಪಗಳಾಗಿವೆಯೇ ?

ರಾಮು : ಹೇಗೇ ಸಂಗೀತ ನಾದ ಲಯಗಳ ಪರಿಪಾಕದ ರಸಘಟ್ಟಿಯೋ ಹಾಗೇ ಮಾನವನ ನಡೆ, ನುಡಿಗಳಲ್ಲಿ, ಪ್ರಕೃತಿದತ್ತ ವಸ್ತುಗಳಲ್ಲೂ ರಾಗ ಲಯಗಳು ಕ್ರಮವಾಗಿವೆ. ಮಾನವನ ನಡಿಗೆಯಲ್ಲಿ ಒಂದು ಲಯವಿದೆ. ನಾವು ಗಜಗಮನೆ, ಹಂಸಗಮನೆ, ಸಿಂಹನಡೆ ಎಂದು ಗುರುತಿಸುವುದೇ ನಡಿಗೆಯಲ್ಲಿನ ಒಂದು ಲಯ.

ಅಂತೆಯೇ ಪಶು, ಪಕ್ಷಿ, ಪ್ರಾಣಿಗಳ ಧ್ವನಿಯಲ್ಲಿಯೂ ಸೊಗಸು ಇದೆ. ಅದೇ ರಾಗ.

ಮನೋಭಾವಗಳು ನೈಸರ್ಗಿಕ. ಮಾನವ ಭಾವಜೀವಿ ಮತ್ತು ಅನುಕರಣ ಶೀಲ.

ಮಾನವನಿಗೆ ಸುಖವೋ ದುಃಖವೋ ಆದಾಗ ಆ ಭಾವಕ್ಕನುಗುಣವಾದ ಅನುಭವದ ಪ್ರಕಟಣೆಯನ್ನು ಅವನ ಧ್ವನಿಯಿಂದ ಗುರುತಿಸಬಹುದು. ಅವನಿಗೆ ಆನಂದವಾದಾಗ ಉಚ್ಚಧ್ವನಿಯಲ್ಲಿ ಕೂಗುತ್ತಾನೆ. ದುಃಖವಾದಾಗ ಅವನ ರೋದನ ಧ್ವನಿ ನೀಚವಾಗುತ್ತದೆ. ಏರಿಳಿತಗಳು ನಮ್ಮ ಭಾವನೆಗಳ ಪ್ರಕಟಣೆಗೆ ಅತ್ಯಗತ್ಯ.

ನವಿಲಿನ ಕೂಗಿಗೆ ಒಂದು ಸ್ವರೂಪವಿದೆ. ಕಪ್ಪೆಯ ಧ್ವನಿಗೆ ಒಂದು ಸ್ವರೂಪವಿದೆ. ಕೋಗಿಲೆಯ ಕೂಗಿಗೆ ಒಂದು ಸ್ವರೂಪವಿದೆ. ಇವು ಆಯಾಯಾ ಧ್ವನಿಗಳ ಕಂಪನ ಸಂಖ್ಯೆಯಲ್ಲಿರುವ ವ್ಯತ್ಯಾಸ. ಕಂಪನ ಸಂಖ್ಯೆಯ ವ್ಯತ್ಯಾಸದಿಂದ ಆ ಧ್ವನಿಯ ರೂಪ ನಮಗೆ ಮೂಡಿ ಇದು ಇಂಥವೇ ಹಕ್ಕಿಯದೊ, ಪ್ರಾಣಿಯದೊ ಎಂದು ನಾವು ಗುರುತಿಸಲು

ಸಾಧ್ಯವಾಗುತ್ತದೆ. ಅಂದರೆ ನಾವು ಯಾವುದೇ ಧ್ವನಿಯನ್ನೂ ಅರ್ಥಮಾಡಿಕೊಳ್ಳುವುದಕ್ಕೆ ಅದರ ಆಕೃತಿ, ಅಂತರ, ಸ್ಥಾಯಿ ( Form, Spacing, Level ) ಇವು ಮೂರು ಇರಬೇಕು.

ಶಬ್ದಗಳ ಭಾವಗಳನ್ನು ಅರ್ಥಮಾಡಿಕೊಳ್ಳಲು ಅದರ ಸ್ಥಾಯಿ ಬಹಳ ಮುಖ್ಯ. ಇದರಲ್ಲಿ ಮೂರು ಮಟ್ಟಗಳಿವೆ. ಇದು ಮಾತಿಗಾಗಲಿ, ಸಂಗೀತಕ್ಕಾಗಲಿ ಇರಲೇಬೇಕು. ಸಾಮಾನ್ಯವಾಗಿ ಮಾತನಾಡುವ ಸ್ಥಾಯಿಗೆ ಸ್ವರಿತವೆಂದೂ, ಸಾಮಾನ್ಯವಾಗಿ ಹಾಡುವ ಸ್ಥಾಯಿಗೆ ಮಧ್ಯಮ ಸ್ಥಾಯಿಯೆಂದು ಹೆಸರು. ಹಾಗೆಯೇ ಮಾತನಾಡುವಾಗ ಸ್ವರಿತಕ್ಕಿಂತ ಹೆಚ್ಚಿನದು ಉದಾತ್ತವೆಂದೂ ಹಾಡುವಾಗ ಮಧ್ಯಮ ಸ್ಥಾಯಿಗಿಂತ ಹೆಚ್ಚಿನದು ತಾರಸ್ಥಾಯಿ. ಹಾಗೆಯೇ ಮಾತಾಡುವಾಗ ಸ್ವರಿತಕ್ಕಿಂತ ಕಡಿಮೆ ನುಡಿಯುವ ಸ್ಥಾಯಿಗೆ ಅನುದಾತ್ತವೆಂದು, ಹಾಡುವಾಗ ಮಧ್ಯಮ ಸ್ಥಾಯಿಗೆ ಕಡಿಮೆ ಹಾಡುವ ಸ್ಥಾಯಿಗೆ ಮಂದ್ರಸ್ಥಾಯಿಯೆಂದು ಹೇಳುತ್ತೇವೆ.

ಮಾತನಾಡುವಾಗ ಕೂಡ ಯಾರೂ ಒಂದೇ ಸ್ಥಾಯಿಯಲ್ಲಿ ಮಾತನಾಡುವುದಿಲ್ಲ. ನಾವಾಡುವ ಶಬ್ದಗಳಿಗೆ ಅರ್ಥಪುಷ್ಟಿ ಕೊಡಲು ಪ್ರತಿಪದಕ್ಕೂ ಭಾವವನ್ನು ತುಂಬಿಯೇ ತೀರುತ್ತೇವೆ. ಹಾಗೆಯೇ ಹಾಡುವಾಗಲು ಭಾವ ಪ್ರಕಟಗೊಳ್ಳುತ್ತದೆ. ಅಷ್ಟೇ ಅಲ್ಲ ಮಾನವ ತನ್ನ ಮನೋಭಾವಗಳನ್ನು ಸುಖ, ದುಃಖ, ಕೋಪ, ತಾಪ, ರಾಗದ್ವೇಷಗಳ ಅನುಭವಗಳನ್ನೂ ಅದರ ಭಾವಗಳನ್ನೂ ವಿಚಿತ್ರ ಹಸ್ತಾದಿ ಅಂಗಾಂಗ ಸಂಜ್ಞೆಗಳ ಮೂಲಕವೋ, ಮುಖ ಮುದ್ರೆಗಳ ಮೂಲಕವೋ ಅಭಿವ್ಯಕ್ತಪಡಿಸುತ್ತಾನೆ. ಇದಕ್ಕೆ ಅವನಿಗೆ ಅನೇಕ ಪ್ರಕೃತಿದತ್ತ ವಸ್ತುಗಳು ಸ್ಫೂರ್ತಿ ನೀಡುತ್ತಿವೆ.

ಭೋರ್ಗರೆವ ಸಾಗರದ ಅಲೆಗಳ ಬಡಿತದ ಶಬ್ದ, ನದಿ ತೊರೆ ಝುರಿಗಳ ಕಲರವ, ಝುಳು ಝುಳುನಾದ, ದುಂಬಿಯ ಝೇಂಕಾರ, ಪಶುಗಳ ಅಂಬಾ, ಪಕ್ಷಿಗಳ ಚಿಲಿಪಿಲಿ ನಾದ, ಸಿಡಿಲು, ಗುಡುಗು, ಘರ್ಜನೆ, ಗಿಡ - ಮರಗಳ ಮರ್ಮರ ನಾದ ಕೇಳಿದಾಗ ಆ ಧ್ವನಿಗಳನ್ನು ಅನುಕರಿಸಿ ತನ್ನ ಕಲ್ಪನಾಶಕ್ತಿಯಿಂದ ಅನೇಕ ಮಧುರ ಸ್ವರಗಳನ್ನು ಸೃಷ್ಟಿಮಾಡಲು ಶಕ್ತನಾಗಿ ಹೊಸ ಹೊಸ ಜಾಡಿನತ್ತ ಹೆಜ್ಜೆ ಹಾಕುತ್ತಿದ್ದಾನೆ. ಆದ್ದರಿಂದ ಈಗ ಸಂಗೀತದಲ್ಲಿ ಅನೇಕ ಪ್ರಭೇದಗಳು ಮೂಡಿವೆ. ಏಕೆಂದರೆ ಮನುಷ್ಯ ವೈವಿಧ್ಯತೆಯನ್ನು ಮೆಚ್ಚುತ್ತಾನೆ. ( Variety is the Spice of human life ) ಅದಕ್ಕಾಗಿ ಅವನು ಹುಡುಕಾಡುತ್ತಾನೆ. ಸಂಶೋಧಿಸುತ್ತಾನೆ. ಆ ಹುಡುಕಾಟದಲ್ಲಿ, ಸಂಶೋಧನೆಯಲ್ಲಿ ಹೊಸ ಹೊಸ ರೂಪಗಳ ಕನಸು ಕಾಣುತ್ತಾನೆ. ಆ ಕನಸನ್ನು ನನಸಾಗಿ ಪರಿವರ್ತಿಸುವ ಪ್ರಯತ್ನದಲ್ಲಿ ಯಾವುದೋ ಒಂದು ಹೊಸ ರೂಪ ತಳೆಯುತ್ತದೆ. ಕಲೆ ಕವಲೊಡೆದು ಬೆಳೆಯುತ್ತದೆ. ವಿಜೃಂಭಿಸುತ್ತದೆ.

ಶೀಲ : 'ಅನಿಬದ್ಧ' ಸಂಗೀತವೆಂದರೇನು ?

ರಾಮು : ಯಾವತಾಳ, ಪಾದಗಳು ಇತ್ಯಾದಿ ನಿಯಮಗಳಿಲ್ಲದೆ, ಮಾನವ ಸಹಜವಾದ ಸಾಮೂಹಿಕ ಭಾವನೆಯಿಂದಾಗಿ ಗುಂಪಾಗಿ ಹಾಡುತ್ತ, ನೃತ್ಯ ಮಾಡುತ್ತಿದ ಕಾರಣ ಈ ಸಂಗೀತ ಪ್ರಕಾರ ಅನಿಬದ್ಧ ಸಂಗೀತವೆನಿಸಿಕೊಂಡಿತು.

ಶೀಲ : 'ನಿಬದ್ಧ' ಸಂಗೀತವೆಂದರೇನು ?

ರಾಮು : ತಾಳ, ಪಾದಗಳು ಇತ್ಯಾದಿ ನಿಯಮಗಳಿಗೆ ಅನುಗುಣವಾಗಿ ಸಾಮೂಹಿಕ ಭಾವನೆಯಿಂದ ಗುಂಪಾಗಿ ಹಾಡುತ್ತ, ನೃತ್ಯ ಮಾಡುತ್ತಿದ್ದ ಈ ಸಂಗೀತ ಪ್ರಕಾರಕ್ಕೆ ನಿಬದ್ಧ ಸಂಗೀತವೆಂದು ಕರೆಯುತ್ತಾರೆ.

ಶೀಲ : 'ಗೋಷ್ಠಿಗಾಯನ' ಎಂದರೇನು ?

ರಾಮು : ಗುಂಪುಗುಂಪಾಗಿ ಹಾಡುತ್ತ ನೃತ್ಯ ಮಾಡುವುದಕ್ಕೆ ಗೋಷ್ಠಿಗಾಯನ ವೆಂದು ಹೆಸರು. ವೇದಕಾಲದಲ್ಲಿ, ಆದಿಮಾನವರಲ್ಲಿ, ಮೂಲ ನಿವಾಸಿಗಳಲ್ಲಿ, ಈ ಗೋಷ್ಠಿ ಗಾಯನವಿತ್ತೆಂದು, ಹಿಮ್ಮೇಳನಕ್ಕೆ ಕಶ್ಯಪಿ ಅಥವಾ ಕಚ್ಛಪಿ ವೀಣೆಯನ್ನು ಅವರು ನುಡಿಸುತ್ತಿದ್ದರೆಂದು ಉಲ್ಲೇಖವಿದೆ. ಕೈಯಲ್ಲಿ ಚಪ್ಪಾಳೆ ತಟ್ಟುತ್ತ ತಾಳವನ್ನು ಹಾಕುತ್ತಿದ್ದರು.

ಶೀಲ : 'ಕ್ವಾಯರ್' ಎಂದರೇನು ?

ರಾಮು : ಈ ಕ್ವಾಯರ್ ಗ್ರೀಕ್ ಅಥವಾ ಲ್ಯಾಟಿನ್ ಚರ್ಚುಗಳ ಕೊಡುಗೆ. ಕ್ವಾಯರ್ ಎಂದರೆ ಹಾಡುಗಾರರ ತಂಡ, ನರ್ತಕ ವೃಂದ ಮೇಳಯಿಸಿ ಹಾಡುವ ಗೀತೆ. ಇದು ಕ್ರೈಸ್ತ ಗಾಯಕರ ಸಂಘ ಆರಾಧನಾಕಾಲದಲ್ಲಿ ಹಾಡುವ ಸಾಮೂಹಿಕ ಅಥವಾ ವೃಂದಗಾನ. ಇದು ಸಮುದಾಯ ಗೀತಗಾಯನ.

ಶೀಲ : 'ಕೋರಸ್' ಎಂದರೇನು ?

ರಾಮು : ಗುಂಪುಗುಂಪಾಗಿ ಹಾಡುತ್ತ ಕುಣಿಯುವುದಕ್ಕೆ ನರ್ತಿಸುವುದಕ್ಕೆ ಕೋರಸ್ ಎಂದು ಹೆಸರು. ಗ್ರೀಕರ ನಾಟಕಗಳಲ್ಲಿ ಕೋರಸ್ ಅಂದರೆ ಮೇಳವು ಪಾತ್ರಧಾರಿಗಳ ಶಬ್ದ ಸಾರಥಿಯಾಗಿತ್ತು.

ಶೀಲ : 'ಸಮುದಾಯ' ಗೀತೆಗಳೆಂದರೇನು ?

ರಾಮು : ಜನಾಂಗೀಯ ಏಕತೆ ಹಾಗೂ ಸೌಹಾರ್ದ ಭಾವನೆಗಳನ್ನು ಬೆಳಸುವ ಗಾಯನ ಗೋಷ್ಠಿಗಳಲ್ಲಿ ಹಾಡುವ ಗೀತೆಗಳಿಗೆ ಸಮುದಾಯ ಗೀತೆಗಳೆಂದು ಹೆಸರು. ಈ ಸಮುದಾಯ ಗೀತೆಗಳಿಗೆ ಸಾಮಾನ್ಯವಾಗಿ ವಾದ್ಯ ಸಹಕಾರವಿರುವುದಿಲ್ಲ. ಇಲ್ಲಿ ಶ್ರುತಿ, ಗತಿಗಳ ಸಹಾಯದಿಂದ ಅನೇಕ ಕಂಠಗಳ ಹೊಂದಾಣಿಕೆಯೇ ಪ್ರಮುಖವಾಗಿರುತ್ತದೆ. ಇಂತಹ ಗಾಯನ ಗೋಷ್ಠಿಗಳು ಪಾಶ್ಚಿಮಾತ್ಯ ದೇಶಗಳಲ್ಲಿ ಸಾಕಷ್ಟಿವೆ.

ಶೀಲ : ಕೂಡಿ ಹಾಡುವ ಗೀತೆಗಳಲ್ಲಿ ಎಷ್ಟು ವಿಧ ?

ರಾಮು : ಎರಡು ವಿಧ. ವೃಂದಗಾನ ಮತ್ತು ಸಮುದಾಯ ಗಾಯನ.

ಶೀಲ : 'ವೃಂದಗಾನ' ( Group Singing ) ಎಂದರೇನು ?

ರಾಮು : ವೃಂದಗಾನದಲ್ಲಿ ಹಾಡುವ ಕಲಾವಿದರೆಲ್ಲರೂ ಹಾಡಿನ ಪ್ರಾರಂಭದಿಂದ ಹಾಡಿನ ಮುಕ್ತಾಯದವರೆಗೂ ಚಾಚೂ ತಪ್ಪದೆ ಹಾಡಿನ ಎಲ್ಲ ಭಾಗವನ್ನು ಮೇಳವಿಸಿ ಹಾಡುತ್ತಾರೆ.

ಶೀಲ : ಸಮುದಾಯ ಗಾಯನ ( Choral Singing ) ಎಂದರೇನು ?

ರಾಮು : ವೃಂದಗಾನದಲ್ಲೇ ಒಂದು ವಿಭಿನ್ನರೂಪವೇ ಸಮುದಾಯಗಾಯನ. ಗಾಯಕರು ಬೇರೆ ಬೇರೆ ಸ್ಥಾಯಿಗಳಲ್ಲಿ ಹಾಡುತ್ತಾರೆ. ಇಲ್ಲಿ ಸ್ವರಗಳ ಗ್ರಹಭೇದ ಮಾಡುವ ವೈಶಿಷ್ಟ್ಯವಿದೆ. ಇದು ಪಾಶ್ಚಿಮಾತ್ಯ ಸಂಗೀತದಲ್ಲಿ, ಬಳಸುವ ಸಿಂಫೋನಿಯ ಸ್ವರೂಪ.

ಶೀಲ : ಕೂಡಿ ಹಾಡುವ ಈ 'ಗುಂಪುಗಾಯನದ' ಪ್ರಯೋಜನಗಳೇನು ?

ರಾಮು : ಒಗ್ಗೂಡಿ ಹಾಡುವುದರಲ್ಲಿ ಆನಂದವಿದೆ, ಮಾನಸಿಕ ನೆಮ್ಮದಿ ಇದೆ. ಯುವ ಜನತೆಗೆ ಸಾಮಾಜಿಕವಾಗಿ ತಾವೆಲ್ಲ ಒಂದೇ ಎಂಬ ಭಾವನೆ ಬೆಳೆಯಲು ಸಹಾಯವಾಗುತ್ತದೆ ಹಾಗೂ ಸಾಧ್ಯವಾಗುತ್ತದೆ. ಯುವ ಜನತೆಗೆ ಈ ಕೂಡಿಹಾಡುವ ಹವ್ಯಾಸದಿಂದ ಹಾಡುತ್ತ ಹಾಡುತ್ತ ಸಂಗೀತದ ಮುಖ್ಯಾಂಶಗಳ ಪರಿಚಯ ತನ್ಮೂಲಕ ಆಗುತ್ತದೆ. ಶ್ರುತಿ, ತಾಳ ಮತ್ತು ಭಿನ್ನ ಭಿನ್ನ ಸ್ವರ ಹಾಗೂ ಸ್ಥಾಯಿಗಳಲ್ಲಿ ಹಾಡುವ ಚೈತನ್ಯ ಕೂಡ ದೊರೆಯುತ್ತದೆ.

ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ರವೀಂದ್ರರು, ಸುಬ್ರಹ್ಮಣ್ಯ ಭಾರತಿ, ಬಂಕಿಮಚಂದ್ರ, ಇಕ್ಬಾಲ್ ಮುಂತಾದವರ ರಚನೆಗಳು ಸಾವಿರಾರು ಕಂಠಗಳಲ್ಲಿ ಮೂಡಿ ಬಂದಾಗ ರಾಷ್ಟ್ರೀಯ ಭಾವನೆ ಎಲ್ಲರ ಹೃದಯದಲ್ಲೂ ಮಿಡಿಯಿತು. ಜನತೆಯಲ್ಲಿ ಏಕತೆಯ ಭಾವನೆಯನ್ನು ಬಿತ್ತಿ ಬೆಳಸುವುದರಲ್ಲಿ ಗುಂಪುಗಾಯನ ಬಹಳ ಪ್ರಯೋಜನಕಾರಿಯಾಯಿತು.

ಮಾನವನ ಅತ್ಯಮೂಲ್ಯವಾದ ಸಂಗೀತ ಸಂಪತ್ತನ್ನು ಶಾಲೆ, ಕಾಲೇಜು, ಆಕಾಶವಾಣಿ, ದೂರದರ್ಶನ, ಸಂಸ್ಕೃತಿ ಇಲಾಖೆ ಬೆಳಸಿ ಉಳಿಸಿಕೊಂಡರೆ ಸರ್ವಜನೇ ಸುಖಿನೋಭವ ಸಾಕ್ಷಾತ್ಕಾರ ನಾಂದಿಯಾಗುವುದು.



# 7. ಜಾನಪದ ಗೀತೆಗಳು -ಕನ್ನಡದ ವೇದಗಳು !

ಶೀಲ : ಜಾನಪದ ಗೀತೆ ಎಂದರೇನು ?

ರಾಮು : ಮಾನವ ತನ್ನ ಸುಖದುಃಖವನ್ನು ನಿಸರ್ಗದ ಮಡಿಲಲ್ಲಿ ತೋಡಿಕೊಳ್ಳುತ್ತ, ಹಾಡುತ್ತ, ಕುಣಿಯುತ್ತ, ಕೇಕೆ ಹಾಕುತ್ತ ತನ್ನ ಬೇಸರವನ್ನು ಕಳೆಯುತ್ತಿದ್ದಾಗ ಅವನ ಸುಖದುಃಖ ಭಾವಗಳಲ್ಲಿ ಹೊರ ಹೊಮ್ಮಿದ ಹಾಡುಗಳೇ ಜಾನಪದ ಗೀತೆಗಳು.

ಜಾನಪದ ಗೀತೆಗಳ ಭಾಷೆ ನಿತ್ಯ ಬಳಕೆಯ ಗ್ರಾಮ ಭಾಷೆಯಾಗಿದೆ. ಪ್ರಪಂಚದ ದೇಶಗಳೆಲ್ಲಾ ತಮ್ಮದೇ ಆದ ಜಾನಪದ ಗೀತೆಗಳನ್ನು ಹೊಂದಿವೆ.

ಶೀಲ : ಜಾನಪದ ಗೀತೆಗಳ ಮುಖ್ಯ ಉದ್ದೇಶವೇನು ?

ರಾಮು : ಪಾಮರರ ರಂಜನೆ, ಮನರಂಜನೆ.

ಶೀಲ : ಜಾನಪದ ಗೀತೆಗಳನ್ನು ಬೇರೆ ಯಾವ ಯಾವ ಹೆಸರುಗಳಿಂದ ಕರೆಯುತ್ತಾರೆ ?

ರಾಮು : ಜಾನಪದ ಗೀತೆಗಳನ್ನು ಸಾಮಾನ್ಯವಾಗಿ 'ಲೋಕಗೀತೆ', ಗ್ರಾಮಗಾನ, ಜಾನಪದಗೀತೆ, ಪಾಮರ ಜನಗಾನ ಎಂದು ಅನೇಕ ಹೆಸರುಗಳಿಂದ ಕರೆಯುತ್ತಾರೆ.

ಶೀಲ : ಜಾನಪದ ಸಂಗೀತದ ವಿಶೇಷತೆ ಏನು ?

ರಾಮು : ಜಾನಪದ ಸಂಗೀತ ವಿಶ್ವದಾದ್ಯಂತ ತನ್ನ ಸರಳವಾದ ಭಾಷೆಯಿಂದ, ಭಾಷಾ ಲಾಲಿತ್ಯದಿಂದ ಜನರ ಮನವನ್ನು ಆಕರ್ಷಿಸಿ ತನ್ನ ತನವನ್ನು ಉಳಿಸಿಕೊಂಡು ಬಂದಿದೆ. ನಮ್ಮ ಬದುಕಿನ ಸುತ್ತಮುತ್ತ ಹರಡಿ ಬೇರುಬಿಟ್ಟಿರುವಂಥ ವಿಷಯಗಳು ಹಾಗೂ ಜನಜಂಗುಳಿಯ ಹೃದಯದ ನೋವುನಲಿವುಗಳು ತಾವೇ ತಾವಾಗಿ ಉಕ್ಕಿಬಂದು ಕಟ್ಟುನಿಟ್ಟಿಗೆ ಒಳಗಾಗದ ಸ್ವರೂಪದ ಅನುಭವದ ಹೊನಲು ಈ ಜಾನಪದ ಸಂಗೀತ.

ರಚನಕಾರನ ಹೃದಯಾಂತರಾಳದಿಂದ ಸ್ಫೂರ್ತಿ ಪಡೆದು ಶ್ರಾವಕರ ಹೃದಯಕ್ಕೆ ನೇರವಾಗಿ ಪ್ರವೇಶಿಸುವ ಅದ್ಭುತ ಶಕ್ತಿ ಈ ಜಾನಪದ ಗೀತೆಗಳಲ್ಲಿ ಅಡಗಿದೆ.

ಕೇವಲ ಅನುಕರಣದಿಂದ ಸುಲಭವಾಗಿ ಗ್ರಹಿಸಿ ಹಾಡಬಹುದು. ಆದುದರಿಂದ ಈ ಸುಲಭ ವಿಶ್ವಸಂಗೀತ - ನಿತ್ಯನೂತನ ನಿರಾಭರಣ ಕಲಾಸುಂದರಿ.

ಶೀಲ : ಜಾನಪದ ಗೀತೆಗಳು ಏನನ್ನು ಎತ್ತಿ ತೋರಿಸುತ್ತವೆ ?

ರಾಮು : ಹಳ್ಳಿಗಳ, ಪಟ್ಟಣಗಳ, ಪ್ರತಿ ದೇಶದ ಸಂಸ್ಕೃತಿಯನ್ನೂ, ಜನಜೀವನವನ್ನೂ, ಸಂಪ್ರದಾಯಗಳನ್ನೂ, ಜನತೆಯ ಗುಣ ಶೀಲತೆಗಳನ್ನೂ, ಸಮಾಜಸ್ಥಿತಿಯನ್ನೂ, ಕಲಾಭಿರುಚಿಯನ್ನೂ ಜಾನಪದ ಗೀತೆಗಳು ಎತ್ತಿ ತೋರಿಸುವ ಕನ್ನಡಿಗಳಾಗಿವೆ. ಜನಾಂಗದ ಹೃದಯಾತ್ಮಗಳ ಪ್ರತಿಬಿಂಬಗಳಾಗಿವೆ, ಜನಜೀವನದ ಜೀವನಾಡಿ ಯಾಗಿವೆ.

ಜಾನಪದ ಗೀತೆಗಳು ಜೀವನದ ಎಲ್ಲ ಅಂಗಗಳನ್ನೂ ಅಂದರೆ ಮಾನವನ ಸುಖ - ಸಮೃದ್ಧಿ - ಸಂತುಷ್ಟಿಗಳೂ, ದುಃಖ - ದುಗುಡ - ದುಮ್ಮಾನಗಳು, ಸಮಾಜದ ರೀತಿ - ನೀತಿಗಳು, ಒಳಿತು - ಕೆಡಕುಗಳು, ನಗು - ಅಳು, ಸರಸ - ವಿರಸ, ರಾಗ - ದ್ವೇಷ, ಕೋಪ - ತಾಪ, ಕಾಮ - ಪ್ರೇಮ, ಆಸೆ - ಆಮಿಷ, ಸಫಲತೆ - ವಿಫಲತೆ, ಸೋಲು - ಗೆಲವು ಇತ್ಯಾದಿ ಇತ್ಯಾದಿ ನೂರಾರು ಭಾವಗಳ ಬಗೆಗೂ ಹಾಡುಗಳಿರುವುದರಿಂದ ಜಾನಪದ ಗೀತೆಗಳು ಕನ್ನಡ ವೇದಗಳು. ಇದನ್ನು ಹಾಡಿದವರೆಲ್ಲ, ಬರೆದವರೆಲ್ಲ ಅಜ್ಞಾತ ಕವಿಗಳು - ಎಲೆ ಮರೆಯ ಹೂವುಗಳು.

ಜಾನಪದ ಗೀತೆಗಳು ಜೀವನದ ಎಲ್ಲಾ ಸ್ಥರಗಳನ್ನು ಒಳಗೊಂಡ ಸಂಗೀತ - ಸಾಹಿತ್ಯ ಸಾಗರದ ಮುತ್ತುಗಳು - ರತ್ನಗಳು.

ಶೀಲ : ಸ್ಥೂಲವಾಗಿ ಜಾನಪದ ಗೀತೆಗಳನ್ನು ಹೇಗೆ ವಿಂಗಡಿಸಬಹುದು ?

ರಾಮು : 1. ಹಬ್ಬ ಮತ್ತು ಜಾತ್ರೆ ಪದಗಳು 2. ತತ್ತ್ವಬೋಧಕ ಗೀತೆಗಳು

3. ಐತಿಹಾಸಿಕ ಪದಗಳು
4. ಉತ್ಸವ ಗೀತೆಗಳು
5. ಕೋಲಾಟ ಪದಗಳು
6. ಸ್ಥಳ ಮಹಿಮಾ ಗೀತೆಗಳು
7. ನಾಟಕ ಪದಗಳು
8. ನೀತಿ ಬೋಧಕ ಗೀತೆಗಳು
9. ಯಾತ್ರಾ ಪದಗಳು
10. ದೇಶ ಪ್ರೇಮ ಗೀತೆಗಳು
11. ಪುರಾಣ ಪದಗಳು
12. ಮರಣ ಗೀತೆಗಳು
13. ಸವಾಲು ಪದಗಳು
14. ದೇವರ ಪ್ರಾರ್ಥನಾ ಗೀತೆಗಳು
15. ಜವಾಬಿನ ಪದಗಳು
16. ವಿರಹ ಗೀತೆಗಳು
17. ವಿಡಂಬನೆಯ ಪದಗಳು
18. ಸ್ವಾಮಿ ದ್ರೋಹ ಗೀತೆಗಳು
19. ಜಾನಪದ ನಾಟಕ ಪದಗಳು
20. ಕೂಲಿ ಗೀತೆಗಳು
21. ಆಟದ ಪದಗಳು
22. ವೀರ ಗೀತೆಗಳು
23. ಮಳೆರಾಯನ ಪದಗಳು
24. ವೈರಸಾಧನಾ ಗೀತೆಗಳು
25. ಸುಗ್ಗಿಯ ಪದಗಳು
26. ಒಗಟು ಗೀತೆಗಳು
27. ಲಾಲಿ ಪದಗಳು
28. ಪರಾಕ್ರಮ ವರ್ಣನಾ ಗೀತೆಗಳು
29. ಆರತಿ ಹಾಡುಗಳು
30. ದೋಣಿ ಹಾಡುಗಳು
31. ನೃತ್ಯಕ್ಕೆ ಸಂಬಂಧಪಟ್ಟ ಹಾಡುಗಳು
32. ಲಾವಣಿಗಳು
33. ಪ್ರಪಂಚಾನುಭವದ ಗಾದೆ ರೂಪಿನ ಗೀತೆಗಳು

ಇತ್ಯಾದಿ, ಇತ್ಯಾದಿ.



# 8. ಸುಗಮ ಸಂಗೀತಗಳು - ರಸಭಾವ ಚಿಲುಮೆಗಳು !

ಶೀಲ : "ಭಾವಗೀತೆ" ಎಂದರೇನು ?

ರಾಮು : ಕವಿಮನದ ಭಾವೋದ್ವೇಗದ ತೆರೆಗಳಿಂದ ಬರುವಂಥ ಕವನ ಅಥವಾ ಕವಿತೆಗಳನ್ನೇ ಭಾವಗೀತೆಗಳೆನ್ನುತ್ತೇವೆ.

ಇಂಗ್ಲೀಷಿನ 'ಲೆರಿಕ್' ಎಂಬ ಪದಕ್ಕೆ ನಾವು ಇಂದು 'ಭಾವಗೀತೆ' ಎಂಬ ಪದವನ್ನು ಬಳಸುತ್ತೇವೆ.

ಶೀಲ : ಕರ್ನಾಟಕದಲ್ಲಿ 'ಭಾವಗೀತೆಗಳ' ಸಂಪ್ರದಾಯ ಯಾರಿಂದ ಬೆಳೆಯಿತು ?

ರಾಮು : ಪಿ. ಕಾಳಿಂಗರಾಯರು, ಪದ್ಮಚರಣರು ಮತ್ತು ಪಂಡಿತ ಭೀಮಸೇನ ಜೋಷಿ ಮುಂತಾದವರು.

ಶೀಲ : ಸುಗಮ ಸಂಗೀತ ಅಥವಾ ಭಾವಗೀತೆಗೆ ಕರ್ನಾಟಕದಲ್ಲಿ ಹೇಗೆ ಪ್ರಾಶಸ್ತ್ಯ ದೊರಕಿತು?

ರಾಮು : ಆಕಾಶವಾಣಿಯು 'ಸುಗಮ ಸಂಗೀತ' ಎಂಬ ಒಂದು ಪ್ರಕಾರವನ್ನೇ ಮಾಡಿ ಕನ್ನಡ ಗೀತೆಗಳ ಪ್ರಚಾರಕ್ಕೆ ಹಾಗೂ ಕನ್ನಡ ಕವಿಗಳ ಉತ್ತೇಜನಕ್ಕೆ ಅವಕಾಶ ದೊರಕಿಸಿದಾಗ ಭಾವಗೀತೆಗಳಿಗೆ ಪ್ರಾಶಸ್ತ್ಯ ಸಿಕ್ಕಿತು.

'ಮಾಡುವವನದಲ್ಲ ಹಾಡು, ಹಾಡುವವನದು' ಎಂಬ ಕವಿವಾಣಿಗೆ ಪುಷ್ಟಿ ದೊರಕಿತು. ಸಭೆ, ಸಮಾರಂಭಗಳಲ್ಲಿ ಈ ಶೈಲಿಯ ಕಛೇರಿಗಳು ಕೇಳಿಬರುವಂತಾಯಿತು.

ಶೀಲ : 'ಸುಗಮ ಸಂಗೀತ'ದ ಘನತೆ ಹೆಚ್ಚುವಂತೆ ಮಾಡಿದ ಕಲಾವಿದರು ಯಾರು ?

ರಾಮು : 1. ಶ್ರೀ ಮೈಸೂರು ಅನಂತಸ್ವಾಮಿ 2. ಶ್ರೀ ಸಿ. ಅಶ್ವತ್ಥ್

3. ಶ್ರೀಮತಿ ಹೆಚ್. ಆರ್. ಲೀಲಾವತಿ 4. ಶ್ರೀಮತಿ ರತ್ನಮಾಲಾ ಪ್ರಕಾಶ್

ಮುಂತಾದವರು. ಸುಗಮ ಸಂಗೀತ ಶೈಲಿಗೆ ಮುಖ್ಯವಾಗಿ ಭಾವಕ್ಕನುಗುಣವಾದ ರಾಗ ಮತ್ತು ಲಯಗಳ ಅಳವಡಿಕೆ ಮುಖ್ಯ ಎಂಬ ಅರಿವು ಇವರ ಪರಿಶ್ರಮದಿಂದ ಮೂಡಿತು.

ಶೀಲ : ಭಾವಗೀತೆಗಳ ವೈಶಿಷ್ಟ್ಯತೆ ಏನು ?

ರಾಮು : ಕವಿ ಮನದ ಸ್ವಚ್ಛಂದ ಗಾನಗಳು ಭಾವಗೀತೆಗಳು. ಕವಿಯ ಮನಸ್ಸು ಭಾವೋದ್ವೇಗದ ಒತ್ತಡಕ್ಕೆ ಸಿಕ್ಕಾಗ ಮೂಡಿಬರುವ ಭಾವನಾಲಹರಿಗಳು. ತನಗೆ ತಾನೇ ಹರಿದು ಬರುವ ಭಾವಸ್ತೋತ್ರ. ಇವು ಕವಿ ಮನದ ಸಂವೇದನೆಗಳು. ಭಾಷಾ ರೂಪದಲ್ಲಿ ಮೂರ್ತಿವೆತ್ತ ಭಾವನಾ ಮುತ್ತುಗಳು.

ಭಾವಗೀತೆಗಳ ಸಾಹಿತ್ಯವನ್ನು ಅರ್ಥಮಾಡಿಕೊಳ್ಳಲು ಅದರ ಭಾವವನ್ನು ಅನುಭವಿಸಲು ಸಾಕಷ್ಟು ತಿಳಿವಳಿಕೆ ಹಾಗೂ ಮಾನಸಿಕ ಬೆಳವಣಿಗೆ ಬೇಕು, ಸಂಸ್ಕಾರ, ಸಾಹಿತ್ಯ ಪ್ರಜ್ಞೆ, ತಕ್ಕಮಟ್ಟಿಗೆ ವಿದ್ಯೆ ಇರಲೇಬೇಕಾಗುತ್ತದೆ. ಇವು ಹೆಚ್ಚು ಗಂಭೀರವೂ ಕ್ಲಿಷ್ಟವೂ ಆಗಿರುತ್ತವೆ. ಹೆಚ್ಚು ತಿಳುವಳಿಕೆಯ ಜನ ಹಾಗೂ ಸಾಹಿತ್ಯಪ್ರಿಯರು ಭಾವಗೀತೆಗಳನ್ನೇ ಹೆಚ್ಚು ಮೆಚ್ಚುತ್ತಾರೆ.

ಶೀಲ : ಭಾವ ಗೀತೆಗಳು ಮಾನವ ಜೀವನದ ಯಾವ ಯಾವ ವಿಷಯಗಳನ್ನು ಒಳಗೊಂಡಿವೆ?

ರಾಮು : ನಮ್ಮ ಶ್ರೇಷ್ಠ ಹಾಗೂ ಪ್ರತಿಭಾವಂತ ಕವಿಗಳು ಮಾನವ ಜೀವನಕ್ಕೆ ನೇರಸಂಬಂಧ ಪಡುವ ಎಲ್ಲ ವಿಷಯಗಳ ಅಂದರೆ ಪ್ರಕೃತಿ, ದೇವರು, ಪ್ರೇಮ, ಪ್ರಣಯ, ಒಲವು ವಿರಹ, ಶೃಂಗಾರ, ಶೋಕ, ವಾತ್ಸಲ್ಯ, ಹುಟ್ಟು - ಸಾವು, ನೋವು - ನಲಿವು ಇಂಥ ನೂರಾರು ಭಾವಭಾವನೆಗಳ ಹರಹು, ಎಷ್ಟು ಆಳಕ್ಕೆ ಎತ್ತರಕ್ಕೆ, ವಿಸ್ತಾರಕ್ಕೆ ಚಾಚಬಹುದೋ ಅಷ್ಟಕ್ಕೆ ಭಾವನಾಲಹರಿಗಳನ್ನೂ ಹೊರಹೊಮ್ಮಿಸಿದ್ದಾರೆ. ಇದು ಉಂಟು, ಇದು ಇಲ್ಲ ಎನ್ನುವಂತಿಲ್ಲ.

ಭಾವಗೀತೆಗಳ ಭಾವ ಅನಂತ. ನೂರು ಬಣ್ಣ, ನೂರು ಗಂಧ, ನೂರು ರೂಪಗಳ ಕಲ್ಪನಾಸೌಧ, ಇದು ಭಾವನೆಗಳ ಕಾಮನಬಿಲ್ಲು, ನವರಸಗಳ ಭಾವಚಿಲುಮೆ.

ಶೀಲ : ಶಾಸ್ತ್ರೀಯ ಸಂಗೀತ ಮತ್ತು ಸುಗಮ ಸಂಗೀತಕ್ಕಿರುವ ಹೋಲಿಕೆ ವ್ಯತ್ಯಾಸಗಳೇನು ?

ರಾಮು : 1. ಶಾಸ್ತ್ರೀಯ ಸಂಗೀತ ಸ್ವರ ಲೋಕದ ಸಾಮ್ರಾಜ್ಯ.

ಭಾವಗೀತೆ ಸಾಹಿತ್ಯ ಲೋಕದ ಸಾಮ್ರಾಜ್ಯ.

2. ಶಾಸ್ತ್ರೀಯ ಸಂಗೀತ ಪ್ರತಿಭಾವಂತ ಕಲಾವಿದನ ಜಾಣ್ಮೆಯ ಚಾತುರ್ಯದ ಕೊಡುಗೆ.

ಸುಗಮ ಸಂಗೀತ ಪ್ರತಿಭಾವಂತ ಕಲಾವಿದನ ಕೋಮಲ ಭಾವನೆಗಳ ಸುಮಧುರ ಕಲ್ಪನೆಯ ಆವಿಷ್ಕಾರದ ಪರಿಣಾಮ.

ಒಂದು ಶಿವನ ತಾಂಡವವಾದರೆ ಮತ್ತೊಂದು ಪಾರ್ವತಿಯ ಲಾಸ್ಯ.

3. ಕರ್ನಾಟಕ ಶಾಸ್ತ್ರೀಯ ಸಂಗೀತ ಮುಖ್ಯವಾಗಿ ಭಕ್ತಿರಸ ಪ್ರಧಾನವಾದುದು. ದೇವರನ್ನೇ ಕುರಿತದ್ದು. ದೇವರುಗಳ ಆರಾಧನೆಯೇ ಇಲ್ಲಿನ ಸಾಹಿತ್ಯದಲ್ಲಿರುವುದು.

ಸುಗಮ ಸಂಗೀತದಲ್ಲಿ ಸಾಹಿತ್ಯಕ್ಕೆ ಅತ್ಯಂತ ಮಹತ್ವದ ಸ್ಥಾನ, ಸುಂದರಕಾವ್ಯ ಹಾಗೂ ಮಧುರ ಸಂಗೀತದ ಕವಚವಿರುತ್ತದೆ. ಸುಗಮ ಸಂಗೀತದಲ್ಲಿ ಹಾಡುವ ಒಂದೊಂದು ಕವಿತೆಗೂ ಒಂದೊಂದು ಭಾವ ಒಂದೊಂದು ರಸವಿರುತ್ತದೆ. ಮನರಂಜನೆ ಇದರ ಉದ್ದೇಶ. ಆನಂದವೇ ಇದರ ಗುರಿ.

4. ಸ್ವರ ಮತ್ತು ವಿಶಿಷ್ಟ ಬಂಧಗಳಿಂದ ರಚಿತವಾದ ಗಾಯನವಾದನ ಶೈಲಿಗೆ ಶಾಸ್ತ್ರೀಯ ಸಂಗೀತವೆನ್ನುತ್ತಾರೆ. ಇದರಲ್ಲಿ ವಿಶಿಷ್ಟವಾದ ನಿಯಮಗಳು, ಸೂತ್ರಗಳು, ಕಟ್ಟುಪಾಡುಗಳು ಶಾಸ್ತ್ರಬದ್ಧವಾಗಿವೆ. ಇದು ಕೆಲವೇ ಬುದ್ಧಿವಂತ ಪಂಡಿತರು ಹಾಗೂ ಶಾಸ್ತ್ರಜ್ಞರಿಂದ ಸೃಷ್ಟಿಯಾದ ಸಂಗೀತ ಪ್ರಕಾರ. ಇದನ್ನು ಗುರುಮುಖೇನ ಹಲವಾರು ವರ್ಷಗಳು ಶ್ರದ್ಧೆಯಿಂದ ಕಲಿತು ಹಾಡಬೇಕಾಗುತ್ತದೆ. ಇದನ್ನು ಕಲಿಯಲು ಮುಖ್ಯವಾಗಿ ಬುದ್ಧಿಶಕ್ತಿ, ಗ್ರಹಣಶಕ್ತಿ, ಆಲೋಚನೆ, ಮನೋಧರ್ಮ ಕಲ್ಪನಾಶಕ್ತಿ ಇರಬೇಕು. ಇದು ಮನೋಧರ್ಮ ಸಂಗೀತ, ಕಲಾತ್ಮಕ ಸಂಗೀತ.

ಸುಗಮ ಸಂಗೀತ ಶಾಸ್ತ್ರೀಯ ಸಂಗೀತದ ರೂಪಾಂತರ ಅಥವಾ ಒಂದೇ ಮರದಲ್ಲಿ ಹುಟ್ಟಿದ ಒಂದು ಹೊಸ ಕವಲು. ಸುಗಮ ಸಂಗೀತಕ್ಕೆ ತನ್ನತನವೆಂಬುದಿದೆ. ಇದಕ್ಕೆ ಯಾವುದೇ ಒಂದು ವಿಧಿ ನಿಯಮವಾಗಲೀ ಸೂತ್ರಗಳಾಗಲೀ ಇಲ್ಲ. ಇದು ಸಾಹಿತ್ಯ ಪ್ರಧಾನವಾದ ಸಂಗೀತ ರೂಪ. ಇಲ್ಲಿ ಸಾಹಿತ್ಯದ ಅರ್ಥವೇ ಮುಖ್ಯ. ಸುಗಮ ಸಂಗೀತಗಾರರು ಮೊದಲು ಅದನ್ನರಿತುಕೊಂಡು ರಾಗ ಸಂಯೋಜನೆಗೆ ತೊಡಗಬೇಕು. ಮಾತಿಗೆ ಧಾತು ಪೂರಕವಾಗಿ ಒಂದು ಸುಂದರ ಭಾವಗೀತಾ ಪರಿಕಲ್ಪವನ್ನು ಸೃಷ್ಟಿಸುವುದು ಇದರ ಮುಖ್ಯ ಉದ್ದೇಶ. ಸ್ವರಲಹರಿಗಳ ಹತ್ತಾರು ಮಿಶ್ರಣ ಮತ್ತು ಭಿನ್ನ ತಾಳಗಳನ್ನು ಉಪಯೋಗಿಸುವ ಪದ್ಧತಿಯೂ ಇದೆ.

5. ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲಿ ಒಂದು ಕೃತಿಗೆ ಪಲ್ಲವಿ, ಅನುಪಲ್ಲವಿ, ಚರಣವೆಂಬ ವಿಂಗಡಣೆ ಸಾಮಾನ್ಯವಾಗಿರುತ್ತದೆ. ಇದನ್ನು ಹಾಡಲು ವ್ಯವಸ್ಥಿತವಾದ ಒಂದು ಬಂಧವಿದೆ. ಇದರ ಸಂಗೀತವೂ ಕ್ಲಿಷ್ಟವಾದದ್ದು.

ಭಾವಗೀತೆಗಳಿಗೆ ಇಂಥ ಯಾವ ಕ್ಲಿಷ್ಟತೆಯೂ ಇಲ್ಲ. ಸುಂದರ ಸಾಹಿತ್ಯ, ಅದಕ್ಕೆ ತಕ್ಕ ಭಾವರಾಗ ಸಂಯೋಜನೆ ಇದಕ್ಕೆ ಬೇಕಾದ ಮೂಲ ದ್ರವ್ಯಗಳು. ಒಂದು ಕವನವನ್ನು ಹಾಡಿದ ಮೂರು ನಾಲ್ಕು ನಿಮಿಷಗಳಲ್ಲಿಯೇ ಜನರ ಮೇಲೆ ಪರಿಣಾಮಕಾರಿಯಾದ ಪ್ರಭಾವ ಬೀರುವ ಬಹಳ ನಾಜೂಕದ ಸಂಗೀತ ಸ್ವರೂಪ.

6. ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲಿ ಪಕ್ಕವಾದ್ಯವಾಗಿ ಮೃದಂಗ, ಪಿಟೀಲು, ಶೃತಿಗೆ ತಂಬೂರಿ ಇರುತ್ತವೆ.

ಸುಗಮ ಸಂಗೀತದ ಹಿನ್ನೆಲೆ ವಾದ್ಯಗಳಾಗಿ ಇಂಥ ವಾದ್ಯವನ್ನು ಬಳಸುತ್ತಾರೆ. ಇಂಥ ವಾದ್ಯವನ್ನು ಬಳಸುವುದಿಲ್ಲ ಎಂದಿಲ್ಲವೇ ಇಲ್ಲ. ರಾಗಭಾವಕ್ಕನುಕೂಲಕರವಾದ ಎಲ್ಲ ತರಹದ ವಾದ್ಯ ಬಳಸುತ್ತಾರೆ.

ಶೀಲ : ಭಾವ ಗೀತೆಗಳು ಹುಟ್ಟಿ ಬೆಳೆಯುತ್ತಾ ಬಂದ ರೀತಿ ಹೇಗೆ ?

ರಾಮು : ಭಾವಗೀತಾ ಗಾಯನ ಪದ್ಧತಿ ಹುಟ್ಟಿ ಒಂದು ಶತಮಾನವೂ ಕಳೆದಿಲ್ಲ. ಸುಗಮ ಸಂಗೀತ, ಲಲಿತ ಸಂಗೀತ, ಲಘು ಸಂಗೀತ, ಭಾವಗೀತೆ ಎಂಬ ಬೇರೆ ಬೇರೆ ಹೆಸರುಗಳಿಂದ ಇತ್ತೀಚಿನ ವರ್ಷಗಳಲ್ಲಿ ಈ ಭಾವ ಪ್ರಧಾನವಾದ ಗೀತೆಗಳು ಹೆಚ್ಚು ಪ್ರಭಾವ ಶಾಲಿಯಾಗಿ ಬೆಳೆಯುತ್ತಾ ಬಂದಿವೆ. ಇವು ಗೀತೆಯ ರೂಪದಲ್ಲಿ ಪ್ರಕಟವಾಗುವ ಭಾವನಾತ್ಮಕ ಕವಿತೆಗಳು ಅಥವಾ ಕವನಗಳು. ಭಾವಗೀತಾ ಗಾಯನದ ಭಾವನೆಗಳ ಹಂದರ ನೂರಾರು ರೂಪರಂಗುಗಳಿಂದ, ಹಲವಾರು ವಸ್ತು ವೈವಿಧ್ಯತೆಗಳಿಂದ, ಹತ್ತು ಹಲವಾರು ಭಾವನೆಗಳ ಎಳೆಯಿಂದ, ರಾಗದ ಸುಂದರ ಕವಚತೊಟ್ಟು, ಜನಮನದ ಹೃದಯ ಕವಾಟವನ್ನು ತಟ್ಟಿ, ರಸಸ್ತೋತ್ರದ ಮಜಲು ಮುಟ್ಟಿ, ಸ್ವರಭಾವ ಲಹರಿಗಳನ್ನು ಹೊಂದಿಸಿ, ಕವಿಯ ಭಾವಪೂರ್ಣ ಕಾವ್ಯ ಸೌಂದರ್ಯವನ್ನು ಇಮ್ಮಡಿಸಿ ತನ್ಮೂಲಕ ಆನಂದಾನುಭೂತಿಯನ್ನು ನೀಡುತ್ತಿವೆ.

ಈ ಭಾವಗೀತಾ ಗಾಯನ ಪ್ರಕಾರ ಜನರ ಮನಸ್ಸಿನ ಮೇಲೆ ಮೋಡಿಮಾಡಿ, ಶ್ರೋತೃ ವೃಂದದ ಹೃದಯವನ್ನು ಗೆದ್ದುಕೊಂಡು, ಆಕಾಶವಾಣಿಯಲ್ಲಿ ಬಿತ್ತರಿಸುವ ಪರಿಪಾಠ ಬೆಳೆಸಿಕೊಂಡು, ಜನಕ್ಕೊಂದು ತನ್ನ ಹೊಸ ಸುಂದರ ಜಗತ್ತನ್ನು ಪರಿಚಯ ಮಾಡಿ, ರಾಮೋತ್ಸವ, ಗಣೇಶೋತ್ಸವಗಳಲ್ಲಿ ಪಾಲನ್ನು ಗಿಟ್ಟಿಸಿಕೊಂಡು, ಕವನದ ಸೌಂದರ್ಯ ಹಾಗೂ ಗೀತೆಯ ರಾಗ ಮಾಧುರ್ಯದಿಂದ ಜನಮನ ಗೆದ್ದಿತು. ಹಾಡುವ ಕಲಾವಿದರ ಹಾಡಿಕೆಯ ಮೋಡಿಯಿಂದಾಗಿ, ಜನ ಆನಂದದ ಹುಚ್ಚೆದ್ದು ಕುಣಿದಾಗ ಶಾಸ್ತ್ರೀಯ ಸಂಗೀತವನ್ನೇ ಕೇಳುತ್ತಿದ್ದ ಜನಕ್ಕೆ ಇದೊಂದು ಹೊಸತನದ ಲೋಕವನ್ನು ಕಣ್ಮುಂದೆ ತೆರೆಯಿತು. ಕಲಾವಿದರ ಕಂಠಮಾಧುರ್ಯ, ಭಾವಪೂರ್ಣ ಗಾಯನ, ಕವಿತೆಯ ಸೌಂದರ್ಯ ಜನಮನ ತಣಿಸಿ, ಜನ ಮೂಕವಿಸ್ಮಿತರಾಗಿ ಕೇಳತೊಡಗಿದರು. ಏಕೆಂದರೆ ಆ ಭಾವಗೀತೆಗಳು ಜನರನ್ನು ಭಾವೋನ್ಮಾದದ ಔನ್ನತ್ಯಕ್ಕೆ ಕೊಂಡೊಯುತ್ತ, ಸೌಂದರ್ಯ ಪ್ರಜ್ಞೆಯನ್ನು ಮೂಡಿಸುತ್ತ ಮನಸ್ಸನ್ನು ಅರಳಿಸಿ ನೆಮ್ಮದಿ, ಆನಂದೋತ್ಸಾಹವನ್ನು ಮೂಡಿಸುತ್ತಿವೆ.



# 9. ವಿಶ್ವ ಸಂಗೀತ ಪದ್ಧತಿಗಳು

ಶೀಲ : ವಿಶ್ವದಲ್ಲಿ ಸಂಗೀತ ಪದ್ಧತಿಗಳು ಹೇಗೆ ಬೆಳೆದು ಬರುತ್ತಿವೆ ?

ರಾಮು : ವಿಶ್ವದಲ್ಲಿ ಪ್ರತಿಯೊಂದು ರಾಷ್ಟ್ರವೂ ತನ್ನದೇ ಆದ ಒಂದು ಸಂಗೀತ ಪದ್ಧತಿಯನ್ನು ಬೆಳಸಿಕೊಂಡು ಬಂದಿದೆ. ಶಾಸ್ತ್ರೀಯ ಸಂಗೀತದೊಡನೆ ಸಮಾಜದ ವಿವಿಧ ಜನರ ಅಭಿರುಚಿಗೆ ತಕ್ಕಂತೆ ಆಯಾಯ ಸಮಾಜಕ್ಕೆ ಅನುಗುಣವಾಗಿ ಜಾನಪದ ಸಂಗೀತ, ಸಂಪ್ರದಾಯ ಸಂಗೀತ, ಸುಗಮ ಸಂಗೀತ (ಭಾವ ಗೀತೆ), ನೃತ್ಯ ಸಂಗೀತ, ರಂಗ ಸಂಗೀತ, ಚಿತ್ರ ಸಂಗೀತ ಹೀಗೆ ಹಲವಾರು ಪ್ರಕಾರಗಳಲ್ಲಿ ಸಂಗೀತವು ಬೆಳೆಯುತ್ತಲಿದೆ.

ಶೀಲ : ಶಾಸ್ತ್ರೀಯ ಸಂಗೀತವು ಇತರ ಸಂಗೀತ ಪ್ರಕಾರಗಳಿಗಿಂತ ಹೇಗೆ ಉನ್ನತ ಮಟ್ಟದ್ದಾಗಿದೆ?

ರಾಮು : ಶಾಸ್ತ್ರೀಯ ಸಂಗೀತವು ಸಾಮಾಜಿಕ ಪಿಡುಗುಗಳಾದ ಬಂಡಾಯ, ಉದ್ರೇಕ, ಶೋಷಣೆ ಮೊದಲಾದ ಸಮಸ್ಯೆಗಳನ್ನು ಮೀರಿ ನಿಂತು ಉನ್ನತ ಮಟ್ಟದ್ದಾಗಿದೆ. ಶಾಸ್ತ್ರೀಯ ಸಂಗೀತದ ಗುರಿ ಮಾನಸಿಕ ಸೌಖ್ಯ ಮತ್ತು ನೆಮ್ಮದಿ ಕೊಡುವುದು ಮಾತ್ರವಾಗಿರುವುದರಿಂದ ಇಲ್ಲಿ ಅಂತಹ ಸಮಸ್ಯೆಗಳನ್ನು ಸ್ಪಂದಿಸುವ ರಚನೆಗಳನ್ನು ಸಾಹಿತ್ಯಗಳನ್ನು ಬಳಸುವ ಅವಶ್ಯಕತೆ ಇಲ್ಲ.

ಶೀಲ : ವಿಶ್ವದಲ್ಲಿ ಈಗಿನ ಕಾಲದಲ್ಲಿ ಬಳಕೆಯಲ್ಲಿರುವ ಮೂರು ಮುಖ್ಯವಾದ ಶಾಸ್ತ್ರೀಯ ಸಂಗೀತ ಪದ್ಧತಿಗಳು ಯಾವುವು ?

ರಾಮು :
1. ಭಾರತೀಯ ಸಂಗೀತವೆನಿಸುವ ಕರ್ನಾಟಕ ಸಂಗೀತ
2. ಹಿಂದೂಸ್ಥಾನಿ ಸಂಗೀತ
3. ಪಾಶ್ಚಾತ್ಯ ಸಂಗೀತ

ಶೀಲ : ಭಾರತದಲ್ಲಿ ಬಳಕೆಯಲ್ಲಿರುವ ಎರಡು ಪ್ರಮುಖವಾದ ಶಾಸ್ತ್ರೀಯ ಸಂಗೀತಗಳು ಯಾವುವು ? ಅವುಗಳ ವೈಶಿಷ್ಟ್ಯತೆಗಳೇನು ?

ರಾಮು : ಕರ್ನಾಟಕ ಸಂಗೀತ ಪದ್ಧತಿ - ದಕ್ಷಿಣಾದಿ ಪದ್ಧತಿ. ಹಿಂದೂಸ್ಥಾನಿ ಸಂಗೀತ ಪದ್ಧತಿ - ಉತ್ತರಾದಿ ಪದ್ಧತಿ.

ಕರ್ನಾಟಕ ಶಾಸ್ತ್ರೀಯ ಸಂಗೀತ ಪದ್ಧತಿಯು ಅಂದಿನಿಂದ ಇಂದಿನವರಗೆ ಏಕಮುಖವಾಗಿ ತನ್ನ ಪದ್ಧತಿಯನ್ನು ಉಳಿಸಿಕೊಂಡು ಬರುತ್ತಿದೆ. ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ ಪದ್ಧತಿಯಲ್ಲಿ ಹಲವು ಶೈಲಿಗಳು ಘರಾನವೆಂಬ ಹೆಸರಿನಿಂದ ರೂಪುಗೊಂಡಿವೆ.

ಶೀಲ : ಕರ್ನಾಟಕ ಸಂಗೀತ ಪದ್ಧತಿಯಲ್ಲಿ ಗೀತ, ಜತಿಸ್ವರ, ಸ್ವರಜತಿ, ವರ್ಣ, ಕೃತಿ, ಕೀರ್ತನೆ, ಪದ, ಜೌವಳಿ, ತಿಲ್ಲಾನ ಮುಂತಾದ ಸಂಗೀತ ರಚನೆಗಳಿವೆ.

ಹಿಂದೂಸ್ಥಾನಿ ಸಂಗೀತ ಪದ್ಧತಿಯಲ್ಲಿ ದ್ರುಪದ್, ಧಮಾರ್, ತರಾನ, ಖ್ಯಾಲ್, ಟಿಪ್ಪ, ಠುಮ್ರಿ, ಘಜಲ್ ಭಜನ್ ಮುಂತಾದ ಸಂಗೀತ ರಚನೆಗಳನ್ನು ಬಂದೀಷಾ ಎಂದು ಕರೆಯಲಾಗುತ್ತದೆ.

ಕರ್ಣಾಟಕ ಸಂಗೀತ ಪದ್ಧತಿಯಲ್ಲಿ ವೀಣೆ, ಗೋಟುವಾದ್ಯ, ಕೊಳಲು, ನಾಗಸ್ವರ, ಡೋಲು, ಮೃದಂಗ, ಡೋಲಕ್, ಕ್ಲಾರಿಯೋನೆಟ್, ವಯೋಲಿನ್, ಘಟ, ಖಂಜರಿ, ಮೋರ್ಚಿಂಗ್, ಜಲತರಂಗ್ ಮುಂತಾದ ಸಂಗೀತ ವಾದ್ಯಗಳು ಬಳಕೆಯಲ್ಲಿವೆ.

ಹಿಂದೂಸ್ಥಾನಿ ಸಂಗೀತ ಪದ್ಧತಿಯಲ್ಲಿ ಸಿತಾರ್, ಬೀನ್, ಸರೋದ್, ದಿಲ್ರುಬಾ, ಸಾರಂಗಿ ಸಂತೂರ್, ಬಾನ್ಸುರಿ, ಷಹನಾಯ್, ತಬಲ ಪಖ್ವಚ್ ಮುಂತಾದ ಸಂಗೀತ ವಾದ್ಯಗಳು ಬಳಕೆಯಲ್ಲಿವೆ.

ಶೀಲ : ಸಂಗೀತದಲ್ಲಿ ಎಷ್ಟು ವಿಭಾಗಗಳಿವೆ ?

ರಾಮು : ದೇಶಿ ಸಂಗೀತ ಮತ್ತು ಮಾರ್ಗ ಸಂಗೀತ.

ಶೀಲ : "ದೇಶಿ ಸಂಗೀತ" ಎಂದರೇನು ?

ರಾಮು : ಆಯಾ ದೇಶಗಳಲ್ಲಿ ಜನಗಳಿಗೆ ರುಚಿಸುವಂತಹ ಹೃದಯ ರಂಜಕವಾದ ಗಾಯನ, ವಾದನ, ನೃತ್ಯಗಳಿಗೆ "ದೇಶಿ ಸಂಗೀತ" ಎಂದು ಕರೆಯಲಾಗಿದೆ.

ಶೀಲ : "ಮಾರ್ಗ ಸಂಗೀತ" ಎಂದರೇನು ?

ರಾಮು : ಬ್ರಹ್ಮಸಂಕಲ್ಪದಿಂದ ಉಂಟಾಗಿರುವ ಮತ್ತು ಪರಶಿವನ ಸಮುಖದಲ್ಲಿ ಭರತ ಮುನಿಯಿಂದ ಉಕ್ತವಾಗಿರುವ ಮೋಕ್ಷಪ್ರದವಾದ ಸಂಗೀತ "ಮಾರ್ಗ ಸಂಗೀತ" ವೆನ್ನುಸುತ್ತದೆ.

ಶೀಲ : ಹಿಂದಿನ ಕಾಲದ ಸಂಗೀತಕ್ಕೂ ಈಗಿನ ಕಾಲದ ಸಂಗೀತಕ್ಕೂ ಯಾವ ರೀತಿ ಬೇರ್ಪಡೆಯಾಗಿದೆ. ?

ರಾಮು : ಹಿಂದೆ ಸಂಗೀತ ಗೀತ, ವಾದ್ಯ ಮತ್ತು ನೃತ್ಯಗಳ ಸಮ್ಮಿಳನವಾಗಿತ್ತು. ಈಗ ನೃತ್ಯದಿಂದ ಬೇರ್ಪಟ್ಟು ಗೀತ, ವಾದ್ಯಗಳಿಂದ ಮಾತ್ರ ಕೂಡಿ ಸಂಗೀತ ಒಂದು ಸ್ವತಂತ್ರ ಕಲೆಯಾಗಿ ಬೆಳೆದಿದೆ.

ಶೀಲ : ಆದಿಯಲ್ಲಿ ಸಂಗೀತ ಶಾಸ್ತ್ರ ಎಷ್ಟು ಪದ್ಧತಿಯಾಗಿ ರೂಢಿಯಲ್ಲಿತ್ತು ?

ರಾಮು : ವೇದಕಾಲದಿಂದ ಸಂಗೀತಶಾಸ್ತ್ರ ಭರತ ಖಂಡದಲ್ಲೆಲ್ಲ "ಭಾರತೀಯ ಸಂಗೀತ" ವೆಂದು ಒಂದೇ ಪದ್ಧತಿಯಾಗಿ ರೂಢಿಯಲ್ಲಿತ್ತು.

ಶೀಲ : "ಭಾರತೀಯ ಸಂಗೀತ" ಕಾಲಕ್ರಮೇಣ ಹೇಗೆ ಬದಲಾವಣೆಯಾಗ ತೊಡಗಿತು ?

ರಾಮು : ಸುಮಾರು ಹನ್ನೆರಡನೆಯ ಶತಮಾನದ ಕಾಲಕ್ಕೆ ಭಾರತೀಯ ಸಂಗೀತ ಕರ್ಣಾಟಕ ಮತ್ತು ಹಿಂದೂಸ್ಥಾನಿ ಸಂಗೀತವೆಂದು ವಿಭಜನೆಗೆ ಒಳಗಾಯಿತು. ಉತ್ತರ ಭಾರತದಲ್ಲಿ ಮೊಗಲ್ ಮತ್ತು ಪರ್ಶಿಯನ್ ಸಂಸ್ಕೃತಿಯ ಪ್ರಭಾವದಿಂದ ಅಲ್ಲಿನ ಸಂಗೀತದಲ್ಲಿ ಸ್ವಲ್ಪ ಬದಲಾವಣೆಗಳಾಗಿ "ಹಿಂದೂಸ್ಥಾನಿ ಸಂಗೀತ" ವೆಂದು ರೂಢಿಗೆ ಬಂತು. ದಕ್ಷಿಣ ಭಾರತದಲ್ಲಿ ಅನ್ಯ ಸಂಸ್ಕೃತಿಗಳ ಪ್ರಭಾವಕ್ಕೆ ಒಳಗಾಗದೆ ಭಾರತೀಯ ಸಂಗೀತದ ಮೂಲರೂಪವನ್ನು ಉಳಿಸಿಕೊಂಡು "ಕರ್ಣಾಟಕ ಸಂಗೀತ" ವೆಂದು ಮುಂದುವರಿಯಿತು.

ಶೀಲ : ಮೊಟ್ಟ ಮೊದಲಿಗೆ ದಕ್ಷಿಣ ದೇಶದ ಸಂಗೀತವನ್ನು "ಕರ್ಣಾಟಕ ಸಂಗೀತ"ವೆಂದು ಹೇಳಿದ ದೊರೆ ಯಾರು ?

ರಾಮು : ಹನ್ನೆರಡನೆಯ ಶತಮಾನದ ಕರ್ಣಾಟಕ ಚಕ್ರವರ್ತಿ ಚಾಲುಕ್ಯ ಸೋಮೇಶ್ವರ ಭೂಲೋಕ ಮಲ್ಲನ "ಮಾನಸೋಲ್ಲಾಸ" ವೆಂಬ ಬೃಹತ್ ಗ್ರಂಥದಲ್ಲಿ ದಕ್ಷಿಣ ದೇಶದ ಸಂಗೀತವನ್ನು ಕರ್ಣಾಟಕ ಸಂಗೀತವೆಂದು ಕರೆದು ಕೆಲವು ವೈಶಿಷ್ಟ್ಯಗಳನ್ನು ಹೇಳಿದ್ದಾನೆ.

ಮುಂದೆ ಹದಿಮೂರನೆಯ ಶತಮಾನದಲ್ಲಿ ಹರಿಪಾಲನ "ಸಂಗೀತ ಸುಧಾಕರ" ವೆಂಬ ಗ್ರಂಥದಲ್ಲಿ ದಕ್ಷಿಣ ಭಾರತದಲ್ಲಿ ಭಾರತೀಯ ಸಂಗೀತ ಯಾವ ಅನ್ಯಪ್ರಭಾವಕ್ಕೂ ಒಳಗಾಗದೆ ಶುದ್ಧರೂಪವನ್ನು ಉಳಿಸಿಕೊಂಡು, ಇದನ್ನು ಪೋಷಿಸಿ ಬೆಳಸಲು ಕರ್ಣಾಟಕ ದೇಶವೇ ಕಾರಣವಾದುದರಿಂದ ಇದಕ್ಕೆ "ಕರ್ಣಾಟಕ ಸಂಗೀತ" ವೆಂಬ ಹೆಸರು ಬಂದಿದೆ ಎಂದು ತಿಳಿಸಿದ್ದಾನೆ.
ಇದೇ ಕಾಲದ ವಿದ್ಯಾರಣ್ಯರೂ ಈ ವಿಭಜನೆಯನ್ನು ಹೇಳಿದ್ದಾರೆ.

ಶೀಲ : ಹಿಂದೂಸ್ಥಾನಿ ಮತ್ತು ಕರ್ಣಾಟಕ ಸಂಗೀತ ಪದ್ಧತಿಗಳಲ್ಲಿ ಕಂಡುಬರುವ ಸಮಾನತೆ ಮತ್ತು ಭಿನ್ನತೆಗಳಾವುವು ?

ರಾಮು : **ಈ ಎರಡು ಪದ್ಧತಿಗಳಿಗೂ ಸಮಾನವಾದ ಅಂಶಗಳೆಂದರೆ,**

1. ಸಂಗೀತಕ್ಕೆ "ಶ್ರುತಿರ್ಮಾತಾಲಯಃ ಪಿತಾ" ಎಂಬ ಉಕ್ತಿ ಎರಡು ಪದ್ಧತಿಗಳಿಗೂ ಸಮನಾಗಿ ಅನ್ವಯಿಸುತ್ತದೆ.
2. ಎರಡು ಪದ್ಧತಿಗಳಿಗೂ ವೇದಜನ್ಯವಾದ ಸಂಗೀತವೇ ಮೂಲ.
3. ಭಾರತೀಯ ಸಂಗೀತಕ್ಕೆ ಮೂಲ ಆಕರಗಳಾದ ಭರತನ "ನಾಟ್ಯಶಾಸ್ತ್ರ", ಸಾರಂಗ ದೇವನ "ಸಂಗೀತ ರತ್ನಾಕರ", ಮತಂಗಿನ "ಬೃಹದ್ದೇಶಿ" ಮುಂತಾದವು ಎರಡು ಪದ್ಧತಿಗಳಿಗೂ ಸಮಾನವಾದ ಆಧಾರ ಗ್ರಂಥಗಳು. ಸ್ವರಗಳ ಬಳಕೆ ಹಾಗೂ ಸಂಕೇತಗಳೂ ಒಂದೇ ಆಗಿವೆ.
4. ಸಪ್ತಸ್ವರಗಳು, ಸರಿಗಮಪದನಿ ಎಂಬ ಸ್ವರ ಸಂಕೇತಾಕ್ಷರಗಳು, ಪ್ರಕೃತಿ ವಿಕೃತಿ ಸ್ವರಗಳು, ಅಭ್ಯಾಸ ಕ್ರಮಗಳಾದ ಸ್ವರಾವಳಿ, ಲಕ್ಷಣಗೀತೆಗಳು ಮುಂತಾದವು ಎರಡು ಪದ್ಧತಿಗಳಿಗೂ ಒಂದೇ ಆಗಿವೆ.

5. ಶೃತಿಗಾಗಿ ತಂಬೂರಿಯೇ ಶ್ರೇಷ್ಠವಾದುದೆಂದು ಎರಡು ಪದ್ಧತಿಗಳವರು ಅಂಗೀಕರಿಸಿದ್ದಾರೆ. ಮೂರು ಸ್ಥಾಯಿಗಳಾದ ಮಂದ್ರ, ಮಧ್ಯ ಮತ್ತು ತಾರಗಳು ಎರಡು ಪದ್ಧತಿಗಳಲ್ಲಿವೆ.

6. ಸಂಗೀತ ಎರಡು ಪದ್ಧತಿಗಳಲ್ಲೂ ಬಳಕೆಯಲ್ಲಿದ್ದು ಇಪ್ಪತ್ತೆರಡು ಶೃತಿಗಳ ಉಪಯೋಗ, ಸಂಗೀತ ರಚನೆಗಳ ಮನೋಧರ್ಮ, ರಾಗಾಲಾಪನೆ, ಲಯ ವೈವಿಧ್ಯ ಕಾಣಬಹುದು. ಜೊತೆಗೆ ಸಭಾಗಾನವು ಅಂದರೆ ಸಂಗೀತ ಕಛೇರಿಗಳು, ಗಾಯನ ವಾದನಗಳೆರಡರಲ್ಲೂ ನಡೆಯುತ್ತವೆ.

7. ಸಂಗೀತ ಮೋಕ್ಷಾದಾಯಕವೆಂಬ ನಂಬಿಕೆ ಎರಡು ಪದ್ಧತಿಗಳಲ್ಲೂ ಕಂಡುಬರುತ್ತದೆ.

8. ಸಂಗೀತದಿಂದ ಮಳೆ ಬರಿಸುವುದು, ದೀಪಗಳು ಹತ್ತುವಂತೆ ಮಾಡುವುದು, ಸಂಜೀವಿನಿಯಂತೆ ಪುನರ್‌ಜೀವವನ್ನು ಬರಿಸುವುದು ಮುಂತಾದ ಪವಾಡಗಳನ್ನು ಎರಡು ಪದ್ಧತಿಗಳಲ್ಲೂ ಕಾಣಬಹುದು.

9. ದೈಹಿಕ ಮತ್ತು ಮಾನಸಿಕ ರೋಗಗಳನ್ನು ಸಂಗೀತದಿಂದ ಗುಣಪಡಿಸುವುದು, ಸಸ್ಯಗಳ ಮೇಲೆ ಸಂಗೀತ ಪ್ರಯೋಗಿಸಿ ಹೆಚ್ಚು ಬೆಳೆ ಬೆಳೆಸಬಹುದೆಂಬ ನಂಬಿಕೆ ಎರಡು ಪದ್ಧತಿಗಳಲ್ಲಿ ಕಂಡುಬರುತ್ತದೆ.

## ಈ ಎರಡು ಪದ್ಧತಿಗಳಿಗೂ ಭಿನ್ನತೆಗಳಾದ ಅಂಶಗಳೆಂದರೆ -

1. ಕರ್ನಾಟಕ ಸಂಗೀತದಲ್ಲಿ ಹೆಚ್ಚು ತಾಳ ಪ್ರಸ್ತಾರವೂ, ಹಿಂದೂಸ್ಥಾನಿ ಸಂಗೀತದಲ್ಲಿ ಹೆಚ್ಚುಶ್ರುತಿ ಶುದ್ಧತೆಯೂ ಇರುವುದಾಗಿ ಭಾವಿಸಲಾಗಿದೆ.

2. ಎರಡೂ ಪದ್ಧತಿಗಳ ನಿರೂಪಣಾ ಶೈಲಿಗಳಲ್ಲಿ ಇರುವ ವ್ಯತಾಸ ಅಂದರೆ ಕರ್ನಾಟಕ ಸಂಗೀತದಲ್ಲಿ ಕಂಡುಬರುವ ವಿಶೇಷ ಗಮಕ ಪ್ರಯೋಗಗಳಿಂದ ಹಾಗೂ ತಾಳ ಪ್ರಸ್ತಾರದ ವೈವಿಧ್ಯತೆಗಳು, ಸ್ವರಕಲ್ಪನೆ ಮತ್ತು ನೆರವಲ್ ಮುಂತಾದವುಗಳಿಂದ ಬೌದ್ಧಿಕವಾದ ಹಾಗೂ ಭಾವಪೂರ್ಣವಾದ ಸಂಗೀತದ ಕಲ್ಪನೆಗಳು ಸ್ಫುರಿಸಿ ಶ್ರೋತೃಗಳಿಗೆ ಒಂದು ಶ್ರುತಿ ಲೀನತೆಯನ್ನು ಮೀರಿದ ಅನುಭವ ಉಂಟಾಗುತ್ತದೆ. ಈಚೆಗೆ ಕರ್ನಾಟಕ ಸಂಗೀತದಿಂದ ಅನೇಕ ಮೇಳಗಳನ್ನೂ ರಾಗಗಳನ್ನೂ ಹಿಂದೂಸ್ಥಾನಿ ಪದ್ಧತಿಯಲ್ಲಿ ಅಳವಡಿಸಿಕೊಳ್ಳಲಾಗಿದೆ.

3. ಕರ್ನಾಟಕ ಸಂಗೀತಗಾರರು ಹಾಡುವಾಗ ತಾಳವನ್ನು ಕೈಯಲ್ಲಿ ಎಣಿಸಿ ತೋರಿಸುತ್ತಾರೆ. ತಾಳಗಳಲ್ಲಿ ಸುಳಾದಿ ಸಪ್ತತಾಳಗಳು ಮತ್ತು ಛಾಪು ತಾಳಗಳು ರೂಢಿಯಲ್ಲಿವೆ.
ಹಿಂದೂಸ್ಥಾನಿ ಪದ್ಧತಿಯವರು ಕಲಿಯುವಾಗ ಮಾತ್ರ ತಾಳವನ್ನು ಕೈಯಲ್ಲಿ ಹಾಕಿ ಅಭ್ಯಾಸಮಾಡಿ ಕ್ರಮೇಣ ತಬಲಾವನ್ನೇ ಅನುಸರಿಸಿ ಕೈಯಲ್ಲಿ ತಾಳ ಹಾಕದೆ ಹಾಡುತ್ತಾರೆ. ತಾಳಗಳಲ್ಲಿ ತ್ರಿತಾಲಾ, ಚೌತಾಲ್, ಝುಫ್‌ತಾಳ ಮುಂತಾದ ತಾಳಗಳು ಬಳಕೆಯಲ್ಲಿವೆ.

4. ಸ್ವರ ಕಲ್ಪನೆ ಕರ್ನಾಟಕ ಸಂಗೀತದಲ್ಲಿ ಇರುವಷ್ಟು ಹಿಂದೂಸ್ಥಾನಿ ಸಂಗೀತದಲ್ಲಿ ಬೆಳೆದಿಲ್ಲ. ಕರ್ನಾಟಕ ಸಂಗೀತ ಪದ್ಧತಿಯಲ್ಲಿ ಒಂದು ಸ್ಥಾಯಿಯಲ್ಲಿ ಹದಿನಾರು ಸ್ವರಗಳಿವೆ. ಹಿಂದೂಸ್ಥಾನಿಯಲ್ಲಿ ಹನ್ನೆರಡು ಸ್ವರಗಳಿವೆ.

5. ಕರ್ನಾಟಕ ಸಂಗೀತದಲ್ಲಿ ರಾಗ ಮಾಲಿಕಾ ಶ್ಲೋಕಗಳನ್ನು ಹಾಡುವ ಪದ್ಧತಿ ಬಹಳ ರಂಜನೀಯವಾಗಿರುತ್ತದೆ. ಹಿಂದೂಸ್ಥಾನಿ ಪದ್ಧತಿಯಲ್ಲಿ ಅದು ಕಂಡು ಬರುವುದಿಲ್ಲ.

6. ಕರ್ನಾಟಕ ಸಂಗೀತದಲ್ಲಿ ಸಾಹಿತ್ಯ ರಚನೆಗಳು ವೈವಿಧ್ಯಪೂರ್ಣವಾಗಿವೆ. ಹಿಂದೂಸ್ಥಾನಿ ಸಂಗೀತದಲ್ಲಿ ಸಾಹಿತ್ಯವಿಲ್ಲದ ಗತ್ತುಗಳು ವಿಶೇಷವಾಗಿ ಬಳಕೆಯಲ್ಲಿವೆ.

7. ಹಿಂದೂಸ್ಥಾನಿ ಪದ್ಧತಿಯಲ್ಲಿ ಪಕ್ಕವಾದ್ಯದವರಿಗೆ ಹೆಚ್ಚು ಸ್ವಾತಂತ್ರ್ಯವಿರುವುದಿಲ್ಲ. ಕರ್ನಾಟಕ ಸಂಗೀತದಲ್ಲಿ ಪಕ್ಕವಾದ್ಯದವರಿಗೂ ಸಮಾನಾವಕಾಶ ಕೊಡಲಾಗುತ್ತದೆ.

8. ಕರ್ನಾಟಕ ಸಂಗೀತ ರಾಗ ವಿಭಜನೆಯಲ್ಲಿ ಜನಕ ಮತ್ತು ಜನ್ಯ ಪದ್ಧತಿಯನ್ನು ಹೊಂದಿದೆ. ಹಿಂದೂಸ್ಥಾನಿ ಸಂಗೀತ ರಾಗ ವಿಭಜನೆಯಲ್ಲಿ ರಾಗ - ರಾಗಿಣಿ ಮತ್ತು ಥಾಟ್ ಪದ್ಧತಿಗಳನ್ನು ಹೊಂದಿದೆ.

# 10. ಕರ್ನಾಟಕ ಶಾಸ್ತ್ರೀಯ ಸಂಗೀತ

ಶೀಲ : ಕರ್ನಾಟಕ ಸಂಗೀತ ರಚನೆಗಳ ವಿವರಣೆಗಳೇನು ?

ರಾಮು : ಕರ್ನಾಟಕ ಸಂಗೀತದಲ್ಲಿ ವಾಗ್ಗೇಯಕಾರರಿಂದ ರಚಿಸಲ್ಪಟ್ಟ ಅಸಂಖ್ಯ ರಚನೆಗಳಿವೆ. ಇವು ವೈವಿಧ್ಯಮಯವಾದ ಸಂಗೀತ ರಚನೆಗಳು. ಈ ರಚನೆಗಳು ಧಾತು ಮತ್ತು ಮಾತುಗಳಿಂದ ಅಂದರೆ ಸಂಗೀತ ಮತ್ತು ಸಾಹಿತ್ಯದಿಂದ ಕೂಡಿ ತಾಳಬದ್ಧವಾಗಿರುತ್ತವೆ.

ಸಂಗೀತ ರಚನೆಗಳನ್ನು ಧಾತು ಪ್ರಧಾನ ಮತ್ತು ಸಾಹಿತ್ಯ ಪ್ರಧಾನ ರಚನೆಗಳೆಂದು ವಿಂಗಡಿಸಿ, ಧಾತು ಪ್ರಧಾನವಾದ ರಚನೆಗಳನ್ನು ಅಭ್ಯಾಸಗಾನಗಳೆಂದು, ಸಾಹಿತ್ಯ ಪ್ರಧಾನವಾದ ರಚನೆಗಳನ್ನು ಸಭಾಗಾನ ರಚನೆಗಳೆಂದು ಸಂಗೀತಕಾರರು ಪರಿಗಣಿಸಿದ್ದಾರೆ.

ಶೀಲ : ಅಭ್ಯಾಸಗಾನ ರಚನೆಗಳನ್ನು ವಿವರಿಸಿ ?

ರಾಮು : ಸಂಗೀತ ಕಲಿಕೆಯ ವಿದ್ಯಾರ್ಥಿಗಳಿಗೆ ಸ್ವರದ ವಿವಿಧ ಜೋಡಣೆಯನ್ನು ಕಲಿಸುವ ಪಾಠಗಳನ್ನು ಅಭ್ಯಾಸಗಾನ ರಚನೆ ಎನ್ನುತ್ತಾರೆ.

ಈ ಅಭ್ಯಾಸಗಾನದಲ್ಲಿ ಬರುವಂತಹ ಸರಳ ರಚನೆಗಳನ್ನು ಸಂಗೀತ ಕಛೇರಿಗಳಲ್ಲಿ ಹಾಡಲಾಗುವುದಿಲ್ಲ. ಇವು ಕಲೆಯ ಉದ್ಧಾರಕ್ಕಾಗಿಯೇ ರಚಿಸಿದ ರಚನೆಗಳು. ಇವುಗಳೇ ಸರಳೆವರಸೆ, ಜಂಟಿವರಸೆ, ದಾಟುವರಸೆ, ತಾರಸ್ಥಾಯಿ ವರಸೆ, ಮಂದ್ರಸ್ಥಾಯಿ ವರಸೆ, ಅಲಂಕಾರಗಳೆಂಬ ಸ್ವರಾವಳಿಗಳು, ಜೊತೆಗೆ ಗೀತೆಗಳು, ಜತಿಸ್ವರಗಳು, ಸ್ವರಜತಿಗಳು.

ಶೀಲ : ಸಭಾಗಾನ ರಚನೆಗಳನ್ನು ವಿವರಿಸಿ ?

ರಾಮು : ಸಭೆಗಳಲ್ಲಿ ಪ್ರದರ್ಶಿಸಲ್ಪಡುವ ರಚನೆಗಳಿಗೆ ಸಭಾಗಾನ ರಚನೆ ಎನ್ನುತ್ತಾರೆ. ಇವು ಶಾಸ್ತ್ರಜ್ಞಾನ ಮತ್ತು ಸಂಗೀತ ಇವೆರಡರಲ್ಲೂ ಪಾಂಡಿತ್ಯ ಪಡೆದವರು ರಚಿಸಿದ ಕೃತಿಗಳು. ಇವು ವರ್ಣ, ಕೃತಿ, ಕೀರ್ತನೆ, ಪದ, ಜಾವಳಿ, ತಿಲ್ಲಾನ, ವಚನ ಮುಂತಾದವು.

ಶೀಲ : "ಕರ್ನಾಟಕ ಸಂಗೀತ ಪಿತಾಮಹ" ಎಂದು ಯಾರನ್ನು ಕರೆಯುತ್ತಾರೆ ? ಕರ್ನಾಟಕ ಸಂಗೀತಕ್ಕೆ ಅವರ ಕೊಡುಗೆಯೇನು ?

ರಾಮು : ಪುರಂದರದಾಸರನ್ನು "ಕರ್ನಾಟಕ ಸಂಗೀತ ಪಿತಾಮಹ" ಎಂದು ಕರೆಯುತ್ತಾರೆ.

ಕರ್ನಾಟಕ ಸಂಗೀತಕ್ಕೆ ಸುಭದ್ರವಾದ ತಳಹದಿ ಹಾಕಿ ನಿರ್ದಿಷ್ಟ ಸ್ವರೂಪವನ್ನು ಕೊಟ್ಟವರು ಇವರೇ. ಸಂಗೀತಾಭ್ಯಾಸಿಗಳು ಸಂಗೀತವನ್ನು ಸುಲಭವಾಗಿ ಕಲಿಯಲು ಸಹಾಯವಾಗುವಂತೆ ಸರಳೆವರಸೆ, ಜಂಟೀವರಸೆ, ದಾಟುವರಸೆ, ತಾರಸ್ಥಾಯಿವರಸೆ, ಮಂದ್ರಸ್ಥಾಯಿ ವರಸೆ, ಅಲಂಕಾರಗಳೆಂಬ ಸ್ವರಾವಳಿಗಳನ್ನು ರಚಿಸಿ, ಮಾಯಾಮಾಳವಗೌಳ ರಾಗದಿಂದ ಸಂಗೀತಾಭ್ಯಾಸವು ಆರಂಭವಾಗುವ ವ್ಯವಸ್ಥೆ ಮಾಡಿದವರು ಈ ಪುರಂದರದಾಸರು. ಸಂಗೀತಾಭ್ಯಾಸಿಗಳಿಗೆ ಅನುಕೂಲವಾಗಿರುವ ಪಾಠಗಳಾದ ಸ್ವರಾವಳಿಗಳನ್ನು, ತಾಳಾಲಂಕಾರಗಳನ್ನು, ಸರಳ, ಸುಲಭ, ಸಂಪೂರ್ಣ, ರಾಗವಾದ ಮಾಯಾಮಾಳಗೌಳದಲ್ಲೂ ಮತ್ತು ಅದರ ಜನ್ಯ ರಾಗವಾದ ಮಲಹರಿಯಲ್ಲಿ ಸರಳವಾದ ಪಿಳ್ಳಾರಿ ಗೀತೆಗಳನ್ನು ರಚಿಸಿದರು. ಇಂದು ಇಡೀ ದಕ್ಷಿಣ ಭಾರತದಲ್ಲಿ ಕರ್ನಾಟಕ ಸಂಗೀತದ ಶಿಕ್ಷಣವು ಈ ಗೀತೆಗಳಿಂದಲೇ ಆರಂಭವಾಗುತ್ತದೆ.

ಶೀಲ : 'ಸ್ವರಾವಳಿ' ಎಂದರೇನು ?

ರಾಮು : ಸ್ವರಗಳ ಗುಂಪಿಗೆ ಸ್ವರಾವಳಿ ಎಂದು ಹೆಸರು.

ಸಂಗೀತ ಅಭ್ಯಾಸ ಗಾನ ರಚನೆಗಳಲ್ಲಿ ಸರಳೆ ವರಸೆ, ತಾರಸ್ಥಾಯಿ ವರಸೆ, ಮಂದ್ರಸ್ಥಾಯಿ ವರಸೆ, ದಾಟು ವರಸೆ, ಜಂಟಿ ವರಸೆ, ಮತ್ತು ಅಲಂಕಾರಗಳನ್ನು ಸ್ವರಾವಳಿ ಎಂದು ಕರೆಯುತ್ತಾರೆ.

ಶೀಲ : 'ಸರಳೆ ವರಸೆ' ಎಂದರೇನು ?

ರಾಮು : ಸಪ್ತಸ್ವರಗಳ ಕ್ರಮವಾದ ಮತ್ತು ಸರಳವಾದ ಜೋಡಣೆಗೆ ಸರಳೆ ವರಸೆಯೆಂದು ಹೆಸರು.

ಉದಾ : ಸ ರಿ ಗ ಮ ಪ ದ ನಿ ಸ - ಸ ನಿ ದ ಪ ಮ ಗ ರಿ ಸ

ಈ ವರಸೆಗಳಲ್ಲಿ ಮಧ್ಯಸ್ಥಾಯಿ ಸ್ವರಗಳು ಪ್ರಧಾನವಾಗಿದ್ದು, ತಾರ ಷಡ್ಜವನ್ನು ಮಾತ್ರ ಹೊಂದಿರುತ್ತದೆ.

ಇವು ಮಾಯಮಾಳವಗೌಳ ಆದಿತಾಳದಲ್ಲಿರುವ ಸ್ವರಾವಳಿಗಳು. ಈ ರೀತಿಯ ಸರಳೆಗಳು ಏಳಕ್ಕಿಂತ ಹೆಚ್ಚು ಇವೆ.

ಶೀಲ : ಮಧ್ಯಮ ಸ್ಥಾಯಿ ಎಂದರೇನು ?

ರಾಮು : ಸಂಗೀತದಲ್ಲಿ ಶಬ್ದಗಳ ಭಾವಗಳನ್ನು ಅರ್ಥಮಾಡಿಕೊಳ್ಳಲು ಮೂರು ಮಟ್ಟದಲ್ಲಿ ಅಂದರೆ ಸ್ಥಾಯಿಯಲ್ಲಿ ಹಾಡುತ್ತಾರೆ. ಸಾಮಾನ್ಯವಾಗಿ ಹಾಡುವ ಸ್ಥಾಯಿಗೆ ಅಂದರೆ ಆಧಾರ ಷಡ್ಜದ ಸ ರಿ ಗ ಮ ಪ ದ ನಿ ಗೆ ಮಧ್ಯಮಸ್ಥಾಯಿ ಎಂದು ಹೆಸರು

ಶೀಲ : 'ತಾರಸ್ಥಾಯಿ ವರಸೆ' ಎಂದರೇನು ?

ರಾಮು : ಆಧಾರ ಷಡ್ಜದಿಂದ ಪ್ರಾರಂಭಿಸಿ ಆರೋಹಣ ಕ್ರಮದಲ್ಲಿ ಮಧ್ಯಸ್ಥಾಯಿ ಮತ್ತು ತಾರಸ್ಥಾಯಿ ಸ್ವರಗಳನ್ನು ಹಂತಹಂತವಾಗಿ ಹೊಂದಿರುವ ಸರಳವಾದ ಸ್ವರ ಜೋಡಣೆಗೆ ತಾರ ಸ್ಥಾಯಿ ವರಸೆಗಳೆಂದು ಕರೆಯಲಾಗಿದೆ.

ಶೀಲ : 'ಮಂದ್ರಸ್ಥಾಯಿ ವರಸೆ' ಎಂದರೇನು ?

ರಾಮು : ತಾರಸ್ಥಾಯಿ ಷಡ್ಜದಿಂದ ಪ್ರಾರಂಭಿಸಿ, ಅವರೋಹಣ ಕ್ರಮದಲ್ಲಿ ಬರುವ ಸ್ವರಗಳ ಕ್ರಮವಾದ ಜೋಡಣೆಗೆ ಮಂದ್ರಸ್ಥಾಯಿವರಸೆ ಎನ್ನಲಾಗಿದೆ.

ಈ ವರಸೆಗಳಲ್ಲಿ ಮಂದ್ರಸ್ಥಾಯಿ ಸ್ವರಗಳು ಮತ್ತು ಮಧ್ಯಸ್ಥಾಯಿ ಸ್ವರಗಳೊಂದಿಗೆ ತಾರಷಡ್ಜವೂ ಬರುತ್ತದೆ.

ಶೀಲ : 'ದಾಟು ವರಸೆ' ಎಂದರೇನು ?

ರಾಮು : ಸಪ್ತಸ್ವರಗಳ ಜೋಡಣೆಯು ಕ್ರಮಬದ್ಧವಾಗಿರದೆ ವಕ್ರಗತಿಯಲ್ಲಿ ಸಂಚರಿಸುತ್ತವೆ. ಅಂದರೆ ಒಂದು, ಎರಡು ಅಥವಾ ಮೂರು ಸ್ವರಗಳನ್ನು ಬಿಟ್ಟು ಮುಂದಿನ ಸ್ವರಗಳನ್ನು ಹೊಂದಿರುವುದಕ್ಕೆ ದಾಟು ವರಸೆಯೆಂದು ಹೆಸರು.

ಉದಾ : ಸ ಗ ರಿ ಮ ಗ ನಿ.

ಶೀಲ : 'ಜಂಟಿ ವರಸೆ' ಎಂದರೇನು ?

ರಾಮು : ಸಪ್ತಸ್ವರಗಳ ಜೋಡಣೆಯಲ್ಲಿ ಪ್ರತಿಯೊಂದು ಸ್ವರಗಳು ಎರಡೆರಡು ಜೋಡಿಯಾಗಿ ಅಂದರೆ ಜಂಟಿಯಾಗಿ ಬರುವುದರಿಂದ ಜಂಟಿ ವರಸೆಯೆಂದು ಹೆಸರು.

ಉದಾ : ಸ ಸ ರಿ ರಿ ಗ ಗ ಮ ಮ ಪ ಪ ದ ದ ನಿ ನಿ ಸ ಸ.

ಈ ರೀತಿ ಜಂಟಿ ಸ್ವರಗಳಿಂದ ಆರಂಭವಾಗುವ ಜಂಟಿ ವರಸೆಗಳು 5 ಕ್ಕಿಂತ ಹೆಚ್ಚು ಇವೆ. ಈ ಜಂಟಿ ಸ್ವರಗಳಲ್ಲಿ ಎರಡನೆಯ ಸ್ವರಕ್ಕೆ ಹೊಡೆತವಿದ್ದು, ಸ್ಫುರಿತ ಗಮಕವು ಪ್ರಯೋಗವಾಗುತ್ತದೆ.

ಶೀಲ : 'ಅಲಂಕಾರ' ಎಂದರೇನು ?

ರಾಮು : ಸಪ್ತಸ್ವರಗಳ ವಿವಿಧ ರೀತಿಯ ಸಂಯೋಜನೆಯಿಂದ, ಸೂಳಾದಿ ಸಪ್ತತಾಳಗಳಲ್ಲೂ ಮತ್ತು ಅದರ ಲಘುವಿನ ಐದು ಜಾತಿಗಳಲ್ಲೂ, ನಿಯೋಜಿತವಾಗಿ ಅಲಂಕೃತವಾದ ಸ್ವರಾವಳಿಗಳನ್ನು 'ಅಲಂಕಾರ'ಗಳೆಂದು ಕರೆಯುತ್ತಾರೆ.

ಸ್ಥಾಯಿ, ಆರೋಹಿ, ಅವರೋಹಿ, ಸಂಚಾರಿ ಎಂಬ ವರ್ಣ ಭೇದಗಳನ್ನನುಸರಿಸಿ ಕಲಾಪರಿಪೂರ್ಣತೆಯಿಂದ ಕೂಡಿ ಸಂಗೀತಕ್ಕೆ ಅಂದಕೊಡುವ ಸ್ವರಗಳ ಜೋಡಣೆಗಳನ್ನೇ ಅಲಂಕಾರಗಳೆಂದು ಕರೆಯುವುದು.

ಅಲಂಕಾರಗಳು ಕಾವ್ಯದ ಸೊಗಸನ್ನು ರಾಗಬದ್ಧವಾಗಿ, ಅರ್ಥಪೂರ್ಣವಾಗಿ ಗಾಂಭೀರ್ಯ ಬೆಡಗುಗಳಿಂದ ಹೆಚ್ಚಿಸಿ ತಡೆಯಿಲ್ಲದೆ ಮುಂದುವರಿಯುವ ಶಬ್ದಾರ್ಥ ವೈಚಿತ್ರ್ಯ. ಮುಖ್ಯವಾದ ಅಲಂಕಾರಗಳು ಏಳು ಇದ್ದರೂ, ಮೂವತ್ತೈದು ಅಲಂಕಾರಗಳು ರಚಿತವಾಗಿವೆ.

ಶೀಲ : ಗೋಪುಚ್ಛ ಅಲಂಕಾರ ಎಂದರೇನು ?

ರಾಮು : ಹಸುವಿನ ಬಾಲದ ರೀತಿ ಸಣ್ಣದಾಗಿ ರಾಗಭಾವಕ್ಕೆ ಸಾಹಿತ್ಯ ಭಾವಕ್ಕೆ ಹೊಂದಿಕೊಂಡು ಹೋಗುವ ಸಾಹಿತ್ಯಾಲಂಕಾರ.

ಉದಾ : ಅಗರಾಜಯೋಗ ವೈಭವಂ
ರಾಜಯೋಗ ವೈಭವಂ
ಯೋಗ ವೈಭವಂ
ವೈಭವಂ
ಭವಂ
ವಂ

ಶೀಲ : ಸ್ರೋತ್ರೋವಾಹ ಅಲಂಕಾರ ಎಂದರೇನು ?

ರಾಮು : ಉದಾ : ಶಂ
ಪ್ರಕಾಶಂ
ರೂಪ ಪ್ರಕಾಶಂ
ಸ್ವರೂಪ ಪ್ರಕಾಶಂ
ತತ್ವ ಸ್ವರೂಪ ಪ್ರಕಾಶಂ
ಸಕಲ ತತ್ವ ಸ್ವರೂಪ ಪ್ರಕಾಶಂ
ಶಕ್ತ್ಯಾದಿ ಸಕಲ ತತ್ವ ಸ್ವರೂಪ ಪ್ರಕಾಶಂ
ಶಿವಶಕ್ತ್ಯಾದಿ ಸಕಲ ತತ್ವ ಸ್ವರೂಪ ಪ್ರಕಾಶಂ

ನದಿ ಪಾತ್ರದ ರೀತಿ ಹರಿದುಕೊಂಡು ಅರ್ಥ, ಭಾವ, ರಾಗದೊಂದಿಗೆ ಹೋಗುವ ಸಾಹಿತ್ಯಾಲಂಕಾರಕ್ಕೆ ಸ್ರೋತ್ರೋವಾಹ ಅಲಂಕಾರವೆಂದು ಹೆಸರು.

ಶೀಲ : ಗೀತ ಎಂದರೇನು ?

ರಾಮು : ಮಾತು ಮತ್ತು ಧಾತುಗಳ ಮೇಳೈಕ್ಯ ಕಲ್ಪಿಸುವ ರಚನೆಗೆ ಗೀತ ಎಂದು ಹೆಸರು. ಸಂಗೀತ ಕಲಿಯುವವರಿಗೆ ರಾಗದ ಸ್ಥೂಲ ರೂಪ ತೋರಿಸಿ ಗಾನ ರೂಪದಲ್ಲಿ ಸಾಹಿತ್ಯ ಹಾಡಲು ಸಾಧನವಾದ ತಾಳಬದ್ಧ ರಚನೆಯೇ ಗೀತ.

ಶೀಲ : ಗೀತೆ ಎಂದರೇನು ?

ರಾಮು : ಶಾಸ್ತ್ರೀಯವಾಗಿ ಸಂಗೀತ, ಸಾಹಿತ್ಯಗಳ ಪರಿಚಯ ಮಾಡಿಸುವ ರಚನೆಗೆ ಗೀತೆಯೆಂದು ಹೆಸರು. ಬಳಕೆಯಲ್ಲಿ ಹಾಡುಗಳನ್ನು ಗೀತೆಯೆಂದು ಕರೆಯುವುದುಂಟು. ಗೀತೆಯ ಸಾಹಿತ್ಯವು ಧಾತುವಿಗೆ ಅನುಗುಣವಾಗಿರುತ್ತದೆ. ಮತ್ತು ಗೀತೆ ಮಧ್ಯಮ ಕಾಲದ ನಡೆಯನ್ನು ಹೊಂದಿರುತ್ತದೆ. ಸಾಮಾನ್ಯವಾಗಿ ಎಲ್ಲ ಪದ್ಯ ರೂಪದ ರಚನೆ ಮತ್ತು ಹಾಡುಗಳೂ ಗೀತೆಗಳು ಎನ್ನಿಸುತ್ತವೆ. ಗೀತೆಯು ಅದು ರಚಿಸಲ್ಪಟ್ಟಿರುವ ರಾಗವನ್ನು ಸುಲಭ ರೀತಿಯಲ್ಲಿ ವಿಸ್ತರಿಸುತ್ತದೆ. ಸಪ್ತತಾಳಗಳಲ್ಲಿಯೂ ಅವುಗಳ ಭೇದಗಳಲ್ಲಿಯೂ ಗೀತೆಗಳು ರಚಿಸಲ್ಪಟ್ಟಿವೆ. ಇವುಗಳ ಸಂಗೀತ, ಸಾಹಿತ್ಯ ಕಲಿಯಲು ಸುಲಭವಾಗಿವೆ ಹಾಗೂ ದೇವತಾಸ್ತುತಿಗಳಾಗಿರುತ್ತವೆ.

ಶೀಲ : ಗೀತೆಯಲ್ಲಿ ಎಷ್ಟು ಅಂಗಗಳು ಇವೆ ?

ರಾಮು : ಗೀತೆಗಳು 4 ಅಂಗಗಳನ್ನು ಹೊಂದಿವೆ. ಅವೇ ರಾಗ, ತಾಳ, ಸ್ವರ ಮತ್ತು ಪದ ಅಥವಾ ಸಾಹಿತ್ಯ.

ಶೀಲ : ಗೀತೆಗಳಲ್ಲಿ ಎಷ್ಟು ಬಗೆಗಳಿವೆ ?

ರಾಮು : ಗೀತೆಗಳಲ್ಲಿ ಸಾಮಾನ್ಯವಾಗಿ 4 ಬಗೆಗಳಿವೆ.

1. ಸಾಮಾನ್ಯ ಗೀತೆ
2. ಲಕ್ಷಣ ಗೀತೆ
3. ಘನರಾಗ ಗೀತೆ
4. ರಾಗ ಮಾಲಿಕಾ

ಶೀಲ : ಸಾಮಾನ್ಯ ಗೀತೆಗಳೆಂದರೇನು ?

ರಾಮು : ಇವು ಹಲವು ತಾಳಗಳಲ್ಲಿಯೂ, ಹಲವು ಭಾಷೆಗಳಲ್ಲಿಯೂ ಇದ್ದು ಸುಲಭವಾದ ನಡೆಯಲ್ಲಿರುತ್ತವೆ. ಸಾಹಿತ್ಯ ದೈವಸಂಬಂಧವಾಗಿಯೂ, ಲೌಕಿಕವಾಗಿಯೂ ಇರುವುದಲ್ಲದೆ, ಈ ಗೀತೆಗಳು ರಾಗ ಕಳೆಯನ್ನು ಸ್ವಲ್ಪ ಸ್ವಲ್ಪವಾಗಿ ತೋರಿಸುತ್ತವೆ. ಸಾಮಾನ್ಯ ಗೀತೆಯನ್ನು ಸಾಧಾರಣ ಗೀತೆ ಎಂದೂ, ಲಕ್ಷ್ಯ ಗೀತೆಯೆಂದೂ, ಸಂಚಾರಿ ಗೀತೆಯೆಂದೂ ಕರೆಯುವರು.

ಪುರಂದರದಾಸರು ಮಲಹರಿ ರಾಗದಲ್ಲಿ ವಿಘ್ನೇಶ್ವರ, ಮಹೇಶ್ವರ, ವಿಷ್ಣು, ಇವರನ್ನು ಸ್ತುತಿಸಿ ಗೀತೆಗಳನ್ನು ರಚಿಸಿರುವರು. ವಿಘ್ನೇಶ್ವರನನ್ನು ಸ್ತುತಿಸಿ ರಚಿಸಿರುವ ಆರಂಭಗೀತೆಗೆ ಪಿಳ್ಳಾರಿಗೀತೆಯೆಂದು ಹೆಸರು. ಪ್ರಬಂಧದ ಲಕ್ಷಣಗಳನ್ನು ಹೊಂದಿರುವ ಗೀತೆಗೆ ಗೀತ ಪ್ರಬಂಧವೆಂದು ಹೆಸರು.

ಶೀಲ : ಘನರಾಗ ಗೀತೆಗಳು ಎಂದರೇನು ?

ರಾಮು : ನಾಟ, ಆರಭಿ, ಗೌಳ, ಶ್ರೀರಾಗ, ವರಾಳಿ ಮುಂತಾದ ಘನರಾಗಗಳಲ್ಲಿ ರಚಿಸಲ್ಪಟ್ಟಿರುವ ಗೀತೆಗಳಿಗೆ ಘನರಾಗ ಗೀತೆಗಳೆಂದು ಹೆಸರು.

ಶೀಲ : ಲಕ್ಷಣಗೀತೆ ಎಂದರೇನು ?

ರಾಮು : ಸಾಮಾನ್ಯ ಗೀತೆಗಳ ನಂತರ ರೂಪುಗೊಂಡ ಲಕ್ಷಣಗೀತೆಗಳು ಸಾಮಾನ್ಯ ಗೀತೆಗಳಿಗಿಂತ ಸ್ವಲ್ಪ ಕ್ಲಿಷ್ಟವಾಗಿರುತ್ತದೆ. ಲಕ್ಷಣ ಗೀತೆಗಳು, ಯಾವ ರಾಗದಲ್ಲಿ ಗೀತೆಯು ರಚಿಸಲ್ಪಟ್ಟಿದೆಯೋ ಆ ರಾಗದ ಲಕ್ಷಣವನ್ನು ವ್ಯಕ್ತಪಡಿಸುತ್ತವೆ. ಇವುಗಳು ರಾಗದ ವ್ಯಾಕರಣ ಶಾಸ್ತ್ರವನ್ನು ಸಾಹಿತ್ಯದ ಮೂಲಕ ತಿಳಿಯಪಡಿಸುತ್ತವೆ. ಲಕ್ಷಣ ಗೀತೆಗಳು ಕೇವಲ ರಾಗಪರಿಚಯಕ್ಕಾಗಿಯೇ ರಚಿಸಿರುವ ರಚನಾ ವಿಶೇಷ. ಇವುಗಳ ಸಾಹಿತ್ಯದಿಂದ ರಾಗಗಳ ವಿವರಗಳನ್ನು ಪಡೆಯಬಹುದು. ಆ ರಾಗದ ಹೆಸರು, ಸ್ವರಸ್ಥಾನ, ಜನಕ, ಜನ್ಯ, ಆರೋಹಣ, ಅವರೋಹಣ, ವರ್ಜ್ಯಸ್ವರ, ವಕ್ರಸ್ವರ, ಗ್ರಹಸ್ವರ, ನ್ಯಾಸ ಮತ್ತು ಅಂಶಸ್ವರ, ಔಡವ, ಷಾಡವ, ಸಂಪೂರ್ಣ ಪ್ರಭೇದಗಳು, ಅನ್ಯಸ್ವರಗಳು, ಮುಂತಾದ ರಾಗ ಮುಖ್ಯಾಂಶಗಳನ್ನು ತಿಳಿಸುವುದರ ಮೂಲಕ ರಾಗದ ಸಮಗ್ರ ರೂಪವನ್ನು ಚಿತ್ರಿಸುತ್ತದೆ.

ರಾಗದ ಸ್ವರೂಪವನ್ನು ಧಾತುವೂ, ರಾಗದ ವಿವರಣೆಯನ್ನು ಸಾಹಿತ್ಯವೂ ಹೊಂದಿರುತ್ತದೆ. ಇವು ರಾಗಲಕ್ಷಣವನ್ನು ವಿವರಿಸುವ ಪ್ರಬಂಧಗಳಾಗಿವೆ ದೇವತಾ ಸ್ತುತಿಗಳಲ್ಲ.

ಶೀಲ : ಲಕ್ಷಣ ಗೀತೆಗಳಲ್ಲಿ ಎಷ್ಟು ಬಗೆಗಳಿವೆ ?

ರಾಮು : ಲಕ್ಷಣ ಗೀತೆಗಳಲ್ಲಿ ಎರಡು ಬಗೆಗಳಿವೆ.

1. ರಾಗಾಂಗ ಲಕ್ಷಣ ಗೀತೆ
2. ಜನ್ಯರಾಗ ಲಕ್ಷಣ ಗೀತೆ.

ಶೀಲ : ರಾಗ ಮಾಲಿಕಾ ಗೀತೆ ಎಂದರೇನು ?

ರಾಮು : ರಾಗ ಮಾಲಿಕಾ ಗೀತೆಗಳಲ್ಲಿ ಒಂದೊಂದು ಖಂಡವು ಒಂದೊಂದು ರಾಗದಲ್ಲಿರುತ್ತವೆ.

ಶೃಂಗಾರ ರಸ ಅಲ್ಲದೆ ಭಕ್ತಿರಸ ಪ್ರಧಾನವಾದ ಸಾಹಿತ್ಯವನ್ನು ಹೊಂದಿ ತಾಳದ ಸ್ವರೂಪಕ್ಕೆ ತಕ್ಕಂತೆ, ಆವರ್ತಗಳು, ವರ್ಣಕ್ರಮವನ್ನನುಸರಿಸಿ ಆಯಾರಾಗದ ಜೀವಸ್ವರಗಳಿಂದ ಕೂಡಿದ ಎತ್ತುಗಡೆ ಸಾಹಿತ್ಯವನ್ನುಳ್ಳ ಪಲ್ಲವಿ, ಅನುಪಲ್ಲವಿ ಮತ್ತು ಚರಣಗಳು. 9, 14 ಅಥವಾ 16 ರಾಗಗಳಿಂದ ಕೂಡಿರುವುದಲ್ಲದೆ ಆಯಾರಾಗದ ಕೊನೆಯಲ್ಲಿ ಮುಕ್ತಾಯ ಸ್ವರಗಳನ್ನು ಹೊಂದಿರುವ ರಚನೆಗಳಾಗಿರುತ್ತವೆ.

ಶೀಲ : ಸ್ವರಜತಿ ಎಂದರೇನು ?

ರಾಮು : ಸ್ವರಜತಿಯು ಮಧ್ಯಮ ಕಾಲವನ್ನನುಸರಿಸಿ ಭಕ್ತಿ ಅಥವಾ ಶೃಂಗಾರರಸ ಪ್ರಧಾನವಾದ ಸಾಹಿತ್ಯವನ್ನು ಹೊಂದಿ ಪಲ್ಲವಿ, ಅನುಪಲ್ಲವಿ ಮತ್ತು ಚರಣಗಳನ್ನೊಳಗೊಂಡ ರಚನೆ.

ಸ್ವರಜತಿ ರಚನಾ ಪ್ರಕಾರವು ಮಾಧುರ್ಯ ಪ್ರಧಾನವಾದ, ತ್ರಿಶ್ರ, ಚತುರಶ್ರ, ಖಂಡ, ಮಿಶ್ರ ಮತ್ತು ಸಂಕೀರ್ಣ ಜಾತಿಗಳಲ್ಲಿ ಸ್ವರಗಳನ್ನು ತಾಳದ ಮಿತಿಯಲ್ಲಿ, ಸಾಹಿತ್ಯದೊಂದಿಗೆ ಹೊಂದಿರುವ ರಚನೆ.

ಸ್ವರಜತಿಯು ತಾಳಜಾತಿಗಳ ವೈವಿಧ್ಯ ಪ್ರಯೋಗ ಪ್ರದರ್ಶನ ಮಾಡುವುದೊಂದೇ ಅಲ್ಲದೆ, ಮುಂದಿನ ವರ್ಣ ಮತ್ತು ಕೃತಿಗಳ ಅಭ್ಯಾಸಕ್ಕೆ ಮಾರ್ಗದರ್ಶಕವಾಗಿದೆ.

ಸ್ವರಜತಿಗಳು ಪಲ್ಲವಿ, ಅನುಪಲ್ಲವಿ ಮತ್ತು ಚರಣಗಳನ್ನು ಹೊಂದಿ, ರಾಗದ ಪೂರ್ಣ ಸಂಚಾರಕ್ರಮಗಳನ್ನು ಭಾವ ಯುಕ್ತವಾಗಿಯೂ, ಗಮಕಯುಕ್ತವಾಗಿಯೂ, ಹೊರಗೆಡಹುವ ತಾಳಬದ್ಧವಾದ ಸಾಹಿತ್ಯ ಮುಕ್ತ ರಚನೆಗಳು.

ಈ ರಚನೆಯು ವರ್ಣಕ್ಕೆ ತಳಹದಿಯಾಗುತ್ತದೆ. ಸ್ವರಜತಿಯಲ್ಲಿ ನಡೆ ಮತ್ತು ಗತಿಗಳನ್ನೂ ಕಾಣಬಹುದು. ಸಾಮಾನ್ಯವಾಗಿ ಸ್ವರಜತಿಯ ಚರಣಗಳು ಬೇರೆ ಬೇರೆ ಧಾತುಗಳನ್ನು ಹೊಂದಿರುತ್ತವೆ. ಕೆಲವು ಸಾಹಿತ್ಯದಿಂದಲೂ, ಕೆಲವು ಕೇವಲ ಸ್ವರಗಳ ಜೋಡಣೆಯಿಂದಲೂ ಕೂಡಿರುತ್ತವೆ. ಅವುಗಳು ಸಾಗುವ ನಡೆಯಲ್ಲಿಯೂ ಧಾತುವಿನ ನಿರ್ಮಾಣದಲ್ಲಿಯೂ ವರ್ಣವನ್ನು ಹೋಲುತ್ತವೆ. ಸಾಹಿತ್ಯವೂ ಶೃಂಗಾರ ಯುಕ್ತವಾಗಿಯೋ, ವೀರರಸಯುಕ್ತವಾಗಿಯೋ ಇರುತ್ತದೆ.

ಸ್ವರಸಾಹಿತ್ಯವುಳ್ಳ ಸ್ವರಜತಿಗಳು ಶ್ಯಾಮಾಶಾಸ್ತ್ರಿಗಳಿಂದಲೂ, ಸ್ವರಪ್ರಧಾನವಾದ ಸ್ವರಜತಿಗಳು ವೀಣೆ ಶೇಷಣ್ಣ, ವೀಣೆ ಸುಬ್ಬಣ್ಣನವರಿಂದಲೂ ರಚಿಸಲ್ಪಟ್ಟಿವೆ. ಶಾಮಾಶಾಸ್ತ್ರಿಗಳು ತಾಳಸ್ವರಜತಿಯನ್ನೂ ರಚಿಸಿದ್ದಾರೆ. ಅಲ್ಲದೆ ಇವರು ಕೃತಿಗಳಂತೆಯೇ ಸ್ವರಜತಿಯನ್ನು ರಚಿಸಿದ್ದಾರೆ.

ನಾಟ್ಯಕ್ಕಾಗಿ ಏರ್ಪಟ್ಟ ಸ್ವರಜತಿಗಳಲ್ಲಿ ಅಲ್ಲಲ್ಲಿ ಜತಿಗಳೂ ಇರುತ್ತವೆ. ಇದರಲ್ಲಿ ಅನುಪಲ್ಲವಿಯ ಸ್ವರ, ಸಾಹಿತ್ಯ, ಜತಿಗಳಿಂದ ಮುಕ್ತಾಯಗೊಂಡಿದೆ. ಇದಕ್ಕೆ ಮುಕ್ತಾಯಿ ಜತಿಸ್ವರ ಎಂದು ಹೆಸರು.

ಶೀಲ : ಜತಿಸ್ವರ ಎಂದರೇನು ?

ರಾಮು : ಜತಿಗಳನ್ನು ಸ್ವರಗಳಲ್ಲಿಯೇ ಅಳವಡಿಸಿರುವ ರಚನೆಗೆ ಜತಿಸ್ವರ ಎಂದು ಹೆಸರು. ಜತಿಸ್ವರವು ಲಯಸಂಬಂಧವಾದ ಮುಖ್ಯ ರಚನೆ. ಜತಿಸ್ವರವು ಸಾಹಿತ್ಯರಹಿತವಾದ ರಾಗದ ಪೂರ್ಣ ಸ್ವರೂಪ ಮತ್ತು ಸಂಚಾರ ಕ್ರಮಗಳನ್ನು ಭಾವಮುಕ್ತವಾಗಿಯೂ, ಗಮಕಯುಕ್ತವಾಗಿಯೂ ಹೊರಗೆಡುವ ರಚನಾಪ್ರಕಾರ. ಇದು ಪಲ್ಲವಿ, ಅನುಪಲ್ಲವಿ ಮತ್ತು ಚರಣಗಳೆಂಬ ಅಂಗಗಳನ್ನು ಹೊಂದಿದೆ. ಸ್ವರಜತಿಗೆ ಸಾಹಿತ್ಯವಿದೆ. ಆದರೆ ಜತಿ ಸ್ವರಕ್ಕೆ ಸಾಹಿತ್ಯವಿರುವುದಿಲ್ಲ. ನೃತ್ಯದಲ್ಲಿ ಪ್ರಾಧಾನ್ಯತೆಯನ್ನು ಹೊಂದಿ ಅದರ ತಾಳದ ಚೌಕಟ್ಟಿನಲ್ಲಿ ಮೃದಂಗದ ಜತಿಗಳನ್ನು ಹೊಂದಿರುತ್ತದೆ.

ವಿವಿಧ ರೀತಿಯ ಜತಿಯ ಜೋಡಣೆಗಳನ್ನು ಆಧಾರವಾಗಿಟ್ಟುಕೊಂಡು ರಚಿಸಲ್ಪಟ್ಟಿರುವುದರಿಂದಲೇ ಇದಕ್ಕೆ ಜತಿಸ್ವರವೆಂದು ಹೆಸರು. ಜತಿಸ್ವರವು ಮೃದಂಗದ ಮುಕ್ತಾಯ ಸ್ವರಗಳನ್ನೊಳಗೊಂಡಂತೆ ಇರುತ್ತದೆ. ಕೆಲವು ವೇಳೆ ಜತಿಸ್ವರವು 3 ಅಥವಾ 4 ಚರಣಗಳನ್ನು ಹೊಂದಿರುತ್ತದೆ. ಪ್ರತಿಯೊಂದು ಚರಣಗಳಿಗೂ ಬೇರೆ ಬೇರೆ ಧಾತುಗಳಿರುವುದೂ ಸ್ವಾಭಾವಿಕ.

ಕೆಲವು ಜತಿಸ್ವರಗಳಲ್ಲಿ ಪಲ್ಲವಿ, ಅನುಪಲ್ಲವಿಗಳು ಜತಿಗಳಿಂದ ಕೂಡಿದ್ದು, ಚರಣಗಳು ಜತಿಗಳು ಮತ್ತು ಸ್ವರಗಳಿಂದ ಕೂಡಿರುತ್ತವೆ ಇವುಗಳನ್ನು "ಶಬ್ದ ಪಲ್ಲವಿ"ಗಳೆಂದೂ ಕರೆಯುತ್ತಾರೆ.

ಕೆಲವು ಜತಿಸ್ವರಗಳಲ್ಲಿ ಮುಕ್ತಾಯಿ ಸ್ವರಗಳು, ಅರ್ಧ ಅವರ್ತ ಜತಿಗಳಿಂದಲೂ, ಕೂಡಿರುತ್ತವೆ. ಇವನ್ನು "ಸ್ವರ ಪಲ್ಲವಿ" ಎಂದೂ ಕರೆಯುವರು.

ಶೀಲ : ವರ್ಣಗಳು ಎಂದರೇನು ?

ರಾಮು : ಕರ್ನಾಟಕ ಸಂಗೀತದಲ್ಲಿನ ವೈಶಿಷ್ಟ್ಯಪೂರ್ಣ ರಚನೆಯಾದ ವರ್ಣವು ಅಭ್ಯಾಸಗಾನ, ಸಭಾಗಾನ ಎರಡರಲ್ಲೂ ಬೆಳಗಿ ಸೊಗಸು ನೀಡುತ್ತದೆ.

ಚಿತ್ರಕಲೆಯಲ್ಲಿ ಚಿತ್ರದ ಸ್ವರೂಪವನ್ನು ಬಣ್ಣವು ಹೇಗೆ ಉಂಟುಮಾಡುತ್ತದೆಯೋ ಹಾಗೆ ಸಂಗೀತದಲ್ಲಿ ರಾಗದ ಒಂದು ಚಿತ್ರವನ್ನು ರೂಪಿಸಿ ತೋರಿಸುವಂತಹ ರಚನೆಯೇ ವರ್ಣ.

ಸ್ವರಗಳ ಸಮುಚ್ಚಯಕ್ಕೆ, ಗಾನ ಕ್ರಿಯೆಗೆ ವರ್ಣವೆಂದು ಹೆಸರು. ಅಂದರೆ ವರ್ಣದ ಧಾತುವಿನಲ್ಲಿ ಆರೋಹಿ, ಅವರೋಹಿ, ಸ್ಥಾಯಿ ಮತ್ತು ಸಂಚಾರಿಗಳೆಂಬ ವರ್ಣಗಳು ಹೆಣೆಯಲ್ಪಟ್ಟಿರುವುದರಿಂದ ಇದಕ್ಕೆ ವರ್ಣವೆಂದು ಹೆಸರು. ವರ್ಣದಲ್ಲಿ ಭಕ್ತಿ ಮತ್ತು ಶೃಂಗಾರ ಸೇರಿ ಮಧುರ ಭಾವವು ಬರುತ್ತದೆ. ಇದೇ ಆತ್ಮಾರ್ಪಣೆ.

ವರ್ಣಗಳು ಪ್ರೌಢ ರೀತಿಯ ರಚನೆಗಳಾಗಿದ್ದು, ಸಭಾಗಾನದಲ್ಲಿ ಇವುಗಳ ಕ್ರಮಬದ್ಧವಾದ ನಿರೂಪಣೆಗೆ ಗಾಯಕನು ಅಸಾಮಾನ್ಯ ಸಂಗೀತ ಜ್ಞಾನ, ತಾಳದ ನಿರ್ದಿಷ್ಟತೆ ಮತ್ತು ಕಲ್ಪನಾ ಸಾಮರ್ಥ್ಯಗಳನ್ನು ಹೊಂದಿರಬೇಕು.

ಶೀಲ : ವರ್ಣದ ಅಂಗಗಳು ಯಾವುವು ?

ರಾಮು : 1. ಪಲ್ಲವಿ,
2. ಅನುಪಲ್ಲವಿ ಇವುಗಳು ಪೂರ್ವಾಂಗ.
3. ಮುಕ್ತಾಯಸ್ವರ (ಚಿಟ್ಟೆಸ್ವರ)

4. ಚರಣ (ಎತ್ತುಗಡೆ)
5. ಚರಣದ ಸ್ವರಗಳು (ಎತ್ತುಗಡೆಸ್ವರ) ಇವು ಉತ್ತರಾಂಗ.

ಹಿಂದೆ ಚರಣಗಳನ್ನು ಎತ್ತುಗಡೆ, ಪಲ್ಲವಿ, ಉಪಪಲ್ಲವಿ, ಚಿಟ್ಟೆ ಪಲ್ಲವಿ, ಎಂದು ಕರೆಯಲಾಗುತ್ತಿದ್ದಿತು. ವರ್ಣದಲ್ಲಿ ಪೂರ್ವಾಂಗ ಮತ್ತು ಉತ್ತರಾಂಗಗಳು ಸಮನಾಗಿರುತ್ತವೆ. ವರ್ಣಗಳ ಸಾಹಿತ್ಯವು ವಿಶಾಲ ವ್ಯಾಪ್ತಿಯಿಂದ ಕೂಡಿದ್ದು ಸ್ವರಗಳ ಜೋಡಣೆಯ ಆಯಾ ತಾಳದ ಜಾತಿಗಳಿಗನುಸಾರವಾಗಿ ಇರುತ್ತದೆ.

ಸಂಗೀತ ಕಛೇರಿಯ ಪ್ರಾರಂಭದಲ್ಲಿ ವರ್ಣವನ್ನು ಹಾಡುವುದು ವಾಡಿಕೆ. ಇದು ರಾಗದ ಸೂಕ್ಷ್ಮವಾದ ಅಂಶಗಳನ್ನು ಸೌಂದರ್ಯವನ್ನು ಹೊರಗೆಡಹುವುದರಲ್ಲಿ ವಿಶೇಷ ಪರಿಣಾಮಕಾರಿಯಾಗಿದೆ. ವರ್ಣದ ಪಲ್ಲವಿ, ಅನುಪಲ್ಲವಿ ಮತ್ತು ಚರಣಗಳ ಸಾಹಿತ್ಯದ ಪ್ರತಿ ಅಕ್ಷರಕ್ಕೂ, ಅಕಾರ, ಇಕಾರಾದಿಗಳನ್ನು ಹೆಚ್ಚಾಗಿ ಉಪಯೋಗಿಸುವುದು ವಾಡಿಕೆ. ಸಾಹಿತ್ಯಾಕ್ಷರಗಳು ಹೆಚ್ಚು ಅಂತರಗಳುಳ್ಳವಾಗಿದ್ದು, ಅಕಾರ, ಇಕಾರಾದಿಗಳ ಉಪಯೋಗಕ್ಕೆ ಅವಕಾಶ ಕಲ್ಪಿಸಿಕೊಡುತ್ತವೆ.

ಶೀಲ : ವರ್ಣದ ಬಗೆಗಳು ಎಷ್ಟು ?

ರಾಮು : ವರ್ಣದಲ್ಲಿ ತಾನವರ್ಣಗಳೆಂದೂ, ಪದವರ್ಣಗಳೆಂದೂ, ರಾಗಮಾಲಿಕಾ ವರ್ಣಗಳೆಂದೂ ವಿವಿಧ ಬಗೆಗಳುಂಟು. ಇವುಗಳು ಆದಿತಾಳ, ರೂಪಕತಾಳ, ಅಟ್ಟತಾಳ, ಝಂಪೆ ತಾಳಗಳಲ್ಲಿರುತ್ತವೆ.

ಶೀಲ : ತಾನವರ್ಣ ಎಂದರೇನು ?

ರಾಮು : ಈ ರಚನೆಯಲ್ಲಿ ತಾನರೂಪದ ಮತ್ತು ತಾನ ಜತಿರೂಪದ ಸ್ವರಗಳ ಜೋಡಣೆಯು ಪ್ರಮುಖವಾದ ಅಂಗವಾದ್ದರಿಂದ ಇದಕ್ಕೆ ತಾನವರ್ಣವೆಂದು ಹೆಸರು. ಇವು ಸಂಗೀತ ಕಛೇರಿಯ ಪ್ರಾರಂಭದಲ್ಲಿ ಹಾಡಲ್ಪಡುತ್ತವೆ. ಇದರಲ್ಲಿ ಪಲ್ಲವಿ, ಅನುಪಲ್ಲವಿ ಚರಣಗಳಿಗೆ ಮಾತ್ರ ಸಾಹಿತ್ಯವಿರುತ್ತದೆ. ಚಿಟ್ಟೆಸ್ವರ ಮತ್ತು ಎತ್ತುಗಡೆ ಸ್ವರಗಳಿಗೆ ಸಾಹಿತ್ಯ ವಿರುವುದಿಲ್ಲ. ಸಾಹಿತ್ಯಾಕ್ಷರಗಳು ಕಡಿಮೆಯಾಗಿದ್ದು ದೀರ್ಘ ಲಯವನ್ನು ಹೊಂದಿರುತ್ತದೆ.

ರಾಗದ ಪೂರ್ಣ ಚಿತ್ರವನ್ನು, ಗಂಭೀರವಾದ ರೀತಿಯಲ್ಲಿ, ತಾಳದ ಚೌಕಟ್ಟಿನಲ್ಲಿ ಗಮಕಯುಕ್ತವಾಗಿಯೂ, ಭಾವವಾಗಿಯೂ, ತರಂಗರೂಪದಲ್ಲಿ ಸಾಹಿತ್ಯದೊಂದಿಗೆ, ತಾನದ ರೀತಿಯಲ್ಲಿ ತೋರಿಸುವ ರಚನೆಗೆ ತಾನವರ್ಣವೆಂದು ಹೆಸರು.

ಅಭ್ಯಾಸ ಗಾನದಲ್ಲಿ ಕೊನೆಯದಾಗಿ ಕಲಿಯುವ ರಚನೆ ತಾನವರ್ಣ. ತಾನವರ್ಣಗಳಲ್ಲಿ ಸ್ವರ ಮತ್ತು ಗೇಯ ಭಾಗಕ್ಕೆ ಹೆಚ್ಚು ಪ್ರಾಧಾನ್ಯ ಕೊಡಲಾಗುತ್ತದೆ. ಇವುಗಳಲ್ಲಿ ತಾನದ ಗತಿಗಳನ್ನು ಅಳವಡಿಸಿರುವುದರಿಂದ ಈ ವರ್ಣದ ನಡೆ, ಮಧ್ಯಮಕಾಲವನ್ನು ಅಂದರೆ ತಾನವನ್ನು ಹೋಲುತ್ತದೆ. ತಾನವರ್ಣದ ಸಾಹಿತ್ಯವು ಹಿಂದಿನ ಕಾಲದಲ್ಲಿ ಶೃಂಗಾರ ರಸಪ್ರಧಾನವಾಗಿರುತ್ತಿತ್ತು. ಆದರೆ ಆಧುನಿಕ ರಚನೆಗಳು ಭಕ್ತಿರಸ ಪ್ರಧಾನವಾಗಿಯೋ ಆಶ್ರಯದಾತನ ಸ್ತೋತ್ರ ರೂಪದಲ್ಲಿಯೋ ಇರುತ್ತವೆ.

ಶೀಲ : ಪದವರ್ಣ ಎಂದರೇನು ?

ರಾಮು : ಪದವರ್ಣಗಳನ್ನು ಪ್ರಧಾನವಾಗಿ ನೃತ್ಯಕ್ಕೂ ಮತ್ತು ಅಭಿನಯಕ್ಕೂ ಅಳವಡಿಸಲಾಗಿರುತ್ತದೆ. ಇದರಲ್ಲಿ ಸಾಹಿತ್ಯವೇ ಪ್ರಧಾನವಾದ ಅಂಶ. ವಿಳಂಬ ನಡೆಯಲ್ಲಿರುವ ಈ ರಚನಾ ಪ್ರಕಾರವನ್ನು "ಚೌಕವರ್ಣ"ವೆಂದು ಕರೆಯುತ್ತಾರೆ.

ಇದು ತಾನವರ್ಣಕ್ಕಿಂತ ಹೆಚ್ಚು ಕ್ಲಿಷ್ಟವಾದ ರಚನೆ. ಇದರಲ್ಲಿ ಸಾಹಿತ್ಯವು ಹೆಚ್ಚಾಗಿರುತ್ತದೆ. ಪದವರ್ಣವು ಚೌಕ ಕಾಲದಲ್ಲಿದ್ದು, ಶೃಂಗಾರ ರಸಯುಕ್ತವಾದ ಸಾಹಿತ್ಯವನ್ನು ಪ್ರತಿಭಾಗದಲ್ಲಿಯೂ ಹೊಂದಿರುತ್ತದೆ. ಗಾಯಕನ ಭಾವಯುಕ್ತರಾಗ ವೈಶಾಲ್ಯ ಮನೋಧರ್ಮಕ್ಕೆ ಇದರಲ್ಲಿ ಹೆಚ್ಚು ಅವಕಾಶವೀಯುವುದರಿಂದಲೂ

ಚೌಕಕಾಲದಲ್ಲಿರುವುದರಿಂದಲೂ ಚೌಕ ವರ್ಣವೆಂದು, ನಾಟ್ಯಕ್ಕೆ ತಕ್ಕ ಸಾಹಿತ್ಯ ಮತ್ತು ಲಯವಿರುವುದರಿಂದ ಆಡವರ್ಣವೆಂದೂ, "ಪದ"ವೆಂಬ ರಚನೆಯ ಹೋಲಿಕೆಯಿರುವುದರಿಂದ ಅಂದರೆ ಸಾಹಿತ್ಯದ ಮತ್ತು ಲಯದ ಗತಿಗಳಲ್ಲಿ ಪದವನ್ನೇ ಹೋಲುವುದರಿಂದ ಪದವರ್ಣವೆಂದೂ ಕರೆಯಲ್ಪಡುತ್ತದೆ.

ಇದರಲ್ಲಿನ "ಧಾತು" ವಿಳಂಬಕಾಲದಲ್ಲಿದ್ದು, "ಮಾತು"ವಿನಲ್ಲಿ ಕೆಲವೇ ಅಕ್ಷರಗಳಿದ್ದು, ಎಲ್ಲಾ ಅಂಗಗಳೂ ಸಾಹಿತ್ಯದಿಂದ ಕೂಡಿರುತ್ತವೆ. ಧಾತು ಮತ್ತು ಮಾತು ಎರಡೂ ಪದವನ್ನು ಹೋಲುತ್ತವೆ.

ಶೀಲ : ರಾಗಮಾಲಿಕಾ ವರ್ಣ ಎಂದರೇನು ?

ರಾಮು : ರಾಗಮಾಲಿಕಾ ವರ್ಣಗಳಲ್ಲಿ ಪಲ್ಲವಿ, ಅನುಪಲ್ಲವಿ, ಚರಣ ಮತ್ತು ಚಿಟ್ಟೆಸ್ವರವು ಒಂದೊಂದು ರಾಗದಲ್ಲಿರುತ್ತವೆ. ಅಲ್ಲದೆ ಚರಣ ಮತ್ತು ಚರಣದ ಸ್ವರಗಳು ಬೇರೆ ಬೇರೆ ರಾಗಗಳಲ್ಲಿರುತ್ತವೆ. ರಾಗಮಾಲಿಕಾ ವರ್ಣಗಳಲ್ಲಿ ಅಂಗಗಳು ಬೇರೆ ಬೇರೆ ರಾಗಗಳಲ್ಲಿರುತ್ತವೆ. ರಾಗಮಾಲಿಕಾ ತಾನ ವರ್ಣಗಳಿರುವಂತೆ, ರಾಗಮಾಲಿಕಾಪದ ವರ್ಣಗಳೂ ಇವೆ.

ಶೀಲ : ಪ್ರಸಿದ್ಧ ರಾಗಮಾಲಿಕಾ ವರ್ಣಗಳು ಯಾವುವು ?

ರಾಮು :
1. ನವರಾಗ ಮಾಲಿಕಾವರ್ಣ : ಇದು 9 ರಾಗಗಳಲ್ಲಿ ರಚಿಸಲ್ಪಟ್ಟಿದೆ.
2. ದಿನರಾಗ ಮಾಲಿಕಾವರ್ಣ : ಇದು 8 ರಾಗಗಳಲ್ಲಿ ರಚಿಸಲ್ಪಟ್ಟಿದೆ.
3. ಘನರಾಗ ಮಾಲಿಕಾವರ್ಣ : ಇದು 9 ಘನರಾಗಗಳಲ್ಲಿ ರಚಿಸಲ್ಪಟ್ಟಿದೆ.

ಶೀಲ : ಕೀರ್ತನೆ ಎಂದರೇನು ?

ರಾಮು : ಪರಮಾತ್ಮನ ಗುಣವಿಶೇಷಗಳನ್ನು ಗಾನರೂಪದಲ್ಲಿ ವರ್ಣಿಸಿ ಸ್ತೋತ್ರ ಮಾಡುವುದಕ್ಕೆ ಕೀರ್ತನೆ ಎಂದು ಹೆಸರು. ಕೀರ್ತನೆಗಳು ಆಧ್ಯಾತ್ಮಿಕ ತತ್ವವನ್ನೊಳಗೊಂಡ ಅಮರವಾಣಿಗಳು. ಈ ರಚನೆಗಳ ಉದ್ದೇಶ, ಜನ ಸಮುದಾಯದಲ್ಲಿ ಮಾನವತೆಯನ್ನು ಪ್ರಚೋದಿಸಿ, ಭಕ್ತಿ ಮಾರ್ಗ, ಧರ್ಮಮಾರ್ಗಗಳನ್ನು ಬೋಧಿಸುವುದು. ಅದರಿಂದ ಕೀರ್ತನೆಗಳ ಸಾಹಿತ್ಯ ಅತ್ಯಂತ ಸರಳ ಸುಂದರವಾಗಿರುತ್ತವೆ. ಇದು ಭಕ್ತಿಗಾನಕ್ಕೆ ಸೇರಿದ ರಚನೆ. ಇಲ್ಲಿ ಸಂಗೀತ ಶಾಸ್ತ್ರಭಾಗಕ್ಕಿಂತ ಸಾಹಿತ್ಯಕ್ಕೆ ಹೆಚ್ಚು ಪ್ರಾಮುಖ್ಯತೆಯುಂಟು, ಇವುಗಳನ್ನು ಪ್ರಾರ್ಥನಾ ಗೀತ ಅಥವಾ ಸ್ತೋತ್ರವಾಕ್ಯವೆಂದು ಕರೆಯಬಹುದು.

ಈ ರಚನೆಯ ಸಾಹಿತ್ಯದ ವಸ್ತು ದೈವಿಕವಾಗಿರುತ್ತದೆ ಮತ್ತು ಪವಿತ್ರಗಾನದ ಒಂದು ರೂಪ. ಇವು ಪಲ್ಲವಿ, ಅನುಪಲ್ಲವಿ ಮತ್ತು ಅನೇಕ ಚರಣಗಳನ್ನು ಹೊಂದಿದ ರಚನೆಗಳು. ಕೆಲವು ವೇಳೆ ಅನುಪಲ್ಲವಿ ವರ್ಜ್ಯ ಸಾಧ್ಯವೂ ಹೌದು. ಇವುಗಳನ್ನು ದಾಸರ ಪದಗಳೆಂದು ಕರೆಯುವ ವಾಡಿಕೆ ಇದೆ. ಕೀರ್ತನೆಗಳಿಗೆ ರಚನಕಾರರು ರಾಗ ತಾಳಗಳನ್ನು ನಿರ್ಬಂಧಿಸಿರುವುದಿಲ್ಲ.

ಸಂಗೀತದ ಶಾಸ್ತ್ರಕಾವ್ಯ ಕೃತಿಯಾದರೆ, ಸಾಹಿತ್ಯದ ಮಾಧುರ್ಯ ಕಾವ್ಯ ರಚನೆ. ಕೀರ್ತನೆಗಳಲ್ಲಿ ಪಲ್ಲವಿ ಮತ್ತು ಚರಣಗಳಿದ್ದಾಗ ದ್ವಿಧಾತು ಪ್ರಬಂಧವೆಂದು ಕರೆಯಲ್ಪಡುತ್ತವೆ. ಒಂದೇ ಧಾತುವಿನಿಂದ ಕೂಡಿದ ಅನೇಕ ಚರಣಗಳಿರುತ್ತವೆ. ಎಲ್ಲಾ ಚರಣಗಳು ಒಂದೇ ಧಾಟಿಯಲ್ಲಿರುತ್ತವೆ. ಇದರಲ್ಲಿ ಅನೇಕ ವಿಧಗಳುಂಟು. ಭಜನ ಪದ್ಧತಿಯ ಕೀರ್ತನೆಗಳು ಉತ್ಸವಾದಿಗಳಿಗಾಗಿ ಹಾಗೂ ನಿತ್ಯಪೂಜೆಗಾಗಿ ರಚಿತವಾಗಿರುವ ಉತ್ಸವ ಸಂಪ್ರದಾಯ ಕೀರ್ತನೆಗಳು, ದಿವ್ಯನಾಮ ಕೀರ್ತನೆಗಳು, ನಾಮಾವಳಿಗಳು ಮುಂತಾದವು ಭಕ್ತಿ ಸಂಗೀತದ ಶ್ರೇಷ್ಠರಚನೆಗಳಾಗಿವೆ. ಭಗವದ್ಭಕ್ತಿಯ ಪ್ರವಾಹವನ್ನೇ ಹರಿಸುವಂತಹ ರಚನೆಗಳಾಗಿರುತ್ತವೆ.

ಪುರಂದರದಾಸರು, ಕನಕದಾಸರು, ತ್ಯಾಗರಾಜರು, ಮುತ್ತುಸ್ವಾಮಿ ದೀಕ್ಷಿತರು ಇಂತಹ ಕೀರ್ತನೆಗಳನ್ನು ರಚಿಸಿರುವವರಲ್ಲಿ ಪ್ರಮುಖರು. ಭಜನ ಪದ್ಧತಿ ಕೀರ್ತನೆಗಳಿಗೆ ಆದ್ಯ ಪ್ರವರ್ತಕರು ತಾಳ್ಳಪಾಕಂ ಚಿನ್ನಯ್ಯ. ಮೊಟ್ಟಮೊದಲು ಕೀರ್ತನೆಗಳನ್ನು ಪಲ್ಲವಿ, ಅನುಪಲ್ಲವಿ, ಚರಣ ಎಂಬುದಾಗಿ ವಿಭಜನೆ ಮಾಡಿದವರು ಶ್ರೀಪಾದರಾಯರು.

ಕೃತಿಗಳಲ್ಲಿ ಧಾತುವಿಗೆ ಕೊಡುವ ಪ್ರಾಮುಖ್ಯತೆಯನ್ನು ಕೀರ್ತನೆಗಳಲ್ಲಿ ಮಾತು ಅಥವಾ ಸಾಹಿತ್ಯಕ್ಕೆ ಕೊಡುತ್ತೇವೆ. ಕೀರ್ತನ ಸಾಹಿತ್ಯದ ವಸ್ತು ಪುರಾಣಸಂಬಂಧವಾದ ವಿಷಯಗಳನ್ನೋ ಅಥವಾ ದೇವರ ಸ್ತುತಿರೂಪದ ಸಾಹಿತ್ಯವನ್ನೋ ಹೊಂದಿರುತ್ತದೆ. ಸಂಗೀತ ಪ್ರಬಂಧದಲ್ಲಿ ಅತ್ಯಂತ ಜನಪ್ರಿಯವಾದದು ಕೀರ್ತನೆ. ಈ ರಚನೆಗಳ ವಸ್ತುವಿನ ಸಾಹಿತ್ಯವು ವೇದ, ಉಪನಿಷತ್ತು, ಪುರಾಣ, ರಾಮಾಯಣ, ಮಹಾಭಾರತ, ಭಾಗವತ ಇವುಗಳ ಮೇಲೆ

ಆಧಾರವಾಗಿರುತ್ತವೆ. ತತ್ವಚಿಂತನೆ, ವೇದಾಂತ, ಸಮಾಜ ಸುಧಾರಣೆ ಮುಂತಾದ ವಸ್ತುಗಳನ್ನೊಳಗೊಂಡ ಕೀರ್ತನೆಗಳನ್ನೂ ನಾವು ಕಾಣಬಹುದು. ಈ ವಿಧವಾದ ರಚನೆಗಳಲ್ಲಿ ನಾವು ಮುಖ್ಯವಾಗಿ ವರ್ಣಿಸಿ ಚಿತ್ರಿಸಿರುವುದು, ತನ್ಮೂಲಕ ಕೇಳುವವರ ಮನಸ್ಸಿನಲ್ಲಿ ಭಕ್ತಿಭಾವವನ್ನು ಹುಟ್ಟಿಸುವುದು, ಭಕ್ತಿ ಸಂದೇಶವನ್ನು ಹರಡುವುದು, ಈ ಉದ್ದೇಶಗಳನ್ನು ಮನಗಾಣುತ್ತೇವೆ. ದಾಸರಪದ, ದೇವರ ನಾಮಗಳೆಂಬ ಕೀರ್ತನೆಗಳು ಎಲ್ಲರಲ್ಲಿಯೂ ಭಗವದ್ಭಕ್ತಿಯನ್ನು ಉದ್ದೀಪನಗೊಳಿಸುವ ಶ್ರೇಷ್ಠವಾದ ರಚನೆ.

ಹರಿದಾಸರು ಲಾವಣಿ ಪದಗಳನ್ನೂ, ಜನಪದ ಮಟ್ಟುಗಳನ್ನೂ ವೃತ್ತಗಳನ್ನು ಹರಿಕೀರ್ತನೆಗೆ ಉಪಯೋಗಿಸಿಕೊಂಡು, ಗಹನವಾದ ತತ್ವಗಳನ್ನು ಸುಲಭವಾಗಿ ಎಲ್ಲರೂ ಅರಿಯುವಂತೆ ಮಾಡಿದ್ದಾರೆ.

ಶೀಲ : ಕೀರ್ತನೆಗಳಲ್ಲಿ ಮುಖ್ಯವಾಗಿ ಎಷ್ಟು ವಿಧಗಳು ?

ರಾಮು : 1. ಉತ್ಸವ ಸಂಪ್ರದಾಯದ ಕೀರ್ತನೆ : ಇವುಗಳು ನಿತ್ಯೋತ್ಸವ, ವಾರೋತ್ಸವ, ಪಕ್ಷೋತ್ಸವ, ಮಾಸೋತ್ಸವ ಮತ್ತು ವಾರ್ಷಿಕೋತ್ಸವಗಳಿಗೆ ಅನುಕೂಲವಾಗುವಂತೆ ರಚಿಸಲ್ಪಟ್ಟಿವೆ. ಉದಾ : ತ್ಯಾಗರಾಜರ ಉತ್ಸವ ಸಂಪ್ರದಾಯದ ಕೀರ್ತನೆಗಳು.

2. ದಿವ್ಯನಾಮ ಕೀರ್ತನೆ : ಇವು ಅಷ್ಟಪದಿಯ ಗಾಯನ ಶೈಲಿಯಲ್ಲಿದ್ದು ಪಲ್ಲವಿ, ಅನುಪಲ್ಲವಿ ಮತ್ತು ಚರಣಗಳು ಒಂದೇ ರೀತಿಯ ಧಾತುವನ್ನು ಹೊಂದಿ ಗೋಷ್ಠಿಗಾನಕ್ಕೆ ಅನುಕೂಲವಾಗಿದೆ. ಉದಾ : ಪುರಂದರದಾಸರ, ತ್ಯಾಗರಾಜರ ದಿವ್ಯನಾಮ ಕೀರ್ತನೆಗಳು.

3. ನಾಮಾವಳಿ : ಭಕ್ತಿರಸ ಪ್ರಧಾನವಾದ ಸಾಹಿತ್ಯವನ್ನು ಹೊಂದಿ, ರಾಗಭಾವದಿಂದ ಕೂಡಿದ ಕೆಲವು ಆವರ್ತಗಳನ್ನು ಹೊಂದಿರುವ ರಚನೆ. ಗೋಷ್ಠಿಯಲ್ಲಿ ಉಳಿದವರು ಅನುಸರಿಸಿ ಹಾಡುತ್ತಾರೆ. ಉದಾ : ಪುರಂದರದಾಸರ, ತ್ಯಾಗರಾಜರ ಭಜನೆ, ಸಾಮಾನ್ಯವಾಗಿ ಮಧ್ಯಮಾವತಿ, ಸೌರಾಷ್ಟ್ರ ರಾಗಗಳಲ್ಲಿರುವ ಮಂಗಳವು ಕೀರ್ತನ ಶೈಲಿಯಲ್ಲಿರುತ್ತದೆ. ಇದನ್ನು ಹಾಡಿದ ನಂತರ ಭಜನ ಗೋಷ್ಠಿ ಚದುರುತ್ತದೆ.

ಭಜನ ಗೋಷ್ಠಿಗಳು ಅನೇಕ ರೀತಿಯಲ್ಲಿವೆ. ಪ್ರಮುಖನೊಬ್ಬನು ಭಗವದ್ ಕೀರ್ತನೆಯ ಒಂದೊಂದು ಚರಣವನ್ನೂ ಹಾಡಿ ನಿಲ್ಲಿಸಿದ ನಂತರ, ಗೋಷ್ಠಿಯ ಇತರರು ಅದೇ ಚರಣವನ್ನು ಅದೇ ಧಾಟಿಯಲ್ಲೇ ಹಾಡುತ್ತಾರೆ. ಅನೇಕವೇಳೆ ಈ ಗಾಯನಕ್ಕೆ ಪಕ್ಕವಾದ್ಯಗಳೂ ಇರುತ್ತವೆ. ಕೆಲವು ಸಾರಿ ಗೋಷ್ಠಿಯವರೆಲ್ಲರೂ ಒಟ್ಟಿಗೆ ಸೇರಿ ಹಾಡುವುದೂ ಉಂಟು.

ಶೀಲ : ಕೃತಿಗಳು ಎಂದರೇನು ?

ರಾಮು : ಇವು ದೇವತಾಸ್ತುತಿಯನ್ನು ಮತ್ತು ತತ್ವವನ್ನು ಸೂಚಿಸುವ ಸಾಹಿತ್ಯವುಳ್ಳ ಪಲ್ಲವಿ, ಅನುಪಲ್ಲವಿ, ಚರಣಗಳನ್ನು ಹೊಂದಿರುವ ರಚನೆಗಳಾಗಿರುತ್ತವೆ.

ಕೃತಿಯಲ್ಲಿ ಸಾಹಿತ್ಯಕ್ಕಿಂತ ಸಂಗೀತದ ಅಂಶಕ್ಕೆ ಹೆಚ್ಚು ಪ್ರಾಮುಖ್ಯ ಇರುತ್ತದೆ. ಕೃತಿಗಳು ಗಾಯಕನ ಸಂಗೀತ ಜ್ಞಾನವನ್ನು ಪ್ರದರ್ಶಿಸುವ ಸಾಧನವಾಗಿವೆ. ಸಂಗೀತ ಶಾಸ್ತ್ರದ ವಿವಿಧ ಭಾಗಗಳಾದ ರಾಗ, ತಾಳ, ಗತಿ, ಶೈಲಿ ಮುಂತಾದವುಗಳು ಗಾಯಕನಿಗೆ ಸ್ವಾಧೀನವಾಗಲು ಕೃತಿಗಳು ಸಹಕರಿಸುತ್ತವೆ. ಸಾಹಿತ್ಯದ ವಸ್ತು, ರಾಗ ಭಾವವನ್ನು ಮೂಡಿಸುವುದಲ್ಲದೆ ಅತ್ಯಂತ ಮನನೀಯವಾಗಿದ್ದು ಪಾರಮಾರ್ಥಿಕ ದೃಷ್ಟಿಯುಳ್ಳದಾಗಿರುತ್ತದೆ. ಬಿಕ್ಕಟ್ಟಾದ ಶಾಸ್ತ್ರ ವಿಧಗಳಿಲ್ಲದೆ, ಮನೋಧರ್ಮಕ್ಕೆ ಅಳವಡಿಸಬಹುದಾದಂತಹ ಸ್ವಭಾವದಿಂದ ಕೂಡಿರುವಿಕೆ, ಪರಿಭಾಷೆಗಳ ಅಲ್ಪತ್ವ ಭಕ್ತಿಭಾವನೆಯ ಹೊರಹೊಮ್ಮುವಿಕೆ, ಸರಳವಾದ ಭಾಷೆಯಲ್ಲಿ ಆಡುನುಡಿಗಳಂತೆ ರಚಿತವಾಗಿರುವುದು.

ಕೃತಿಯಲ್ಲಿ ಪಲ್ಲವಿ, ಅನುಪಲ್ಲವಿ ಮತ್ತು ಚರಣಗಳೆಂಬ ಭಾಗಗಳಿರುತ್ತವೆ. ಸಾಮಾನ್ಯವಾಗಿ ಕೃತಿಗಳ ಮೊದಲನೆಯ ಚರಣದ ಕೊನೆಯ ಭಾಗದ ಧಾತುವು ಅನುಪಲ್ಲವಿಯನ್ನನುಸರಿಸಿ ಉಳಿದ ಎರಡು ಚರಣಗಳು ಮೊದಲನೆಯ ಚರಣದ ಧಾತುವನ್ನು ಅನುಸರಿಸಿರುವ ಪ್ರಬಂಧವಾಗಿದೆ.

ಕೆಲವು ಕೃತಿಗಳಲ್ಲಿ, ಅನುಪಲ್ಲವಿಯೂ, ಚರಣಗಳ ಕೊನೆಯ ಭಾಗವು ಮಧ್ಯಮ ಕಾಲದ ಧಾಟಿಯಲ್ಲಿದ್ದು ಅನುಪಲ್ಲವಿ ಮತ್ತು ಚರಣದ ಅಂತ್ಯ ಭಾಗದಲ್ಲಿ ಪಲ್ಲವಿಯ ಭಾಗವನ್ನು ಹಾಡುವಂತೆಯೇ ಇರುತ್ತದೆ. ಕೆಲವು ಕೃತಿಗಳಲ್ಲಿ ಅನುಪಲ್ಲವಿ ಇಲ್ಲದೇ ಚರಣ ಮಾತ್ರ ಇದ್ದು ಅದನ್ನು ''ಸಮಷ್ಟಿ ಚರಣ''ವೆಂದು ಕರೆಯಲಾಗುತ್ತದೆ.

ಕೃತಿಯ ಸಾಹಿತ್ಯ, ಅದರ ಸಂಗೀತವನ್ನು ಹೆಚ್ಚು ರಂಜನೀಯವಾಗಿ ಮಾಡಲು ಒಂದು ಸಾಧನವಾಗಿರುತ್ತದೆ. ಸಾಹಿತ್ಯ ಭಕ್ತಿ ಮತ್ತು ಗಹನ ವೇದಾಂತ ತತ್ತ್ವಗಳನ್ನೊಳಗೊಂಡು ಕೃತಿಗಳಲ್ಲಿ ರಚಿತವಾಗಿರುತ್ತವೆ. ಸಾಹಿತ್ಯಕ್ಕೆ ಮಾತು ಎಂಬುದಾಗಿಯೂ ಸಂಗೀತಕ್ಕೆ ಧಾತು ಎಂಬುದಾಗಿಯೂ ಕರೆಯಲಾಗುತ್ತದೆ. ಧಾತು ಮಾತುಗಳ ಕಲಾತ್ಮಕ ಸಂಯೋಗವೇ ಕೃತಿ ಎನಿಸುತ್ತದೆ.

ಕೃತಿಗಳಲ್ಲಿ ಭಾವಪೂರ್ಣವಾದ ಸಂಗತಿಗಳು, ಚಮತ್ಕಾರವಾದ ಸ್ವರಾಕ್ಷರಗಳು, ಯತಿಪ್ರಾಸಾಲಂಕಾರಗಳು, ಲಯ ವೈವಿಧ್ಯದಿಂದ ಕೂಡಿದ ಚಿಟ್ಟೆ ಸ್ವರಗಳು, ಸೌಂದರ್ಯವರ್ಧಕ ಅಂಗಗಳಾಗಿರುತ್ತವೆ. ಕೃತಿಗಳಲ್ಲಿ ಮಧ್ಯಮ ಕಾಲ ಕೃತಿಗಳು ಮತ್ತು ವಿಳಂಬ ಕಾಲ ಕೃತಿಗಳಿರುತ್ತವೆ.

ಕೃತಿ ರಚನೆಯಲ್ಲಿ ತ್ಯಾಗರಾಜರು, ದೀಕ್ಷಿತರು, ಶ್ಯಾಮಾ ಶಾಸ್ತ್ರಿಗಳು ಮುಂತಾದ ಅನೇಕ ವಾಗ್ಗೇಯಕಾರರು ತಮ್ಮದೇ ಆದ ಶೈಲಿಗಳನ್ನು ರೂಪಿಸಿಕೊಂಡು ಅನರ್ಘ್ಯ ಕೃತಿರತ್ನಗಳನ್ನು ರಚಿಸಿದ್ದಾರೆ.

ಶೀಲ : ದರು ಎಂದರೇನು ?

ರಾಮು : ಇದು ಗೇಯ ನಾಟಕ ಮತ್ತು ನೃತ್ಯನಾಟಕಗಳಲ್ಲಿ ಕಂಡುಬರುವ ರಚನೆ.

ಪುರಾಣಕ್ಕೆ ಸಂಬಂಧಪಟ್ಟಿದಾಗಿಯೋ ಅಥವಾ ಚಾರಿತ್ರಿಕವಾಗಿಯೋ ಅಥವಾ ಆಶ್ರಯದಾತನನ್ನು ಹೊಗಳುವ ವಿಷಯಗಳನ್ನು ಹೊಂದಿರುವ ಪ್ರಬಂಧ.

ಈ ರಚನೆಗಳನ್ನು ಮಧ್ಯಮಕಾಲದಲ್ಲಿಯೂ ಸಂದರ್ಭಾನುಸಾರವಾಗಿ ವಿಳಂಬ ಕಾಲದಲ್ಲಿಯೂ ಹಾಡುವುದು ವಾಡಿಕೆಯಲ್ಲಿದೆ. ಇದಕ್ಕೆ ಪಲ್ಲವಿ, ಅನುಪಲ್ಲವಿ, ಚರಣಗಳಿರುತ್ತವೆ. ದರು ವಿವಿಧ ರೂಪಗಳನ್ನು ಹೊಂದಿವೆ.

1. ಪಾತ್ರ ಪ್ರವೇಶ ದರು. 2. ವರ್ಣನಾತ್ಮಕ ದರು

2. ಜಕ್ಕನಿ ದರು 3. ಕೋಲಾಟ ದರು

ಶೀಲ : ದೇವರನಾಮಗಳು ಎಂದರೇನು ?

ರಾಮು : ಇವು ಕೃತಿಗಳಂತೆ ಪಲ್ಲವಿ, ಅನುಪಲ್ಲವಿ, ಚರಣದಿಂದ ಕೂಡಿ ಭಕ್ತಿ, ರಸಪ್ರಧಾನವಾದ ಮತ್ತು ತತ್ವಕ್ಕನುಗುಣವಾದ ಸಾಹಿತ್ಯವನ್ನು ಹೊಂದಿರುವ ರಚನೆಗಳು. ಈ ಬಗೆಯ ರಚನೆಗಳು ಶ್ರೀ ವ್ಯಾಸರಾಯರು, ಪುರಂದರದಾಸರು, ಕನಕದಾಸರು ಮುಂತಾದ ಮಹನೀಯರನೇಕರಿಂದ ಹೇರಳವಾಗಿ ರಚಿಸಲ್ಪಟ್ಟಿವೆ.

ಕೃತಿ ರಚನೆಗಳಿಗೆ ಶ್ರೀ ಪುರಂದರದಾಸರು ತ್ಯಾಗರಾಜರಿಗೆ ಸ್ಫೂರ್ತಿದಾಯಕರಾಗಿದ್ದರು. ಇವರು ಅಲಂಕಾರ, ಗೀತೆ, ಸುಳಾದಿ, ಸುವ್ವಾಲಿ, ವೃತ್ತನಾಮ, ಉಗಾಭೋಗ ಮತ್ತು ಅನೇಕ ದೇವರ ನಾಮಗಳನ್ನು ರಚಿಸಿ ಸಂಗೀತ ಪ್ರಪಂಚದ ಪಿತಾಮಹರೆಂದೆನಿಸಿಕೊಂಡರು.

ಶೀಲ : ತರಂಗಗಳು ಎಂದರೇನು ?

ರಾಮು : ನಾರಾಯಣ ತೀರ್ಥರು ಶ್ರೀ ಕೃಷ್ಣ ಪರಮಾತ್ಮನ ದಿವ್ಯ ಚರಿತೆಯಾದ ಕೃಷ್ಣಲೀಲಾ ತರಂಗಿಣಿಯನ್ನು ಹನ್ನೆರಡು ಸರ್ಗಗಳು ಅಥವಾ ತರಂಗಗಳಲ್ಲಿ ರಚಿಸಿದ್ದಾರೆ. ಇದು ಅತ್ಯಂತ ಶ್ರೇಷ್ಠವಾದ ಸಂಗೀತರೂಪಕವಾಗಿದೆ. ಇದು ಕೃಷ್ಣಾವತಾರದಿಂದ ಆರಂಭವಾಗಿ ರುಕ್ಮಿಣಿ ಕಲ್ಯಾಣದೊಂದಿಗೆ ಮುಕ್ತಾಯವಾಗುತ್ತದೆ.

ಶೀಲ : ಪದ ಎಂದರೇನು ?

ರಾಮು : ಪದ ಇದು ನಾಟ್ಯಕ್ಕೆ ಪ್ರಧಾನವಾದ ರಚನೆ. ಇದರ ಸಾಹಿತ್ಯವು ಶೃಂಗಾರರಸವು ಪ್ರಧಾನವಾಗಿ ನಾಯಕಿ, ನಾಯಕ ಸಖಿಯರ ವ್ಯವಹಾರವನ್ನು ಹೊಂದಿದ ವಿಷಯವನ್ನು ಸೂಚಿಸುವ ಪ್ರಬಂಧ.

ಪಲ್ಲವಿ, ಅನುಪಲ್ಲವಿ ಮತ್ತು ಚರಣಗಳು ಇರುತ್ತವೆ. ಅನುಪಲ್ಲವಿ ಅಥವಾ ಮೂರನೆಯ ಚರಣದಲ್ಲಿ ನಾಯಕ ಮುದ್ರೆಯನ್ನು ಹೊಂದಿರುತ್ತದೆ. ಶಬ್ದಾರ್ಥಗಳನ್ನು ಚೆನ್ನಾಗಿ ತಿಳಿದು ರಾಗದ ರಸಾನುಭವವನ್ನು ಅರಿತು ಚೌಕಕಾಲದಲ್ಲಿ ಈ ರಚನೆಗಳನ್ನು ಹಾಡಿದರೆ ಮಾತ್ರ ಶೋಭಿಸುತ್ತವೆ. ಪದಗಳನ್ನು ಹಾಡಬೇಕಾದರೆ ರಾಗದ ಅನುಭವ ಮತ್ತು ತಾಳ ನಿರ್ಣಯ ಬಹುಮುಖ್ಯವಾಗಿರಬೇಕು.

ಶೀಲ : ಜಾವಳಿ ಎಂದರೇನು ?

ರಾಮು : ಇದು ಪದ ಲಕ್ಷಣವನ್ನು ಅನುಸರಿಸಿರುವುದಲ್ಲದೆ ದೇಶೀಯ ರಾಗಗಳಲ್ಲಿ ಬಹು ಹೆಚ್ಚಾಗಿ ರಚಿತವಾಗಿವೆ. ಪಲ್ಲವಿ, ಅನುಪಲ್ಲವಿ, ಚರಣಗಳಿಂದ ಕೂಡಿ ಮಧ್ಯಮ ಕಾಲದ ನಡೆಯನ್ನು ಹೊಂದಿರುತ್ತದೆ. ಕೆಲವು ಜಾವಳಿಗಳನ್ನು ವಿಳಂಬಕಾಲದಲ್ಲೂ ಹಾಡುವ ಸಂಪ್ರದಾಯವಿದೆ. ಜಾವಳಿಯ ಸಾಹಿತ್ಯವು ಶೃಂಗಾರರಸ ಪ್ರಧಾನವಾಗಿರುವುದು.

ಶೀಲ : ತಿಲ್ಲಾನಗಳು ಎಂದರೇನು ?

ರಾಮು : ಇದು ನಾಟ್ಯಕ್ಕನುಗುಣವಾದ ರಚನೆ, ಸಂಗೀತ ಕಛೇರಿಯನ್ನು ಮುಗಿಸುವ ಮುಂಚೆ ತಿಲ್ಲಾನವನ್ನು ಹಾಡುವ ಪದ್ಧತಿಯುಂಟು. ತಿ. ಲ್ಲಾ. ನ. ಎಂಬ ಮೃದಂಗ ಶಬ್ದಗಳ ಅಂಶದಿಂದ ಕೂಡಿರುವುದರಿಂದ "ತಿಲ್ಲಾನ"ವೆಂದು ಹೆಸರು.

ಇದು ದ್ರುತ ಕಾಲವನ್ನನುಸರಿಸುವ ರಚನೆ. ದಿರಿತಿಲ್ಲಾನ ಎಂಬ ದೇಶ್ಯರಚನೆಯನ್ನು ಇದು ಸಾಮಾನ್ಯವಾಗಿ ಹೋಲುತ್ತದೆ.

ತಿಲ್ಲಾನಗಳು ಪಲ್ಲವಿ ಮತ್ತು ಅನುಪಲ್ಲವಿ, ಚರಣಗಳನ್ನು ಹೊಂದಿರುತ್ತವೆ. ಕೆಲವು ತಿಲ್ಲಾನಗಳು ಪಲ್ಲವಿ ಮತ್ತು ಅನುಪಲ್ಲವಿ ಮಾತ್ರ ಹೊಂದಿರುವುದುಂಟು. ಸಾಮಾನ್ಯವಾಗಿ ಆಶ್ರಯದಾತನನ್ನು ಹೊಗಳುವುದೋ ಅಥವಾ ಭಕ್ತಿರಸ ಪ್ರಧಾನ ಮತ್ತು ಶೃಂಗಾರರಸಕ್ಕೆ ಸಂಬಂಧಪಟ್ಟ ಸಾಹಿತ್ಯವಿಲ್ಲದೆ ಜತಿಗಳು ಮಾತ್ರವಿರುವುದು ಕಂಡುಬರುತ್ತದೆ.

ಶೀಲ : ವಚನ ಎಂದರೇನು ?

ರಾಮು : ವಚನಗಳು ಗದ್ಯಪದ್ಯದ ಒಂದು ಮಾದರಿಯೆಂದೇ ಹೇಳಬೇಕಾಗುತ್ತದೆ. ಇವುಗಳನ್ನು ಹಾಡುವ ರೀತಿಯಲ್ಲಿ ರಚಿಸಿದರೇ ಎಂಬುದನ್ನು ನಿರ್ದಿಷ್ಟವಾಗಿ ಹೇಳುವುದು ಕಷ್ಟ, ಕೆಲವನ್ನು ಹಾಡುವುದಕ್ಕೆ ರಚಿಸಿದ್ದಿರಬಹುದು. ತಾಳ ಲಯಕ್ಕೆ ಅನುಸಾರವಾಗಿ ರಚಿಸಿದ್ದವುಗಳಲ್ಲ. ಪದ್ಯದ ಕ್ರಮಬದ್ಧ ಛಂದೋಗತಿ ಇಲ್ಲದಿದ್ದರೂ ಅದರ ಲಯವಿದೆ.

ವಚನಗಳಲ್ಲಿ ಶಿವಶರಣರ ಆಳವಾದ ಅನುಭವ ಭಕ್ತಿಜ್ಞಾನ, ಹೃದಯವನ್ನು ತುಂಬುವಂಥ ಕಾವ್ಯದ ಸೊಗಸು, ವೈರಾಗ್ಯ, ಆತ್ಮಪರೀಕ್ಷಣ, ಸ್ಪಷ್ಟೋಕ್ತಿ, ಅಲ್ಲಲ್ಲಿ ಕಟುವಾದ ಸಮಾಜ ಟೀಕೆ, ದೃಷ್ಟಾಂತಗಳು, ಗಾದೆಗಳು, ನೀತಿ, ಆಧ್ಯಾತ್ಮ ಇವೆಲ್ಲವೂ ತುಂಬಿವೆ.

ಉದಾಹರಣೆ : ಸರ್ವಜ್ಞನ ವಚನಗಳು, ಬಸವಣ್ಣನವರ ವಚನಗಳು ಮುಂತಾದವುಗಳು

ಶೀಲ : ಅಷ್ಟಪದಿಗಳು ಎಂದರೇನು ?

ರಾಮು : ಪ್ರತಿಯೊಂದು ಅಷ್ಟಪದಿಯೂ 8 ಚರಣಗಳನ್ನು ಹೊಂದಿರುವ ಕಾರಣ "ಅಷ್ಟಪದಿ" ಎಂದು ಕರೆಯಲ್ಪಟ್ಟಿದೆ.

ಸಾಹಿತ್ಯವೂ ಶೃಂಗಾರ ಭಾವವುಳ್ಳದಾಗಿಯೂ, ನಾಯಕ, ನಾಯಕಿ, ಸಖಿಯರ ವಿಷಯಗಳಿಗನುಗುಣವಾದ ಸಾಹಿತ್ಯವನ್ನು ಹೊಂದಿದ ಬಂಧಗಳಾಗಿವೆ. ಹನ್ನೆರಡು ಸರ್ಗಗಳಿಂದ ಕೂಡಿದ 24 ಅಷ್ಟಪದಿಗಳನ್ನು ಕರ್ಣಾಟಕ ಸಂಗೀತದಲ್ಲಿ ಪ್ರಸಿದ್ಧವಾಗಿರುವ ರಾಗಗಳಲ್ಲಿ ತಾಳಕ್ಕನುಗುಣವಾಗಿ ಹಾಡುವ ಸಂಪ್ರದಾಯ ಈಗಲೂ ರೂಢಿಯಲ್ಲಿದ್ದು ಕೆಲವು ಕಡೆ ಸಂಗೀತ ಕಛೇರಿಗಳಲ್ಲಿ ಕೇಳಬಹುದು.



# 11. ಸಪ್ತಸ್ವರಗಳು

ಶೀಲ : ಸ್ವರ ಎಂದರೇನು ?

ರಾಮು : ಶ್ರುತಿಗಳನ್ನು ಅನುಸರಿಸಿ ಕೇಳುವವರ ಚಿತ್ತವನ್ನು ಸ್ವತಂತ್ರವಾಗಿ ರಂಜಿಸುವಂತ ಧ್ವನಿ ಸ್ವರವೆನಿಸುವುದು. ಅಂದರೆ ತನ್ನಷ್ಟಕ್ಕೆ ತಾನೇ ಕೇಳುವವರ ಮನಸ್ಸಿಗೆ ರಂಜನೆಯನ್ನುಂಟುಮಾಡುವ ಧ್ವನಿಗಳನ್ನು ಸ್ವರಗಳೆನ್ನಲಾಗುತ್ತದೆ.

ಅಂದರೆ ಸ್ವತಂತ್ರವಾಗಿ ರಂಜನೆ ಉಂಟುಮಾಡಬಲ್ಲ ಧ್ವನಿಗಳೇ "ಸ್ವರಗಳು". ಇವು ಅಕ್ಷರದೊಡನೆ ಪಲುಕಿಸಲು ಬರುವುದಾಗಿದೆ.

ಶೀಲ : ಸ್ವರಗಳೆಷ್ಟು ?

ರಾಮು : ಶ್ರುತಿಗಳಿಂದ ಜನಿಸಿದ ಸ್ವರಗಳು ಏಳು. ಸಪ್ತಸ್ವರಗಳು.

ಶೀಲ : ಸಪ್ತಸ್ವರಗಳಾವುವು ?

ರಾಮು : ಶ್ರುತಿಜನ್ಯವಾದ ಷಡ್ಜ, ರಿಷಭ, ಗಾಂಧಾರ, ಮಧ್ಯಮ, ಪಂಚಮ, ಧೈವತ, ನಿಷಾದಗಳೇ ಸಂಗೀತದ ಸಪ್ತಸ್ವರಗಳು. ಇವುಗಳಿಗೆ ಕ್ರಮವಾಗಿ ಸರಿಗಮಪದನಿ ಎಂಬ ಸಂಕೇತಾಕ್ಷರಗಳನ್ನು ಕೊಡಲಾಗಿದೆ.

ಈ ಸಪ್ತಸ್ವರಗಳ ಲಯವಿನ್ಯಾಸದ ವೈವಿಧ್ಯತೆಯು ಮೇಳವಿಸಿದ ರಸಪಾಕ ಹಾಗೂ ಮಾಧುರ್ಯದ ಝರಿಯೇ ಸಂಗೀತ.

ಶೀಲ : ಸ್ವರಗಳಲ್ಲಿ ಎಷ್ಟು ವಿಧ ?

ರಾಮು : ಎರಡು ವಿಧ 1. ಪ್ರಕೃತಿ ಸ್ವರ, 2. ವಿಕೃತಿ ಸ್ವರ

ಶೀಲ : "ಪ್ರಕೃತಿ ಅಥವಾ ಶುದ್ಧ ಸ್ವರ" ಎಂದರೇನು ? ಅವು ಯಾವುವು ?

ರಾಮು : ನಿಯತ ಶ್ರುತಿಯೊಡನೆ ಕೂಡುವ ಸ್ವರವು ಶುದ್ಧಸ್ವರ. ಅಂದರೆ ಯಾವುದೇ ಶ್ರುತಿಭೇದಕ್ಕೂ ಒಳಪಡದೆ, ನಿರ್ದಿಷ್ಟವಾಗಿ ಇದ್ದಂತೆ ಇರುವ ಸ್ವರಗಳನ್ನು ಪ್ರಕೃತಿ ಸ್ವರವೆನ್ನುತ್ತಾರೆ. ಸಪ್ತಸ್ವರಗಳಲ್ಲಿ ಷಡ್ಜ (ಸ) ಪಂಚಮ (ಪ) ಪ್ರಕೃತಿ ಸ್ವರಗಳು.

ಶೀಲ : "ವಿಕೃತ ಸ್ವರ" ಎಂದರೇನು ? ಅವು ಯಾವುವು ?

ರಾಮು : ಶ್ರುತಿಭೇದದಿಂದ ಎಂದರೆ ನಿಯತ ಶ್ರುತಿಗೆ ಹೆಚ್ಚು ಅಥವಾ ಕಡಿಮೆಯಾಗುವ ಸ್ವರವು ವಿಕೃತ ಸ್ವರ. ಅಂದರೆ ಭೇದಹೊಂದಿ ಬೇರೆಬೇರೆ ಧ್ವನಿ ಭೇದವುಂಟುಮಾಡುವ ಶ್ರುತಿ ಸ್ವರಗಳನ್ನು ವಿಕೃತ ಸ್ವರವೆಂದು ಕರೆಯುತ್ತಾರೆ. ಅವು ಸ್ಥಾನ ಭೇದದಿಂದ, ಉಚ್ಚಾರಣಾ ಭೇದದಿಂದ ಭಿನ್ನಭಿನ್ನರೂಪಗಳನ್ನು ತಾಳುತ್ತವೆ.

ಸಪ್ತಸ್ವರಗಳಲ್ಲಿ ಋಷಭ (ರಿ), ಗಾಂಧಾರ (ಗ), ಮಧ್ಯಮ (ಮ), ದೈವತ (ದ), ನಿಷಾದ (ನಿ), ಇವುಗಳು ವಿಕೃತಸ್ವರಗಳು.

1. ರಿ (ಋಷಭ) 3 ವಿಧ
2. ಗ (ಗಾಂಧಾರ) 3 ವಿಧ
3. ಮ (ಮಧ್ಯಮ) 2 ವಿಧ
4. ದ (ದೈವತ) 3 ವಿಧ
5. ನಿ (ನಿಷಾದ) 3 ವಿಧ

ಶೀಲ : "ವಾದಿ" ಸ್ವರ ಎಂದರೇನು ?

ರಾಮು : ಒಂದು ರಾಗದಲ್ಲಿ ಪ್ರಧಾನವಾಗಿರುವ ಸ್ವರಕ್ಕೆ 'ವಾದಿ' ಸ್ವರ ಎನ್ನುತ್ತಾರೆ. ಇದು ಪದೇಪದೇ ಸಂಚಾರಗಳಲ್ಲಿ ಬರುತ್ತಿರುತ್ತದೆ.

ಶೀಲ : "ಸಂವಾದಿ" ಸ್ವರ ಎಂದರೇನು ?

ರಾಮು : ಪರಸ್ಪರ ಎಂಟು ಅಥವಾ ಹನ್ನೆರಡು ಶ್ರುತಿಗಳ ವ್ಯತ್ಯಾಸವುಳ್ಳ ಸ್ವರಗಳನ್ನು "ಸಂವಾದಿ" ಸ್ವರ ಎನ್ನುತ್ತಾರೆ. ಉದಾ : ಸ, ಪ, ಸ, ಮ.

ಶೀಲ : "ವಿವಾದಿ" ಸ್ವರ ಎಂದರೇನು ?

ರಾಮು : ಪರಸ್ಪರ ಒಂದು ಅಥವಾ ಎರಡೇ ಶ್ರುತಿಗಳ ವ್ಯತ್ಯಾಸವುಳ್ಳ ಎರಡು ಸ್ವರಗಳನ್ನು "ವಿವಾದಿ" ಸ್ವರ ಎನ್ನುತ್ತಾರೆ.

ಈ ಸ್ವರವನ್ನು ಶತ್ರುವಿಗೆ ಹೋಲಿಸಬಹುದು. ಉದಾ : ರಿ2 ಚತುಶ್ರುತಿ ಋಷಭ ಮತ್ತು ಗ 1 ಶುದ್ಧ ಗಾಂಧಾರ ಒಂದೇ ಮನೆಯಲ್ಲಿ ನುಡಿಯುತ್ತವೆ.

ಶೀಲ : 72 ಮೇಳಕರ್ತ ರಾಗಗಳಲ್ಲಿ ಎಷ್ಟು ವಿವಾದಿ ಸ್ವರಗಳಿವೆ ?

ರಾಮು : 40 ವಿವಾದಿ ಸ್ವರಗಳು 72 ಮೇಳಕರ್ತ ರಾಗಗಳಲ್ಲಿವೆ.

ಶೀಲ : ಶ್ರುತಿ ಎಂದರೇನು ?

ರಾಮು : ಎರಡು ಸ್ವರಗಳ ನಡುವೆ ಇರುವ ಅತಿಸೂಕ್ಷ್ಮ ಅಂತರವೇ ಶ್ರುತಿ. ಕಂಪನಾವರ್ತಗಳು ಹೆಚ್ಚಿದಂತೆ ಸ್ವರವು ತೀವ್ರವಾಗಿ ಸ್ಥಾಯಿಗಳಾಗಲು ಕಾರಣವಾಗುತ್ತದೆ. ಇಂತಹ ಶ್ರುತಿಗಳು ಒಂದು ಸ್ಥಾಯಿಯಲ್ಲಿ ಇಪ್ಪತ್ತೆರಡು ಎಂದು ಪರಿಗಣಿಸಲಾಗಿದೆ.

ಶೀಲ : ಆಧಾರ ಶ್ರುತಿ (ಷಡ್ಜ) ಎಂದರೇನು ?

ರಾಮು : ಕಲಾವಿದರು ಅವರ ಶಾರೀರ ಹಾಗೂ ವಾದ್ಯಕ್ಕೆ ಅನುಗುಣವಾಗಿ ಹಾಡುವಾಗ / ನುಡಿಸುವಾಗ ಅವರು ಆರಿಸಿಕೊಳ್ಳುವ ಆಧಾರ ಸ್ವರವನ್ನು ಆಧಾರ ಶೃತಿ ಎನ್ನುತ್ತಾರೆ. ಇದೇ ಇಟ್ಟುಕೊಳ್ಳುವ ಮಧ್ಯಸ್ಥಾಯಿ ಷಡ್ಜ (ಸ) ವಾಗಿರುತ್ತದೆ.

ಶೀಲ : ಮಧ್ಯಮ ಶ್ರುತಿ ಎಂದರೇನು ?

ರಾಮು : ಶುದ್ಧ ಮಧ್ಯಮವನ್ನು (ಮ 1) ಆಧಾರ ಷಡ್ಜವನ್ನಾಗಿ ಇಟ್ಟುಕೊಳ್ಳುವುದು.

ಶೀಲ : ಸಪ್ತಸ್ವರಗಳ (ಏಳು ಸ್ವರಗಳ) ಅಂತರದಲ್ಲಿ ಎಷ್ಟು ಶ್ರುತಿ ಒಳಗೊಂಡಿವೆ.

ರಾಮು : 22 ಶ್ರುತಿಗಳು. ಇವು ಬಹಳ ಸೂಕ್ಷ್ಮವಾದವುಗಳು.

ಶೀಲ : ಸ್ವರಗಳ ಕಾಲ ಪ್ರಮಾಣಗಳನ್ನು ಬರವಣಿಗೆಯಲ್ಲಿ ಹೇಗೆ ತೋರಿಸುತ್ತಾರೆ.

ರಾಮು : ಹ್ರಸ್ವಾಕ್ಷರವು ಒಂದು ಅಕ್ಷರ ಕಾಲವನ್ನು ಸೂಚಿಸುತ್ತದೆ ಉದಾ:ಸ

ಒಂದು ದೀರ್ಘಾಕ್ಷರವು ಎರಡು ಅಕ್ಷರ ಕಾಲವನ್ನು ಸೂಚಿಸುತ್ತದೆ ಉದಾ:ಸಾ

ದೀರ್ಘಾಕ್ಷರದ ಮುಂದೆ ಅಲ್ಪವಿರಾಮ ಚಿಹ್ನೆ ಇದ್ದರೆ ಮೂರು ಅಕ್ಷರಗಳ ಕಾಲವನ್ನು ಸೂಚಿಸುತ್ತದೆ. ಉದಾ: ಸಾ,

ಒಂದು ದೀರ್ಘಾಕಾರದ ಮುಂದೆ ಅರ್ಧ ವಿರಾಮ ಚಿಹ್ನೆ ಇಟ್ಟರೆ ಅದು ನಾಲ್ಕು ಅಕ್ಷರ ಕಾಲವನ್ನು ಸೂಚಿಸುತ್ತದೆ. ಉದಾ: ಸಾ;

ಒಂದು ದೀರ್ಘಾಕ್ಷರ ಅರ್ಧ ವಿರಾಮ ಮತ್ತು ಅಲ್ಪ ವಿರಾಮ ಇದ್ದರೆ ಐದು ಅಕ್ಷರಗಳ ಕಾಲವನ್ನು ಸೂಚಿಸುತ್ತದೆ. ಉದಾ:: ಸಾ;,

ಒಂದು ದೀರ್ಘಾಕ್ಷರ ಎರಡು ಅರ್ಧವಿರಾಮ ಚಿಹ್ನೆ ಇದ್ದರೆ ಆರು ಅಕ್ಷರ ಕಾಲವನ್ನು ಸೂಚಿಸುತ್ತದೆ.
ಉದಾ: ಸಾ;;

ಶೀಲ : "ಸ್ಥಾಯಿ" ಎಂದರೇನು ?

ರಾಮು : ಯಾವುದಾದರೂ ಒಂದು ಸ್ವರವನ್ನು ಆಧಾರ ಷಡ್ಜವನ್ನಾಗಿ ಮಾಡಿಕೊಂಡು ಅದರಿಂದ ಮೇಲಕ್ಕೆ ಹಾಡುತ್ತಾ / ನುಡಿಸುತ್ತಾ ಹೋದರೆ ಅದರಲ್ಲಿ ಐಕ್ಯವಾಗುವ ಅದರಂತಹುದೇ ಮತ್ತೊಂದು ಸ್ವರ ಸಿಕ್ಕುತ್ತದೆ. ಈ ಎರಡು ಸ್ವರಗಳ ಮಧ್ಯೆ ಇರುವ ಜಾಗಕ್ಕೆ "ಸ್ಥಾಯಿ" ಎನ್ನುತ್ತಾರೆ.

ಅಂದರೆ ಎರಡು ಷಡ್ಜಗಳ ನಡುವೆ ಆರೋಹ ಅವರೋಹಗಳಿಗೆ ಹೊಂದಿಕೊಳ್ಳುವ ಸ್ವರ ಸಮುದಾಯವೇ ಸ್ಥಾಯಿ.

ಮಂದ್ರ, ಮಧ್ಯ, ತಾರ ಮುಖ್ಯವಾದ ಮೂರು ಸ್ಥಾಯಿಗಳು. ಈ ಮೂರು ಸ್ಥಾಯಿಗಳಲ್ಲೂ ಸ್ವರಗಳು ಕ್ರಮವಾಗಿ ಹೃದಯ, ಕಂಠ ಮತ್ತು ಶಿರಸ್ಸಿನಲ್ಲಿ ಸಂಚರಿಸುತ್ತವೆ. ಇದಕ್ಕೆ ಸಪ್ತಕವೆಂದು, ಇಂಗ್ಲಿಷ್ ಭಾಷೆಯಲ್ಲಿ ಆಕ್ಟೇವ್ ಎಂದು ಕರೆಯುತ್ತಾರೆ.

ಶೀಲ : "ಮಂದ್ರಸ್ಥಾಯಿ" ಎಂದರೇನು ?

ರಾಮು : ಆಧಾರ ಷಡ್ಜದಿಂದ ಅವರೋಹಣ ಕ್ರಮದಲ್ಲಿ ಬರುವ ಅಂದರೆ ನಿಷಾದದಿಂದ ಮೊದಲುಗೊಂಡು ಕೆಳಗಿನ ಷಡ್ಜದವರೆಗೆ ಬರುವ ಸ್ವರಗಳನ್ನು "ಮಂದ್ರಸ್ಥಾಯಿ" ಎನ್ನುತ್ತಾರೆ.

ಶೀಲ : "ಮಂದ್ರಸ್ಥಾಯಿ"ಯನ್ನು ಬರವಣಿಗೆಯಲ್ಲಿ ಹೇಗೆ ಗುರುತಿಸುವುದು ?

ರಾಮು : ಸ್ವರಗಳ ಕೆಳಗೆ ಚುಕ್ಕೆ ಇಡುವುದರ ಮೂಲಕ ಗುರುತಿಸುತ್ತಾರೆ. ಉದಾ : ನಿ ದ ಪ ಮ ಗ ರಿ ಸ

ಶೀಲ : "ಮಧ್ಯಸ್ಥಾಯಿ" ಎಂದರೇನು ?

ರಾಮು : ಆಧಾರ ಷಡ್ಜದಿಂದ ಮೊದಲಗೊಂಡು ಆರೋಹಣ ಕ್ರಮದಲ್ಲಿ ನಿಷಾದದವರೆಗೆ (ಮುಂದಿನ ಷಡ್ಜದ ತಾರಸ್ಥಾಯಿವರೆಗೂ) ಬರುವ ಸ್ವರಗಳಿಗೆ "ಮಧ್ಯಸ್ಥಾಯಿ" ಎನ್ನುತ್ತಾರೆ. ಉದಾ : ಸರಿಗಮಪದನಿ.

ಶೀಲ : "ತಾರಸ್ಥಾಯಿ" ಎಂದರೇನು ?

ರಾಮು : "ಮಧ್ಯಸ್ಥಾಯಿ" ನಿಷಾದನಂತರ ಬರುವ ಷಡ್ಜದಿಂದ ಆರಂಭಿಸಿ ಮುಂದಕ್ಕೆ ಆರೋಹಣ ಕ್ರಮದಲ್ಲಿ ನಿಷಾದದವರೆಗೆ ಬರುವ ಸ್ವರಗಳಿಗೆ "ತಾರಸ್ಥಾಯಿ" ಎನ್ನುತ್ತಾರೆ. ಹಾಗೆಯೇ ಮಧ್ಯಸ್ಥಾಯಿಯ ನಿಷಾದದ ನಂತರ ಬರುವ ಷಡ್ಜವನ್ನು ತಾರ ಷಡ್ಜವೆಂದು ಕರೆಯುತ್ತಾರೆ.

ಶೀಲ : "ತಾರಸ್ಥಾಯಿ"ಯನ್ನು ಬರವಣಿಗೆಯಲ್ಲಿ ಹೇಗೆ ಗುರುತಿಸುವುದು ?

ರಾಮು : ತಾರಸ್ಥಾಯಿಯನ್ನು ಬರವಣಿಗೆಯಲ್ಲಿ ತೋರಿಸಲು ಸ್ವರಗಳ ಮೇಲೆ ಚುಕ್ಕೆ ಇಡುತ್ತಾರೆ. ಉದಾ : ಸ ರಿ ಗ ಮ ಪ ದ ನಿ.

ಶೀಲ : ಐದು ಸ್ಥಾಯಿಗಳು ಯಾವುವು ? ಅವುಗಳನ್ನು ಹೇಗೆ ಗುರುತಿಸುವುದು ?

ರಾಮು :

| | | |
|---|---|---|
| ಅನುಮಂದ್ರಸ್ಥಾಯಿ | - ಸ್ವರದ ಕೆಳಗೆ ಎರಡು ಚುಕ್ಕೆಗಳು. | ಸ |
| ಮಂದ್ರಸ್ಥಾಯಿ | - ಸ್ವರದ ಕೆಳಗೆ ಒಂದು ಚುಕ್ಕೆ | ಸ |
| ಮಧ್ಯಸ್ಥಾಯಿ | - ಚುಕ್ಕೆ ಇಲ್ಲದ ಸ್ವರ | ಸ |
| ತಾರಸ್ಥಾಯಿ | - ಸ್ವರದ ಮೇಲೆ ಒಂದು ಚುಕ್ಕೆ | ಸ |
| ಅತಿತಾರಸ್ಥಾಯಿ | - ಸ್ವರದ ಮೇಲೆ ಎರಡು ಚುಕ್ಕೆ | ಸ |

ಶೀಲ : "ಧಾತು - ಮಾತು" ಎಂದರೇನು ?

ರಾಮು : ಸಂಗೀತ ಸ್ವರಗಳು - ಸರಿಗಮಪದನಿ. ಇವುಗಳಿಗೆ ಧಾತು ಎಂದು ಹೆಸರು. ಅದರ ಜೊತೆಗೆ ಇರುವ ಸಾಹಿತ್ಯಕ್ಕೆ "ಮಾತು" ಎನ್ನುತ್ತಾರೆ.

ಶೀಲ : "ಆರೋಹಣ" ಎಂದರೇನು ?

ರಾಮು : ಸ್ವರಗಳ ಕ್ರಮವಾದ ಏರುವಿಕೆಗೆ "ಆರೋಹಣ" ಎಂದು ಕರೆಯಲಾಗಿದೆ.ಉದಾ : ಸ ರಿ ಗ ಮ ಪ ದ ನಿ.

ಶೀಲ : "ಅವರೋಹಣ" ಎಂದರೇನು ?

ರಾಮು : ಸ್ವರಗಳ ಕ್ರಮವಾದ ಇಳಿಯುವಿಕೆಗೆ "ಅವರೋಹಣ" ಎಂದು ಕರೆಯಲಾಗಿದೆ.ಉದಾ : ನಿ ದ ಪ ಮ ಗ ರಿ ಸ.

ಶೀಲ : ಹೆಚ್ಚು ಬಳಕೆಯಿಲ್ಲದ ಎರಡು ಸ್ಥಾಯಿ ಹೆಸರೇನು ?

ರಾಮು : ಅನುಮಂದ್ರಸ್ಥಾಯಿ ಮತ್ತು ಅತಿತಾರಸ್ಥಾಯಿ. ಮಂದ್ರಸ್ಥಾಯಿಯ ಕೆಳಗೆ ಅನುಮಂದ್ರವೆಂಬ ಸ್ಥಾಯಿ ( ನಿ ದ ಪ ಮ ಗ ರಿ ಸ) ತಾರಸ್ಥಾಯಿ ಮೇಲೆ ಅತಿತಾರ ವೆಂಬ ಸ್ಥಾಯಿ ( ಸ ರಿ ಗ ಮ ಪ ದ ನಿ) ಇರುತ್ತದೆ.

ಶೀಲ : ಸಪ್ತಸ್ವರಗಳಾದ "ಸರಿಗಮಪದನಿ" ಗಳಿಗೆ ಯಾವ ಯಾವ ಪ್ರಾಣಿ ಪಕ್ಷಿಗಳು ಕೂಗುವ ಶಬ್ದದ ಆಧಾರದಿಂದ ಹೆಸರಿಸಿದ್ದಾರೆ.

ರಾಮು :

| | | |
|---|---|---|
| ಸ | (ಷಡ್ಜ) | ನವಿಲಿನ ಕೂಗು |
| ರಿ | (ಋಷಭ) | ಎತ್ತಿನ ಕೂಗು |
| ಗ | (ಗಾಂಧಾರ) | ಆಡಿನ ಕೂಗು |
| ಮ | (ಮಧ್ಯಮ) | ಕ್ರೌಂಚ ಪಕ್ಷಿಕೂಗು |
| ಪ | (ಪಂಚಮ) | ಕೋಗಿಲೆ ಕೂಗು |
| ದ | (ದೈವತ) | ಕುದುರೆ ಕೆನೆಯುವಿಕೆ |
| ನಿ | (ನಿಷಾದ) | ಆನೆಯ ಘೀಂಕಾರ |

ಶೀಲ : ಸಂಗೀತ ಪರಿಭಾಷೆಯಲ್ಲಿ ಕಾಲಗಳನ್ನು ಬರವಣಿಗೆಯಲ್ಲಿ ಹೇಗೆ ಮೂಡಿಸುತ್ತಾರೆ ತಿಳಿಸಿ ?

ರಾಮು :

| | | |
|---|---|---|
| ಮೊದಲನೆ ಕಾಲ | ಸರಿಗಮ ಪದನಿಸ | ಸ್ವರಗಳ ಕೆಳಗೆ ಗೆರೆಯಿಲ್ಲ |
| ಎರಡನೆ ಕಾಲ | ಸರಿಗಮ ಪದನಿಸ | ಸ್ವರಗಳ ಕೆಳಗೆ ಒಂದು ಗೆರೆ |
| ಮೂರನೆ ಕಾಲ | ಸರಿಗಮ ಪದನಿಸ | ಸ್ವರಗಳ ಕೆಳಗೆ ಎರಡು ಗೆರೆ |
| ನಾಲ್ಕನೆ ಕಾಲ | ಸರಿಗಮ ಪದನಿಸ | ಸ್ವರಗಳ ಕೆಳಗೆ ಮೂರು ಗೆರೆ |

ಶೀಲ : "ಕೋರ್ವೆ" ಎಂದರೇನು ?

ರಾಮು : ಇವು ಸ್ವರ ಸಂಯೋಜನೆಯ ಮುಕ್ತಾಯಗಳು.

ಶೀಲ : ಗ್ರಹ ಅಥವಾ ಎಡುಪ್ಪು ಎಂದರೇನು ?

ರಾಮು : ಸಂಗೀತ ರಚನೆಯ, ತಾಳಾ ವರ್ತವೂ ಪ್ರಾರಂಭವಾಗುವ ಸ್ಥಳಕ್ಕೆ ಗ್ರಹ ಅಥವಾ ಎಡುಪ್ಪು ಎಂದೂ ಕರೆಯುತ್ತಾರೆ.

ಶೀಲ : ಮೂರು ರೀತಿಯ ಎಡುಪ್ಪು ಅಥವಾ ಗ್ರಹ ಯಾವುವು ?

ರಾಮು :
1. ಸಮಗ್ರಹ : ಸಂಗೀತ ಮತ್ತು ತಾಳ ಒಟ್ಟಿಗೆ ಆರಂಭವಾಗುವುದು.
2. ಅನಾಗತಗ್ರಹ : ತಾಳಾವರ್ತ ಆರಂಭವಾದ ನಂತರ ಸಂಗೀತ ಆರಂಭವಾಗುವುದು.
3. ಅತೀತ ಗ್ರಹ : ತಾಳಾವರ್ತಕ್ಕೆ ಮುಂಚೆ ಸಂಗೀತ ಆರಂಭವಾಗುವುದು.

ಶೀಲ : ಸಂಗೀತದ ಪ್ರಮುಖ ಆಧಾರ ಸ್ವರಗಳಾಗಿರುವ ಸಪ್ತಸ್ವರಗಳ ಅಂದರೆ ಸ, ರಿ, ಗ, ಮ, ಪ, ದ, ನಿ ಗಳ ವಿಶೇಷತೆ ಏನು ?

ರಾಮು : ಸ : ಷಡ್ಜ : ಷಡ್ಜವು ಮನುಷ್ಯನ ದೇಹದಲ್ಲಿ ನಾಭಿಯಿಂದ ಉತ್ಪನ್ನವಾಗುವ ನಾದ. ಇದು ಇತರ ಆರು ಸ್ವರಗಳ ಆವಾಸಸ್ಥಾನ. ನಾಸಿಕ, ಕಂಠ, ಉರಸ್ಸು, ತಾಲು, ಜಿಹ್ವೆ, ದಂತ ಎಂಬ ಆರು ಸ್ಥಾನಗಳ ಮೂಲಕ ಹೊರಬರುವುದರಿಂದ ಷಡ್ಜ ಎಂದು ಹೆಸರು ಪಡೆದಿದೆ.

ರಿ : ಋಷಭ :ಇದು ಅತಿಶೀಘ್ರವಾಗಿ ಹೃದಯದ ತಳವನ್ನು ಸ್ಪರ್ಶಿಸುವ ಧ್ವನಿ ವಿಶೇಷ. ವೃಷಭವೇಗೋವುಗಳ ಸಮೂಹದಲ್ಲಿ ಶೇಷ್ಠ. ಈದ್ವಿತೀಯ ಸ್ಥಾನದಲ್ಲಿರುವ ಸ್ವರಕ್ಕೆ ಋಷಭ ಎಂದು ಹೆಸರು.

ಗ : ಗಾಂಧಾರ : ಉಚ್ಚಾರಣೆಯಲ್ಲಿ ದೈವೀಸುಖ ಅಂದರೆ ಗಂಧರ್ವ ಸುಖಾನುಭವವನ್ನುಉಂಟುಮಾಡುವುದರಿಂದ ಗಾಂಧಾರವೆಂದುಹೆಸರು.

ಮ : ಮಧ್ಯಮ : ಸ್ವರ ಸಪ್ತಕ ಮಧ್ಯಸ್ಥಾನದಲ್ಲಿರುವುದರಿಂದ ಮಧ್ಯಮವೆಂದು ಹೆಸರು.

ಪ : ಪಂಚಮ : ಸಪ್ತಸ್ವರಗಳಲ್ಲಿ 5ನೇಯದು. ರಾಗ ವಿಸ್ತರಣೆಗೆ ಯೋಗ್ಯವಾದದು.

ದ : ದೈವತ : ಧ್ವನಿದಾರ್ಢ್ಯವನ್ನುಹೊಂದಿ, ಧೀರ ಸಂಬಂಧವನ್ನು ಹೊಂದಿರುವುದರಿಂದಲೂ ದೈವತವೆಂಬ ಹೆಸರು.

ನಿ : ನಿಷಾದ : ಸಪ್ತಸ್ವರಗಳಲ್ಲಿ ಕೊನೆಯದಾದ್ದರಿಂದ ನಿಷಾದವೆಂಬ ಹೆಸರನ್ನು ಪಡೆದಿದೆ.

ಶೀಲ : ಸಂಗೀತದಲ್ಲಿ ಸಪ್ತ ಸ್ವರಗಳಲ್ಲಿ ಯಾವ - ಯಾವ ಸ್ವರ ಯಾರ - ಯಾರನ್ನು ಸಂತೋಷಗೊಳಿಸುತ್ತದೆ. ?

ರಾಮು : ಸ, ರಿ, ಗ, ಮ, ಪ, ದ ಮತ್ತು ನಿ ಸಪ್ತಸ್ವರಗಳು. ಸಂಗೀತದಲ್ಲಿ ಇವುಗಳಿಗೆ ಕ್ರಮವಾಗಿ ಷಡ್ಜ, ವೃಷಭ, ಗಾಂಧಾರ, ಮಧ್ಯಮ, ಪಂಚಮ, ದೈವತ, ನಿಷಾದಗಳೆಂದು ಹೆಸರು.

ಷಡ್ಜವು ಎಲ್ಲಾ ಸ್ವರಗಳ ಆವಾಸಸ್ಥಾನವಾಗಿ ದೇವತೆಗಳನ್ನು ಸಂತೋಷಪಡಿಸುತ್ತದೆ. ವೃಷಭವು ಅತಿ ಶೀಘ್ರವಾಗಿ ಹೃದಯತಳವನ್ನು ಸ್ಪರ್ಶಿಸಿ ಋಷಿಗಳನ್ನು ಸಂತೋಷ ಪಡಿಸುತ್ತದೆ.

ಗಾಂಧಾರವು ಉಚ್ಚಾರಣೆಯಲ್ಲಿ ಸುಖವನ್ನು ನೀಡುತ್ತ ಪಿತೃಗಳನ್ನು ಸಂತೋಷಪಡಿಸುತ್ತದೆ.

ಮಧ್ಯಮವು ಗಂಧರ್ವರನ್ನು ಸಂತೋಷಪಡಿಸುತ್ತದೆ.

ಪಂಚಮವು ರಾಗ ವಿಸ್ತರಣೆಗೆ ಯೋಗ್ಯವಾದದ್ದು. ಪಿತೃಗಳನ್ನೂ, ದೇವತೆಗಳನ್ನೂ ಸಂತೋಷಪಡಿಸುತ್ತದೆ.

ದೈವತವು ಧ್ವನಿದಾರ್ಢ್ಯವನ್ನು ಹೊಂದಿ ಧೀರ ಸಂಬಂಧವನ್ನು ಹೊಂದಿ ಪ್ರಾಣಿಗಳನ್ನು ಸಾಮಾನ್ಯರನ್ನು ಸಂತೋಷಪಡಿಸುತ್ತದೆ.

ನಿಷಾದವು ಯುವಕರನ್ನು ಸಂತೋಷಪಡಿಸುತ್ತದೆ.

ಶೀಲ : ಒಂದೇ ರೀತಿಯ ಸ್ವರಗಳ ರಚನೆಯ ವೈಶಿಷ್ಟ್ಯತೆಯೇನು ?

ರಾಮು : ಒಂದೇ ರೀತಿಯ ಸ್ವರಗಳ ರಚನೆಯಿಂದ ಉತ್ಪನ್ನವಾಗುವ ರಸ ಅನುಭವವು ಏಕ ಪ್ರಕಾರವಾಗಿರುತ್ತದೆ. ಅದು ಬೇರೆ ಬೇರೆ ವ್ಯಕ್ತಿಗಳಿಗೆ ಬೇರೆ ಬೇರೆ ರೀತಿಯ ರಸ ಅನುಭವಗಳನ್ನು ಕೊಡುವುದಿಲ್ಲ.

ಶೀಲ : ವಿಕೃತಿ ಸ್ವರಗಳಲ್ಲಿ ಯಾವ ರೀತಿಯ ಪ್ರಭೇದಗಳಿವೆ ?

ರಾಮು : ಕರ್ನಾಟಕ ಸಂಗೀತದಲ್ಲಿ 16 ಸ್ವರಭೇದಗಳನ್ನು ಕಾಣುತ್ತೇವೆ. ಒಂದು ಸ್ಥಾಯಿಯಲ್ಲಿ ಷಡ್ಜ ಪಂಚಮಗಳೂ ಸೇರಿ ಒಟ್ಟು ಹದಿನಾರು ಸ್ವರಸ್ಥಾನಗಳಾಗುತ್ತವೆ. ಸ್ಥಾಯಿಯ ಹದಿನಾರು ಸ್ವರಸ್ಥಾನಗಳ ಆಧಾರದ ಮೇಲೆ ರೂಪಿತವಾದ ವೆಂಕಟಮುಖಿಯವರ ಎಪ್ಪತ್ತೆರಡು ಮೇಳಪದ್ಧತಿ ಇಂದು ಸರ್ವಗ್ರಾಹ್ಯವಾಗಿರುವುದು.

| | | |
|---|---|---|
| 1. ಷಡ್ಜದಲ್ಲಿ ಒಂದು ವಿಧ | - 1. ಷಡ್ಜ | 1 |
| 2. ರಿಷಭದಲ್ಲಿ ಮೂರು ವಿಧ | - 1. ಶುದ್ಧರಿಷಭ | 2 |
| | - 2. ಚತುಶ್ರುತಿ ರಿಷಭ | 3 |
| | - 3. ಷಟ್‌ಶ್ರುತಿ ರಿಷಭ | 4 |
| 3. ಗಾಂಧಾರದಲ್ಲಿ ಮೂರು ವಿಧ | - 1. ಶುದ್ಧ ಗಾಂಧಾರ | 5 |
| | - 2. ಸಾಧಾರಣ ಗಾಂಧಾರ | 6 |
| | - 3. ಅಂತರ ಗಾಂಧಾರ | 7 |
| 4. ಪಂಚಮದಲ್ಲಿ ಒಂದು ವಿಧ | - 1. ಪಂಚಮ | 8 |
| 5. ಮಧ್ಯಮದಲ್ಲಿ ಎರಡು ವಿಧ | - 1. ಶುದ್ಧ ಮಧ್ಯಮ | 9 |
| | - 2. ಪ್ರತಿ ಮಧ್ಯಮ | 10 |
| 6. ದೈವತದಲ್ಲಿ ಮೂರು ವಿಧ | - 1. ಶುದ್ಧ ದೈವತ | 11 |
| | - 2. ಚತುಶ್ರುತಿ ದೈವತ | 12 |
| | - 3. ಷಟ್ ಶ್ರುತಿ ದೈವತ | 13 |

| | | |
|---|---|---|
| 7. ನಿಷಾದದಲ್ಲಿ | - 1. ಶುದ್ಧ ನಿಷಾದ | 14 |
| | - 2. ಕೈಶಿಕಿ ನಿಷಾದ | 15 |
| | - 3. ಕಾಕಲಿ ನಿಷಾದ | 16 |

ಶೀಲ : ಸ್ವರಗಳ ಧ್ವನಿ ಸಾಮ್ಯತೆ ಎಂದರೇನು ?

ರಾಮು : ಹದಿನಾರು ಸ್ವರಗಳಲ್ಲಿ ಶುದ್ಧ ಸ್ವರಗಳಾದ ಷಡ್ಜ ಮತ್ತು ಪಂಚಮ ಸ್ವರಗಳನ್ನು ಬಿಟ್ಟರೆ ಉಳಿದ ಹದಿನಾಲ್ಕು ಸ್ವರಗಳು, ಹತ್ತು ಸ್ವರಗಳಲ್ಲಿ ಮಾತ್ರವೇ ಅಡಕವಾಗಿರುವುದರಿಂದ ಸಂಗೀತದಲ್ಲಿ ಉಪಯೋಗಿಸಲ್ಪಡುವ ಸ್ವರಗಳ ಧ್ವನಿ ವಿಶೇಷವು 4 ವಿಕೃತ ಸ್ವರಗಳಲ್ಲಿ ಧ್ವನಿ ಸಾಮ್ಯತೆ ಇರುವುದರಿಂದ ಒಟ್ಟು 12 ಸ್ವರಗಳು ಮಾತ್ರವೇ ಆಗಿವೆ.

ಅಂದರೆ ಚತುಶ್ರುತಿ ಋಷಭ ಮತ್ತು ಶುದ್ಧಗಾಂಧಾರ ಧ್ವನಿ ಒಂದೇ,

ಷಟ್‌ಶ್ರುತಿ ಋಷಭ ಮತ್ತು ಸಾಧಾರಣ ಗಾಂಧಾರಗಳ ಧ್ವನಿ ಒಂದೇ,

ಚತುಶ್ರುತಿ ದೈವತ ಮತ್ತು ಶುದ್ಧ ನಿಷಾದಗಳ ಧ್ವನಿ ಒಂದೇ ಮತ್ತು

ಷಟ್‌ಶ್ರುತಿ ದೈವಕ ಮತ್ತು ಕೈಶಿಕಿ ನಿಷಾದಗಳ ಧ್ವನಿ ಒಂದೇ.



# 12. ರಾಗ

ಶೀಲ : "ರಾಗ" ಎಂದರೇನು ?

ರಾಮು : ಸಪ್ತಸ್ವರಗಳ ಭೇದಗಳನ್ನು ಬೇರೆ ಬೇರೆ ರೀತಿಯಲ್ಲಿ ಕ್ರಮವಾಗಿ ಜೋಡಿಸಿದಾಗ ಉಂಟಾಗುವ ಬೇರೆ ಬೇರೆ ರೂಪಗಳ ಛಾಯೆಯೇ ರಾಗ.

ಆರೋಹಣ ಮತ್ತು ಅವರೋಹಣದಲ್ಲಿ ಕ್ರಮವಾದ ಸ್ವರಗಳ ಸೇರುವಿಕೆಯನ್ನು ಹೊಂದಿ ಜನರ ಮನಸ್ಸಿಗೆ ರಂಜನೆಯನ್ನುಂಟುಮಾಡುವ ಸ್ವರವರ್ಣಗಳಿಂದ ಕೂಡಿದ ಧ್ವನಿ ವಿಶೇಷವೇ ರಾಗವೆನ್ನಿಸುವುದು. ರಂಜನೆಯಾಗುವಂತಹುದು "ರಾಗ".

ಶೀಲ : ಮೊಟ್ಟ ಮೊದಲ ಬಾರಿಗೆ ರಾಗವನ್ನು ಬಳಕೆಗೆ ತಂದವರು ಯಾರು ?

ರಾಮು : "ಮತಂಗ".

ಶೀಲ : ರಾಗ ಪದದ ಬದಲಿಗೆ ರಾಮಾಯಣ ಕಾಲದಲ್ಲಿ ಯಾವ ಪದ ಬಳಕೆಯಲ್ಲಿ ಇತ್ತು?

ರಾಮು : ರಾಗದ ಬದಲಿಗೆ 'ಜಾತಿ' ಎಂಬ ಪದ ಇತ್ತು. ರಾಮಾಯಣದಲ್ಲಿ ಲವ-ಕುಶರು ಕಾವ್ಯವನ್ನು 'ಜಾತಿ'ಯ ಆಧಾರದಲ್ಲಿ ಹಾಡಿದರೆಂದು ಹೇಳಿದೆ.

ಶೀಲ : 'ರಾಗ'ಪದ ಹೇಗೆ ಹುಟ್ಟಿತು ?

ರಾಮು : ಭರತನು 'ಜಾತಿ' ಎಂದು ಹೇಳಿ ಅದರ ಲಕ್ಷಣಗಳನ್ನು ವಿವರಿಸಿದ್ದಾನೆ. ಇವನ ಅಭಿಪ್ರಾಯವನ್ನೇ ಒಪ್ಪಿಕೊಂಡ ಮತಂಗ, ಜಾತಿಯಿಂದಲೇ 'ರಾಗ' ಹುಟ್ಟಿತು ಎನ್ನುತ್ತಾರೆ.

ಶೀಲ : ಇಂದು ಸಂಗೀತದಲ್ಲಿ 'ರಾಗ'ದ ಪಾತ್ರ, ವಿಶಿಷ್ಟ ಲಕ್ಷಣ, ಹಿರಿಮೆಗಳೇನು ?

ರಾಮು : ರಾಗವೇ ಮನೋಧರ್ಮ ಸಂಗೀತದ ಬೆನ್ನೆಲುಬು.

'ರಾಗ'ವು ನಮ್ಮ ಭಾರತೀಯ ಸಂಗೀತದ ಒಂದು ವಿಶಿಷ್ಟ ಲಕ್ಷಣ.

ಭಾರತೀಯ ಸಂಗೀತವೇ 'ರಾಗ ಸಂಗೀತ' ವೆಂಬುದು ಎಲ್ಲರಿಗೂ ಗೊತ್ತಿದೆ. ಪ್ರತಿರಾಗವು ಪ್ರತ್ಯೇಕ ಲಕ್ಷಣವನ್ನು ಹೊಂದಿದೆ. ಅದರ ಸಂಚಾರ ಮತ್ತು ರೂಪ ಇವುಗಳು ಕೃತಿಗಳ ಮೂಲಕ ಶ್ರೋತೃಗಳ ಮನಮುಟ್ಟುವುದು.

ಸಂಗೀತದಲ್ಲಿ ಒಂದೊಂದು ರಾಗಕ್ಕೂ ಒಂದೊಂದು ಭಾವ ಒಂದೊಂದು ರಸವಿರುತ್ತದೆ. ಸಂಗೀತಕ್ಕೆ ನವರಸಭಾವಗಳನ್ನು ಹೊಮ್ಮಿಸುವ ಚೈತನ್ಯವಿದೆ.

ಇಬ್ಬರೂ ಆರಿಸಿಕೊಂಡ ರಾಗವು ಒಂದೇ ಆಗಿದ್ದರೂ ಹಾಡಿದ ಶೈಲಿಯಲ್ಲಿ ಸ್ವರಗುಚ್ಛದ ಪ್ರಯೋಗದಲ್ಲಿ ಬೇರೆಯಾಗಿರುತ್ತದೆ. ಹಾಡಿನ ಶೈಲಿಯು ಬೇರೆ ಆದರೂ ಇಬ್ಬರು ಹಾಡಿದ ರಾಗ ಒಂದೇ ಎಂಬುದು ಸ್ಪಷ್ಟವಾಗಿ ಶ್ರೋತೃಗಳಿಗೆ ತಿಳಿಯುತ್ತದೆ.

ಶೀಲ : ರಾಗದ ನಿಜವಾದ ಅರ್ಥವೇನು ?

ರಾಮು : ಸ್ವರ ವರ್ಣಗಳಿಂದ ಕೂಡಿ ಅಲಂಕಾರ ಭರಿತವಾಗಿ ಯಾವುದು ಶ್ರೋತೃಗಳ ಮನಸ್ಸನ್ನು ರಂಜಿಸುವ ಧ್ವನಿ ವಿಶೇಷವಾಗಿರುವುದೋ ಆ ಧ್ವನಿ ವಿಶೇಷವೇ "ರಾಗ".

ದಶಲಕ್ಷಣಗಳೂ ಸ್ವರಗಳ ಭಾವಕ್ಕನುಗುಣವಾಗಿ ರಾಗದಲ್ಲಿ ಮೈಗೂಡಿದಾಗಲೇ ನಿಜವಾದ "ರಾಗ" ಮೂಡಿಬರುವುದು.

ಶೀಲ : ರಾಗದ ದಶಲಕ್ಷಣಗಳಾವುವು ? ಅವುಗಳ ವಿವರಗಳೇನು ?

ರಾಮು :
1. ಗ್ರಹ : ರಾಗವು ಪ್ರಾರಂಭವಾಗುವ ನಿಯಮಿತ ಸ್ಥಳ.
2. ಅಂಶ : ರಾಗದ ನಿಜರೂಪವನ್ನು ಸ್ಪಷ್ಟವಾಗಿ ನಿರೂಪಿಸುವುದರಲ್ಲಿ ಪ್ರಾಧಾನ್ಯ ಪಡೆದ ಸ್ವರ.
3. ತಾರ : ಮೇಲಿನ ಸ್ಥಾಯಿಯಲ್ಲಿ ಸ್ವರ ಸಂಚಾರ.

4. ಮಂದ್ರ : ಕೆಳಗಿನ ಸ್ಥಾಯಿಯಲ್ಲಿ ಸ್ವರ ಸಂಚಾರ.
5. ನ್ಯಾಸ : ರಾಗವು ಮುಕ್ತಾಯಗೊಳ್ಳುವ ಸ್ವರ.
6. ಅಪನ್ಯಾಸ : ರಾಗದ ಮಧ್ಯೆ ಮಧ್ಯೆ ನಿಲ್ಲುವಂತಹ ನಿಲುಗಡೆ ಸ್ಥಾನ.
7. ಅಲ್ಪತ್ವ : ರಾಗದಲ್ಲಿ ಅಪರೂಪವಾಗಿ ಬಳಕೆಯಾಗುವ ಸ್ವರ.
8. ಬಹುತ್ವ : ರಾಗದಲ್ಲಿ ಕೆಲವು ಸ್ವರಗಳು ಪದೇ ಪದೇ ಪುನರಾವರ್ತವಾಗುವ ಸ್ವರ.
9. ಷಾಡವ : ಆರು ಸ್ವರಗಳ ಪ್ರಯೋಗ.
10. ಔಡವ : ಐದು ಸ್ವರಗಳ ಪ್ರಯೋಗ.

ಶೀಲ : ರಾಗದ ಲಕ್ಷಣಗಳ ಬಗ್ಗೆ ಮೇಳರಾಗಗಳ ಕರ್ತೃ ವೆಂಕಟಮುಖಿ ಎಷ್ಟು ಲಕ್ಷಣಗಳು ಮುಖ್ಯವಾಗಿರುವುದಾಗಿ ಹೇಳಿದ್ದಾರೆ ?

ರಾಮು : ಈ ರಾಗದಲ್ಲಿ ಮುಖ್ಯವಾಗಿರುವ ಲಕ್ಷಣಗಳು 'ಗ್ರಹ', 'ಅಂಶ', 'ನಾಸ' - ಈ ಮೂರು ಮಾತ್ರ ಎಂದಿದ್ದಾರೆ. ಏಕೆಂದರೆ ಇದು ಪ್ರಾರಂಭವಾಗುವುದೇ "ಗ್ರಹಸ್ವರ"ದಿಂದ. ಗ್ರಹ 'ಸ್ವರ'ದಿಂದ ಪ್ರಾರಂಭವಾದ ರಾಗ ಸಂಚಾರವು, ಸ್ಪಷ್ಟ ರೂಪ ಪಡೆಯುವುದು. 'ಅಂಶಸ್ವರ'ದಿಂದ. ಸ್ಪಷ್ಟರೂಪ ಪಡೆದ ರಾಗ ಸಂಚಾರವು ಮುಕ್ತಾಯವಾಗುವುದು 'ನ್ಯಾಸ ಸ್ವರ'ದಿಂದ.

ರಾಗ ಲಕ್ಷಣದಲ್ಲಿ ಕೆಲವು ಪದಗಳ ಗುಂಪನ್ನು ಎಲ್ಲಕಿಂತ ಹೆಚ್ಚಾಗಿ ಬಳಸಲಾಗಿದೆ. ಅಂದರೆ ವಾದಿ, ಸಂವಾದಿ, ವಿವಾದಿ, ಮತ್ತು ಅನುವಾದಿ. ಇಲ್ಲಿ ವಾದಿಯು ಆಧಾರ ಬಿಂದುವಾದರೆ, ಸಂವಾದಿ, ವಿವಾದಿ ಅಥವಾ ಅನುವಾದಿ - ಇವುಗಳಲ್ಲಿ ಯಾವುದಾದರೊಂದು ಮತ್ತೊಂದು ಬಿಂದುವಾಗುತ್ತದೆ. ಹೀಗೆ ಇದರ ಸಂಬಂಧವು ಎರಡು ಬಿಂದುಗಳ ಮಧ್ಯದಲ್ಲಿ ಕೇಂದ್ರೀಕೃತವಾಗಿದೆ.

ರಾಗದಲ್ಲಿ ಯಾವ ಸ್ವರವು ಬಹಳವಾಗಿ ಉಪಯೋಗಿಸಲ್ಪಡುವುದೋ ಅದೇ ವಾದಿ ಎಂದೂ ಅದರ ಅಪೇಕ್ಷಿತ ಸ್ವರವು ಗೌಣವಾಗಿ ಪ್ರಯೋಗಿಸಲ್ಪಡುವುದು ಸಂವಾದಿ ಎಂದೂ ಅಭಿಪ್ರಾಯವಿದೆ. ಆದರೆ ಯಾವಾಗಲೂ ಸಂವಾದಿ ಸಂಬಂಧದ ದರ್ಶನವಾಗುವುದಿಲ್ಲ.

ಇಂದು ಷಡ್ಜವೇ ಆಧಾರ ಸ್ವರವಾಗಿ ಪರಿಗಣಿಸಲ್ಪಟ್ಟು, ಈ ಬದಲಾದ ಪರಿಸ್ಥಿತಿಯಲ್ಲೂ ಈ ಶಬ್ದಾವಳಿಯ ಪ್ರಯೋಗವು ಸೀಮಿತ ರೂಪದಲ್ಲೇ ಸಾರ್ಥಕವಾಗುತ್ತದೆ.

ಶೀಲ : ರಾಗಗಳು ಕಾಲಕಾಲದಲ್ಲಿ ಹೇಗೆ ರೂಪಾಂತರ ಹೊಂದಿ ವಿಕಾಸಗೊಂಡಿವೆ ?

ರಾಮು : ಹಿಂದೆ ರಾಗದಲ್ಲಿಯೂ ಕೂಡ ಮಾರ್ಗ ಮತ್ತು ದೇಶಿ ಎಂಬ ಎರಡು ವಿಧಗಳಿದ್ದು, ಗಂಧರ್ವರಿಗೆ ಮೀಸಲಾದದ್ದು "ಮಾರ್ಗ" ಎಂದೂ, ಆಯಾ ಪ್ರಾಂತ್ಯದ ಜನರು ತಮ್ಮ ಇಚ್ಛೆಗೆ ಬಂದ ರಾಗದಿಂದ ಜನ್ಯವಾದ ರಚನೆಗೆ ಅಥವಾ ಸಂಗೀತಕ್ಕೆ 'ದೇಶಿ' ಎಂದೂ, ಈ ದೇಶಿ ಸಂಗೀತದಲ್ಲಿ ಹದಿನೆಂಟು ವಿಕೃತಿ ಜಾತಿ ಎಂದೂ ರೂಢಿಯಲ್ಲಿದ್ದವು. ಜಾತಿಗಳಾದ ಕ್ರಮೇಣ ರಾಗಗಳು ರೂಪಾಂತರ ಹೊಂದಿ, ರಾಗಗಳ ಆಧಾರದಿಂದ ಜನಕ ಜನ್ಯ ಪದ್ಧತಿಯು ಬೆಳೆದು ಈಗ ಮೇಳ ರಾಗಗಳು ವಿಕಾಸಗೊಂಡಿವೆ. ಈಗಿನ ಎಲ್ಲಾ ರಾಗಗಳು ಷಡ್ಜದಿಂದ ಪ್ರಾರಂಭಗೊಂಡು ಷಡ್ಜಗ್ರಾಮಕ್ಕೆ ಸೇರಿವೆ.

ಶೀಲ : ರಾಗ ವಿಸ್ತಾರಕ್ಕೆ ಕೊನೆಯ ಪಕ್ಷ ಎಷ್ಟು ಸ್ವರಗಳು ಇರಲೇ ಬೇಕು ?

ರಾಮು : ರಾಗ ವಿಸ್ತಾರಕ್ಕೆ ಕೊನೆಯ ಪಕ್ಷ ಐದು ಸ್ವರಗಳಾದರೂ ಇರಲೇ ಬೇಕು.

ಶೀಲ : ರಾಗದ ಮೂರು ಅರ್ಥಗಳು ಯಾವುವು ?

ರಾಮು : ರಂಜನೆ, ಮಟ್ಟು ಮತ್ತು ಸುಸ್ವರ.

ರಾಗವು ಸುಸ್ವರದಿಂದ ಕೂಡಿ, ರಂಜನೆ ಕೊಡುವುದರಿಂದ ಒಳ್ಳೆಯ ಮಟ್ಟು ಉಂಟಾಗುವುದು. ಹಾಗೆಯೇ ರಾಗವು ವಿಶೇಷವಾದ ಸ್ವರಗಳ ಜೋಡಣೆಯಿಂದ ವರ್ಣಾಲಂಕಾರ ಯುಕ್ತವಾಗಿ ಹೊರಹೊಮ್ಮುವುದು.

ಶೀಲ : ಕರ್ನಾಟಕ ಸಂಗೀತದಲ್ಲಿ ಪ್ರತಿಯೊಂದು ರಾಗಕ್ಕೂ ಅದರದ್ದೇ ಆದ ಪ್ರತ್ಯೇಕ ಲಕ್ಷಣಗಳು ಇದ್ದೇ ಇರುತ್ತವೆ. ಈ ಪ್ರತ್ಯೇಕ ಲಕ್ಷಣದಿಂದಲೇ ಒಂದು ರಾಗ ಮತ್ತೊಂದಕ್ಕಿಂತ ಹೇಗೆ ಭಿನ್ನವಾಗಿ ನಿಲ್ಲುತ್ತದೆ ?

ರಾಮು : ಕರ್ನಾಟಕ ಸಂಗೀತದಲ್ಲಿ ಕೆಲವು ರಾಗಗಳಲ್ಲಿ ಪರಸ್ಪರ ಹೋಲಿಕೆ ಕಂಡು ಬಂದರೂ ಪ್ರತಿಯೊಂದು ರಾಗಕ್ಕೂ ಅದರದ್ದೇ ಆದ ಪ್ರತ್ಯೇಕ ಲಕ್ಷಣಗಳು ಇದ್ದೇ ಇರುತ್ತವೆ.

ಉದಾಹರಣೆ : ಮಧ್ಯಮಾವತಿ ಮತ್ತು ಬೃಂದಾವನ ಸಾರಂಗ, ಇವರೆಡು ರಾಗಗಳು ಒಂದೇ ಆರೋಹಣ ಅವರೋಹಣವನ್ನು ಹೊಂದಿದ್ದರೂ ಮಧ್ಯಮಾವತಿಯಲ್ಲಿ 'ನಿ' ಸ್ವರವು ಆರೋಹಣದಲ್ಲಿ ಹ್ರಸ್ವಕಂಪಿತ, ಆದರೆ ಬೃಂದಾವನ ಸಾರಂಗದ ಆರೋಹಣದ 'ನಿ' ದೀರ್ಘಕಂಪಿತ. ಇದರಿಂದ ಅವು ಒಂದಕ್ಕೊಂದು ಭಿನ್ನವಾಗಲು ಸಾಧ್ಯವಾಗಿದೆ. ಇದು ಗಮಕದ ಸಹಾಯದಿಂದ ಮಾತ್ರ ಸಾಧ್ಯವಾಗಿದೆ.

ಶೀಲ : ಗಮಕ ಎಂದರೇನು ?

ರಾಮು : ಸ್ವರ ಕಂಪನವೇ ಗಮಕ, ಅಂದರೆ ಶ್ರೋತೃಗಳ ಮನಸ್ಸಿಗೆ ಸುಖವನ್ನೀಯುವ ಸ್ವರಕಂಪನವೇ ಗಮಕ.

ಗಾನದಲ್ಲಿ ಸ್ವರವು ಸ್ವಶ್ರುತಿಯನ್ನು ಬಿಟ್ಟು ಬೇರೆ ಶ್ರುತಿಯ ಛಾಯೆಯನ್ನು ಹೊಂದಿರುವುದೇ ಗಮಕ ಅಂದರೆ ಒಂದು ಸ್ವರವನ್ನು ಶುದ್ಧವಾಗಿ ಪ್ರಯೋಗಿಸದೆ ಅದರ ಹಿಂದಿನ ಅಥವಾ ಮುಂದಿನ ಸ್ವರಗಳ ಛಾಯೆಯೊಡನೆ ಅಲುಗಾಡಿಸಿ ಹಾಡುವುದಕ್ಕೆ 'ಗಮಕ' ಎಂದು ಹೆಸರು.

ಶೀಲ : ಗಮಕದ ಇನ್ನೊಂದು ಹೆಸರೇನು ? ಹಿರಿಮೆಯೇನು ?

ರಾಮು : ಗಮಕವು ಅಲಂಕಾರ ಎಂಬ ಹೆಸರನ್ನು ಪಡೆದಿದೆ. ಸಂಗೀತದಲ್ಲಿ ಗಮಕ ಅಥವಾ ಅಲಂಕಾರವಿಲ್ಲದ ಗೀತೆ -

ಚಂದ್ರನಿಲ್ಲದ ರಾತ್ರಿಯಂತೆ
ನೀರಿಲ್ಲದ ನದಿಯಂತೆ
ಪುಷ್ಪವಿಲ್ಲದ ಬಳ್ಳಿಯಂತೆ
ಅಲಂಕಾರವಿಲ್ಲದ ರಮಣಿಯಂತೆ

ಎಂದು ಗಮಕದ ಹಿರಿಮೆಯನ್ನು ಭರತನು ಎತ್ತಿ ಹಿಡಿದು ತೋರಿಸಿದ್ದಾನೆ. ಒಂದೇ ರೀತಿಯ ಆರೋಹ ಅವರೋಹಗಳನ್ನು ಹೊಂದಿದ್ದರೂ ಅವುಗಳ ಸೂಕ್ಷ್ಮ ವ್ಯತ್ಯಾಸಗಳನ್ನು ಗುರುತಿಸಲು "ಗಮಕ" ದಿಂದ ಮಾತ್ರ ಸಾಧ್ಯ.

ಶೀಲ : ಈಗ ನಮ್ಮ ಸಂಗೀತದಲ್ಲಿ ಬಳಕೆಯಲ್ಲಿರುವ ಗಮಕಗಳೆಷ್ಟು ? ಅವು ಯಾವುವು ?

ರಾಮು : ಈಗ ನಮ್ಮ ಸಂಗೀತದಲ್ಲಿ ಬಳಕೆಯಲ್ಲಿರುವ ಗಮಕಗಳನ್ನು ದಶವಿಧ ಗಮಕಗಳೆಂದು ನಿರ್ದಿಷ್ಟ ಮಾಡಿದ್ದಾರೆ.

1. ಆರೋಹ : ಸ ರಿ ಗ ಮ ಪ ದ ನಿ ಸ - ಹೀಗೆ ಸ್ವರಗಳು ಆರೋಹ ಕ್ರಮದಲ್ಲಿರುವುದು.
2. ಅವರೋಹ : ಸ ನಿ ದ ಪ ಮ ಗ ರಿ ಸ - ಹೀಗೆ ಸ್ವರಗಳು ಅವರೋಹ ಕ್ರಮದಲ್ಲಿರುವುದು.
3. ಢಾಲು : ಒಂದು ಸ್ವರವು ತನ್ನ ಮೇಲಿನ ಸ್ವರವನ್ನು ತಲುಪಿ ರಾಗಭಾವಕ್ಕೆ ತಕ್ಕಂತೆ ಕಂಪಿಸಿ ನುಡಿಯುವುದು (ಮಿಂಚುವುದು) ಉದಾ : ಸ ಪ ಸ ಮ ......
4. ಸ್ಫುರಿತ : ಸ್ವರವು ಜಂಟಿವರಸೆ ಕ್ರಮದಲ್ಲಿರುವುದು ಉದಾ : ಸಸ ರಿರಿ ಇತ್ಯಾದಿ .....
5. ಕಂಪಿತ : ಒಂದು ಸ್ವರವನ್ನೇ ದೀರ್ಘವಾಗಿ ಹಿಡಿದು ಕಂಪಿಸುವುದುಉದಾ : ಪಾ ಪಪಪಪ
6. ಆಹತ : ಸರಿ, ರಿಗ, ಗಮ, ಮಪ ಈ ಕ್ರಮದಲ್ಲಿ ಸ್ವರಗಳು ನುಡಿಯುವುದು.
7. ಪ್ರತ್ಯಾಹತ : ಇದು ಅವರೋಹ ಕ್ರಮದಲ್ಲಿ ಸನಿ, ನಿದ, ದಪ, ಪಮ ಹೀಗೆ ಸ್ವರಗಳ ಬಳಕೆ.
8. ತ್ರಿಪುಚ್ಛ : ಸಸಸ, ರಿರಿರಿ, ಗಗಗ, ಈ ರೀತಿಯಲ್ಲಿ ಸ್ವರವು ಮೂರು ಮೂರಾಗಿ ಹೆಣೆಯಲ್ಪಡುವುದು.
9. ಆಂಧೋಳಿತ : ಸ್ವರಗಳು ಉಯ್ಯಾಲೋಪಾದಿಯಲ್ಲಿ ಬರುವುದು.ಉದಾ : ಸರಿಸಪಾಪಾ, ರಿಗರಿಮಾಮ
10. ಮೂರ್ಛನಾ : ಷಡ್ಜಸ್ವರದಿಂದ ಆರಂಭವಾದರೆ ನಿಷಾದದಲ್ಲಿ ಮುಕ್ತಾಯವಾಗುವುದು. ಹಾಗೆಯೇ ರಿಷಭದಿಂದ ಷಡ್ಜ, ಗಾಂಧಾರದಿಂದ ರಿಷಭ ಹೀಗೆ ಉದಾ : ಸ ರಿ ಗ ಮ ಪ ದ ನಿ, ರಿ ಗ ಮ ಪ ದ ನಿ ಸ,ಗ ಮ ಪ ದ ನಿ ಸ ರಿ ಇತ್ಯಾದಿ.

**ಭಾರತೀಯ ಸಂಗೀತದ ಪ್ರಮುಖ ಗುಣವೈಶಿಷ್ಟ್ಯಗಳಲ್ಲಿ ಗಮಕವೂ ಒಂದು.**

'ಗಮಕ' ವಿಲ್ಲದೆ ಸಂಗೀತವೇ ಇಲ್ಲ ಎಂದು ಹೇಳುವ ಹಾಗೆ ಅದು ನಮ್ಮ ಸಂಗೀತದ 'ಜೀವಾಳ' ವಾಗಿ ನಿಂತಿದೆ.

ಕೃತಿ, ಕೀರ್ತನೆಯ ಸಂಗೀತಗಳಲ್ಲಿ ಗಮಕದ ಪಾತ್ರ ಹೆಚ್ಚಾಗಿದೆ.

ಶೀಲ : ಸುಸ್ವರಯುಕ್ತವಾದ ರಾಗದಲ್ಲಿ ಎಷ್ಟು ವಿಧ ?

ರಾಮು : ಎರಡು ವಿಧ 1. ರಾಗಲಪ್ತಿ - ಲಯದ ಕಟ್ಟುಪಾಡಿಗೆ ಒಳಗಾಗಿಲ್ಲ
2. ರೂಪಕಾಲಪ್ತಿ - ವಸ್ತು, ಧಾತು, ಲಯ ಇವುಗಳ ಕಟ್ಟುಪಾಡಿಗೆ ಒಳಗಾಗಿದೆ.

ಯಾವ ಕಾರ್ಯದಿಂದ ಲಕ್ಷಣಗಳೆಲ್ಲಾ ಅಭಿವ್ಯಕ್ತಿಗೊಳಿಸಲ್ಪಡುವುದೋ ಅದೇ ರಾಗಲಾಪ. ರಾಗಾಲಾಪವು ತನ್ನ ಅಭಿವ್ಯಕ್ತಿಗೆ ದಶಲಕ್ಷಣಗಳನ್ನು ಹೊಂದಿರಬೇಕು. ಅಲಾಪವು ಕನಿಷ್ಠ ಪಕ್ಷ ಐದು ಸ್ವರಗಳನ್ನಾದರೂ ಹೊಂದಿರಬೇಕು. ಕೆಲವು ರಾಗಗಳು ಐದು, ಆರು, ಏಳು, ಸ್ವರಗಳನ್ನು ಕ್ರಮವಾಗಿ ಅಥವಾ ವಕ್ರವಾಗಿ ಹೊಂದಿದ್ದರೂ ಆಲಾಪ ಅಂದರೆ ರಾಗ ವಿಸ್ತಾರಕ್ಕೆ ಯೋಗ್ಯವಾಗಿರುವುವು.

ಶೀಲ : ಆಲಾಪನ ವಿಸ್ತಾರದಲ್ಲಿ ಎಷ್ಟು ಪರ್ಯಾಯ ಪದಗಳು ಹುಟ್ಟಿವೆ ?

ರಾಮು : ಆಲಾಪನ ವಿಸ್ತಾರದಲ್ಲಿ ಮೂರು ಪರ್ಯಾಯ ಪದಗಳು ಹುಟ್ಟಿವೆ. ಆಲಾಪ, ಆಲಪ್ತಿ ಮತ್ತು ಆಲಾಪನ.

ಶೀಲ : ಆಲಾಪ ಪದದ ವಿಶೇಷತೆಯೇನು ?

ರಾಮು : 'ಆಲಾಪ' ಶಬ್ದವು ಪುಲ್ಲಿಂಗವಾಗಿದೆ. ಪುಲ್ಲಿಂಗವಾಗಿರುವುದರಿಂದಲೇ ಇಲ್ಲಿ ವ್ಯಕ್ತವಾಗುವ ಭಾವ ಅವಿರ್ಭವ, ಅಂದರೆ ರಾಗ, ಭಾವ ಅಡಗಿಕೊಳ್ಳದೆ ಆ ಕ್ಷಣವೇ ಹೊರಹೊಮ್ಮುತ್ತಾ ಎಲ್ಲವನ್ನು ಪ್ರಕಟಿಸುತ್ತಾ ಹೋಗುತ್ತದೆ.

ಶೀಲ : ಆಲಪ್ತಿ ಪದದ ವಿಶೇಷತೆಯೇನು ?

ರಾಮು : "ಆಲಪ್ತಿ" ಶಬ್ದವು ಸ್ತ್ರೀಲಿಂಗವಾಗಿದೆ. ಸ್ತ್ರೀಲಿಂಗವಾಗಿರುವುದರಿಂದಲೇ ಇಲ್ಲಿ ವ್ಯಕ್ತವಾಗುವ ಭಾವತಿರೋಭಾವ, ಅಂದರೆ ರಾಗ, ಭಾವ ಎರಡೂ ಒಳಗೊಳಗೇ ಅಡಗಿಕೊಂಡು ಸುಪ್ತವಾಗಿದ್ದುಕೊಂಡೇ ನಡುನಡುವೆ ವ್ಯಕ್ತವಾಗುತ್ತಾ ಹೋಗುತ್ತದೆ.

ಶೀಲ : ಆಲಾಪನ ಪದದ ವಿಶೇಷತೆಯೇನು ?

ರಾಮು : ಆಲಾಪನ ಶಬ್ದವು ನಪುಂಸಕ ಲಿಂಗ, ನಪುಂಸಕ ಲಿಂಗವಾಗಿರುವುದರಿಂದಲೇ ಇದು ಆವಿರ್ಭಾವ ಮತ್ತು ತಿರೋಭಾವಗಳ ಮಧ್ಯಸ್ಥ ಅಂದರೆ ಆಲಾಪನದಲ್ಲಿ ರಾಗ ಮತ್ತು ಭಾವ ಒಮ್ಮೊಮ್ಮೆ ಸುಪ್ತವಾಗಿದ್ದು, ಮತ್ತೆ ಕೆಲವೊಮ್ಮೆ ಪ್ರಕಟವಾಗುತ್ತಾ ಹೋಗುತ್ತದೆ.

ಆಲಾಪನದ ಪ್ರಾರಂಭದಲ್ಲಿ ರಾಗ ಸುಪ್ತವಾಗಿದ್ದು, ನಂತರ ಸ್ವಲ್ಪ ಸ್ವಲ್ಪವಾಗಿ ಪ್ರಕಟವಾಗುತ್ತಾ ಕೊನೆಯಲ್ಲಿ ಅದರ ಪೂರ್ತಿ ಸ್ವರೂಪ ಅರಿವಾಗುತ್ತದೆ.

ರಾಗ ಕೂಡಲೇ ಸ್ಪಷ್ಟವಾಗಿ ಗೊತ್ತಾದರೆ ಅದರ ಬಗ್ಗೆ ಹೆಚ್ಚಿನ ಕುತೂಹಲ ಉಳಿಯುವುದಿಲ್ಲ. ಆದರೆ ಶಿರಾಗ ರಂಜಕ ಪ್ರಯೋಗ, ದಾಟುಸ್ವರ ಪ್ರಯೋಗಗಳಿಂದ ರಾಗ ಕ್ರಮೇಣ ಪ್ರಕಟಗೊಳ್ಳುತ್ತಾ ಹೋದಂತೆ ಕೇಳುಗರಿಗೆ ಅದರ ಬಗ್ಗೆ ಕುತೂಹಲವೂ ಮತ್ತು ಅದರ ಸೌಂದರ್ಯದ ಅರಿವೂ ಉಂಟಾಗುತ್ತದೆ.

ಶೀಲ : ಯಾವ ಪ್ರಕಾರ ಪ್ರಕಟಗೊಳ್ಳುವುದು ರಾಗದ ಧರ್ಮ ?

ರಾಮು : ಆಲಾಪವು ಆವಿರ್ಭಾವದ ಮೂಲಕವೂ, ಆಲಪ್ತಿಯು ತಿರೋಭಾವದ ಮೂಲಕವೂ, ಆಲಾಪನವೂ ಆವಿರ್ಭಾವ ಮತ್ತು ತಿರೋಭಾವ ಎರಡರ ಮೂಲಕವೂ ಪ್ರಕಟಗೊಳ್ಳುತ್ತಾ ಹೋಗುತ್ತದೆ. ಈ ಪ್ರಕಾರ ಹೀಗೆ ಪ್ರಕಟಗೊಳ್ಳುವುದೇ ರಾಗದ ಧರ್ಮ.

ಶೀಲ : ರಾಗದ ದಶ ಲಕ್ಷಣಗಳು ಯಾವುವು ?

ರಾಮು : ಗ್ರಹ, ಅಂಶ, ಮಂದ್ರ, ತಾರ, ನ್ಯಾಸ, ಅಪನ್ಯಾಸ, ಅಲ್ಪತ್ವ, ಬಹುತ್ವ, ಷಾಡವ, ಔಡವ ಇವು ರಾಗದ ದಶಲಕ್ಷಣಗಳು. ಆಲಾಪನೆಯಲ್ಲಿ ತೊಡಗಿರುವಾಗ ಅಥವಾ ಹೇಳಿ ಕೊಡುವಾಗ ರಾಗಾಲಾಪವನ್ನು ಅಭಿವ್ಯಕ್ತಿಗೊಳಿಸುವ ಬಹುಮುಖ್ಯವಾದ ಕಾರ್ಯ ಸಾಧನವಾಗಿ ಈ ಲಕ್ಷಣಗಳ ನಿರೂಪಣೆ ಬಹಳ ಅಗತ್ಯ.

ದಶ ಲಕ್ಷಣಗಳೊಂದಿಗೆ ಆಲಾಪ ಅಭಿವ್ಯಕ್ತವಾದಾಗ ಆ ಆಲಾಪನೆಯ "ರಾಗ ರೂಪ" ಬಹು ಸ್ಪಷ್ಟವಾಗಿ ನಮಗೆ ಗೊತ್ತಾಗುತ್ತದೆ. ಇಲ್ಲಿ "ರೂಪ" ಅನಿಬದ್ಧ ಪ್ರಕಾರದಲ್ಲಿರುತ್ತದೆ. ಅದು ನಿಬದ್ಧವಾಗಬೇಕಾದರೆ ಅದರಲ್ಲಿ ಪ್ರಬಂಧ, ವಸ್ತುಲಯ ನಿರ್ದಿಷ್ಟವಾಗಿ ಗೋಚರವಾಗಬೇಕಾಗುತ್ತದೆ.

ಶೀಲ : ರಾಗಾಲಾಪವನ್ನು ವಿಸ್ತರಿಸಲು ಕೆಲವು ಕ್ರಮಗಳು ಹೇಗಿವೆ ?

ರಾಮು : ಆಲಾಪನೆಯ ಸಂದರ್ಭದಲ್ಲಿ ರಾಗ ವಿಸ್ತರಿಸುವ ಕ್ರಮ ಅಂದರೆ ರಾಗಾಲಾಪದ ವಿಸ್ತಾರ ನಾಲ್ಕು ಸ್ವಸ್ಥಾನಗಳ ಮೂಲಕ ಸಾಧ್ಯವಾಗುತ್ತದೆ. ಜೊತೆಗೆ ನಾಲ್ಕು ಘಟ್ಟಗಳೂ ಬರುತ್ತವೆ. "ಆಕ್ಷಿಪ್ತಿಕಾ" ಘಟ್ಟದಿಂದ ಆಲಾಪ ಪ್ರಾರಂಭವಾಗುತ್ತದೆ. ಅನಂತರ ಕ್ರಮಬದ್ಧವಾಗಿ "ರಾಗವರ್ಧಿನಿ", "ಸ್ಥಾಯಿ" - ಈ ಘಟ್ಟಗಳಲ್ಲಿ ತೊಡಗಿ "ಮುಕ್ತಾಯ" ಘಟ್ಟದಲ್ಲಿ ಕೊನೆಗೊಳ್ಳುತ್ತದೆ.

ಶೀಲ : ರಾಗಾಲಾಪದ ನಾಲ್ಕು ಘಟ್ಟಗಳ ಕಾರ್ಯವಿವರಣೆ ಹೇಗಿದೆ ?

ರಾಮು : ಆಕ್ಷಿಪ್ತಿಕಾ, ರಾಗವರ್ಧಿನಿ, ಸ್ಥಾಯಿ ಮತ್ತು ಮುಕ್ತಾಯ ಎಂಬ ನಾಲ್ಕು ಘಟ್ಟಗಳ ಕಾರ್ಯ ವಿವರಣೆ ಹೀಗಿದೆ.

1. ಆಕ್ಷಿಪ್ತಿಕಾ : ರಾಗಾಲಾಪದ ಪೀಠಿಕಾ ಭಾಗ, ಇದಕ್ಕೆ "ಆಯಿತ್ತ" ಎಂಬ ಹೆಸರು ರೂಢಿಯಲ್ಲಿದೆ.
2. ರಾಗ ವರ್ಧಿನಿ : ಇದು ರಾಗ ವರ್ಧಿಸುವ ಅಥವಾ ವಿಸ್ತರಿಸುವ ಘಟ್ಟ. ಈ ರಾಗ ವಿಸ್ತರಣೆಯಲ್ಲಿ ಎರಡು ಬಗೆ ಇದೆ. ಅದನ್ನು 'ವಿದಾರಿ' ಎನ್ನುತ್ತಾರೆ. ವಿದಾರಿಯ ಕಾರ್ಯ ರಾಗವರ್ಧಿನಿಯನ್ನು ಎರಡುಖಂಡವಾಗಿ ಭೇದಿಸುವುದು.ಈ ರೀತಿಯ ಎರಡು ಭೇದಗಳಿಗೆ ಎಡುಪು ಮತ್ತು ಮುಕ್ತಾಯಎಂದು ಕ್ರಮಬದ್ಧವಾಗಿ ಹೇಳುತ್ತಾರೆ.ಈಎರಡನೆಯ ಘಟ್ಟಕ್ಕೆ ಎಡಪು, ಕರಣ ಎಂದೂ ಕರೆಯುತ್ತಾರೆ.
3. ಸ್ಥಾಯಿ : ಸ್ವರಗಳ ಮಧ್ಯಮಕಾಲ ಪ್ರಯೋಗದ ಘಟ್ಟ. ಈ ಸ್ಥಾಯಿ ಘಟ್ಟಕ್ಕೆ ವರ್ತಿನಿ, ಮಕರಿಣಿ ಎಂದೂ ಕರೆಯುತ್ತಾರೆ.
4. ಮುಕ್ತಾಯಿ : ರಾಗಾಲಾಪದ ಕೊನೆಯ ಘಟ್ಟ, 'ಆಕ್ಷಿಪ್ತಿಕಾ'ದಿಂದ ರಾಗಾಲಾಪವು ಪ್ರಾರಂಭಗೊಂಡು, 'ರಾಗವರ್ಧಿನಿ'ಯಲ್ಲಿ ವಿಸ್ತಾರಗೊಂಡು ವಿದಾರಿಯಾಗಿ ಅಂದರೆ ಎಡಪು, ಮುಕ್ತಾಯ ಎಂಬ ಎರಡು ಭೇದಗಳನ್ನು ಪಡೆದು 'ಸ್ಥಾಯಿ'ಯಲ್ಲಿ ತೊಡಗಿ ವಿವಿಧ ವರಸೆಯಲ್ಲಿ ಸ್ವರ ಗುಂಪುಗಳನ್ನು ಅಭಿವ್ಯಕ್ತಿಸುತ್ತಾ 'ವರ್ತಿನಿ'ಯಾಗಿಹೊರಹೊಮ್ಮುತ್ತದೆ. ನಾಲ್ಕು ಘಟ್ಟಗಳಲ್ಲಿ ಹೊರಹೊಮ್ಮಿದ ರಾಗಾಲಾಪ ಕೊನೆಯಲ್ಲಿ ಮುಕ್ತಾಯಗೊಳ್ಳುತ್ತದೆ.

ಶೀಲ : ರಾಗ ಆಲಾಪ ಹೇಗೆ ಇರುತ್ತದೆ ? ಒಂದು ಚಿಕ್ಕ ಉದಾಹರಣೆ ?

ರಾಮು : "ತನನ" ಎಂಬ ಮೂರು ಅಕ್ಷರಗಳಲ್ಲಿಯೇ ಆಲಾಪ ವ್ಯಕ್ತವಾಗುತ್ತದೆ.

ಶೀಲ : ರಾಗಾಲಾಪದ ನಾಲ್ಕು ಸ್ವಸ್ಥಾನಗಳ ಕಾರ್ಯವಿಧಾನ ತಿಳಿಸಿ ?

ರಾಮು : **ಮೊದಲನೆಯ ಸ್ವಸ್ಥಾನ ಕ್ಷೇತ್ರ** - ನಮ್ಮ ಎಲ್ಲಾ ರಾಗಗಳು ಷಡ್ಜಗ್ರಾಮ ರಾಗಗಳಾದ್ದರಿಂದ ಷಡ್ಜವೇ ಆಧಾರ ಸ್ವರವಾಗಿ ಅದೇ ಪ್ರಥಮ ಸ್ವಸ್ಥಾನ ಕ್ಷೇತ್ರವಾಗಿ ಪರಿಗಣಿತವಾಗಿದೆ. ಮೊದಲಿನ ಸ್ವಸ್ಥಾನದಿಂದ ಹೊರಟ ರಾಗ ಷಡ್ಜದಿಂದ ಗಾಂಧಾರದವರೆಗೂ ವಿಸ್ತರಿಸಿ, ಷಡ್ಜದ ಕೆಳಗೂ ಸಂಚರಿಸುತ್ತದೆ. ಸ್ವಸ್ಥಾನ ಕ್ಷೇತ್ರವನ್ನು ಸ್ಥಾಯಿಸ್ವರದಿಂದ ಅಥವಾ ಅದರ ಪ್ರಾರಂಭದ ಸ್ವರದಿಂದ ನಿರ್ಧರಿಸಬೇಕು. ಈ ಸ್ಥಾಯಿಸ್ವರವು ಉದ್ದಿಷ್ಟರಾಗದ ಅಂಶಸ್ವರವೂ ಆಗಿರುತ್ತದೆ.

**ಎರಡನೆಯ ಸ್ವಸ್ಥಾನ ಕ್ಷೇತ್ರ** - ಮಧ್ಯಮ ಸ್ವರವು ನ್ಯಾಸವಾಗಿ ರಾಗ ಸಂಚಾರವಾಗುವುದೇ ಎರಡನೇ ಸ್ವಸ್ಥಾನವು. ಎರಡನೆ ಸ್ವಸ್ಥಾನವು ಮಧ್ಯಮ ಸ್ವರದಿಂದ ಪ್ರಾರಂಭವಾಗುತ್ತದೆ. ನಾಲ್ಕನೇ ಸ್ವರವಾದ ಮಧ್ಯಮಕ್ಕೆ "ದ್ವ್ಯರ್ಧ" ಎಂಬ ಸಂಜ್ಞೆ ಕೊಡಲಾಗಿದೆ.

**ಮೂರನೆಯ ಸ್ವಸ್ಥಾನ ಕ್ಷೇತ್ರ** - ಎರಡನೆಯ ನಾಲ್ಕನೇ ಸ್ವರದಿಂದ ಮೊದಲಿನ ನಾಲ್ಕನೆಯ ಸ್ವರ ಇವೆರಡರ ಮಧ್ಯೆ ರಾಗಸಂಚಾರವು ನ್ಯಾಸ ಸ್ವರದೊಂದಿಗೆ ಪ್ರಯೋಗಿಸುವುದೇ ಮೂರನೇ ಸ್ವಸ್ಥಾನ ಕ್ರಮ. ನಾಲ್ಕನೇ ಸ್ವರವಾದ

ಮಧ್ಯಮ ಸ್ವರವನ್ನು ದ್ವಿಗುಣಿಸಲಾಗುತ್ತದೆ. ಈ ದ್ವಿಗುಣ ಸ್ವರದ ಮಧ್ಯೆ ರಾಗ ಸಂಚಾರವು ನ್ಯಾಸ ಸ್ವರದೊಂದಿಗೆ ಪ್ರಯೋಗಿಸುವುದೇ ಕಾರ್ಯವಿಧಾನ.

**ನಾಲ್ಕನೇ ಸ್ವಸ್ಥಾನ ಕ್ಷೇತ್ರ -** ಅಷ್ಟಮ ಸ್ವರದಿಂದ ಅಂದರೆ ದ್ವಿಗುಣ ಸ್ವರವಾದ ಸ್ಥಾಯಿಸ್ವರದ ಎಂಟನೇ ಸ್ವರದಿಂದ ಆಲಾಪ ಪ್ರಯೋಗವು ಮುಂದುವರಿದು ತಾರಸ್ಥಾಯಿಯಲ್ಲಿ ಪ್ರಯೋಗವಾಗುತ್ತಾ, ಮಧ್ಯ ಮಂದ್ರ ಸ್ಥಾಯಿಗಳನ್ನು ಮುಟ್ಟಿ ಕೊನೆಗೆ ಮುಕ್ತಾಯವಾಗುವುದೇ ನಾಲ್ಕನೇ ಸ್ವಸ್ಥಾನ. ಈ ನಾಲ್ಕನೇ ಸ್ವಸ್ಥಾನದಲ್ಲಿ ಅಷ್ಟಮ ಸ್ವರದ ಅನಂತರ ತಾರಸ್ಥಾಯಿಯಲ್ಲಿ ಮಧ್ಯಸ್ಥಾಯಿಯ ಸಂಚಾರ ಮತ್ತೆ ಮತ್ತೆ ಪುನಃರುಕ್ತಿಯಾಗುತ್ತದೆ. ಆದುದರಿಂದಲೇ ತಾರಸ್ಥಾಯಿಯ ಸಂಚಾರದಲ್ಲಿ ಯಾವ ಹೊಸಸ್ಥಾನವನ್ನು ಗುರುತಿಸುವುದು ಕಷ್ಟಸಾಧ್ಯ.

ಈ ನಾಲ್ಕು ಸ್ವಸ್ಥಾನದಲ್ಲಿಯು ಚಿಕ್ಕ ಚಿಕ್ಕ ರಾಗಾಭಿವ್ಯಂಜಕ ಸ್ವರಗಳ ಸಮೂಹವು ಹೆಚ್ಚು ಕಡಿಮೆಯಾಗುವುದರಿಂದ ರಾಗದ ಸ್ಥಾಪನೆಯಾಗುತ್ತದೆ. ಹಾಗೆಯೇ ಈ ಸ್ವರಗುಚ್ಚದಲ್ಲಿ ಜೀವಸ್ವರ ಅಥವಾ ಅಂಶಸ್ವರ ಕೇಂದ್ರವಾಗಿರುತ್ತದೆ.

ಶೀಲ : ವರ್ಣಾಲಂಕಾರ ಎಂದರೇನು ?

ರಾಮು : ಸಂಗೀತದಲ್ಲಿ ವರ್ಣವು, ವ್ಯಾಕರಣದಲ್ಲಿ ಹೇಗೋ ಹಾಗೆ ಸ್ವರದ ಸೂಚಕ. ಸ್ವರದಗತಿ ಸರಳವಾಗಿರಬಹುದು, ಉಚ್ಚವಾಗಿರಬಹುದು ಅಥವಾ ನೀಚವಾಗಿರಬಹುದು ಅಥವಾ ಈ ಮೂರುಗತಿಯೂ ಸಮ್ಮಿಶ್ರವಾಗಿರಬಹುದು. ಗಾನಕ್ರಿಯೆಯಲ್ಲಿ ಈ ಭಿನ್ನ ಸ್ವರಗತಿಗಳಿಗೆ ವರ್ಣಾಲಂಕಾರ ಎನ್ನುತ್ತಾರೆ.

ಶೀಲ : ರಾಗಾಲಪ್ತಿ ಎಂದರೇನು ?

ರಾಮು : ಒಂದು ರಾಗದಲ್ಲಿ ಕೆಲವು ಸಂಚಾರಗಳು ಅದರ ನೈಜವಾದ ಸ್ವರ ಪ್ರಯೋಗವನ್ನು ಹೊಂದಿರುತ್ತದೆ. ಅದೇ ಸಂಚಾರವು ಅನ್ಯರಾಗದ ಸ್ವರ ಸಂಚಾರವೂ ಆಗಿರಬಹುದು. ಈ ಅನ್ಯರಾಗದ ಸಂಚಾರವನ್ನು ಹೊಂದಿಲ್ಲದೆ ಸ್ವತಂತ್ರವಾಗಿದ್ದರೆ ರಾಗದ ಆವಿರ್ಭಾವವು ವ್ಯಕ್ತವಾಗುತ್ತದೆ. ಆವಿರ್ಭಾವ ಮತ್ತು ತಿರೋಭಾವಗಳ ಸಮ್ಮಿಳಿತ ಪ್ರಯೋಗವೇ ರಾಗಲಪ್ತಿ.

ರಾಗಲಾಪವು ಕೇವಲ ಸ್ವರಪ್ರಯೋಗಗಳ ನಾಲ್ಕು ಘಟ್ಟ. ಸ್ವಸ್ಥಾನಗಳು, ಆಲಾಪದಲ್ಲಿ ಶುದ್ಧವಾಗಿ ಸಂಚಾರವಾಗದೆ ಅವುಗಳೊಂದಿಗೆ ವರ್ಣಾಲಂಕಾರ, ಗಮಕ, ಸ್ಥಾಯಿಗಳೂ ಕೂಡಿ ಅವುಗಳಿಂದ ಅಲಂಕರಿಸಲ್ಪಟ್ಟು ರಮಣೀಯವಾಗಿ ಹಾಡುವಂತಹುದು.

ಶೀಲ : ರಾಗ ಎಂದರೇನು ?

ರಾಮು : ಸಪ್ತಸ್ವರಗಳ ಭೇದಗಳನ್ನು ಬೇರೆ ಬೇರೆ ರೀತಿಯಲ್ಲಿ ಕ್ರಮವಾಗಿ ಜೋಡಿಸಿದಾಗ ಉಂಟಾಗುವ ಬೇರೆ ಬೇರೆ ರೂಪಗಳ ಛಾಯೆಯೇ ರಾಗ.

ಶೀಲ : ''ಜನಕ ರಾಗ'' ಎಂದರೇನು ?

ರಾಮು : ಸಂಗೀತದ ಸಪ್ತಸ್ವರಗಳಾದ ''ಸರಿಗಮಪದನಿ'' ಕ್ರಮವಾಗಿ ಇದ್ದು ಅವೇ ಸ್ವರಗಳು ಆರೋಹಣ ಮತ್ತು ಅವರೋಹಣಗಳಲ್ಲಿರಬೇಕು. ಇದಕ್ಕೆ ಸ್ಥೂಲವಾಗಿ ''ಜನಕರಾಗ'' ಎನ್ನುತ್ತಾರೆ. ಅದನ್ನು ಮೇಳಕರ್ತರಾಗ, ಮೇಳರಾಗ, ಸಂಪೂರ್ಣರಾಗ ಎಂದು ಎನ್ನುತ್ತಾರೆ.

ಶೀಲ : ಜನಕರಾಗ ಅಂದರೆ ಮೇಳಕರ್ತರಾಗಗಳು ಎಷ್ಟಿವೆ ?

ರಾಮು : 72 ಮೇಳ ಕರ್ತರಾಗಗಳಿವೆ.

ಶೀಲ : ಜನ್ಯರಾಗ ಎಂದರೇನು ?

ರಾಮು : ಜನಕರಾಗಗಳಿಂದ ಹುಟ್ಟಿರುವ ರಾಗಗಳಿಗೆ ಆರೋಹಣ, ಅವರೋಹಣ ಇವೆರಡರಲ್ಲೂ ಒಂದು ಎರಡು ಸ್ವರಗಳು ಬಿಟ್ಟು ಹೋಗಿರುತ್ತವೆ. ಇಲ್ಲಿ ಸಪ್ತಸ್ವರಗಳು ಇದ್ದರೂ ಕ್ರಮವಾಗಿರುವುದಿಲ್ಲ. ವಕ್ರ ಸಂಚಾರ ಇರುತ್ತದೆ.

ಶೀಲ : ''ವಕ್ರರಾಗ'' ಎಂದರೇನು ?

ರಾಮು : ಆರೋಹಣ ಅಥವಾ ಅವರೋಹಣ ಅಥವಾ ಇವೆರಡರಲ್ಲೂ ಸ್ವರಗಳು ಕ್ರಮವಾಗಿಲ್ಲದೆ ತಿರುಗು ಮುರುಗಾಗಿದ್ದರೆ ಅಂತಹ ರಾಗಕ್ಕೆ "ವಕ್ರರಾಗ" ಎನ್ನುತ್ತಾರೆ. ಉದಾ : ಆನಂದ ಭೈರವಿ.

ಶೀಲ : "ಭಾಷಾಂಗ" ರಾಗ ಎಂದರೇನು ?

ರಾಮು : ತನ್ನ ಮೇಳಕರ್ತ ಸ್ವರಗಳಲ್ಲದೆ ಒಂದು, ಎರಡು, ಮೂರು ಅನ್ಯಸ್ವರಗಳನ್ನು ಹೊಂದಿರುವ ಜನ್ಯರಾಗಗಳಿಗೆ "ಭಾಷಾಂಗ" ರಾಗವೆಂದು ಹೆಸರು. ಉದಾ : ಭೈರವಿ, ಬಿಲಹರಿ, ಆನಂದ ಭೈರವಿ.

ಶೀಲ : ಗಟ್ಟಿಮೇಳ ಎಂದರೇನು ?

ರಾಮು : ಮದುವೆಯಲ್ಲಿ ತಾಳಿಕಟ್ಟುವಾಗ, ಮುಂಜಿಯಲ್ಲಿ ಜನಿವಾರ ಹಾಕುವ ಶುಭ ಸಮಾರಂಭಗಳಲ್ಲಿ ನಾಗಸ್ವರ (ಓಲಗ) ಹಾಗೂ ತವಿಲ್‌ನ್ನು ಜೋರಾಗಿ ನುಡಿಸುತ್ತಾರೆ. ಇದಕ್ಕೆ "ಗಟ್ಟಿಮೇಳ" ಎನ್ನುತ್ತಾರೆ.

ಶೀಲ : ಪ್ರಥಮ ಘನ ಪಂಚಕ ರಾಗಗಳೆಂದರೆ ಯಾವುವು ?

ರಾಮು : 1. ನಾಟ, 2. ಗೌಳ, 3. ಆರಭಿ, 4. ವರಾಳಿ, 5. ಶ್ರೀ.

ಶೀಲ : ದ್ವಿತೀಯ ಘನ ಪಂಚಕ ರಾಗಗಳೆಂದರೆ ಯಾವುವು ?

ರಾಮು : 1. ಕೇದಾರ, 2. ನಾರಾಯಣಗೌಳ, 3. ರೀತಿಗೌಳ, 4. ಸಾರಂಗನಾಟ, 5. ಭೌಳಿ.

ಶೀಲ : ಅಷ್ಟೋತ್ತರ ರಾಗ ತಾಳ ಮಾಲಿಕಾದ ಕರ್ತೃ ಯಾರು ?

ರಾಮು : ರಾಮಸ್ವಾಮಿ ದೀಕ್ಷಿತರು.

ಶೀಲ : ಸಂಗೀತದ ಸಪ್ತಸ್ವರಗಳಾದ "ಸರಿಗಮಪದನಿ"ಗೆ ಸಮನಾದ ಯುರೋಪಿಯನ್ ಸಂಗೀತದ ಸ್ವರಗಳು ಯಾವುವು ?

ರಾಮು : C D E F G A B - Do, Ray, Me Fa Soh, Lah, Se

ಶೀಲ : "ಕಾಮೋದರಿ" ಎಂಬ ಈ ಪಾರಿಭಾಷಿಕ ಶಬ್ದದ ಬಳಕೆಯ ಅರ್ಥವೇನು ?

ರಾಮು : ಕೇರಳದ ಕಥಕ್ಕಳಿ ನೃತ್ಯಗಳಲ್ಲಿ ಕಾಂಭೋಜಿ ರಾಗಕ್ಕೆ "ಕಾಮೋದರಿ" ಎನ್ನುತ್ತಾರೆ.

ಶೀಲ : ಸಂಗೀತಗಾರರ ಹೆಸರಿನಿಂದಲೇ ಪ್ರಸಿದ್ಧಿ ಪಡೆದಿರುವ ರಾಗಗಳು ಯಾವುವು ?

ರಾಮು :

| | | |
|---|---|---|
| ಭೈರವಿ | - | ಕೆಂಪೇಗೌಡ |
| ತೋಡಿ | - | ಸೀತಾರಾಮಯ್ಯ ಸುಂದರರಾವ್ |
| ಬೇಗಡೆ | - | ಪಟ್ಲಂ ಸುಬ್ರಹ್ಮಣ್ಯ ಅಯ್ಯರ್ |
| ಶಂಕರಾಭರಣ | - | ನರಸಯ್ಯ |
| ನಾರಾಯಣಗೌಳ | - | ವೀಣಾ ಕುಪ್ಪಯ್ಯರ್ |
| ಘನಂ | - | ಕೃಷ್ಣಯ |
| ಪಲ್ಲವಿ | - | ಶೇಷಯ |

ಶೀಲ : ಮೇಳ ಕರ್ತರಾಗಗಳು ಯಾವ ಆಧಾರದ ಮೇಲೆ ರಚಿಸಲ್ಪಟ್ಟಿವೆ ?

ರಾಮು : 72 ಮೇಳ ಕರ್ತರಾಗಗಳು ಸಪ್ತಸ್ವರಗಳ ಹದಿನಾರು ಭೇದಗಳಿಂದ ಆ ಆಧಾರದ ಮೇಲೆ ರಚಿಸಲ್ಪಟ್ಟಿವೆ.

ಶೀಲ : "ಕಟಪಯಾದಿ" ಸೂತ್ರ ಎಂದರೇನು ?

ರಾಮು : ಮೇಳಕರ್ತರಾಗಗಳ ಸಂಖ್ಯೆಯನ್ನು ತಿಳಿಸಲು ಅನುಸರಿಸುವ ಸೂತ್ರವನ್ನು "ಕಟಪಯಾದಿ" ಸೂತ್ರ ಎನ್ನುತ್ತಾರೆ.

ಶೀಲ : ಸಾರ್ವಕಾಲಿಕ ಹಾಡಬಹುದಾದ ರಾಗಗಳು ಎಂದರೇನು ?

ರಾಮು : ಒಂದಕ್ಕಿಂತ ಹೆಚ್ಚು ರಸಗಳನ್ನು ನಿಷ್ಪತ್ತಿ ಮಾಡುವ ರಾಗಗಳು. ಉದಾ : ಶಂಕರಾಭರಣ, ಮೋಹನ, ಇತ್ಯಾದಿ.

# 13. ತಾಳ ಮತ್ತು ಲಯ

ಶೀಲ : "ತಾಳ" ಎಂದರೇನು ?

ರಾಮು : ಸಂಗೀತ ರಚನೆಗಳನ್ನು ಹಾಡಲು ಅನುಸರಿಸುವ ವೇಗವನ್ನು ನಿರ್ಣಯ ಮಾಡುವ ಕಾಲವನ್ನು ಅಳೆಯುವ ಕ್ರಮ ಅಥವಾ ಕ್ರಿಯೆಗೆ "ತಾಳ"(ತಾಲ) ಎನ್ನುತ್ತಾರೆ.

ಇದು ಹಾಡಿನ ನಿಯತಗತಿ ಸೂಚಿಸುವ ಪೆಟ್ಟು. ಸಂಗೀತ ಮತ್ತು ನೃತ್ಯ ಅವುಗಳ ಗತಿ ಅಂದರೆ ನಡೆಗೆಯನ್ನು ತಾಳ ತಿಳಿಸುತ್ತದೆ. ಗಾಯನ, ವಾದನ, ನೃತ್ಯಗಳಿಗೆ ತಾಳ ಅತ್ಯಗತ್ಯ. ತಾಳವಿಲ್ಲದೇ ಅವುಗಳು ರಂಜಿಸುವುದಿಲ್ಲ.

ಸಂಗೀತದ ಸಮಯವನ್ನು ಕೆಲವು ನಿರ್ದಿಷ್ಟವಾದ ನಿಯಮಗಳಿಗನುಸರಿಸಿ ಒಂದು ಕ್ರಮಬದ್ಧ ರೀತಿಯಲ್ಲಿ ಅಳವಡಿಸಿಕೊಳ್ಳುವ ವಿಧಾನವೇ "ತಾಳ".

ಯಾವ ವಸ್ತುವಿಗಾದರೂ ಒಂದು ನಿರ್ದಿಷ್ಟ ಆಕಾರವಿಲ್ಲದಿದ್ದರೆ ಅದು ಚೆನ್ನಾಗಿ ಕಾಣಿಸಲಾರದು. ಅಂತೆಯೇ ಕವಿತೆ ಎಷ್ಟು ಸುಂದರವಾಗಿದ್ದರೂ ತಾಳರಹಿತ ಕವಿತೆಯು ತಾಳದ ಚೌಕಟ್ಟಿನೊಳಗಿನ ಕವಿತೆಗೆ ಸಾಟಿಯಾಗಲಾರದು.

ಸಂಗೀತಕ್ಕೆ ರಾಗವು ಸೌಂದರ್ಯವನ್ನು ಕೊಡಬಲ್ಲದಾದರೆ ತಾಳವು ಅಚ್ಚುಕಟ್ಟು ತನವನ್ನು ಕಲಿಸುತ್ತದೆ.

ಶೀಲ : "ಶ್ರುತಿರ್ಮಾತಾ ಲಯಃಪಿತಾ" ಎಂದರೇನು ?

ರಾಮು : ಶ್ರುತಿ ತಾಯಿ, ಲಯ (ತಾಲ) ತಂದೆ.

ತಾಯಿಯ ಪ್ರೀತ್ಯಾದರಗಳು ಮಗುವಿನ ಬೆಳವಣಿಗೆಗೆ ಹೇಗೆ ಮುಖ್ಯವೋ, ಅಂತೆಯೇ ತಂದೆಯ ಶಿಸ್ತಿನ ಮಾರ್ಗದರ್ಶನ ಅದರ ಮಾನಸಿಕ ಬೆಳವಣಿಗೆಗೆ ಹಾಗೂ ಶ್ರೇಯೋಭಿವೃದ್ಧಿಗೆ ಅಷ್ಟೇ ಅವಶ್ಯಕ. ಹಾಗೆಯೇ ಸಂಗೀತದಲ್ಲಿ ನಾದ ಮಾಧುರ್ಯದ ಜೊತೆಗೆ ಲಯ ವಿನ್ಯಾಸದ ಗಾಂಭೀರ್ಯವೂ ಸೇರಿ ಹೃದಯ ಬುದ್ಧಿಗಳೆರಡಕ್ಕೂ ಆನಂದ ಲಭಿಸುತ್ತದೆ.

ಶೀಲ : "ತಾಳ"ದ ಅಂತರಾರ್ಥವೇನು ?

ರಾಮು : ತಾ - ತಾಂಡವ ಸ್ವರೂಪ - ಶಿವನ ನೃತ್ಯ
ಲ - ಲಾಸ್ಯ ಸ್ವರೂಪ - ಪಾರ್ವತಿ ನೃತ್ಯ

ತಾ ಮತ್ತು ಲ ಎರಡೂ ಅಕ್ಷರ ಸೇರಿ "ತಾಳ" ಆಗಿದೆ. ಇದೆ ಶಿವಶಕ್ತಿ ಸಂಯೋಗ - ಪ್ರಕೃತಿ ಪುರುಷರ ಮಿಲನ.

ಶೀಲ : ತಾಳ ಎಂಬ ಪದದ ಹುಟ್ಟಿನ ಗುಟ್ಟೇನು ?

ರಾಮು : ತಾಳ ಎಂಬ ಪದವು ತಲ ಎಂಬ ಧಾತುವಿನಿಂದ ಹುಟ್ಟಿದೆ.

ತಲ ಎಂದರೆ ಅಂಗೈ. ಅಂಗೈನ ಘಾತದಿಂದ ಉದ್ಭವಿಸಿರುವುದು ತಾಳ.

ಶೀಲ : ತಾಳ ಕಂಡ ತವಿರು ?

.ರಾಮು : ಕೈ ಚಪ್ಪಾಳೆ

ಶೀಲ : ತಾಳದಲ್ಲಿ ಎಷ್ಟು ವಿಧವಾದ ಕ್ರಿಯೆಗಳಿರುತ್ತವೆ ?

ರಾಮು : ತಾಳದಲ್ಲಿ ಎರಡು ವಿಧವಾದ ಕ್ರಿಯೆಗಳಿರುತ್ತವೆ.
ಅವು ಸ ಸಬ್ದ ಕ್ರಿಯೆ ಮತ್ತು ನಿ ಶಬ್ದ ಕ್ರಿಯೆ

ಶೀಲ : 'ಸ ಶಬ್ದ ಕ್ರಿಯೆ' ಹೇಗೆ ಪ್ರತಿನಿಧಿಸಲ್ಪಡುತ್ತದೆ ?

ರಾಮು : ಹಸ್ತಗಳ ಘರ್ಷಣೆಯಿಂದ.

ಶೀಲ : 'ನಿ ಶಬ್ದ ಕ್ರಿಯೆ' ಹೇಗೆ ಪ್ರತಿನಿಧಿಸಲ್ಪಡುತ್ತದೆ ?

ರಾಮು : ಕೈ ಬೀಸುವುದು ಮತ್ತು ಬೆರಳುಗಳ ಎಣಿಕೆಗಳಿಂದ.

ಶೀಲ : ತಾಳಗಳು ಹೇಗೆ ಹುಟ್ಟಿವೆ ? ತಾಳಾಂಗಗಳೆಂದರೇನು ?

ರಾಮು : ಸ ಶಬ್ದ ಕ್ರಿಯೆ ಮತ್ತು ನಿ ಶಬ್ದ ಕ್ರಿಯೆಗಳ ವಿವಿಧ ಜೋಡಣೆಗಳಿಂದ ಅನೇಕ ತಾಳಗಳು ಹುಟ್ಟಿವೆ. ತಾಳಗಳ ಎಣಿಕೆಯಲ್ಲಿ ಕಂಡುಬರುವ ಈ ಕ್ರಿಯೆಗೆ ತಾಳಾಂಗಗಳೆಂದು ಹೆಸರು.

ಶೀಲ : ಸುಳಾದಿ ಸಪ್ತತಾಳಗಳ ಹೆಸರೇನು ?

ರಾಮು : 1. ಧ್ರುವ ತಾಳ, 2. ಮಠ್ಯತಾಳ, 3. ರೂಪಕತಾಳ, 4. ತ್ರಿಪುಟತಾಳ
5. ಝಂಪೆತಾಳ, 6. ಅಟ್ಟತಾಳ, 7. ಏಕತಾಳ.

ಶೀಲ : "ಛಾಪುತಾಳ" ಎಂದರೇನು ?

ರಾಮು : ಈ ಬಗೆಯ ತಾಳದಲ್ಲಿ ತಾಳದ ಅಕ್ಷರಗಳ ಕಾಲವನ್ನು ಬೆರಳೆಣಿಕೆ ಮಾಡದೆ ಕೇವಲ ಘಾತಗಳಿಂದ ಕಾಲಪ್ರಮಾಣವನ್ನು ಸೂಚಿಸಲಾಗುತ್ತದೆ. ಇದರಲ್ಲಿ ನಾಲ್ಕು ಬಗೆಗಳಿವೆ - ತ್ರಿಶ್ರ, ಖಂಡ, ಮಿಶ್ರ ಹಾಗೂ ಸಂಕೀರ್ಣ ಛಾಪು

ಶೀಲ : ಸಂಗೀತಕ್ಕೆ ತಾಳದ ಅವಶ್ಯಕತೆ ಇದೆಯೇ ಹೇಗೆ ?

ರಾಮು : ಪ್ರಪಂಚದಲ್ಲಿ ನಡೆಯುತ್ತಿರುವ ಪ್ರಕೃತಿಯ ಪ್ರತಿಯೊಂದು ಕ್ರಿಯೆ - ಹಗಲು, ರಾತ್ರಿ, ದಿನ, ವಾರ, ಮಾಸ, ವರ್ಷ, ಮನುಷ್ಯನ ದಿನಚರಿ, ಉಸಿರಾಡುವ ಕ್ರಮ ಎಲ್ಲವೂ ನಿಯಮಗತಿಯ ಕಟ್ಟುಪಾಡಿನಲ್ಲಿದೆ. ಕಟ್ಟುಪಾಡು ಎಂಬುದು ಇಲ್ಲದೆ ಇದ್ದಿದ್ದರೆ ಎಲ್ಲವೂ ಲಂಗು ಲಗಾಮಿಲ್ಲದೆ ಅಸ್ತವ್ಯಸ್ತವಾಗುತ್ತಿತ್ತು. ಹಾಗೆಯೇ ಸಂಗೀತದಲ್ಲಿ ಕಟ್ಟುಪಾಡು ತಾಳದ ಆಧಾರದಲ್ಲಿದೆ. ತಾಳದ ನಿಯಂತ್ರಣದಿಂದ ಒಳ್ಳೆಯ ಸಂಗೀತವನ್ನು ಕೇಳಬಹುದು. ನಿಬದ್ಧ ಸಂಗೀತದಲ್ಲಿ ತಾಳವು ಇರಲೇ ಬೇಕು. ತಾಳವು ಹಾಡುವ / ನುಡಿಸುವ ರಭಸವನ್ನು ನಿಯಂತ್ರಿಸಿ ಒಂದು ರಚನೆಯ ನಿರ್ದಿಷ್ಟವಾದ ಕಾಲಗತಿಯನ್ನು ತಿಳಿಸುವ ಕ್ರಿಯೆಯಾದುದರಿಂದ ಸಂಗೀತ ಕಛೇರಿಗಳಲ್ಲಿ ತಾಳವಾದ್ಯಗಳ ಪಾತ್ರಹಿರಿದಾಗಿದೆ.

ಶೀಲ : ಪ್ರಸ್ತುತ ನಮ್ಮ ಕರ್ನಾಟಕ ಸಂಗೀತದಲ್ಲಿ ಹೆಚ್ಚು ಬಳಕೆಯಲ್ಲಿರುವ ತಾಳಗಳು ಯಾವು?

ರಾಮು : ಸುಳಾದಿ ಸಪ್ತತಾಳಗಳು.

ಶೀಲ : ಸುಳಾದಿ ಸಪ್ತತಾಳಗಳು ಕರ್ನಾಟಕ ಸಂಗೀತದಲ್ಲಿ ಹೇಗೆ ಬಳಕೆಗೆ ಬಂದವು ?

ರಾಮು : ಪ್ರಾಚೀನ ಕಾಲದಲ್ಲಿ ಅಷ್ಟೋತರ ಶತತಾಳಗಳು ಪ್ರಚಾರದಲ್ಲಿದ್ದವು. ಅವುಗಳನ್ನು ನೆನಪಿನಲ್ಲಿಟ್ಟುಕೊಳ್ಳಲು ಯಾವ ಸೂತ್ರಗಳಾಗಲಿ, ಚಿಹ್ನೆಗಳಾಗಲಿ ಇರಲಿಲ್ಲ, ಕರ್ನಾಟಕ ಸಂಗೀತದಲ್ಲಿ ಸರಳವಾದ, ನೆನಪಿನಲ್ಲಿರುವ ತಾಳಗಳ ಅವಶ್ಯಕತೆ ಅರಿತ ಕರ್ನಾಟಕ ಸಂಗೀತ ಪಿತಾಮಹ ಶ್ರೀ ಪುರಂದರದಾಸರು ಅಷ್ಟೋತ್ತರ ಶತತಾಳದ ಅಂಶಗಳನ್ನು ಉಪಯೋಗಿಸಿಕೊಂಡು / ನಿಯತ ಕ್ರಮದಲ್ಲಿ ತಾಳಗಳನ್ನು ಬಳಸಿ ಸಾಮಾನ್ಯ ಜನರೆಲ್ಲ ಹಾಡಲು ಅನುಕೂಲವಾಗುವಂತೆ ತಾಳ ಷಡಂಗಗಳಲ್ಲಿ ಕೇವಲ ಮೂರು ಅಂಗಗಳನ್ನು ಉಪಯೋಗಿಸಿಕೊಂಡು, ಇವುಗಳಲ್ಲಿ ಲಘುವಿಗೆ ಜಾತಿ ಭೇದಗಳನ್ನಳವಡಿಸಿ ಸುಳಾದಿ ಸಪ್ತತಾಳಗಳನ್ನು ರಚಿಸಿ ರೂಢಿಗೆ ತಂದು ಸಂಗೀತಕ್ಕೆ ಮಹದುಪಕಾರ ಮಾಡಿದ್ದಾರೆ.

ಶೀಲ : ಸುಳಾದಿ ಸಪ್ತತಾಳಗಳಾವುವು ? ಅವುಗಳ ಬೆಳವಣಿಗೆ ಹೇಗೆ ?

ರಾಮು : ಧ್ರುವತಾಳ, ಮಠ್ಯತಾಳ, ರೂಪಕ ತಾಳ, ಝಂಪೆತಾಳ, ತ್ರಿಪುಟತಾಳ, ಅಟ್ಟತಾಳ ಮತ್ತು ಏಕತಾಳಗಳೇ ಸುಳಾದಿ ಸಪ್ತತಾಳಗಳು. ಈ ಏಳು ತಾಳಗಳಲ್ಲಿ ಲಘುವಿಗೆ ಐದು ಜಾತಿಗಳನ್ನು ಹೇಳಲಾಗಿದೆ. ಅವು ತ್ರಿಶ್ರ, ಚತುರಶ್ರ, ಖಂಡ, ಮಿಶ್ರ, ಸಂಕೀರ್ಣ.

ಈ ಐದು ಜಾತಿ ಭೇದದಿಂದ ಸಪ್ತತಾಳಗಳು ಮೂವತ್ತೈದು ತಾಳಗಳಾದವು (7x 5=35) ಈ ಮೂವತ್ತೈದು ತಾಳಗಳಲ್ಲೂ ಅಲಂಕಾರಗಳನ್ನು ರಚಿಸಲಾಗಿದೆ. ಈ ತಾಳಗಳಿಗೆ ಎರಡು ರೀತಿಯ ಹೆಸರುಗಳಿವೆ. ಪ್ರಯೋಗದ ಆಧಾರದ ಮೇಲೆ ಸೂಚಿಸಿರುವ ಹೆಸರು ಒಂದಾದರೆ - ಕಟಪಯಾದಿ ಸಂಖ್ಯೆಯನ್ವಯ ಸೂಚಿಸಿದ ಹೆಸರುಗಳು ಇನ್ನೊಂದು.

ಶೀಲ : ಮೂವತ್ತೈದು ತಾಳದ ನಕ್ಷೆಯನ್ನು ಯಾವ ದೇವಾಲಯದ ಒಂದು ಕಂಭದಲ್ಲಿ ಕೆತ್ತಲ್ಪಟಿದೆ ?

ರಾಮು : ಮಧುರೆಯ ಮೀನಾಕ್ಷಿ ದೇವಾಲಯ.

ಶೀಲ : ತಾಳದ ಮುಖ್ಯ ಜೀವಾಳವೇನು ?

ರಾಮು : ಲಯ.

ಶೀಲ : ಸುಳಾದಿ ಪದದ ಹುಟ್ಟಿನ ಗುಟ್ಟೇನು ?

ರಾಮು : ಸೂಳವು ಗೀತೆಗಳಲ್ಲಿ ಸಾಮಾನ್ಯ ಆಡುಮಾತಿನಲ್ಲಿ ಹೇಳುವಂತಹ ದೇಶಿ ಶಬ್ದ.

ಹಿಂದೆ ದಾಸರುಗಳು ರಚನೆಗಳನ್ನು ಸಾಮಾನ್ಯರು ಹಾಡಲಾಗುವಂತೆ ಸುಳಾದಿ ಎಂಬ ಹೆಸರಿನಲ್ಲಿ ರಚಿಸಿದರು. ದೇಶಿ ಪದದಿಂದಲೂ, ಸ್ವರರಾಗಗಳಿಂದಲೂ ಸಂಯೋಜಿಸಿ ಹಾಡಲಾಗುವ ಗೀತೆಗಳೇ ಸುಳಾದಿಗಳು ಎಂದು ವೆಂಕಟಮುಖಿ ಅವರ ಅಭಿಪ್ರಾಯ. ಒಟ್ಟಿನಲ್ಲಿ ಸೂಳ್ ಎಂದರೆ ಪೂರ್ವಸಿದ್ಧ ಕ್ರಮದಲ್ಲಿ ಇರುವುದು ಎಂದರ್ಥ.

ಶೀಲ : ತಾಳ ಷಡಂಗಗಳೆಂದರೇನು ?

ರಾಮು : ತಾಳ ವಿಭಾಗಗಳನ್ನು ತಿಳಿಸುವ ಷಡಂಗಗಳು

1. ಅನುದ್ರುತ - U - ಒಂದು ಏಟು - ಒಂದು ಅಕ್ಷರ ಕಾಲ ಪ್ರಮಾಣ
2. ದ್ರುತ - O - ಒಂದು ಏಟು ಮತ್ತು ಕೈ ಮುಗುಚುವುದು - ಎರಡು ಅಕ್ಷರ
3. ಲಘು - I - ಒಂದು ಏಟು ಹಾಕಿ ಬೆರಳೆಣಿಕೆ - ಜಾತಿಗಳಿಗನುಸಾರ
4. ಗುರು -S - ಒಂದು ಏಟು, ಅಂಗೈ ಮಡಿಸಿ ಚಕ್ರಾಕಾರದಲ್ಲಿ ಸುತ್ತುವುದು-8ಅಕ್ಷರ
5. ಪ್ಲುತ - S- ಒಂದು ಏಟು, ಕೃಷ್ಯಸರ್ಪಿಣಿ - 12 ಅಕ್ಷರ
6. ಕಾಕಪಾದ - + - ಒಂದು ಏಟು, ಕೃಷ್ಯ ಪತಾಕ - 16 ಅಕ್ಷರ

ಷಡಂಗಗಳು ಆರು ಆದರೂ, ಬಳಕೆಗೆ ಬಂದವು ಕೇವಲ ಮೂರು. ಈ ಮೂರು ಅಂಗಗಳನ್ನು ಪ್ರಯೋಗಿಸಿಕೊಂಡು ಸುಳಾದಿ ತಾಳಗಳು ಬಳಕೆಗೆ ಬಂದವು.

ಶೀಲ : ತಾಳ ಷಡಂಗದಲ್ಲಿ ಬರುವ ಕೃಷ್ಯ, ಸರ್ಪಿಣಿ ಮತ್ತು ಪತಾಕ ಪದಗಳ ಅರ್ಥವೇನು ?

ರಾಮು : ಕೃಷ್ಯ ಎಂದರೆ - ಮುಷ್ಟಿ ಹಿಡಿದ ಕೈಯನ್ನು ಎಡದಿಂದ ಬಲಕ್ಕೆ ಸರಿಸುವುದು.

ಸರ್ಪಿಣಿ - ಮುಷ್ಟಿಯ ಕೈಯನ್ನು ಬಲದಿಂದ ಎಡಕ್ಕೆ ಸರಿಸುವುದು.

ಪತಾಕ - ಅಂಗೈಯನ್ನು ನೆಲಕ್ಕೆ ತೋರಿಸಿ ಮೇಲಕ್ಕೆತ್ತುವುದು.

ಶೀಲ : "ಆವರ್ತ" ಎಂದರೇನು ?

ರಾಮು : ಯಾವುದೇ ಒಂದು ತಾಳದ ಅಂಗಗಳನ್ನು ಪೂರ್ತಿಲೆಕ್ಕ ಮಾಡಲು ಬೇಕಾಗುವ ಕಾಲಕ್ಕೆ "ಆವರ್ತ" ಎನ್ನುತ್ತಾರೆ. ಉದಾ : ಆದಿತಾಳಕ್ಕೆ 8 ಅಕ್ಷರಗಳ ಕಾಲವನ್ನು ಎಣಿಸುವುದು ಒಂದು ಆವರ್ತ.

ಶೀಲ : ತಾಳದಲ್ಲಿ "ಲಘು" ಎಂದರೇನು ? ಅದರ ಸಂಜ್ಞೆ ಏನು ?

ರಾಮು : ಒಂದು ಅಕ್ಷರ ಕಾಲವನ್ನು ಒಂದು ಏಟುಹಾಕಿ ಇತರ ಅಕ್ಷರಗಳನ್ನು ಬೆರಳುಗಳನ್ನು ಎಣಿಸುವ ಸಶಬ್ದ ಮತ್ತು ನಿಃಶಬ್ದ ಕ್ರಿಯೆ ಸಂಜ್ಞೆ. : I

ಶೀಲ : ತಾಳದಲ್ಲಿ "ಧೃತ" ಎಂದರೇನು ? ಅದಕ್ಕೆ ಏನು ಚಿಹ್ನೆ?

ರಾಮು : ಒಂದು ಏಟುಹಾಕಿ ಕೈ ಬೀಸುವಿಕೆ (ವಿಸರ್ಜಿತ) ಕ್ರಿಯೆಗೆ "ಧೃತ" ಎನ್ನುತ್ತಾರೆ. ಚಿಹ್ನೆ : O

ಶೀಲ : "ಅನುಧೃತ" ಎಂದರೇನು ? ಅದಕ್ಕೆ ಏನು ಚಿಹ್ನೆ?

ರಾಮು : ಇದನ್ನು ಒಂದು ಘಾತ (ಏಟಿನಿಂದ) ದಿಂದ ಸೂಚಿಸಲಾಗುವುದು. ಚಿಹ್ನೆ : U
ಒಂದು ಅಕ್ಷರಕಾಲ ಇದರ ಕಾಲಪ್ರಮಾಣ.
ತಾಳದ ಆರು ಅಂಗಗಳಲ್ಲಿ ಒಂದು ಅಂಗದ ಹೆಸರು

ಶೀಲ : ಖಂಡ ಛಾಪು ತಾಳಕ್ಕೆ (2 + 3 = 5) ಇನ್ನೊಂದು ಹೆಸರೇನು ?

ರಾಮು : ಅರೆಝುಂಪೆ ತಾಳ

ಶೀಲ : "ಸಿಂಹನಂದನ" ಈ ತಾಳದ ವೈಶಿಷ್ಟ್ಯ ಏನು ?

ರಾಮು : ಒಂದು ಆವರ್ತದಲ್ಲಿ 128 ಅಕ್ಷರ ಕಾಲವನ್ನು ಹೊಂದಿರುವುದು. ಈ ತಾಳವನ್ನು ನಿರ್ವಹಿಸುತ್ತಾ ಪಾದ ಚಲನೆಯಿಂದಲೇ ಬಿಳಿಯ ಬಟ್ಟೆಯ ಮೇಲೆ ಸಿಂಹದ ಚಿತ್ರವನ್ನು ಮೂಡಿಸಲಾಗುವುದು.

ಶೀಲ : ಚತುರಶ್ರಜಾತಿ ತ್ರಿಪುಟ ತಾಳದ ಇನ್ನೊಂದು ಹೆಸರೇನು ?

ರಾಮು : ಆದಿತಾಳ.

ಶೀಲ : ಕರ್ನಾಟಕ ಸಂಗೀತ ಪದ್ಧತಿಯ "ಆದಿತಾಳ"ವನ್ನು ಹಿಂದೂಸ್ಥಾನಿ ಪದ್ಧತಿಯಲ್ಲಿ ಏನೆಂದು ಕರೆಯುತ್ತಾರೆ ?

ರಾಮು : ತೀನ್‌ತಾಲ್.

ಶೀಲ : "ಗುಮಕ" ಈ ಪಾರಿಭಾಷಿಕ ಶಬ್ದ ಯಾವ ತಾಳವಾದ್ಯದಲ್ಲಿ ಬರುತ್ತದೆ ?

ರಾಮು : ಮೃದಂಗದ ಎಡಭಾಗದಲ್ಲಿ ನುಡಿಸುವ ವಿಧಾನ.

ಶೀಲ : ತಾಳಗಳಲ್ಲಿರುವ 5 ಜಾತಿಗಳ ಹೆಸರೇನು ?

ರಾಮು : 1. ತ್ರಿಶ್ರ (3) 2.ಚತುರಶ್ರ (4) 3. ಖಂಡ (5) 4. ಮಿಶ್ರ (7) 5. ಸಂಕೀರ್ಣ (9)

ಶೀಲ : "ಅಲಂಕಾರ" ಈ ಸಂಗೀತದ ಪಾರಿಭಾಷಿಕ ಶಬ್ದ ಏನು ?

ರಾಮು : ಸಪ್ತತಾಳಗಳು ಮತ್ತು ಇತರ ತಾಳಗಳಲ್ಲಿರುವ ಪ್ರಾರಂಭದ ಸಂಗೀತದ ಅಭ್ಯಾಸಗಳಿಗೆ "ಅಲಂಕಾರ" ಎನ್ನುತ್ತಾರೆ.

ಶೀಲ : ಲಯ ಎಂದರೇನು ?

ರಾಮು : ಸಂಗೀತ ರಚನೆಗಳನ್ನು ಹಾಡಲು ಅಥವಾ ನುಡಿಸಲು ಅನುಸರಿಸುವ ವೇಗ ಅಥವಾ ಗತಿಗೆ "ಲಯ" ಎಂದು ಹೆಸರು. ಅಳತೆ ಪಟ್ಟಿಯಲ್ಲಿ ಹನ್ನೆರಡು ಭಾಗಗಳಲ್ಲಿ ಹೇಗೆ ಸ್ವಲ್ಪವಾದರೂ ವ್ಯತ್ಯಾಸವಿಲ್ಲವೋ ಹಾಗೆಯೇ ತಾಳದ ಭಾಗಗಳಲ್ಲಿ ವ್ಯತ್ಯಾಸವಿರಬಾರದು ಹೀಗೆ ವ್ಯತ್ಯಾಸವಿರದ ಏಕರೂಪದ ಸಮಯಾವಕಾಶಕ್ಕೆ "ಲಯ" ಎಂದು ಹೆಸರು.

ಶೀಲ : ಸಂಗೀತದಲ್ಲಿ ಮೂರು ಕಾಲಗಳು ಯಾವುವು ?

ರಾಮು : 1. ವಿಳಂಬಕಾಲ, 2. ಮಧ್ಯಮಕಾಲ, 3. ಧ್ರುತ (ದುರಿತ) ಕಾಲ

ಶೀಲ : ಸಂಗೀತದ ಪರಿಭಾಷೆಯಲ್ಲಿ ಕಾಲಗಳನ್ನು ಬರವಣಿಗೆಯಲ್ಲಿ ಹೇಗೆ ಮೂಡಿಸುತ್ತಾರೆ ?

ರಾಮು : ಮೊದಲನೆ ಕಾಲ - ಸರಿಗಮಪದನಿಸ

ಎರಡನೆ ಕಾಲ - <u>ಸರಿಗಮ</u> <u>ಪದನಿಸ</u> : ಸ್ವರಗಳ ಕೆಳಗೆ ಒಂದು ಗೆರೆ

ಮೂರನೆ ಕಾಲ - ಸರಿಗಮ ಪದನಿಸ :ಸ್ವರಗಳ ಕೆಳಗೆ ಎರಡು ಗೆರೆ

ನಾಲ್ಕನೆ ಕಾಲ - ಸರಿಗಮ ಪದನಿಸ:ಸ್ವರಗಳ ಕೆಳಗೆ ಮೂರು ಗೆರೆ

ಶೀಲ : ಅಸಾಧಾರಣ ಲಯಜ್ಞಾನ ಇರುವವರನ್ನು ಏನೆಂದು ಕರೆಯುತ್ತಾರೆ ?

ರಾಮು : ಲಯಪುಂಜ

ಶೀಲ : ಲಯವಾದ್ಯಗಳಲ್ಲಿ ತನಿ ಆವರ್ತದ ಮುಕ್ತಾಯ ಭಾಗಕ್ಕೆ ಏನು ಹೆಸರು ?

ರಾಮು : ಮೊಹರಾ (ಮೋರಾ)

ಶೀಲ : ಪ್ರಪಂಚದ ಯಾವ ಸಂಗೀತದಲ್ಲಿ ತಾಳ, ಅದರ ವೈವಿಧ್ಯ ಇತ್ಯಾದಿ ಸೂಕ್ಷ್ಮವಿವರಗಳು ಹೆಚ್ಚಾಗಿ ಕಂಡುಬರುತ್ತವೆ ?

ರಾಮು : ಕರ್ನಾಟಕ ಸಂಗೀತದಲ್ಲಿರುವಷ್ಟು ತಾಳ ಜ್ಞಾನ ಪ್ರಪಂಚದ ಬೇರಾವ ಸಂಗೀತದಲ್ಲೂ ಕಂಡುಬರುವುದಿಲ್ಲ.

ಶೀಲ : ತಾಳಜ್ಞಾನ ಪ್ರವೀಣನಿಗೂ ಮೋಕ್ಷ ಪಡೆಯಲು ಸಾಧ್ಯವಿದೆ ಎಂದು ಯಾವ ಸ್ಮೃತಿಯಲ್ಲಿ ಹೇಳಿದೆ ?

ರಾಮು : ಯಾಜ್ಞವಲ್ಕ್ಯ ಸ್ಮೃತಿಯಲ್ಲಿ ಹೇಳಿದೆ.

ಶೀಲ : ಹಾಡುವ ವೇಗದ ಮಹತ್ವವೇನು ?

ರಾಮು : ಹಾಡುವ ವೇಗವು ಸಾಹಿತ್ಯ, ಭಾವ, ರಾಗಗಳಿಗೆ ಅನುಗುಣವಾಗಿ ಇರಬೇಕಾದುದು ತೀರಾ ಅವಶ್ಯ. ವೇಗದಲ್ಲಿ ವ್ಯತ್ಯಾಸವಾದರೆ ಹಾಡಿನ ಸೌಂದರ್ಯಕ್ಕೆ ಚ್ಯುತಿಯುಂಟಾಗುವುದು. ಹಾಡಿನಲ್ಲಿ ಸಾಹಿತ್ಯ ಭಾವ ಪೋಷಕವಾಗಿರುತ್ತದೆ. ಅದಕ್ಕೆ ಅನುಸಾರವಾಗಿ ರಾಗವು ಹೆಣೆಯಲ್ಪಟ್ಟಿರುತ್ತದೆ. ಅವುಗಳಿಗೆ ಸರಿಯಾಗಬಹುದಾದ "ವೇಗ" ಇರಬೇಕಾದುದು ಅವಶ್ಯ.

ಉದಾ. : ನಾವು ಸಂತೋಷದಿಂದಿರುವಾಗ ನಮ್ಮ ಮಾತಿನ ವೇಗ ಸಾಮಾನ್ಯವಾಗಿರುತ್ತದೆ. ಅವಸರದ ಸಮಯದಲ್ಲಿ ಇಲ್ಲವೇ ಸಿಟ್ಟಿನ ಸಮಯದಲ್ಲಿ ಮಾತಿನ ವೇಗ ಹೆಚ್ಚುತ್ತದೆ. ದುಃಖ ಬಂದಾಗ ತೀರ ನಿಧಾನವಾಗಿರುತ್ತದೆ. ಇದೇ ತತ್ವವನ್ನು ಸಂಗೀತದಲ್ಲೂ, ನಾವು ಕಾಣಬಹುದು. ಸಂತೋಷದಿಂದ ಹಾಡುವಾಗ ವೇಗ ತುಂಬ ಹೆಚ್ಚಾಗಿರುತ್ತದೆ. ಇಂತಹ ವೇಗಕ್ಕೆ "ದ್ರುತಗತಿ" ಎನ್ನುವರು. ಭಕ್ತಿಯಿಂದ ಹಾಡುವಾಗ, ದುಃಖದಿಂದ ಹಾಡುವಂತಹ ಹಾಡುಗಳು ನಿಧಾನವಾಗಿರುತ್ತವೆ. ಇಂತಹ ವೇಗಕ್ಕೆ ವಿಳಂಬಗತಿ ಎಂದು ಹೆಸರು.

ಶೀಲ : ತಾಳದಲ್ಲಿನ ಅತಿ ಕಡಿಮೆಯ ಮಾನ (ಅಳತೆ) ಏನು ?

ರಾಮು : ಅಕ್ಷರ.

ಶೀಲ : ತಾಳ ಪ್ರಕಾರಗಳು ಹೇಗೆ ಆಗುತ್ತವೆ ?

ರಾಮು : ಅಕ್ಷರ ಕಾಲಗಳ ಬೇರೆ ಬೇರೆ ವಿಧದ ಸರಿಜೋಡಣೆಯಿಂದ ವಿವಿಧ ತಾಳ ಪ್ರಕಾರಗಳಾಗುತ್ತವೆ.

ಶೀಲ : ತಾಳದಲ್ಲಿ ಅತೀ ಕಡಿಮೆಯೆಂದರೆ ಎಷ್ಟು ಅಕ್ಷರಕಾಲಗಳಿರಬೇಕು ?

ರಾಮು : ಮೂರು ಅಕ್ಷರಕಾಲಗಳಿರಬೇಕು. ಉದಾ.: ತನನ

ಶೀಲ : 'ಅಕ್ಷರ ಕಾಲ' ವೆಂದರೇನು ?

ರಾಮು : ತಾಳದ ಎಣಿಕೆಯಲ್ಲಿ ಬರುವ ಒಂದು ಸ್ವರವನ್ನು ಅಕ್ಷರ ಕಾಲ ಎಂದು ಕರೆಯಲಾಗುತ್ತದೆ. ಸಾಮಾನ್ಯವಾಗಿ ಚತುರಶ್ರ ಲಘುವಿನ 1/4 ಭಾಗಕ್ಕೆ 'ಅಕ್ಷರ ಕಾಲ' ವೆಂದು ಹೆಸರು.

ಶೀಲ : ಸಂಗೀತದಲ್ಲಿ 'ಕಾಲ' ಎಂದರೇನು ?

ರಾಮು : ರಚನೆಗಳ ವೇಗವನ್ನು ಅಳೆಯುವ ಮಾಪನವು ಕಾಲ. ತಾಳದಲ್ಲಿ ಕಾಲ ಪ್ರಮಾಣ ಬಹಳ ಮುಖ್ಯ. ಅಂದರೆ ಲಯವನ್ನು ಒಂದೇ ರೀತಿಯಲ್ಲಿ ಸ್ಥಿರವಾಗಿ ಉಳಿಸಿಕೊಳ್ಳುವುದು ಮುಖ್ಯಕಾರ್ಯ. ತಾಳ ಕಾಲದ ಅಳತೆಗೂ, ಕೃತಿ ನಡೆಯುವ ವೇಗಕ್ಕೂ ಇರುವ ಸಂಬಂಧವನ್ನು ಕಲ್ಪಿಸುವುದು.

ಶೀಲ : ಸಂಗೀತದಲ್ಲಿ ಮುಖ್ಯವಾಗಿ ಎಷ್ಟು ಕಾಲಗಳನ್ನು ಹೇಳುತ್ತೇವೆ. ವಿವರಿಸಿ ಹೇಳಿ ?

ರಾಮು : ಸಂಗೀತದಲ್ಲಿ ಮುಖ್ಯವಾಗಿ ಮೂರು ಕಾಲಗಳನ್ನು ಹೇಳುತ್ತೇವೆ. ಪ್ರಥಮಕಾಲ, ದ್ವಿತೀಯ ಕಾಲ, ತೃತೀಯ ಕಾಲ.

**ಪ್ರಥಮ ಕಾಲ** : ಎಂದರೆ ತಾಳದ ಒಂದು ಎಣಿಕೆಗೆ ಒಂದು ಸ್ವರವನ್ನು ಹಾಡುವುದು. ಉದಾ.: **ಸ ರಿ ಗ ಮ** ಅಭ್ಯಾಸಗಾನದಲ್ಲಿ ಈ ಒಂದನೇ ಕಾಲದಲ್ಲಿ ಹಾಡುತ್ತೇವೆ.

**ದ್ವಿತೀಯ ಕಾಲ** :ಎಂದರೆ ತಾಳದ ಒಂದು ಎಣಿಕೆಗೆ ಎರಡು ಸ್ವರವನ್ನು ಹಾಡುವುದು. ಈ ಎರಡನೆ ಕಾಲ ಒಂದನೇ ಕಾಲದ ಎರಡರಷ್ಟು ವೇಗದಲ್ಲಿರುತ್ತದೆ. ಸ್ವರ ಲಿಪಿಯಲ್ಲಿ ಬರೆಯುವಾಗ ಈ ದ್ವಿತೀಯ ಕಾಲವನ್ನು ಸ್ವರಗಳ ಕೆಳಗೆ ಅಥವಾ ಮೇಲೆ ಒಂದು ಅಡ್ಡಗೆರೆಯನ್ನು ಎಳೆದು ಸೂಚಿಸುತ್ತೇವೆ. ಉದಾ. : **ಸ ರಿ ಗ ಮ**

**ತೃತೀಯ ಕಾಲ** :ಎಂದರೆ ತಾಳದ ಒಂದು ಎಣಿಕೆಗೆ ನಾಲ್ಕು ಸ್ವರಗಳನ್ನು ಹಾಡುವುದು. ಅಂದರೆ ಎರಡನೇ ಕಾಲದ ಎರಡರಷ್ಟು ವೇಗವಾಗಿರುತ್ತದೆ. ಲಿಪಿಯಲ್ಲಿ ಇದನ್ನು ಸ್ವರಗಳ ಕೆಳಗೆ ಅಥವಾ ಮೇಲೆ ಎರಡು ಅಡ್ಡಗೆರೆಯನ್ನು ಎಳೆದು ಸೂಚಿಸುತ್ತೇವೆ. ಉದಾ. : **ಸ ರಿ ಗ ಮ**

ಶೀಲ : ಸಂಗೀತವನ್ನು ಹಾಡುವಾಗ ಮೂರುಕಾಲಗಳನ್ನು ಯಾವ ಸಂದರ್ಭಗಳಲ್ಲಿ ಹಾಡುತ್ತೇವೆ?

ರಾಮು : ಅಭ್ಯಾಸಗಾನದ ರಚನೆಗಳಾದ ಸ್ವರಾವಳಿ, ಜಂಟಿವರಸೆಗಳು, ಅಲಂಕಾರ, ವರ್ಣಗಳನ್ನು ಹಾಡುವಾಗ ಮೂರು ಕಾಲಗಳಲ್ಲಿ ಹಾಡುತ್ತೇವೆ.

ಶೀಲ : ಸಂಗೀತವನ್ನು ಮೂರು ಕಾಲದಲ್ಲಿ ಅಭ್ಯಾಸಮಾಡುವುದರಿಂದ ಆಗುವ ಪ್ರಯೋಜನವೇನು ?

ರಾಮು : ಸಂಗೀತವನ್ನು ಮೂರು ಕಾಲದಲ್ಲೂ ಅಭ್ಯಾಸಮಾಡುವುದರಿಂದ ಧ್ವನಿಯು ಸುಮಧುರವಾಗುತ್ತದೆ. ಹಾಗೆಯೇ ತಾಳದ ಖಚಿತತೆಯು ಬರುತ್ತದೆ.

ಶೀಲ : ಆವರ್ತ ಎಂದರೇನು ?

ರಾಮು : ತಾಳದಲ್ಲಿ ಬರುವ ಅಂಗಗಳನ್ನು ಕ್ರಮವಾಗಿ ಪೂರ್ತಿ ಹಾಕಿ ಮುಗಿಸುವುದಕ್ಕೆ ಆವರ್ತವೆಂದು ಹೆಸರು.
ಉದಾ : ಆದಿತಾಳದಲ್ಲಿ 1 ಲಘು 2 ದ್ರುತ ಹಾಕಿ
ಸ ರಿ ಗ ಮ ॥ ಪ ದ । ನಿ ಸ । ತೋರಿಸುವುದು.

ಶೀಲ : ಕರ್ನಾಟಕ ಸಂಗೀತದಲ್ಲಿ ಉಪಯೋಗಿಸುವ ಚಿಹ್ನೆಗಳು ಯಾವುವು ?

ರಾಮು : , ........ ಒಂದು ಅಕ್ಷರ ಕಾಲವನ್ನು ನಿರ್ದೇಶಿಸುತ್ತದೆ.
; ........ ಎರಡು ಅಕ್ಷರ ಕಾಲವನ್ನು ನಿರ್ದೇಶಿಸುತ್ತದೆ.
।........ ಲಘು ಮತ್ತು ಧೃತ ಮೊದಲಾದ ಅಂಗಗಳ ವಿಭಾಗವನ್ನು ಸೂಚಿಸುತ್ತದೆ.
॥....... ತಾಳದ ಆವರ್ತವು ಪೂರ್ಣವಾದುದನ್ನು ಸೂಚಿಸುತ್ತದೆ.
- ....... ಈ ಚಿಹ್ನೆಯು ಸ್ವರಗಳ ಪಕ್ಕದಲ್ಲಿ ಇದ್ದರೆ ಸ್ವರ ಸಮೂಹಗಳ ವಿಭಾಗವನ್ನು ನಿರ್ದೇಶಿಸುತ್ತದೆ.

ಶೀಲ : ಗ್ರಹ ಎಂದರೇನು ?

ರಾಮು : ರಚನೆಯು ತಾಳದೊಂದಿಗೆ ಆರಂಭವಾಗುವ ಎಡುಪು ಅಂದರೆ ಸ್ಥಳಕ್ಕೆ ಗ್ರಹವೆಂದು ಹೆಸರು.

ಶೀಲ : ಗ್ರಹದಲ್ಲಿ ಎಷ್ಟುವಿಧ ?

ರಾಮು : ಗ್ರಹದಲ್ಲಿ ಎರಡುವಿಧ, ಸಮಗ್ರಹ ಮತ್ತು ವಿಷಮಗ್ರಹ, ವಿಷಮ ಗ್ರಹದಲ್ಲಿ ಮತ್ತೆ ಎರಡು ವಿಧ ಅನಾಗತ ಮತ್ತು ಅತೀತ ಗ್ರಹ. ಸಮಗ್ರದಲ್ಲಿ ತಾಳ ಮತ್ತು ರಚನೆ ಒಟ್ಟಿಗೆ ಪ್ರಾರಂಭವಾಗುತ್ತದೆ. ಅನಾಗತ ಗ್ರಹದಲ್ಲಿ ತಾಳವು

ಪ್ರಾರಂಭವಾಗಿ ನಂತರ ರಚನೆ ಹಾಡಲ್ಪಡುತ್ತದೆ. ಅತೀತ ಗ್ರಹದಲ್ಲಿ ಸಂಗೀತ ರಚನೆ ಮೊದಲು ಪ್ರಾರಂಭವಾಗಿ ನಂತರ ತಾಳ ಪ್ರಾರಂಭವಾಗುತ್ತದೆ.

ಶೀಲ : ಛಾಪುತಾಳ ಎಂದರೇನು ?

ರಾಮು : ತಾಳದ ಅಕ್ಷರಗಳ ಕಾಲವನ್ನು ಬೆರಳೆಣಿಕೆ ಮಾಡದೆ ಕೇವಲ ಘಾತಗಳಿಂದ ಕಾಲ ಪ್ರಮಾಣವನ್ನು ಸೂಚಿಸಲಾಗುವ ಈ ತಾಳಕ್ಕೆ ಛಾಪು ತಾಳವೆಂದು ಹೆಸರು. ಛಾಪು ಎಂದರೆ ಏಟು ಅಥವಾ ಘಾತ ಎಂದರ್ಥ.

ಶೀಲ : ಛಾಪು ತಾಳಗಳು ಯಾವ ಗೀತೆಗಳಲ್ಲಿ ಹೆಚ್ಚಾಗಿ ಕಂಡುಬರುತ್ತವೆ.

ರಾಮು : ಜನಪದ ಗೀತೆಗಳು, ದಾಸರ ಪದಗಳಲ್ಲಿ ಹೆಚ್ಚಾಗಿ ಕಂಡುಬರುತ್ತವೆ.

ಶೀಲ : ಛಾಪು ತಾಳಗಳು ರೂಢಿಗೆ ಬರಲು ಕಾರಣವೇನು ?

ರಾಮು : ದಾಸರು ಬಲಗೈಯಲ್ಲಿ ತಂಬೂರಿ ಎಡಗೈಯಲ್ಲಿ ಚಿಪ್ಲ ಹಿಡಿದು ಹಾಡುತ್ತಿದ್ದುದರಿಂದ ಛಾಪುತಾಳಗಳು ರೂಢಿಗೆ ಬರಲು ಕಾರಣವಾಯಿತು.

ಶೀಲ : ಛಾಪು ತಾಳದಲ್ಲಿ ಎಷ್ಟುವಿಧಗಳಿವೆ ?

ರಾಮು : ನಾಲ್ಕು ವಿಧ - ತ್ರಿಶ್ರ ಛಾಪು, ಖಂಡ ಛಾಪು, ಮಿಶ್ರಛಾಪು, ಸಂಕೀರ್ಣಛಾಪು.

ಶೀಲ : 'ತ್ರಿಶ್ರಛಾಪು' ಎಂದರೇನು ?

ರಾಮು : ತ್ರಿಶ್ರಛಾಪು ಮೂರು ಅಕ್ಷರಗಳಿಂದ ಕೂಡಿರುತ್ತದೆ. ಮೊದಲನೆಯ ಘಾತ ಅಥವಾ ಪೆಟ್ಟಿನಲ್ಲಿ ಒಂದು ಅಕ್ಷರ ಎರಡನೆ ಪೆಟ್ಟಿನಲ್ಲಿ ಎರಡು ಅಕ್ಷರ ಬರುತ್ತದೆ.

ಉದಾ : ತಕಿಟ - 3 ಅಕ್ಷರ

ಶೀಲ : 'ಖಂಡಛಾಪು' ಎಂದರೇನು ?

ರಾಮು : ಖಂಡಛಾಪು ಐದು ಅಕ್ಷರಗಳಿಂದ ಕೂಡಿರುತ್ತದೆ. ಮೊದಲನೆಯ ಘಾತ ಅಥವಾ ಪೆಟ್ಟಿನಲ್ಲಿ ಎರಡು ಅಕ್ಷರಗಳು, ಎರಡನೆಯ ಪೆಟ್ಟಿನಲ್ಲಿ ಮೂರು ಅಕ್ಷರಗಳು ಬರುತ್ತವೆ. ಇದನ್ನು ಅರೆಝುಂಪೆ ಎಂದೂ ಕರೆಯುತ್ತಾರೆ.

ಉದಾ : ತಕ ತಕಿಟ (2 + 3 =5)

ಶೀಲ : 'ಮಿಶ್ರಛಾಪು' ಎಂದರೇನು ?

ರಾಮು : ಮಿಶ್ರಛಾಪು ಏಳು ಅಕ್ಷರದಿಂದ ಕೂಡಿರುತ್ತದೆ. ಮೊದಲನೆ ಘಾತ ಅಥವಾ ಪೆಟ್ಟಿನಲ್ಲಿ ಮೂರು ಅಕ್ಷರಗಳು ಬರುತ್ತವೆ. ಎರಡನೇ ಘಾತದಲ್ಲಿ ನಾಲ್ಕು ಅಕ್ಷರಗಳು ಬರುತ್ತವೆ. ಉದಾ : ತಕಿಟ । ತಕ । ದಿನ । ಎಂದು (3 + 2 + 2 = 7) ಇದು ಜನಪದ ಸಂಗೀತ, ದಾಸರ ಪದಗಳಲ್ಲಿ ಹೆಚ್ಚು ಬಳಕೆಯಲ್ಲಿರುವ ತಾಳ.

ಶೀಲ : ಸಂಕೀರ್ಣಛಾಪು ಎಂದರೇನು ?

ರಾಮು : ಸಂಕೀರ್ಣಛಾಪು ಒಂಬತ್ತು ಅಕ್ಷರದಿಂದ ಕೂಡಿರುತ್ತದೆ. ಮೊದಲನೆಯ ಘಾತ ಅಥವಾ ಪೆಟ್ಟಿಗೆ ನಾಲ್ಕು ಅಕ್ಷರಗಳು, ನಂತರ ಘಾತಕ್ಕೆ ಐದು ಅಕ್ಷರಗಳು ಬರುತ್ತವೆ 4+ 5=9 ಅಕ್ಷರಗಳು.

ಉದಾ : ತಕದಿನ + ತಕತಕಿಟ.
ಛಾಪು ತಾಳವು ಸಶಬ್ದ ಕ್ರಿಯೆಯಿಂದಲೆ ಕೂಡಿದೆ.



# 14. ನಾದ

ಶೀಲ : ನಾದವೆಂದರೇನು ?

ರಾಮು : ಕಿವಿಗೆ ಹಿತವಾಗಿ ಇಂಪನ್ನುಂಟು ಮಾಡುವ ಧ್ವನಿ ವಿಶೇಷವೇ "ನಾದ".

ನಾದವು ಅನಾದಿಯಾದುದು, ಈ ಜಗತ್ತೆಲ್ಲವೂ ನಾದಮಯವಾಗಿದೆ. ಇದು ವ್ಯವಸ್ಥಿತ ಕಂಪನಗಳಿಂದ ಕೂಡಿರುತ್ತದೆ. ತ್ರಿಮೂರ್ತಿಗಳಾದ ಬ್ರಹ್ಮ ವಿಷ್ಣು ಮತ್ತು ಮಹೇಶ್ವರರು ನಾದ ಸ್ವರೂಪರು, ನಾದೋಪಾಸಕರು.

ಶೀಲ : ಶಬ್ದ ಎಂದರೇನು ?

ರಾಮು : ಎರಡು ಘನ ಪದಾರ್ಥಗಳ ಘರ್ಷಣೆಗಳಿಂದ ಉತ್ಪತ್ತಿಯಾಗುವುದೇ ಶಬ್ದ. ಶಬ್ದ ಸ್ವರೂಪವಾದ ಸಂಗೀತವೂ ಮತ್ತು ಕಾವ್ಯವೂ ಪರಮಾತ್ಮನ ಸ್ವರೂಪಾಂಶಗಳೆಂದು ವಿಷ್ಣು ಪುರಾಣದಲ್ಲಿ ಹೇಳಿರುವುದಾಗಿ ತಿಳಿದುಬಂದಿರುತ್ತದೆ.

ನಾದದಿಂದ ಶ್ರುತಿ, ಶ್ರುತಿಗಳಿಂದ ಸ್ವರ, ಸ್ವರಗಳಿಂದ ರಾಗ, ರಾಗಗಳಿಂದ ಗೀತೆ ಹೊರಬೀಳುವುದು.

ನಾದದಿಂದ ಅಕ್ಷರ, ಅಕ್ಷರಗಳಿಂದ ಶಬ್ದ, ಶಬ್ದಗಳಿಂದ ವ್ಯವಹಾರ ಎಂದರೆ ಕೃತಿ - ಕಾವ್ಯ - ಜಗತ್ ವ್ಯಾಪಾರ ಹೀಗೆ ಪ್ರಕಟವಾಗುವುದು.

ಶೀಲ : ನಾದದ ಉತ್ಪತ್ತಿ ಹೇಗೆ ?

ರಾಮು : ಪ್ರಾಣ ಮತ್ತು ಅಗ್ನಿ ಸಂಯೋಗದಿಂದ ನಾದ ಉತ್ಪತ್ತಿಯಾಗುತ್ತದೆ. ಅಂದರೆ ನಕಾರ ಪ್ರಾಣ, ದಕಾರ ಅಗ್ನಿ ಪ್ರಾಣಾಗ್ನಿ ಸಂಯೋಗದಿಂದ "ನಾದ" ಉಂಟಾಗುತ್ತದೆ. ಇದು ಶರೀರದಲ್ಲಿ ಬ್ರಹ್ಮಗ್ರಂಥಿಯಿಂದ ಮೊದಲಾಗಿ ಮೇಲು ಮುಖವಾಗಿ ನಾಭಿ, ಹೃದಯ, ಕಂಠ, ಶಿರಸ್ಸು ಮತ್ತು ಮುಖಗಳಲ್ಲಿ ಕ್ರಮವಾಗಿ ಸಂಚರಿಸುವುದು.

ಶೀಲ : ನಾದದಲ್ಲಿ ಎಷ್ಟುವಿಧ ?

ರಾಮು : ಪಿಂಡದಿಂದ ಸಂಭೂತವಾದ ನಾದ 'ಆಹತ'ನಾದ ಮತ್ತು 'ಅನಾಹತ' ನಾದ ಎಂದು ಎರಡು ವಿಧವಾಗಿದೆ.

ಶೀಲ : 'ಆಹತನಾದ' ಎಂದರೇನು ?

ರಾಮು : ಮನುಷ್ಯನ ಪ್ರಯತ್ನದಿಂದ ಹೊರಬರುವ ನಾದ ಆಹತನಾದ. ಇದು ಶ್ರುತಿ ಸ್ವರಗಳಿಂದ ಉಂಟಾಗುವುದು. ಗೀತೆ, ವಾದ್ಯ, ನೃತ್ಯಗಳಿಂದ ರಂಜಿಸುವುದು.

ಅಂದರೆ ಗಾನೋತ್ಪತ್ತಿಕಾರಿಯಾದ, ಭವಭಂಜಕವಾದ, ಶ್ರುತಿಸ್ವರ ಗ್ರಾಮ ಮೂರ್ಛನಾದಿಗಳಿಂದ ಜನಗಳಿಗೆ ರಂಜನೆಯನ್ನುಂಟುಮಾಡುವ ನಾದ "ಆಹತನಾದ".

ಶೀಲ : 'ಅನಾಹತ' ನಾದ ವೆಂದರೇನು ?

ರಾಮು : ಅನಾಹತ ಮನುಷ್ಯನ ಪ್ರಯತ್ನವಿಲ್ಲದೆ ಹೊರಬರುವ ಅಂತಃ ಶ್ರುತಿನಾದ. ಇದು ಮೂಲಾಧರ ಚಕ್ರದಿಂದ ಹೊರಡುವ ನಾದ. ಯೋಗಿಗಳಿಗೆ ಕೇಳಿಸುವ ನಾದ. ಗುರುವಿನಿಂದ ಉಪದೇಶಹೊಂದಿ ಯೋಗಿಗಳು ಉಪಾಸನೆಮಾಡಿ ಅನುಭವಿಸುವ ನಾದವೇ "ಅನಾಹತನಾದ". ಇದು ರಂಜನೆಯನ್ನುಂಟುಮಾಡುವಂತಹುದಲ್ಲ. ಇದು ಮುಕ್ತಿಪ್ರದವಾದುದು.

ಶೀಲ : ಮನುಷ್ಯನ ಶರೀರದಲ್ಲಿ ನಾದೋತ್ಪತ್ತಿಯಾಗುವ ಕ್ರಮ ಹೇಗಿರುತ್ತದೆ.

ರಾಮು : ಆತ್ಮವು ಮನಸ್ಸನ್ನು ಪ್ರೇರೇಪಿಸುತ್ತದೆ. ಮನಸ್ಸು ದೇಹದಲ್ಲಿರುವ ಸೂಕ್ಷ್ಮಾಗ್ನಿಯನ್ನು ಪ್ರಚೋದಿಸುತ್ತದೆ. ಅಗ್ನಿ ಪ್ರಾಣವಾಯುವನ್ನು ಪ್ರಚೋದನಗೊಳಿಸುವುದರಿಂದ ಬ್ರಹ್ಮಗ್ರಂಥಿ ಎಂಬ ಮೂಲಾಧಾರದಿಂದ ಊರ್ಧ್ವಮುಖವಾಗಿ ನಾಭಿ, ಹೃದಯ, ಕಂಠ, ನಾಸಿಕ ಮತ್ತು ಶಿರಸ್ಸು ಇವುಗಳ ಮೂಲಕ ವಾಯು ಚಲಿಸುವಾಗ ನಾದ ಉತ್ಪತ್ತಿಯಾಗುತ್ತದೆ.

ಈ ರೀತಿ ನಾದ ಉತ್ಪತ್ತಿಯಾಗುವಾಗ ಹೃದಯದಿಂದ ಶಿರಸ್ಸಿನವರಗೆ ಇರುವ 22 ನಾಡಿಗಳಲ್ಲೂ 22 ಭೇದ ಹೊಂದಿ ಶ್ರುತಿ ಎನಿಸುವುದು. ಅಸ್ಪಷ್ಟವಾಗಿ ಸ್ವರೂಪ ಮಾತ್ರದಿಂದ ಮೊದಲು ಕೇಳಿಸುವ ಧ್ವನಿಯೇ ಶ್ರುತಿ ಎನಿಸುವುದು. ಶ್ರೋತೇಂದ್ರಿಯಕ್ಕೆ ಕೇಳಿಸಿ ಗುರ್ತಿಸಲ್ಪಡತಕ್ಕದೇ ಶ್ರುತಿ. ಈ ಶ್ರುತಿಯೆಂಬ ಶಬ್ದ ವಿಶೇಷಣಕ್ಕೆ ಶ್ರವಣ ಗ್ರಾಹ್ಯವಾದ ಧ್ವನಿಯೆಂದು ಹೆಸರು. ಈ ಶ್ರುತಿಯು 22 ಎಂದು ಕೆಲವರೂ, ತ್ರಿಸ್ಥಾಯಿಗಳೂ ಸೇರಿ 66 ಎಂದು ಇನ್ನೂ ಕೆಲವರೂ, ಅನಂತವೆಂದು ಮತ್ತು ಕೆಲವರೂ ಹೇಳಿದ್ದಾರೆ. ಆದರೆ ಜನಸಮ್ಮತಿಯಿಂದ ಶ್ರುತಿಗಳು 22 ಎಂದೇ ಒಪ್ಪಲಾಗಿದೆ.

ಹೃದಯದಲ್ಲಿ ನಾದವು ಮಂದ್ರಸ್ಥಾಯಿಯಲ್ಲೂ, ಕಂಠದಲ್ಲಿ ಮಧ್ಯಸ್ಥಾಯಿಯಲ್ಲೂ, ಶಿರಸ್ಸಿನಲ್ಲಿ ತಾರಕ ಸ್ಥಾಯಿಯಲ್ಲೂ ಉತ್ಪತ್ತಿ ಆಗುತ್ತದೆ.



# 15. ಸಂಗೀತ ಶಾಸ್ತ್ರದ ರಚನೆಗಳು -ಸಂಗೀತ ಶಾಸ್ತ್ರದ ರಚನಾಕಾರರು

ಶೀಲ : ಕರ್ನಾಟಕ ಸಂಗೀತಾಭ್ಯಾಸಿಗಳು ಕಲಿಯುವ ಮೊದಲ ಗೀತೆ "ಶ್ರೀಗಣನಾಥ ಸಿಂಧೂರವರ್ಣ" ಇದರ ಕರ್ತೃ ಯಾರು ?

ರಾಮು : ಪುರಂದರದಾಸರು.

ಶೀಲ : "ಯತಿ" ಎಂದರೇನು ?

ರಾಮು : "ಯತಿ" ಎಂದರೆ ತಾಳಕ್ಕೆ ಬರುವ ಅಂಗಗಳನ್ನು ನಿರ್ದಿಷ್ಟಕಾಲ ಪ್ರಮಾಣಗಳನ್ನು ಸ್ವರಸಾಹಿತ್ಯಗಳು ಅನುಸರಿಸುವ ರೀತಿ.

ಶೀಲ : "ಯತಿ"ಗಳೆಷ್ಟಿವೆ ? ಯಾವುವು ?

ರಾಮು : ಏಳು "ಯತಿ"ಗಳು

1. ಸಮಯತಿ
2. ಪಿಪೀಲಿಕಾಯತಿ
3. ಗೋಪುಚ್ಚಯತಿ
4. ಶ್ರೋತೋವಹಯತಿ
5. ಡಮರುಯತಿ
6. ವಿಷಮಯತಿ
7. ಮೃದಂಗಯತಿ

ಶೀಲ : "ಅನಿಬದ್ಧ" ಹಾಗೂ "ನಿಬದ್ಧ" ಸಂಗೀತ ಎಂದರೇನು ?

ರಾಮು : ತಾಳ ಇಲ್ಲದೆ ಹಾಡುವ ರಾಗ - ಶ್ಲೋಕ - ಉಗಾಭೋಗಗಳು. "ಅನಿಬದ್ಧ" ಸಂಗೀತ. ತಾಳದಿಂದ ಕೂಡಿ ಹಾಡುವ -ವರ್ಣ, ಕೀರ್ತನೆ, ಕೃತಿ, ಪದ, ಜಾವಳಿ ಇತ್ಯಾದಿ "ನಿಬದ್ಧ" ಸಂಗೀತ.

ಶೀಲ : "ಸಂಚಾರಿ ಗೀತೆ" ಎಂದರೇನು ?

ರಾಮು : ಭಗವಂತನ ನಾಮಸ್ತುತಿಯನ್ನು ವಸ್ತುವಾಗಿರುವ ಗೀತೆಗೆ "ಸಂಚಾರಿ" ಗೀತೆ ಎನ್ನುತ್ತಾರೆ.

ಶೀಲ : ಯಾರ "ಭಜನ್" ಹೆಚ್ಚು ಪ್ರಸಿದ್ಧಿಯಲ್ಲಿರುವುದು ?

ರಾಮು : ಮೀರಾಬಾಯಿ (ಮೀರಾ ಭಜನ್).

ಶೀಲ : "ಅಷ್ಟಪದಿ"ಗೆ ಪ್ರಸಿದ್ಧನಾಗಿರುವವರು ಯಾರು ?

ರಾಮು : ಜಯದೇವ. "ಗೀತ ಗೋವಿಂದ" ಪ್ರಸಿದ್ಧರಚನೆ.

ಶೀಲ : "ಪದ ರಚನಾ ಚಕ್ರವರ್ತಿ" ಎಂದು ಯಾರನ್ನು ಕರೆಯುತ್ತಾರೆ ?

ರಾಮು : ಆಂಧ್ರದ ಕೃಷ್ಣಾ ಜಿಲ್ಲೆಯ ಕ್ಷೇತ್ರಯ್ಯ.

ಶೀಲ : ಪದ ಲಯವಿನ್ಯಾಸ ಇವುಗಳನ್ನು ಕರ್ನಾಟಕ ಸಂಗೀತದಲ್ಲಿ ಏನೆಂದು ಕರೆಯುತ್ತಾರೆ ?

ರಾಮು : ಪಲ್ಲವಿ.

ಶೀಲ : "ಪೂರ್ವಾಂಗ", "ಉತ್ತರಾಂಗ" ಎಂದರೇನು ?

ರಾಮು : ಸಪ್ತಸ್ವರಗಳನ್ನು ಎರಡು ಭಾಗಮಾಡಿ "ಸರಿಗ" ಮತ್ತು ಶುದ್ಧ ಮಧ್ಯಮಕ್ಕೆ "ಪೂರ್ವಾಂಗ" ವೆಂದು, ಪ್ರತಿ ಮಧ್ಯಮ ಮತ್ತು "ಪದನಿ"ಗಳನ್ನು "ಉತ್ತರಾಂಗ" ವೆಂದು ಹೇಳುತ್ತಾರೆ.

ಶೀಲ : ನವವಿಧ ಭಕ್ತಿಗಳ ಹೆಸರೇನು ?

ರಾಮು :
1. ಶ್ರವಣ
2. ಕೀರ್ತನ
3. ಸ್ಮರಣ
4. ಪಾದಸೇವನ
5. ಅರ್ಚನ
6. ವಂದನ
7. ದಾಸ್ಯ
8. ಸಖ್ಯ
9. ಆತ್ಮನಿವೇದನ

ಶೀಲ : ''ದರು'' ಎಂದರೇನು ?

ರಾಮು : ನೃತ್ಯ ಮತ್ತು ಗೇಯ ರೂಪಕಗಳಲ್ಲಿ ಬರುವ ಕಥಾ ವಸ್ತುವುಳ್ಳ ವಿಶೇಷ ಸಂಗೀತ ರಚನೆ ''ಧ್ರುವಾ'' ಎಂಬ ಪದದ ಅಪಭ್ರಂಶ ''ದರು''.

ಶೀಲ : ದಕ್ಷಿಣ ಭಾರತದಲ್ಲಿ ಮೊಟ್ಟಮೊದಲಿಗೆ ಸಂಗೀತ ಸಮ್ಮೇಳನವನ್ನು ಏರ್ಪಡಿಸಿದವರು ಯಾರು ?

ರಾಮು : ಅಬ್ರಹಾಂ ಪಂಡಿತರಾವ್ ಸಾಹೇಬ್.

ಶೀಲ : ''ನಮ್ಮಮ್ಮ ಶಾರದೆ ಉಮಾ ಮಹೇಶ್ವರಿ'' ಇದು ಯಾರ ರಚನೆ ಯಾವ ದೇವನನ್ನು ಕುರಿತು ರಚಿಸಿದ್ದು ?

ರಾಮು : ಕನಕದಾಸರ ರಚನೆ. ಗಣೇಶನನ್ನು ಕುರಿತು ಹಾಡಿದ್ದು. ವಿದ್ಯಾಭೂಷಣರು ಹಂಸಧ್ವನಿ ರಾಗದಲ್ಲಿ ಹಾಡಿದ್ದಾರೆ.

ಶೀಲ : ''ಭಾಗ್ಯದ ಲಕ್ಷ್ಮೀ ಬಾರಮ್ಮ'' ಪುರಂದರರ ಈ ಕನ್ನಡ ರಚನೆಯನ್ನು ಜನಪ್ರಿಯಗೊಳಿಸಿದ ಪ್ರಸಿದ್ಧ ಹಿಂದೂಸ್ಥಾನಿ ಗಾಯಕನ ಹೆಸರೇನು ?

ರಾಮು : ಭೀಮಸೇನ ಜೋಷಿ.

ಶೀಲ : ''ಇಂದು ಎನಗೆ ಗೋವಿಂದ'' ಸಾಮಾನ್ಯವಾಗಿ ಭೈರವಿರಾಗದಲ್ಲಿ ಹಾಡುವ ಈ ದೇವರ ನಾಮದ ರಚನೆಕಾರರು ಯಾರು ?

ರಾಮು : ರಾಘುವೇಂದ್ರಸ್ವಾಮಿಗಳು.

ಶೀಲ : ''ಪದಕವಿ ಪಿತಾಮಹ'' ಎಂದು ಯಾರನ್ನು ಕರೆಯುತ್ತಾರೆ ?

ರಾಮು : ತಾಳ್ಳಪಾಕಂ ಅನ್ನಮಾಚಾರ್ಯ

ಶೀಲ : ಕರ್ನಾಟಕ ಮತ್ತು ಹಿಂದೂಸ್ಥಾನಿ ಈ ಎರಡೂ ಪದ್ಧತಿಯಲ್ಲಿ ಪಿಟೀಲು ನುಡಿಸುವ ಸಮರ್ಥ ಕಲಾವಿದ ಯಾರು ?

ರಾಮು : ಪರೂರು ಎಂ. ಎಸ್. ಗೋಪಾಲಕೃಷ್ಣನ್.

ಶೀಲ : ಕರ್ನಾಟಕ ಸಂಗೀತ ಕಲಿತು ಗಾಯನದಲ್ಲಿ ಪ್ರಸಿದ್ಧನಾದ ಅಮೇರಿಕನ್ ಯಾರು ?

ರಾಮು : ಜಾನ್ ಬಿ. ಹಿಗ್ಗಿನ್ಸ್ ''ಕೃಷ್ಣಾ ನೀ ಬೇಗನೆ ಬಾರೋ'' ಈ ಕನ್ನಡದ ದೇವರ ನಾಮವನ್ನು ಹಾಡಿ ಪ್ರಸಿದ್ಧಿಗಳಿಸಿದ್ದರು.

ಶೀಲ : ''ಜಾವಳಿ'' ಎಂಬ ಸಂಗೀತ ಪ್ರಕಾರವೇನು ?

ರಾಮು : ''ಜಾವಳಿ'' ಎಂದರೆ ಉಲ್ಲಾಸ ರಸವುಳ್ಳ ಆಕರ್ಷಕ ರಾಗದಿಂದ ಕೂಡಿದ ರಚನೆ.

ಶೀಲ : ''ಕಾವಡಿಚಿಂದು'' ಈ ಸಂಗೀತ ಪ್ರಕಾರದ ಬಗ್ಗೆ ಏನು ಗೊತ್ತು ?

ರಾಮು : ಇದು ತಮಿಳುನಾಡಿನ ಒಂದು ಬಗೆ ಜಾನಪದ ಗೀತೆ.

ಶೀಲ : ''ಉಗಾಭೋಗ'' ಎಂದರೇನು ?

ರಾಮು : ಛಂದಸ್ಸಿನ ಕಟ್ಟುಪಾಡಿಲ್ಲದೆ ರಾಗದಿಂದ ಕೂಡಿದ ಒಂದು ಸಣ್ಣ ಕವಿತೆ.

ಇದರಲ್ಲಿ ರಾಗ ಮಾತ್ರ ಅನಿಬದ್ಧ ಸಂಗೀತ, ತಾಳ ಇರುವುದಿಲ್ಲ.

ಶೀಲ : ''ಯಮಕ'' ಎಂದರೇನು ?

ರಾಮು : ಇದೊಂದು ಸಂಗೀತದ ಕೃತಿಯ ಸಾಹಿತ್ಯದಲ್ಲಿ ಬರುವ ಶಬ್ದಾಲಂಕಾರ. ಮೂರು ಅಥವಾ ಅದಕ್ಕಿಂತ ಹೆಚ್ಚಿನ ಅಕ್ಷರಗಳುಳ್ಳ ಪದವೋ, ಪದಭಾಗವೋ, ಒಂದು ಪದ್ಯದ ಆದಿ, ಮಧ್ಯ, ಅಂತ್ಯ ಈ ಸ್ಥಾನಗಳಲ್ಲಿ ನಿಯತವಾಗಿ ಪದೇ ಪದೇ ಬಂದರೆ ಅದಕ್ಕೆ ''ಯಮಕ'' ಎನ್ನುತ್ತಾರೆ.

ಶೀಲ : ''ನಗಮಾ'' ಎಂದರೇನು ?

ರಾಮು : ಹಿಂದೂಸ್ತಾನಿ ಪದ್ಧತಿಯಲ್ಲಿ ಮೊದಲು ಬಳಕೆಗೆ ಬಂದ ಸಂಗೀತ ಪ್ರಕಾರ. ಈ ರಚನೆಗಳು ವಾದ್ಯಗಳಿಗೆ ಮಾತ್ರ ಸೀಮಿತವಾದ ಸ್ವರಗುಚ್ಚಗಳು.

ಶೀಲ : ಸಾಮಾನ್ಯವಾಗಿ ಯಾವ ರೀತಿ ರಚನೆಗಳನ್ನು ಮಧ್ಯಮ ಶ್ರುತಿಯಲ್ಲಿ ನುಡಿಸಲಾಗುತ್ತದೆ/ ಹಾಡಲಾಗುತ್ತದೆ ?

ರಾಮು : ನಿಷಾದಾಂತ್ಯ, ದೈವತಾಂತ್ಯ ಮತ್ತು ಪಂಚಮಾಂತ್ಯ ರಾಗಗಳ ರಚನೆಗಳನ್ನು ಹಾಡುವಾಗ/ ನುಡಿಸುವಾಗ.

ಶೀಲ : ''ಜನ ಗಣ ಮನ ಅಧಿನಾಯಕ ಜಯಹೇ'' ರಾಷ್ಟ್ರಗೀತೆ ಯಾವ ರಾಗದಲ್ಲಿದೆ ?

ರಾಮು : ಶಂಕರಾಭರಣ. ಆಂಗ್ಲ ಪದ್ಧತಿ Major Diatonic Scale. ಹಿಂದೂಸ್ಥಾನಿ ಪದ್ಧತಿ ಬಿಲವಾಲ್.

ಶೀಲ : ವಂದೇ ಮಾತರಂ, ಸಾರೆ ಜಹಾನ್‌ಸೆ ಅಚ್ಛಾ, ರಘುಪತಿ ರಾಘವ ರಾಜಾರಾಂ, ಮುಂತಾದ ಜನಪ್ರಿಯ ಗೀತೆಗಳಿಗೆ ಶಾಸ್ತ್ರೀಯ ಸಂಗೀತ ಒದಗಿಸಿದವರು ಯಾರು ?

ರಾಮು : ವಿಷ್ಣುದಿಗಂಬರ ಫಲುಸ್ಕರ್.

ಶೀಲ : ಕರ್ನಾಟಕ ಸಂಗೀತ ಪ್ರಪಂಚಕ್ಕೆ ಕನ್ನಡಿಗ ವೆಂಕಟಮುಖಿಯವರ ಮುಖ್ಯ ಕೊಡುಗೆಗಳೇನು?

ರಾಮು : 1. ಚತುರ್ದಂಡಿ ಪ್ರಕಾಶಿಕ ಗ್ರಂಥ ರಚನೆ.
ಒಂದು ರಾಗದ ಸ್ವರೂಪ ಚೆನ್ನಾಗಿ ತಿಳಿಯಲು ಅದರಲ್ಲಿ ಗೀತ, ಆಲಾಪ,
ಠಾಯ, ಪ್ರಬಂಧ ಎಂಬ ನಾಲ್ಕು ಕಂಬಗಳು ಎಂದು ತಿಳಿಸಿರುವುದು.

2. 72 ಮೇಳಕರ್ತ ರಾಗಗಳ ಕಲ್ಪನೆಯ ಸೊಗಸಾದ ಯೋಜನೆ.

ಶೀಲ : ''ನೆರವಲ್'' ಎಂದರೇನು ?

ರಾಮು : ಕೃತಿಯ ಯಾವುದಾದರೂ ಒಂದು ಅರ್ಥಗರ್ಭಿತವಾದ ಭಾಗವನ್ನು ಆರಿಸಿಕೊಂಡು ಅದರ ತಾಳದ ಚೌಕಟ್ಟಿನಲ್ಲಿ ಸಾಹಿತ್ಯ ಭಾಗದ ಅರ್ಥವನ್ನು ವಿವಿಧ ಛಾಯೆಯೊಂದಿಗೆ ವ್ಯಕ್ತಪಡಿಸುವ ರೀತಿಯಲ್ಲಿ ವಿನ್ಯಾಸ ಮಾಡುವುದಕ್ಕೆ, ಈ ಮನೋಧರ್ಮ ಕಲ್ಪನೆಗೆ ''ನೆರವಲ್'' ಎನ್ನುತ್ತಾರೆ.

ಶೀಲ : ಹಿಂದೂಸ್ತಾನಿ ಹಾಗೂ ಕರ್ನಾಟಕ ಎರಡೂ ಸಂಗೀತ ಪದ್ಧತಿಗಳಲ್ಲಿ ಕೃತಿ ರಚಿಸಿದ ದಕ್ಷಿಣ ಭಾರತದ ವಾಗ್ಗೇಯಕಾರರು ಯಾರು ?

ರಾಮು : ಸ್ವಾತಿ ತಿರುನಾಳ್ ಮಹಾರಾಜರು.
ಸಂಗೀತದ ವೈವಿಧ್ಯಮಯ ಪ್ರಕಾರಗಳನ್ನು ಅಂದರೆ ಸ್ವರಜತಿ, ಪದವರ್ಣ, ತಾನವರ್ಣ, ಕೃತಿಗಳು, ಕೀರ್ತನೆ, ಪದ, ಚಾವಳಿ, ಶ್ಲೋಕ, ರಾಗ ಮಾಲಿಕೆ, ತಿಲ್ಲಾನಗಳು ಇವರ ರಚನೆಗಳಲ್ಲಿವೆ. ಹರಿಕಥಾ ಕಾಲಕ್ಷೇಪಕ್ಕೋಸ್ಕರ ''ಕುಚೇಲೋಪಾಖ್ಯಾನ ಅಜಾಮಿಳೋಪಾಖ್ಯಾನ'' ಎಂಬ ಪ್ರಬಂಧಗಳನ್ನು ರಚಿಸಿದ್ದಾರೆ.

ಶೀಲ : ''ಗೀತಂ ವಾದ್ಯಂ ತಥಾ ನೃತ್ಯಂತ್ರಯಂ ಸಂಗೀತ ಮುಚ್ಯತೇ'' ಈ ಪ್ರಸಿದ್ಧ ಶ್ಲೋಕದ ಸಾಲು ಎಲ್ಲಿ ಉಲ್ಲೇಖವಾಗಿದೆ.

ರಾಮು : ಸಾರಂಗ ದೇವನ ''ಸಂಗೀತ ರತ್ನಾಕರ'' ಎಂಬ ಗ್ರಂಥದಲ್ಲಿ ಉಲ್ಲೇಖವಾಗಿದೆ.

ಶೀಲ : ಭಾರತೀಯ ಸಂಸ್ಕೃತಿಯ ಸಾರಸ್ವತ ಸಂಪತ್ತಿಗೆ ಕರ್ನಾಟಕದ ಕೊಡುಗೆಗಳಲ್ಲಿ ಮೈಸೂರಿನ ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರ್ ರವರ ಅತ್ಯುತ್ತಮ ಕೊಡುಗೆ ಏನು ?

ರಾಮು : ಒಂದು "ಸ್ವರ ಚೂಡಾಮಣಿ'' ಇನ್ನೊಂದು ಶ್ರೀ ತತ್ವನಿಧಿ'' ಈ ಶ್ರೀ ತತ್ವನಿಧಿ ಒಂದು ವಿಶ್ವಕೋಶ. ಇದರಲ್ಲಿ ಸಂಗೀತ, ಶಿಲ್ಪ, ಆಗಮ, ಜ್ಯೋತಿಷ್ಯ, ಕ್ರೀಡೆ ಮುಂತಾದವುಗಳ ವರ್ಣ ಚಿತ್ರಗಳಿವೆ. ಸ್ವರಗಳಿಗೆ, ರಾಗಗಳಿಗೆ ಧ್ಯಾನ ಶ್ಲೋಕ ಹಾಗೂ ಮೂರ್ತಿ ನಿರ್ದೇಶನ ಇದೆ. ಮುಮ್ಮಡಿಯವರನ್ನು "ಕನ್ನಡ ಭೋಜ, ಅಭಿನವ ಭೋಜ'' ಎಂದು ಪ್ರಶಂಸಿಸುತ್ತಿದ್ದರು.

ಶೀಲ : ಕರ್ನಾಟಕ ಸಂಗೀತಾಭ್ಯಾಸಿಗಳು ಕಲಿಯುವ ಮೊದಲಗೀತೆ ಕನ್ನಡದ "ಶ್ರೀಗಣನಾಥ ಸಿಂಧೂರ ವರ್ಣ'' ಇದು ಯಾವ ರಾಗದಲ್ಲಿದೆ?

ರಾಮು : "ಮಲಹರಿ ರಾಗ''

ಶೀಲ : ಮೊದಲ ಸಂಗೀತ ಗ್ರಂಥ ಯಾವುದು ?

ರಾಮು : ಭರತನ ನಾಟ್ಯಶಾಸ್ತ್ರ.

ಶೀಲ : ಯಾವ ಭಾಷೆಯಲ್ಲಿದೆ ?

ರಾಮು : ಸಂಸ್ಕೃತ.

ಶೀಲ : ಸಂಗೀತ ಯಾವ ವೇದ ?

ರಾಮು : ಸಾಮವೇದ.

ಶೀಲ : "ಕರ್ನಾಟಕ ಸಂಗೀತ ಪಿತಾಮಹ'' ಎಂದು ಯಾರನ್ನು ಕರೆಯುತ್ತಾರೆ.

ರಾಮು : ಶ್ರೀ ಪುರಂದರದಾಸರು.

ಶೀಲ : ಸಂಗೀತದ ತ್ರಿಮೂರ್ತಿಗಳು ಯಾರ‍್ಯಾರು ?

ರಾಮು : ಶ್ರೀ ತ್ಯಾಗರಾಜರು, ಶ್ರೀ ಶ್ಯಾಮಾಶಾಸ್ತ್ರಿಗಳು ಮತ್ತು ಶ್ರೀ ಮುತ್ತುಸ್ವಾಮಿ ದೀಕ್ಷಿತರು

ಶೀಲ : ವಾಗ್ಗೇಯಕಾರ ಎಂದರೆ ಯಾರು ?

ರಾಮು : ಸಾಹಿತ್ಯವನ್ನು ರಚಿಸಿ, ಆ ಸಾಹಿತ್ಯಕ್ಕೆ ಸಂಗೀತ ಅಂದರೆ ರಾಗ, ತಾಳ, ಸ್ವರಗಳನ್ನು ಸಂಯೋಜಿಸುವವರನ್ನು ವಾಗ್ಗೇಯಕಾರ ಎನ್ನುತ್ತಾರೆ.

ಶೀಲ : ಸಮೂಹ ಗಾಯನ ಹಾಗೂ ಸಮೂಹ ವಾದ್ಯ ನುಡಿಸುವವರನ್ನು ಏನೆಂದು ಕರೆಯುತ್ತಾರೆ ?

ರಾಮು : ವೃಂದ.

ಶೀಲ : ಸಂಗೀತ ಶಾಸ್ತ್ರ (ಲಕ್ಷಣ) ಮತ್ತು ಸಂಗೀತ (ಲಕ್ಷ್ಯ) ಎರಡನ್ನೂ ಬಲ್ಲವರನ್ನು ಏನೆಂದು ಕರೆಯುತ್ತಾರೆ ?

ರಾಮು : ಲಕ್ಷಣ ಲಕ್ಷ್ಯವಿದ್ವಾಂಸರು.

ಶೀಲ : ಹರಿದಾಸ "ಪಿತಾಮಹ'' ಎಂದು ಯಾರನ್ನು ಕರೆಯುತ್ತಾರೆ ?

ರಾಮು : ಶ್ರೀಪಾದರಾಯರು - ರಂಗವಿಠಲ ಅಂಕಿತನಾಮ.

ಶೀಲ : ಜರ್ಮನಿಯ ಹರ್ಮನ್ ಮೋಗ್ಲಿಂಗ್ ಯಾವ ದಾಸರ ಪದಗಳನ್ನು ಜರ್ಮನ್ ಭಾಷೆಗೆ ಅನುವಾದಿಸಿದ್ದು ?

ರಾಮು : ಪುರಂದರದಾಸರ - ಕನಕದಾಸರ 25 ದೇವರ ನಾಮಗಳನ್ನು ಜರ್ಮನ್ ಭಾಷೆಗೆ ಅನುವಾದ ಮಾಡಿ ಜರ್ಮನಿಯಲ್ಲಿ 516 ಪುಟಗಳ "ದಾಸರ ಪದಗಳು'' ಕ್ರಿ. ಶ. 1860ರಲ್ಲಿ ಪ್ರಕಟವಾಗಿದೆ.

ಶೀಲ : ತಮ್ಮ ಗಾಯನದಿಂದ ಸ್ವಾಮಿ ವಿವೇಕಾನಂದರ ಮೆಚ್ಚಿಗೆ ಗಳಿಸಿದ ಕರ್ನಾಟಕದ ಖ್ಯಾತ ಗಾಯಕ ಯಾರು ?

ರಾಮು : ಭೈರವಿ ಕೆಂಪೇಗೌಡ. ಇವರು "ಭೈರವಿ'' ರಾಗವನ್ನು ಒತ್ತೆ ಇಟ್ಟು ಪ್ರಸಿದ್ಧರಾಗಿದ್ದಾರೆ.

ಶೀಲ : ಪುರಂದರದಾಸರು ಮತ್ತು ಕನಕದಾಸರುಗಳ ಗುರುಗಳ ಹೆಸರೇನು ?

ರಾಮು : ವ್ಯಾಸರಾಯರು.

ಶೀಲ : ಪುರಂದರದಾಸರ ಪೂರ್ವಾಶ್ರಮದ ಹೆಸರೇನು ?

ರಾಮು : ಶ್ರೀನಿವಾಸ ನಾಯಕ - ನವಕೋಟಿ ನಾರಾಯಣ.

ಶೀಲ : ದಾಸ "ಚತುಷ್ಟಯರು'' ಅಂದರೆ ಯಾರು ?

ರಾಮು : 1. ಪುರಂದರದಾಸರು 2. ವಿಜಯದಾಸರು
3. ಗೋಪಾಲದಾಸರು
4. ಜಗನ್ನಾಥದಾಸರು

ಶೀಲ : ಕನಕದಾಸರ ಜನ್ಮ ಸ್ಥಳ ಯಾವುದು ?

ರಾಮು : ಧಾರವಾಡ ಜಿಲ್ಲೆ ಬಾಡ ಗ್ರಾಮ.

ಶೀಲ : ಕನಕದಾಸರ ಪೂರ್ವಾಶ್ರಮದ ಹೆಸರೇನು ?

ರಾಮು : ಕನಕನಾಯಕ - ತಿಮ್ಮಪ್ಪ.

ಶೀಲ : ಪ್ರಥಮ ಕನಕ - ಪುರಂದರರ ಪ್ರಶಸ್ತಿ ಪಡೆದ ಕಲಾವಿದರು ಯಾರು ?

ರಾಮು : ಮೈಸೂರಿನ ಹಿರಿಯ ಗಾಯಕ ತಿಟ್ಟೆ ಕೃಷ್ಣಯ್ಯಂಗಾರ್

ಶೀಲ : ಮೊಟ್ಟಮೊದಲಿಗೆ ಸಂಗೀತ ಸಮ್ಮೇಳನವನ್ನು ಏರ್ಪಡಿಸಿದವರು ಯಾರು ?

ರಾಮು : ಅಬ್ರಹಾಂ ಪಂಡಿತರಾವ್ ಸಾಹೇಬ್.

ಶೀಲ : ವಾಗ್ಗೇಯಕಾರರ ರಚನೆಗಳನ್ನು ಮೂರು ಪಾಕಕ್ಕೆ ಹೋಲಿಸಿರುತ್ತಾರೆ. ಅವುಗಳ ಹೆಸರೇನು?

ರಾಮು : 1. ದ್ರಾಕ್ಷಾಪಾಕ (ದ್ರಾಕ್ಷಿ) -ತ್ಯಾಗರಾಜರು ಭಾವಕ್ಕೆ
2. ನಾರಿಕೇಳಪಾಕ (ತೆಂಗಿನಕಾಯಿ) -ದೀಕ್ಷಿತರು ರಾಗಕ್ಕೆ
3. ಕದಳೀಪಾಕ (ಬಾಳೆಹಣ್ಣು) -ಶ್ಯಾಮಾಶಾಸ್ತ್ರಿ ತಾಳಕ್ಕೆ
ಹೋಲಿಸಿರುತ್ತಾರೆ.

ಶೀಲ : ಕೃಷ್ಣಾ ನೀ ಬೇಗನೆ ಬಾರೋ ದೇವರ ನಾಮ ಯಾರ ರಚನೆ ?

ರಾಮು : ವ್ಯಾಸರಾಯರು (ವ್ಯಾಸರಾಯಸ್ವಾಮಿ)

ಶೀಲ : ಸಂಗೀತ ಶಾಸ್ತ್ರ ಪ್ರವೀಣರುಗಳಿಗೆ ನೀಡುತ್ತಿರುವ ಬಿರುದುಗಳು ಮತ್ತು ಅವನ್ನು ನೀಡುವ ಸಂಸ್ಥೆಗಳಾವುವು ?

ರಾಮು :
1. ಬೆಂಗಳೂರಿನ ಗಾಯನ ಸಮಾಜ : "ಸಂಗೀತ ರತ್ನ''
2. ಬೆಂಗಳೂರಿನ ಗಾನಕಲಾ ಪರಿಷತ್ : "ಗಾನಕಲಾ ಭೂಷಣ''
3. ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ : "ಕರ್ನಾಟಕ ಕಲಾಶ್ರೀ''
4. ಮೈಸೂರಿನ ಜೆ. ಎಸ್. ಎಸ್. ಸಂಗೀತ ಸಭಾ: "ಸಂಗೀತ ವಿದ್ವಾನಿಧಿ''
5. ಶ್ರೀ ಕೃಷ್ಣ ಗಾನ ಸಭಾ : "ಸಂಗೀತ ಚೂಡಾಮಣಿ''
6. ಮದ್ರಾಸ್ ಮ್ಯೂಸಿಕ್ ಅಕಾಡೆಮಿ : "ನೃತ್ಯ ಚೂಡಾಮಣಿ'' "ಸಂಗೀತ ಚೂಡಾಮಣಿ''

ಶೀಲ : ಹತ್ತಾರು ಪ್ರಸಿದ್ಧ ವಾಗ್ಗೇಯಕಾರರ / ರಚನೆಕಾರರ ಅಂಕಿತನಾಮ / ಮುದ್ರೆ ತಿಳಿಸಿರಿ?

ರಾಮು :
1. ಪುರಂದರದಾಸರು - ಪುರಂದರ ವಿಠಲ
2. ಕನಕದಾಸರು - ಕಾಗಿನೆಲೆಯಾದಿ ಕೇಶವ
3. ತ್ಯಾಗರಾಜರು - ತ್ಯಾಗರಾಜ
4. ವಾದಿರಾಜರು - ಹಯವದನ
5. ವ್ಯಾಸರಾಯರು - ಶ್ರೀಕೃಷ್ಣ, ಸಿರಿಕೃಷ್ಣ
6. ಶ್ರೀಪಾದರಾಯರು - ರಂಗ ವಿಠಲ
7. ರಾಘವೇಂದ್ರಸ್ವಾಮಿಗಳು - ಧೀರವೇಣು ಗೋಪಾಲ
8. ಬಸವಣ್ಣನವರು - ಕೂಡಲ ಸಂಗಮದೇವ
9. ಅಕ್ಕಮಹಾದೇವಿ - ಚನ್ನಮಲ್ಲಿಕಾರ್ಜುನ
10. ವೀಣೆ ಶೇಷಣ್ಣ - ಶೇಷದಾಸ
11. ಸ್ವಾತಿ ತಿರುನಾಳ್ - ಪದ್ಮನಾಭ ಇತ್ಯಾದಿ ನಾಭ
12. ಮುತ್ತುಸ್ವಾಮಿ ದೀಕ್ಷಿತರು - ಗುರುಗುಹ
13. ವಾಸುದೇವಾಚಾರ್ಯ - ವಾಸುದೇವ
14. ಜಯಚಾಮ ರಾಜ ಒಡೆಯರ್ - ಶ್ರೀವಿದ್ಯಾ
15. ರಾಮಸ್ವಾಮಿ ದೀಕ್ಷಿತರು - ವೆಂಕಟ ಕೃಷ್ಣ
16. ಶ್ಯಾಮಾ ಶಾಸ್ತ್ರಿ - ಶ್ಯಾಮಕೃಷ್ಣ

ಶೀಲ : ಹತ್ತಾರು ಪ್ರಸಿದ್ಧ ಸಂಗೀತ ಹಾಗೂ ನೃತ್ಯಕ್ಕೆ ಸಂಬಂಧಪಟ್ಟ ಗ್ರಂಥಗಳ ಮತ್ತು ರಚನಾಕಾರರ ಹೆಸರುಗಳೇನು ?

ರಾಮು :
1. ನಾಟ್ಯಶಾಸ್ತ್ರ - ಭರತ
2. ಸಂಗೀತ ಮಕರಂದ - ನಾರದ
3. ಸಂಗೀತಸಾರ - ವಿದ್ಯಾರಣ್ಯ
4. ಶೃಂಗಾರ ಪ್ರಕಾಶ - ಭೋಜ
5. ನೃತ್ಯ ರತ್ನಾವಲಿ - ಜಯಸಿಂಹ
6. ಸರಸ್ವತೀ ಕಂಠಾಭರಣ - ಭೋಜ
7. ಸಂಗೀತ ರತ್ನಾಕರ - ಸಾರಂಗದೇವ
8. ಚತುರ್ದಂಡಿ ಪ್ರಕಾಶಿಕಾ - ವೆಂಕಟಮುಖಿ
9. ವಿವೇಕ ಚೂಡಾಮಣಿ - ನಿಜಗುಣ ಶಿವಯೋಗಿ
10. ಅಭಿನಯ ಭಾರತೀ - ಅಭಿನವ ಗುಪ್ತ
11. ಶ್ರೀ ತತ್ವನಿಧಿ - ಮುಮ್ಮಡಿ ಕೃಷ್ಣರಾಜ ಒಡೆಯರ್
12. ಭಜಗೋವಿಂದ ಸ್ತೋತ್ರ - ಶಂಕರಾ
13. ರಾಗ ಮಂಜರಿ - ಪುಂಡರೀಕ ವಿಠಲ
14. ಸಂಗೀತ ಪಾರಿಜಾತ - ಅಹೋಬಲ
15. ರಾಜಮಾನಸೋಲ್ಲಾಸ - ಚಾಳುಕ್ಯ ಸೋಮೇಶ್ವರ
16. ಸಂಗೀತ ಸೂರ್ಯೋದಯ - ಲಕ್ಷ್ಮೀನಾರಾಯಣ



# 16. ಸಂಗೀತ ವಾದ್ಯಗಳು - ಸಂಗೀತ ವಾದ್ಯಗಾರರು

ಶೀಲ : ವಾದ್ಯಗಳಲ್ಲಿ ಎಷ್ಟುವಿಧ ? ಅವು ಯಾವುವು ?

ರಾಮು : ನಾಲ್ಕು ವಿಧ 1. ತಂತಿವಾದ್ಯ (ತತ) 2. ಸುಷಿರವಾದ್ಯ
3. ಅವನದ್ಧ ವಾದ್ಯ (ಚರ್ಮ) 4. ಘನವಾದ್ಯ (ಕಂಚಿನ ತಾಳಗಳು, ಮೋರ್ಚಿಂಗ್, ಘಟಂ)

ಶೀಲ : ವಾದ್ಯಗಳಲ್ಲೇ ನುಡಿಸುವ ರಚನೆಗಳನ್ನು ಏನೆಂದು ಕರೆಯುತ್ತಾರೆ ?

ರಾಮು : ವಾದ್ಯ ರೂಪ

ಶೀಲ : "ತತ" ವಾದ್ಯ ಎಂದರೇನು ?

ರಾಮು : ತಂತಿಯ ಮೂಲಕ ನಾದ ಹೊರಹೊಮ್ಮುವ ವಾದ್ಯಕ್ಕೆ "ತತ"ವಾದ್ಯ ಎನ್ನುತ್ತಾರೆ. ಉದಾ. ವೀಣೆ, ಪಿಟೀಲು, ಸಿತಾರ್, ಗಿತಾರ್, ಕಿನ್ನರಿ, ತಂಬೂರಿ, ಸಾರಂಗೀ ಸಂತೂರ್, ಬಿನ್ ಗೋಟು ವಾದ್ಯ, ಮ್ಯಾಂಡೊಲಿನ್.

ಶೀಲ : "ಸುಷಿರ" ವಾದ್ಯ ಎಂದರೇನು ?

ರಾಮು : ಗಾಳಿಯ ಸಹಾಯದಿಂದ ನುಡಿಸುವ ವಾದ್ಯಕ್ಕೆ 'ಸುಷಿರ' ವಾದ್ಯ ಎನ್ನುತ್ತಾರೆ.
ಉದಾ: ಶೆಹನಾಯ್, ಕೊಳಲು ಓಲಗ.

ಶೀಲ : "ಅವನದ್ದ" ವಾದ್ಯ ಎಂದರೇನು ?

ರಾಮು : ಚರ್ಮದ ಹೊದಿಕೆ ಇರುವ ವಾದ್ಯಗಳಿಗೆ 'ಅವನದ್ದ' ವಾದ್ಯ ಎನ್ನುತ್ತಾರೆ.
ಉದಾ : ಮೃದಂಗ, ತಬಲ, ತವಿಲ್, ಡೋಲಕ್, ಖಂಜೀರ.

ಶೀಲ : ಕರ್ನಾಟಕ ಸಂಗೀತದಲ್ಲಿ ಪಿಟೀಲನ್ನು ಪಕ್ಕವಾದ್ಯವನ್ನಾಗಿ ಉಪಯೋಗಿಸುವುದನ್ನು ಬಳಕೆಗೆ ತಂದವರು ಯಾರು ?

ರಾಮು : ಬಾಲುಸ್ವಾಮಿ ದೀಕ್ಷಿತರು

ಶೀಲ : ಗಾಯಕ ಬಾಲಮುರಳಿಕೃಷ್ಣ ಅವರು ಪಿಟೀಲುನಂತಿರುವ ಒಂದು ವಾದ್ಯವನ್ನು ನುಡಿಸುತ್ತಾರೆ, ಅದರ ಹೆಸರೇನು ?

ರಾಮು : ವಯೋಲ

ಶೀಲ : ಪಿಟೀಲು ಮೈಸೂರು ಚೌಡಯ್ಯ ಇವರ ವಾದ್ಯದ ವಿಶೇಷತೆ ಏನು ?

ರಾಮು : ಮೊಟ್ಟಮೊದಲು ಪಿಟೀಲಿಗೆ ಏಳು ತಂತಿ ಅಳವಡಿಸಿ, ಅದರ ನುಡಿಸುವಿಕೆಯೇ ಇವರ ವಾದ್ಯದ ವಿಶೇಷತೆ.

ಶೀಲ : ವೀಣೆ ಶೇಷಣ್ಣನವರಂತೆ ಹಲವಾರು ವಾದ್ಯಗಳನ್ನು ನಿಪುಣತೆಯಿಂದ ನುಡಿಸುತ್ತಿದ್ದ ಪ್ರಸಿದ್ಧ ಕರ್ನಾಟಕ ಗಾಯಕ ಯಾರು ?

ರಾಮು : ಡಾ. ಬಿ. ದೇವೇಂದ್ರಪ್ಪ ಇವರು ನುಡಿಸುತ್ತಿದ್ದ ವಾದ್ಯಗಳು ವೀಣೆ, ಪಿಟೀಲು, ಸಿತಾರ್, ಜಲತರಂಗ್, ಗೋಟುವಾದ್ಯ, ದಿಲ್‌ರುಬಾ.

ಶೀಲ : ತತವಾದ್ಯ ಪಿಟೀಲಿಗೆ ಇನ್ನೊಂದು ಹೆಸರಿದೆ. ಅದರ ಹೆಸರು ಏನು ?

ರಾಮು : ಧನುರ್ವೀಣಾ (ಕಾಮಾನಿನಿಂದ ನುಡಿಸುವುದು)

ಶೀಲ : ಈಗಿನ ಮೃದಂಗಕ್ಕೆ ಹಿಂದೆ ಏನು ಹೆಸರಿತ್ತು ?

ರಾಮು : ಪುಷ್ಕರ

ಶೀಲ : ಡೋಲನ್ನು ಅಥವಾ ತವಿಲ್ ನುಡಿಸುವ ಕೋಲಿಗೆ ಏನೆಂದು ಕರೆಯುತ್ತಾರೆ ?

ರಾಮು : ಕುಣಿ

ಶೀಲ : "ನಿಸ್ಸಾರಿ ವೀಣೆ" ಎಂದರೇನು ?

ರಾಮು : ಮೆಟ್ಟಿಲುಗಳಿಲ್ಲದ ವೀಣೆ. ಉದಾ : ಗೋಟುವಾದ್ಯ ಅಥವಾ ಚಿತ್ರ ವೀಣಾ

ಶೀಲ : ಜ್ಯೂಸ್ ಹಾರ್ಪ್ ಅಥವಾ ಬೌಸ್‌ಹಾರ್ಪ್ ಎಂದರೆ ಏನು ?

ರಾಮು : ಇದೊಂದು ಮೋರ್ಸಿಂಗ್ ಮೋಚಿಂಗ್ ಅಥವಾ ಮೃಚ್ಛಂಗಿ ಎಂದು ಕರೆಯಲ್ಪಡುವ ತಾಳವಾದ್ಯ. ಲೋಹದಿಂದ ಮಾಡಿದ ನಾಲಿಗೆಯ ಮೂಲಕ ಬೆರಳಲ್ಲಿ ಹೊಡೆದು ನಾದ ಬರಿಸಿ ತಾಳದ ಜತಿಗಳನ್ನು ನುಡಿಸುತ್ತಾರೆ.

ಶೀಲ : ಮೃದಂಗದ ಬಲಮುಖದ ಮಧ್ಯೆ ಅಂಟಿಸಿರುವ ಕಪ್ಪು ಬಣ್ಣದ ಗುಂಡಾಗಿರುವ ಭಾಗಕ್ಕೆ ಏನು ಹೆಸರು ?

ರಾಮು : ಕರಣೆ

ಶೀಲ : ಮೃದಂಗದ ಬಲ ಮತ್ತು ಎಡ ಮುಖಗಳಲ್ಲಿ ಯಾವ ಶ್ರುತಿಗಳಿರುತ್ತವೆ ?

ರಾಮು : ಬೇಕಾದ ಶ್ರುತಿಯ ಆಧಾರ ಷಡ್ಜಕ್ಕೆ ಬಲಮುಖವನ್ನು ಶ್ರುತಿ ಮಾಡಿ, ಆ ಆಧಾರ ಷಡ್ಜಕ್ಕೆ ಮಂದ್ರ ಪಂಚಮಕ್ಕೆ ಎಡಮುಖವನ್ನು ಶ್ರುತಿ ಮಾಡುತ್ತಾರೆ.

ಶೀಲ : ಪ್ರಪಂಚದಲ್ಲಿ ಅವರ ವಾದ್ಯದ ಆಕಾರದಲ್ಲಿ ನಿರ್ಮಿಸಲಾಗಿರುವ ಒಬ್ಬ ಸಂಗೀತ ಕಲಾವಿದರ ಸ್ಮಾರಕ ಯಾವುದು.

ರಾಮು : "ಚೌಡಯ್ಯ ಸ್ಮಾರಕ ಭವನ". ಅಪೂರ್ವ ಕರ್ನಾಟಕ ಸಂಗೀತ ಕಲಾವಿದ. ಮೈಸೂರು ಪಿಟೀಲು ಚೌಡಯ್ಯ ಹೆಸರಿನಲ್ಲಿ ಅವರ ವಾದ್ಯ ಪಿಟೀಲಿನ ಆಕಾರದಲ್ಲಿ ನಿರ್ಮಿಸಲಾಗಿದೆ. ಕರ್ನಾಟಕ ರಾಜಧಾನಿ ಬೆಂಗಳೂರಿನಲ್ಲಿದೆ.

ಶೀಲ : "ಕರ್ನಾಟಕ ಸಂಗೀತ ಗಾಯನ"ದ ಪ್ರಸಿದ್ಧ ಕಲಾವಿದರಾರು ?

ರಾಮು :
1. ಎಂ. ಎಸ್. ಸುಬ್ಬಲಕ್ಷ್ಮಿ
2. ಎಂ. ಎಲ್. ವಸಂತಕುಮಾರಿ
3. ಚೆಂಬೈ ವೈದ್ಯನಾಥ ಭಾಗವತರು
4. ಶೆಮ್ಮಂಗುಡಿ ಶ್ರೀನಿವಾಸ ಅಯ್ಯರ್
5. ಡಿ. ಕೆ. ಪಟ್ಟಮ್ಮಾಳ್
6. ಅರಿಯಾಕುಡಿ ರಾಮಾನುಜ ಅಯ್ಯಂಗಾರ್
7. ಆರ್.ಕೆ. ಶ್ರೀಕಂಠನ್ ಮುಂತಾದವರು

ಶೀಲ : "ಕರ್ನಾಟಕ ಸಂಗೀತದ ಕೊಳಲು" ನುಡಿಸುವ ಪ್ರಸಿದ್ಧ ಕಲಾವಿದರಾರು ?

ರಾಮು :
1. ಟಿ. ಆರ್. ಮಹಾಲಿಂಗಂ
2. ಕೆ. ಎಸ್. ಗೋಪಾಲಕೃಷ್ಣ
3. ಎನ್. ರಮಣಿ
4. ಪಲ್ಲಡಂ ಸಂಜೀವರಾಯರು

ಶೀಲ : "ಕರ್ನಾಟಕ ಪಿಟೀಲು" ನುಡಿಸುವುದರಲ್ಲಿ ಪ್ರಸಿದ್ಧ ಕಲಾವಿದರಾರು ?

ರಾಮು :
1. ಮೈಸೂರು ಟಿ. ಚೌಡಯ್ಯ
2. ಲಾಲ್ಗುಡಿ ಜಯರಾಮನ್
3. ಎಂ. ಚಂದ್ರಶೇಖರ್
4. ಟಿ. ಎನ್. ಕೃಷ್ಣನ್
5. ಪರೂರು ಎಂ. ಎಸ್. ಗೋಪಾಲಕೃಷ್ಣನ್

ಶೀಲ : "ಕರ್ನಾಟಕ ಪಿಟೀಲು" (ದ್ವಂದ್ವ) ಪಕ್ಕವಾದ್ಯ ನುಡಿಸುವ ಪ್ರಸಿದ್ಧ ಕಲಾವಿದರಾರು ?

ರಾಮು :
1. ಮೈಸೂರು ಎಂ. ನಾಗರಾಜ
2. ಮೈಸೂರು ಡಾ|| ಎಂ. ಮಂಜುನಾಥ್

ಶೀಲ : "ವೀಣೆ" ನುಡಿಸುವ ಪ್ರಸಿದ್ಧ ಕಲಾವಿದರಾರು ?

ರಾಮು : 1. ವೀಣಾ ದೊರೆಸ್ವಾಮಿ ಅಯ್ಯಂಗಾರ್
2. ವೀಣೆ ಶೇಷಣ್ಣ
3. ಚಿಟ್ಟಿ ಬಾಬು
4. ಏಮನಿ ಶಂಕರಶಾಸ್ತ್ರಿ
5. ಕಾರೈಕುಡಿ ಸಾಂಬಶಿವ ಅಯ್ಯರ್
6. ಎಸ್. ಬಾಲಚಂದರ್

ಶೀಲ : "ಮುಖ ವೀಣೆ'' ನುಡಿಸುವ ಪ್ರಸಿದ್ಧ ಕಲಾವಿದರಾರು ?

ರಾಮು : ಎ. ವಿ. ನಾರಾಯಣಪ್ಪ

ಶೀಲ : "ಗೋಟು ವಾದ್ಯ'' (ಚಿತ್ರವೀಣೆ) ನುಡಿಸುವ ಪ್ರಸಿದ್ಧ ಕಲಾವಿದರಾರು ?

ರಾಮು : ರವಿ ಕಿರಣ್

ಶೀಲ : "ಮೃದಂಗ'' ನುಡಿಸುವ ಪ್ರಸಿದ್ಧ ಕಲಾವಿದರಾರು ?

ರಾಮು : 1.ಪಾಲ್ಘಾಟ್ ಮಣಿ ಅಯ್ಯರ್ 2. ಪಳನಿ ಸುಬ್ರಹ್ಮಣ್ಯ ಪಿಳ್ಳೈ 3. ಉಮಯಾಳ್ಪುರಂ ಶಿವರಾಮನ್

ಶೀಲ : "ಹಾರ್ಮೋನಿಯಂ'' ನುಡಿಸುವುದರಲ್ಲಿ ಪ್ರಸಿದ್ಧರಾರು ?

ರಾಮು : ಅರುಣಾಚಲಪ್ಪ

ಶೀಲ : "ತಬಲ'' ನುಡಿಸುವ ಪ್ರಸಿದ್ಧರಾರು ?

ರಾಮು : ಜಾಕಿರ್ ಹುಸೇನ್

ಶೀಲ : "ಓಲಗ'' (ನಾದಸ್ವರ) ನುಡಿಸುವ ಪ್ರಸಿದ್ಧರಾರು ?

ರಾಮು : ಷೇಕ್ ಚಿನ್ನಮೌಲಾನ ಸಾಹೇಬ್

ಶೀಲ : "ಕ್ಲಾರಿಯೊನೆಟ್'' ನುಡಿಸುವ ಪ್ರಸಿದ್ಧರಾರು ?

ರಾಮು : ಬಿ. ನಾಗೇಂದ್ರಪ್ಪ

ಶೀಲ : "ಮ್ಯಾಂಡೊಲಿನ್'' ನುಡಿಸುವ ಪ್ರಸಿದ್ಧರಾರು ?

ರಾಮು : ಯು. ಶ್ರೀನಿವಾಸ್

ಶೀಲ : "ಸ್ಯಾಕ್ಸೋಫೋನ್'' ನುಡಿಸುವ ಪ್ರಸಿದ್ಧರಾರು ?

ರಾಮು : ಕದ್ರಿ ಗೋಪಾಲ ನಾಥ್

ಶೀಲ : "ಖಂಜೀರ'' ನುಡಿಸುವ ಪ್ರಸಿದ್ಧರಾರು ?

ರಾಮು : 1. ಸೋಸಲೆ ಶೇಷಗಿರಿದಾಸ್
2. ಎಚ್. ಪಿ. ರಾಮಾಚಾರ್

ಶೀಲ : "ಘಟಂ'' ನುಡಿಸುವ ಪ್ರಸಿದ್ಧರಾರು ?

ರಾಮು : ವಿನಾಯಕರಾಂ



# 17. ನೃತ್ಯ

ರಾಮು : 'ನೃತ್ತ' ಎಂದರೇನು ?

ಶೀಲ : ತಾಳ ಲಯ ಪ್ರಧಾನವಾದ ಒಬ್ಬರಿಂದಾಗಲೀ ಅಥವಾ ಹಲವರಿಂದಾಗಲೀ ನಿರ್ವಹಿಸಲ್ಪಡುವ ರಸಭಾವ ವಿಹೀನವಾದ ಕುಣಿತ. ಇಲ್ಲಿ ಯಾವ ರೀತಿಯ ಭಾವ ಪ್ರದರ್ಶನಕ್ಕೂ ರಸ ಪ್ರದರ್ಶನಕ್ಕೂ ಅವಕಾಶವಿರುವುದಿಲ್ಲ.

ರಾಮು : 'ನೃತ್ಯ' ಎಂದರೇನು ?

ಶೀಲ : ನೃತ್ಯ ಎಂದರೆ ಕುಣಿತ.

ತಾಳ ಲಯ ಪ್ರಧಾನವಾಗಿ ರಸ ಭಾವ ವ್ಯಂಜಕವಾಗಿ ಸಂಗೀತ, ಅಭಿನಯಗಳ ಸಮನ್ವಯದಿಂದ ಕೂಡಿದ ಕುಣಿತವೇ ನೃತ್ಯ.

ರಾಮು : 'ನಾಟ್ಯ' ಎಂದರೇನು ?

ಶೀಲ : ನಾಟ್ಯವು ನೃತ್ಯದ ವಿಸ್ತಾರ.

ಅಭಿನಯದ ನಾಲ್ಕು ಅಂಗಗಳಾದ ದೃಶ್ಯ ರೂಪದಲ್ಲಿ, ವಸ್ತು ನಿರೂಪಕವಾಗಿ, ಭಾವಪ್ರದರ್ಶನದಿಂದ ರಸಾನುಭವವನ್ನು ಉಂಟುಮಾಡುವ ಕುಣಿತವೇ ನಾಟ್ಯ. ಅಂದರೆ ಅಂಗಾಂಗಗಳ ವಿನ್ಯಾಸ, ಮಾತು - ಗೀತೆ, ವೇಷ-ಭೂಷಣ, ಮನೋಭಾವಗಳು ಹಾಗೂ ಬಹುಪಾತ್ರಗಳ ಅವಸ್ಥೆಯ ಅನುಕರಣದಿಂದ ಕೂಡಿದ ನೃತ್ಯವೇ ನಾಟ್ಯ.

ಶೀಲ : ಅಭಿನಯವೆಂದರೇನು ?

ರಾಮು : ಕಲಾಕಾರನು ತನ್ನ ಅಂಗ, ಉಪಾಂಗ, ಪ್ರತ್ಯಂಗಗಳ ಚಲನೆಗಳಿಂದ ಪ್ರೇಕ್ಷಕರಲ್ಲಿ ಭಾವನೆಗಳನ್ನು ಉಂಟುಮಾಡುವ ಅಂಶವೇ ಅಭಿನಯ.

ಶೀಲ : ಅಭಿನಯಗಳಲ್ಲಿ ಎಷ್ಟು ವಿಧಗಳಿವೆ ?

ರಾಮು : ಅಭಿನಯಗಳಲ್ಲಿ ನಾಲ್ಕು ವಿಧ ಅಂದರೆ ಚತುರ್ವಿಧ ಅಭಿನಯಗಳಿವೆ.

ಶೀಲ : ಚತುರ್ವಿಧ ಅಭಿನಯಗಳಾವುವು ?

ರಾಮು :
1. ಅಂಗಿಕಾಭಿನಯ - ಅಂಗಾಂಗಗಳಿಂದ ಅಭಿನಯ
2. ಆಹಾರ್ಯಾಭಿನಯ - ವೇಷ ಭೂಷಣಗಳಿಂದ ಅಭಿನಯ
3. ವಾಚಿಕಾಭಿನಯ - ಶಬ್ದಗಳಿಂದ ಅಭಿನಯ
4. ಸಾತ್ವಿಕಾಭಿನಯ - ಭಾವನೆಗಳಿಂದ ಅಭಿನಯ

ಶೀಲ : ಅಂಗಿಕಾಭಿನಯ ಅಥವಾ ಅಂಗಾಭಿನಯ ಎಂದರೇನು ?

ರಾಮು : ಅಂಗಿಕಾಭಿನಯ ಚತುರ್ವಿಧ ಅಭಿನಯಗಳಲ್ಲಿ ಮೊದಲನೆಯದು, ಇದು ಅಂಗಾಂಗಗಳಿಂದ ಮಾಡುವ ಅಭಿನಯ.

ಅಂಗಿಕಾಭಿನಯವನ್ನು 3 ವಿಧಗಳಾಗಿ ವಿಂಗಡಿಸಲಾಗಿದೆ.

1. ಶಾರೀರ ಅಂದರೆ ಅವಯವಗಳಿಂದ.
2. ಮುಖಜ ಅಂದರೆ ಮುಖದ ಎಲ್ಲಾ ಭಾಗಗಳಿಂದ
3. ಚೇಷ್ಟಾಕೃತ ಅಂದರೆ ದೇಹದ ಇತರ ಎಲ್ಲಾ ಭಾಗಗಳಿಂದ.

ಶೀಲ : ಆಹಾರ್ಯಾಭಿನಯ ಎಂದರೇನು ?

ರಾಮು : ವೇಷ ಭೂಷಣ, ಬಣ್ಣ ಲೇಪನ ಮತ್ತು ಆಭರಣಗಳಿಂದ ಸೂಚಿಸುವ ಅಭಿನಯ.

ಶೀಲ : ವಾಚಿಕಾಭಿನಯ ಎಂದರೇನು ?

ರಾಮು : ಮಾತುಗಳಿಂದ ಮಾಡಬಹುದಾದ ಅಭಿನಯ ಇದರಲ್ಲಿ ಹಸ್ತಗಳನ್ನು ಉಪಯೋಗಿಸಬಹುದು.

ಶೀಲ : ಸಾತ್ವಿಕಾಭಿನಯ ಎಂದರೇನು ?

ರಾಮು : ಸಾತ್ವಿಕ ಭಾವದಿಂದ ಮಾಡುವ ಅಭಿನಯಕ್ಕೆ ಸಾತ್ವಿಕಾಭಿನಯ ಎಂದು ಹೆಸರು.

ಶೀಲ : 'ಭಾವ' ಎಂದರೇನು ?

ರಾಮು : ಭಾವ ಎಂದರೆ ಮಾನಸಿಕ ಸ್ಥಿತಿ. ಮನೋಭಾವನೆ ರಸವನ್ನುಂಟು ಮಾಡುತ್ತದೆ.

ಶೀಲ : ಭಾವವನ್ನು ಯಾವ ಯಾವ ರೀತಿಯಿಂದ ವ್ಯಕ್ತಪಡಿಸಬಹುದು ?

ರಾಮು : ಭಾವವನ್ನು ಶಬ್ದಗಳಿಂದ, ವಾಕ್ಯಗಳಿಂದ, ಕೈ ಚಲನೆಯಿಂದ, ಅಭಿನಯದಿಂದ, ಮಾನಸಿಕ ಹಾಗೂ ದೈಹಿಕ ವೃತ್ತಿಗಳಿಂದ ತೋರಿಸಬಹುದು.

ಶೀಲ : 'ಸಾತ್ವಿಕಾ ಭಾವ' ಎಂದರೇನು ?

ರಾಮು : ಸತ್ವ ಎಂಬುದು ಮನಸ್ಸಿನಲ್ಲಿ ಹುಟ್ಟುವಂತಹುದು. ಸಮಾಧಾನವಿದ್ದಲ್ಲಿ ಅದು ಮನಸ್ಸಿನಲ್ಲಿ ಮಾತ್ರ ಹುಟ್ಟುವುದು. ನಾಟ್ಯಕ್ಕೆ ಸತ್ವವು ಬೇಕೇ ಬೇಕು.

ಶೀಲ : ಮನೋಭಾವ ಎಂದರೇನು ?

ರಾಮು : ಮನಸ್ಸಿನ ಉದ್ವೇಗವನ್ನು ಮನೋಭಾವವೆನ್ನುತ್ತೇವೆ. ಇವು 8 ವಿಧಗಳು.

1. **ಅಸ್ರು ಅಥವಾ ಅಶ್ರು :** ಸಾತ್ವಿಕ ಭಾವ, ಶೋಕ, ಅನಿಮಿಷ ಅಥವಾ ಎವೆ ಬಡಿಯದೆ ದಿಟ್ಟಿಸಿ ನೋಡುವುದು, ಶೀತ, ರೋಗ, ಆನಂದ, ಅಸಹನೆ, ಹೊಗೆ, ಅಂಜನ, ಆಕಳಿಕೆ ಮತ್ತು ಭಯದಿಂದ ಬರುವ ಕಣ್ಣೀರು.

2. **ಕಂಪ ಅಥವಾ ವೇಪಥು :** ಸಾತ್ವಿಕ ಭಾವ ಚಳಿ, ಜ್ವರ, ಹೆದರಿಕೆ, ಸಂತೋಷ, ಕೋಪ, ಮುಪ್ಪು, ಪ್ರಿಯತಮನ ಸ್ಪರ್ಶದಿಂದಾಗುವ ಕಂಪನ.

3. **ಪ್ರಲಯ ಅಥವಾ ಪ್ರಳಯ :** ಸಾತ್ವಿಕ ಭಾವ ಮೂರ್ಛೆ ಹೋಗುವುದು. ಹೆಚ್ಚು ಕೆಲಸ, ಧಕ್ಕೆ, ಮದ ಏರುವುದು, ನಿದ್ರೆ ಮತ್ತು ಭಾದೆಗಳಿಂದ ಉಂಟಾಗುವುದು.

4. **ರೋಮಾಂಚ :** ಸಾತ್ವಿಕ ಭಾವ ಪ್ರಿಯತಮ ಅಥವಾ ಪ್ರಿಯತಮೆಯ ಸ್ಪರ್ಶ, ಛಳಿ, ಸಂತೋಷ, ಜ್ವರ, ಕೋಪ, ಅನಾರೋಗ್ಯ ಇತ್ಯಾದಿಗಳಿಂದ ಉಂಟಾಗುವುದು.

5. **ವೈವರ್ಣ್ಯ :**ಸಾತ್ವಿಕ ಭಾವ ಮುಖದ ಬಣ್ಣ ಬದಲಾಯಿಸುವುದು. ಶೀತ, ತಾಪ, ಕ್ರೋಧ, ರೋಗ, ದಣಿವು, ಶ್ರಮ, ಭಯ ಇತ್ಯಾದಿಗಳಿಂದ ಉಂಟಾಗುವುದು.

6. **ಸ್ತಂಭ :** ಸಾತ್ವಿಕ ಭಾವ, ಸ್ಥಂಬೀ ಭೂತವಾಗಿ ಕಲ್ಲುಗೊಂಬೆಯಂತೆ ನಿಲ್ಲುವುದು. ಸಂತೋಷ, ಹೆದರಿಕೆ, ರೋಗ, ಆಶ್ಚರ್ಯ, ಶೋಕ, ಮದ, ಕೋಪ ವಿಭಾವಗಳು, ನಿಶ್ಚೇಷ್ಟತೆ, ನಗದೇ ಇರುವುದು, ದೇಹವನ್ನು ಗಟ್ಟಿಯಾಗಿ ಹಿಡಿಯುವುದು ಅನುಭಾವಗಳು.

7. **ಸ್ವರ ಭೇದ :** ಸಾತ್ವಿಕ ಭಾವ - ಹೆದರಿಕೆ, ಸಂತೋಷ, ಕೋಪ, ಜ್ವರ, ಮದ ಇತ್ಯಾದಿಗಳಿಂದ ಶಾರೀರದ ಬದಲಾವಣೆಯಾಗುವುದು ಸಾತ್ವಿಕಾಭಿನಯದಲ್ಲಿ ಕಂಡು ಬರುತ್ತದೆ.

8. **ಸ್ವೇದ :** ಸಾತ್ವಿಕ ಭಾವ, ಬೆವರುವಿಕೆ , ಕೋಪ, ಹೆದರಿಕೆ, ಸಂತೋಷ, ದುಃಖ, ಕಠಿಣ ಕಾರ್ಯ, ಜ್ವರ, ಉಷ್ಣತೆ, ಆಯಾಸ, ಕಸರತ್ತು, ಅಂಗಮರ್ದನದಿಂದ ಉಂಟಾಗುತ್ತದೆ.

ಶೀಲ : 'ವಿಭಾವ' ಎಂದರೇನು ?

ರಾಮು : ಭಾವವನ್ನು ಸೂಚಿಸುವ ಕಾರಣಕ್ಕೆ ವಿಭಾವವೆಂದು ಹೆಸರು. ವಾಚಿಕ, ಅಂಗಿಕ ಮತ್ತು ಸಾತ್ವಿಕ ಅಭಿನಯಗಳು ಇದರಿಂದಲೇ ಹೊರಡುತ್ತವೆ.

ಶೀಲ : ವಿಭಾವದಲ್ಲಿ ಎಷ್ಟು ವಿಧ ?

ರಾಮು : ಆಲಂಬನ ಮತ್ತು ಉದ್ದೀಪನ ಎಂದು ಎರಡು ವಿಧ.

ಆಲಂಬನದ ಮುಖ್ಯ ಕಾರಣ ನಾಯಕ ನಾಯಕಿಯರ ಪ್ರೀತಿ, ಸಂಬಂಧ ಇತ್ಯಾದಿ ವಿಚಾರಗಳು.

ಉದ್ದೀಪನ ಎರಡನೇ ಕಾರಣ. ಇದು ಸೃಷ್ಟಿ, ಸೌಂದರ್ಯ, ಮಿತ್ರರ ವಿತ್ತೇಜನ, ಘಟನೆಗಳು ಇತ್ಯಾದಿ.

ಶೀಲ : ಅನುಭಾವ ಎಂದರೇನು ?

ರಾಮು : ವಾಚಿಕ - ಅಂಗಿಕ - ಸಾತ್ವಿಕ ಭಾವಗಳಿಂದ ಪ್ರೇಕ್ಷಕರಲ್ಲಿ ಉಂಟಾಗುವ ಪರಿಣಾಮವೇ ಅನುಭಾವ.

ಶೀಲ : ವಿನಿಯೋಗಗಳು ಎಂದರೇನು ?

ರಾಮು : ಅಂಗ, ಪ್ರತ್ಯಂಗ, ಉಪಾಂಗಗಳನ್ನು ಉಪಯೋಗಿಸುವ ರೀತಿಗಳಿಗೆ ವಿನಿಯೋಗಗಳೆಂದು ಹೆಸರು.

ಶೀಲ : ಷಡ್ ಅಂಗಗಳಾವುವು ?

ರಾಮು : 1. ತಲೆ 2. ಕೈ 3. ಸೊಂಟ

4. ಎದೆ 5. ಪಕ್ಕೆ 6. ಕಾಲು

ಈ ಶಾರೀರ ಪ್ರಕಾರದ ಆರು ಅಂಗಗಳೇ ಷಡ್ ಅಂಗಗಳು

ಶೀಲ : ಉಪಾಂಗಗಳಾವುವು ?

ರಾಮು : ಮುಖಜ ಅಂದರೆ ಮುಖದ ಕಣ್ಣು, ಹುಬ್ಬು, ಮೂಗು, ತುಟಿ, ಗಲ್ಲ ಮತ್ತು ಗಡ್ಡ ಈ ಆರು ಉಪಾಂಗಗಳು. ಜೊತೆಗೆ ಕಣ್ಣು ಗುಡ್ಡೆ, ದವಡೆ, ಹಲ್ಲುಗಳು, ನಾಲಿಗೆ, ಮುಖ ಮತ್ತು ಭುಜ - ಇವು ಇನ್ನೂ ಆರು ಉಪಾಂಗಗಳು.

ಶೀಲ : ಪ್ರತ್ಯಂಗಗಳಾವುವು ?

ರಾಮು : ಹೆಗಲ ಎಲುಬುಗಳು, ಬಾಹುಗಳು, ಬೆನ್ನು, ಹೊಟ್ಟೆ, ತೊಡೆಗಳು ಮತ್ತು ಮೊಣಕಾಲುಗಳು.

ಶೀಲ : ಮುದ್ರೆ ಅಥವಾ ಶಾಖಾಗಳು ಎಂದರೇನು ?

ರಾಮು : ಕೈ ಕಾಲು ಚಲನೆಗಳಿಂದ, ಹಸ್ತ ಮುದ್ರೆಗಳಿಂದ ಅಂದರೆ ಶಾಖಾಗಳಿಂದ, ಕರಣಗಳ ಆಧಾರದಿಂದ ಮತ್ತು ಅಂಗಹಾರಗಳಿಂದ ಮಾಡುವ ಅಭಿನಯ.

ಶಾಖಾ ಅಥವಾ ಹಸ್ತ ಮುದ್ರೆಗಳಿಂದ ಮಾಡುವ ಅಭಿನಯಕ್ಕೆ ಅಂಕುರವೆಂದು ಹೆಸರು.

ರಾಮು : ನೃತ್ಯ ಕಲೆಯ ವಿಶಿಷ್ಟ್ಯತೆ ಏನು ?

ಶೀಲ : ನೃತ್ಯ ಕಲೆಯು ರಸಪ್ರಧಾನವಾಗಿ, ಆನಂದದಾಯಕವಾಗಿ ಜೀವನದ ಹಲವು ಮುಖಗಳನ್ನು ಸುಂದರವಾಗಿ ನಿರೂಪಿಸುವ ಮೂಲಕ ಭಾವದ ಪ್ರಚೋದನೆಯನ್ನು ಮಾಡುವ ಪರಿಪೂರ್ಣವಾದ ಕಲೆ.

ರಾಮು : ಭಾರತೀಯ ನೃತ್ಯದ ವೈಶಿಷ್ಟತೆ ಏನು ?

ಶೀಲ : ಭಾರತೀಯ ನೃತ್ಯ ಧಾರ್ಮಿಕ ಹಾಗೂ ಸಾಮಾಜಿಕ ಕ್ಷೇತ್ರಗಳೆರಡರಲ್ಲಿಯೂ ಹಿರಿಯ ಸ್ಥಾನ ಹೊಂದಿ ಅವಿನಾಶಿಯಾದ ಪರಿಪೂರ್ಣ ಕಲೆಯಾಗಿ ವಿಜೃಂಭಿಸುತ್ತಿದೆ. ಭಾರತೀಯ ನೃತ್ಯದಲ್ಲಿ ಶಿಲ್ಪಕಲೆಯ ರೂಪಲಾವಣ್ಯ, ಚಿತ್ರಕಲೆಯ ರೇಖಾವಿನ್ಯಾಸ ಮತ್ತು ವರ್ಣ ವೈಭವ, ಕವಿಯ ಭಾವನಾವಿಲಾಸ, ನಟನ ಜೀವನಾನುಕರಣ, ಸಂಗೀತದ ರಾಗ-ಲಯಗಳೆಲ್ಲವೂ ಸಮ ಸಮವಾಗಿ ಬೆರೆತು ರಸಪಾಕವಾಗಿ ಕಲೆಗಳ ಕಾಮಧೇನುವಾಗಿದೆ.

ರಾಮು : ನಾಟ್ಯ ವೇದದ 'ಉಗಮ'ದ ಗುಟ್ಟೇನು ?

ಶೀಲ : ಋಗ್ವೇದದಿಂದ ಪಾಠ್ಯವನ್ನೂ, ಯಜುರ್ವೇದದಿಂದ ಅಭಿನಯವನ್ನೂ
ಸಾಮವೇದದಿಂದ ಸಂಗೀತವನ್ನೂ ಅಥರ್ವಣವೇದದಿಂದ ರಸವನ್ನೂ

ಬ್ರಹ್ಮನು ಪಡೆದು ಐದನೆಯದಾದ ನಾಟ್ಯವೇದವನ್ನು ಸೃಷ್ಟಿಸಿ, ಭರತನೆಂಬ ಋಷಿಗೆ ಉಪದೇಶಿಸಿ ಅನುಗ್ರಹಿಸಿದನೆಂದು ಪ್ರತೀತಿ. ಅನಂತರ ಶಿವನೇ ಪ್ರಧಾನ ಪಾತ್ರನಾಗಿ ಉಳ್ಳ 'ತ್ರಿಪುರ ಸಂಹಾರ' ನಾಟ್ಯವನ್ನು ಭರತ ಕೈಲಾಸದಲ್ಲಿ, ಶಿವ - ಪಾರ್ವತಿಯರ ಸಮ್ಮುಖದಲ್ಲಿ ಪ್ರದರ್ಶಿಸಿದಾಗ ಸುಪ್ರೀತನಾದ ಶಿವ ನಾಟ್ಯದ ಜೊತೆಗೆ ನೃತ್ಯವನ್ನೂ ಸೇರಿಸಿದರೆ ಪ್ರದರ್ಶನ ಹೆಚ್ಚು ಪ್ರಭಾವಶಾಲಿಯಾಗಿರುವುದೆಂದು ಸೂಚಿಸಿ ತನ್ನ ಶಿಷ್ಯನಾದ ತಂಡು ಅಥವಾ ನಂದೀಕೇಶ್ವರನಿಗೂ, ಪತ್ನಿಯಾದ ಪಾರ್ವತಿಗೂ ಭರತನಿಗೆ ನೃತ್ಯ ಕಲಿಸಲೂ ಆದೇಶವಿತ್ತನಂತೆ.

ಭರತ ನಂದಿಕೇಶ್ವರನಿಂದ ಕಲಿತ ನೃತ್ಯ 'ತಾಂಡವ'ವೆಂದೂ, ಪಾರ್ವತಿಯಿಂದ ಕಲಿತ ನೃತ್ಯ 'ಲಾಸ್ಯ'ವೆಂದೂ ಹೇಳಲಾಗಿದೆ.
ಆದುದರಿಂದ ಭಾರತೀಯ ನೃತ್ಯ ನಾಟ್ಯಗಳು ದೇವತಾ ಪ್ರಧಾನವಾಗಿ ದೊರೆತ ಕಲಾ ಪ್ರಕರಣಗಳು.

ರಾಮು : ಕಾಲ ಚಕ್ರದಲ್ಲಿ ನೃತ್ಯ ಹೇಗೆ ಅಪಕೀರ್ತಿ - ಕೀರ್ತಿಗಳಿಗೆ ಒಳಗಾಗಿ ಪುನರುಜ್ಜೀವನ ಪಡೆಯಿತು ?

ಶೀಲ : ಸಾವಿರಾರು ವರ್ಷಗಳಿಂದ ಶಾಸ್ತ್ರದ ಚೌಕಟ್ಟಿನಲ್ಲಿ ರಾಜನ ಆಸ್ಥಾನ, ದೇವಾಲಯಗಳಿಗೆ ಮೀಸಲಾಗಿದ್ದ ಭಾರತೀಯ ನೃತ್ಯ, ಪೋಷಕರ ವಿಷಯಾಸಕ್ತ ಜೀವನ, ಜನ ಜೀವನದ ಸಾತ್ವಿಕ ಕಲಾಕ್ಷೇಪಕ್ಕೆ ಧಾರ್ಮಿಕ ಜೀವನದ ಪೋಷಣೆಗೆ ಸಾಧಕವಾಗಿ, ಸಮಾಜದ ಸಾಂಸ್ಕೃತಿಕ ಚಟುವಟಿಕೆಯಾಗಿ ನೃತ್ಯಕಲೆ ನವನವೋನ್ಮೇಷಶಾಲಿನಿಯಾಗಿ ಬೆಳೆದು ಬರುತ್ತಿತ್ತು.

ಕಾಲಕ್ರಮದಲ್ಲಿ ದೇಶವನ್ನು ಆಕ್ರಮಿಸಿ ಆಳಿದ ಭಿನ್ನಮತೀಯರ ಲೌಕಿಕ ಜೀವನಾಸಕ್ತಿಗಳ ಫಲವಾಗಿ, ತನ್ನ ದೈವೀಶಕ್ತಿಯನ್ನು ಹಿಂದೆ ನೂಕಿ ವಿಷಯ ಲಂಪಟದ ಮನರಂಜನೆ ಹಾಗೂ ನೀತಿ ದೂರವಾದ ನಾಯಕಸಾನಿ - ನರ್ತಕಿ ಮತ್ತು ವೇಶ್ಯೆತನದ ಆಕರ್ಷಣಗಳ ಸಾಧನವೆಂಬ ಅಪಕೀರ್ತಿಗೆ ಪಾತ್ರವಾಗಿ ಕಾಲಚಕ್ರದ ಆಘಾತಗಳಿಗೆ, ಅಪಖ್ಯಾತಿಗೊಳಗಾಯಿತು.

ಕಾಲಕ್ರಮೇಣ ಈ ಅಪಖ್ಯಾತಿಯ ನಿವಾರಣೆಯಾಗಿ ಕಳೆದ 2-3 ದಶಕಗಳಿಂದ ನೃತ್ಯಕಲೆಯ ಸಾರ್ವತ್ರಿಕ ಪುನರುಜ್ಜೀವನ ಪಡೆದು ಅಭಿವೃದ್ಧಿಯ ಹಾದಿಯಲ್ಲಿ ಸಾಗತೊಡಗಿತು. ಕೇರಳ ರಾಜರುಗಳ ಆಸಕ್ತಿಯಿಂದ 'ಕಥಕ್ಕಳಿ' ರೂಪುಗೊಂಡಿತ್ತು. ಮಣಿಪುರಿಯ ಅರಸನಾದ ಭಾಗ್ಯಚಂದ್ರನ ಪ್ರೋತ್ಸಾಹದಿಂದ ಅಲ್ಲಿಯ 'ರಾಸನೃತ್ಯ', ತಂಜಾವೂರಿನ ದೊರೆಗಳ ಉತ್ತೇಜನದಿಂದ ತಮಿಳುನಾಡಿನ 'ಭರತನಾಟ್ಯ' ಉತ್ತರ ದೇಶದ ನವಾಬರು, ರಾಜರುಗಳ ಪ್ರೋತ್ಸಾಹದಿಂದ 'ಕಥಕ್' ನೃತ್ಯ ಸಂಪ್ರದಾಯಗಳು ಪರಿಷ್ಕಾರಹೊಂದಿ ಅಭ್ಯುದಯ ಹೊಂದಿದವು.

ರಾಮು : ಶಾಸ್ತ್ರೀಯ ನೃತ್ಯಗಳಾವುವು ?

ಶೀಲ :

| | | | |
|---|---|---|---|
| 1. | ಭರತನಾಟ್ಯ | - | ಕರ್ನಾಟಕ, ತಮಿಳುನಾಡು |
| 2. | ಕಥಕ್ಕಳಿ | - | ಕೇರಳ |
| 3. | ಮಣಿಪುರಿ | - | ಮಣಿಪುರ |
| 4. | ಕಥಕ್ | - | ರಾಜಾಸ್ಥಾನ, ಉತ್ತರ ಪ್ರದೇಶ |
| 5. | ಕೂಚಿಪುಡಿ | - | ಆಂಧ್ರ, ಗಂಡಸರ ನರ್ತನ |
| 6. | ಭಾಗವತ ಮೇಳ | - | ತಮಿಳುನಾಡಿನ ಗಂಡಸರ ನರ್ತನ |
| 7. | ಕೊರವಂಜಿ | - | ತಮಿಳುನಾಡು |
| 8. | ಯಕ್ಷಗಾನ | - | ಕರ್ನಾಟಕ |
| 9. | ಮೋಹಿನಿ ಆಟ | - | ಕೇರಳ |
| 10. | ಒಡಿಸ್ಸಿ | - | ಒರಿಸ್ಸಾ |
| 11. | ಸತ್ರಿಯಾ | - | |
| 12. | ಚಾ | - | |

ಭಾರತದಲ್ಲಿ ಪ್ರಚಲಿತವಿರುವ ಈ ಎಲ್ಲಾ ಶಾಸ್ತ್ರೀಯ ನೃತ್ಯಗಳು ಭಾವ, ರಾಗ, ತಾಳ ಸಂಪನ್ನವಾಗಿರುವುದರಿಂದ ಹಾಗೂ ಭರತ ಮುನಿಯ ಶಾಸ್ತ್ರವನ್ನು ಅವಲಂಬಿಸಿ ಬೆಳೆದು ಬಂದ ನಾಟ್ಯ ಸಂಪ್ರದಾಯವಾದುದರಿಂದ ಎಲ್ಲ ಶಾಸ್ತ್ರೀಯ ನೃತ್ಯಗಳನ್ನೂ 'ಭರತನಾಟ್ಯ'ವೆಂದು ಪರಿಗಣಿಸಿದ್ದಾರೆ. ಆದರೂ ತಮಿಳುನಾಡು ಮತ್ತು ಮೈಸೂರಿನ "ದೇವದಾಸಿ'' ನೃತ್ಯವೇ 'ಭರತನಾಟ್ಯ' ಎಂದು ಕರೆದಿದ್ದಾರೆ.

ರಾಮು : ಭಾರತೀಯ ನೃತ್ಯಗಳಲ್ಲಿ ಎಷ್ಟು ಪಂಗಡಗಳಿವೇ ?

ಶೀಲ : ಸ್ಥೂಲವಾಗಿ ಮೂರು ಪಂಗಡಗಳಾಗಿ ವಿಭಾಗಿಸಬಹುದು.

1. ಆದಿವಾಸೀ ನೃತ್ಯ 2. ಜಾನಪದ ನೃತ್ಯ 3. ಶಾಸ್ತ್ರೀಯ ನೃತ್ಯ

ವಸ್ತುತಃ ಜಾನಪದ ನೃತ್ಯಗಳು ಆದಿವಾಸಿ ನೃತ್ಯಗಳ ಸುಧಾರಿತ ರೂಪಗಳೇ ಆಗಿರುವಂತೆ ಶಾಸ್ತ್ರೀಯ ನೃತ್ಯಗಳು ಜಾನಪದ ನೃತ್ಯಗಳ ಪರಿಷ್ಕೃತ ರೂಪಗಳಾಗಿವೆ.

ಈ ದೇಶದಲ್ಲಿ 120ಕ್ಕೂ ಹೆಚ್ಚು ವಿಧವಾದ ಜಾನಪದ ನೃತ್ಯಗಳಿವೆ ಎಂದು ಈಗ ಅಂದಾಜು ಮಾಡಲಾಗಿದೆ.

ರಾಮು : ಭಾರತೀಯ ಜಾನಪದ ನೃತ್ಯಗಳು ಏನನ್ನು ಸಾರುತ್ತವೆ ?

ಶೀಲ : ಭಾರತದ ಸಂಸ್ಕೃತಿಯ ಅವಿಭಾಜ್ಯ ಅಂಗವಾದ ಜಾನಪದ ನೃತ್ಯಗಳ ಆಕಾರದಲ್ಲಿ, ವೈವಿಧ್ಯ ಮತ್ತು ಭಿನ್ನತೆ ಇದ್ದರೂ ಇವು ತಮ್ಮ ಅಂತರಾಳದಲ್ಲಿ ಹುದುಗಿಸಿರುವ ಸ್ಫೂರ್ತಿ ಹಾಗೂ ಭಾರತೀಯ ಸಂಸ್ಕೃತಿಯ ಮೂಲಭೂತ ಏಕತೆಯನ್ನು ಸಾರುತ್ತವೆ.

ರಾಮು : ಜಾನಪದ ನೃತ್ಯಗಳ ಆಕರ್ಷಣೆ, ತೇಜಸ್ಸಿನ ಅಂತರಾಳವೇನು ?

ಶೀಲ : ಜಾನಪದ ನೃತ್ಯಗಳಲ್ಲಿ ಕಾಣಬರುವ ಕಣ್ಣುಕೋರೈಸುವ ವರ್ಣವೈವಿಧ್ಯ, ಸಾತ್ವಿಕವಾದ ಆನಂದ, ಸರಳತೆ, ವೀರ್ಯ, ಸ್ಫೂರ್ತಿ, ಲಯಬದ್ಧವಾದಗತಿ ಮುಂತಾದವುಗಳಿಂದ, ಈ ನೃತ್ಯಗಳು ಸಾಮಾನ್ಯ ಜನಜೀವನದ ಪ್ರಮುಖ ಅಂಗ, ಆಕರ್ಷಣೆಯಾಗಿ, ಹಬ್ಬ, ಹರಿದಿನ, ಮದುವೆ, ಉತ್ಸವ, ಜನ್ಮೋತ್ಸವ, ಗಣರಾಜ್ಯೋತ್ಸವ, ಸುಗ್ಗಿ, ವರ್ಷಕಾಲಗಳ ಮುಖ್ಯ ಕಾಲಕ್ಷೇಪವಾಗಿ ಇಂದಿಗೂ ಬಾಳಿಬದುಕಿವೆ.

ಡಾ॥ ವ್ಯಾಸರಾಯರ ಸಂಗಡಿಗರು ಶೀಲ ರಾಮುವಿಗೆ ನೀಡಿದ್ದ ಸಂಗೀತದ ಎಲ್ಲಾ ಕಾರ್ಯಕ್ರಮಗಳು ಪಟ್ಟಿಯ ಪ್ರಕಾರ ಈ ಭಾನುವಾರ ಅಂತ್ಯಗೊಂಡವು. ಇದರಿಂದ ಸಂತಸಗೊಂಡ ಡಾ॥ ವ್ಯಾಸರಾಯರ ಸಂಗಡಿಗರು ಸಭಿಕರೆಲ್ಲರಿಗೂ ಔತಣ ಕೂಟ ಏರ್ಪಡಿಸಿ ರಾಮು ಶೀಲರಿಗೆ ಉಡುಗೊರೆ ಸಹ ನೀಡಿ ಅವರ ಸಂಗೀತ ಜ್ಞಾನವನ್ನು ಮೆಚ್ಚಿಕೊಂಡಾಡಿದರು.

ಅದೇ ವೇಳೆಗೆ ಮುಂದಿನವಾರ ಶೃಂಗೇರಿ ಸಮೀಪದ "ಮಧುಧಾಮ ಎಸ್ಟೇಟ್''ನಲ್ಲಿ ನಡೆಯಲ್ಲಿರುವ ತಮ್ಮ ಮಗಳ ಮದುವೆಯ ಶುಭ ಸಮಾರಂಭಕ್ಕೆ ಡಾ॥ ವ್ಯಾಸರಾಯರು ರಾಮು ಶೀಲರನ್ನು ಆಹ್ವಾನಿಸಿ ಲಗ್ನ ಪತ್ರಿಕೆಗಳನ್ನು ನೀಡಿದರು. ಈ ಮದುವೆಗೆ ಅವರಿಬ್ಬರೂ ಖಂಡಿತವಾಗಿ ಬರಬೇಕೆಂದು ಆತ್ಮೀಯವಾಗಿ ವಿನಂತಿಸಿಕೊಂಡರು. ಆಗ ರಾಮು ಮತ್ತು ಶೀಲ ಮದುವೆಗೆ ಖಂಡಿತ ಬರುವುದಾಗಿ ಭರವಸೆ ನೀಡಿದರು. ನಂತರ ರಾಮು ಶೀಲ ಮದುವೆಯ ಜೊತೆಗೆ ಮಲೆನಾಡಿನ ಪ್ರವಾಸ ಕಾರ್ಯಕ್ರಮವನ್ನು ಹಮ್ಮಿಕೊಂಡರು.



# 18.ಕನ್ನಡ ನಾಡಿನ ಭೂ ಸ್ವರ್ಗದಲ್ಲಿರಾಮು - ಶೀಲ

ಕಣಿವೆ ದಾರಿಯಲ್ಲಿ ಡೊಂಕುಡೊಂಕಾಗಿ ನಾಗರಹಾವಿನಂತೆ ಕಾರು ತಿರುಗಿ ತಿರುಗಿ ಹೋಗುತ್ತಿತ್ತು. ದಾರಿಯುದ್ದಕ್ಕೂ ಕಾಫಿ ತೋಟಗಳು, ಅವುಗಳ ನಡುವೆ ಬೆಳೆದ ಕಿತ್ತಲೆ ಗಿಡಗಳು ಜೊತೆಗೆ ಏಲಕ್ಕಿ ಮತ್ತು ಮೆಣಸಿನ ಗಿಡಗಳು ಸೊಂಪಾಗಿ ಬೆಳೆದು ಮಲೆನಾಡಿನ ಹಿರಿಮೆಯನ್ನು ಎತ್ತಿ ತೋರಿಸುತ್ತಿದ್ದುವು. ಹಚ್ಚಹಸುರಿನ ಗಿಡಗಳು ಗುಂಪು ಗುಂಪಾಗಿ ಬೆಳೆದಿರುವುದನ್ನು ದೂರದಿಂದ ನೋಡಿದರೆ ಗಿಡಗಳದ್ದೇ ಗುಡ್ಡವೇನೋ ಬೆಟ್ಟವೇನೋ ಎನ್ನಿಸುತಿತ್ತು. ಅಲ್ಲಲ್ಲೇ ಮೂರು ನಾಲ್ಕು ಮನೆಗಳು ಒಂದಕ್ಕೊಂದು ಸಂಬಂಧವಿಲ್ಲದಂತೆ ಇದ್ದವು. ಏನೇ ಆದರೂ 'ಕರ್ನಾಟಕದ ಕಾಶ್ಮೀರ' ಎಂದು ನಿಸರ್ಗ ಸೌಂದರ್ಯಕ್ಕೆ ಹೆಸರಾದ ಈ ಮಲೆನಾಡಿನ ಸೌಂದರ್ಯ, ತಣ್ಣನೆಯ ಹವಾ ವರ್ಣನಾತೀತವಾಗಿತ್ತು. ಕಾರು ತಿರುವುಗಳಲ್ಲಿ ಹೋದಾಗಲೆಲ್ಲ ರಾಮುವಿನ ಮೇಲೆ ಬಿದ್ದಾಗ ಶೀಲಳಿಗೆ ನಾಚಿಕೆಯಾಗುತ್ತಿತ್ತು. ಇಕ್ಕೆಲದ ಮರಗಳ ನಡುವೆ ಕೊಂಕಿ, ಬಳುಕಿ ಹರಿದು ಹೋಗಿ ಕಣ್ಮರೆಯಾಗುತ್ತಿದ್ದ ರಸ್ತೆಯನ್ನು ಸಲಸಲವೂ ಬಯಕೆಯ ನಯನಗಳಿಂದ ಶೀಲ ನಿರೀಕ್ಷಿಸುತ್ತ ಕುಳಿತಿದ್ದಳು. ಅಂಕುಡೊಂಕಾದ ಈ ರಸ್ತೆಗಳಲ್ಲಿ ಗುಡ್ಡಗಳನ್ನು ಹತ್ತಿ ಇಳಿಯುವುದೇ ಮೋಜು. ಅವರು ಒಬ್ಬರ ಮುಖವನ್ನೊಬ್ಬರು ನೋಡಿದರು. ನೋಟ ಬೆರೆಯಿತು. ಹೃದಯಗಳನ್ನು ಒಲುಮೆ ಬಂಧಿಸುವ ರೀತಿಯೇ ಅದು.

ದಾರಿಯಲ್ಲಿದ್ದ ಹೋಟಲ್‌ನಲ್ಲಿ ಕಾಫಿ ಮುಗಿಸಿದ ಮೇಲೆ ಕಾರು ತಲಕಾವೇರಿಯ ಕಡೆಗೆ ಹೊರಟಿತು. ಮೊದಲು ಸಿಕ್ಕಿದ್ದು ತಗ್ಗಿನ ಪ್ರದೇಶವಾದ ಭಾಗಮಂಡಲ. ಪವಿತ್ರಾತ್ಮರಾದ ಮಹಾಋಷಿಗಳು ತಪಸ್ಸನ್ನು ಆಚರಿಸಿದ ಸ್ಥಳ. ಅಲ್ಲಿ ಕೆಲವು ದೇವಸ್ಥಾನಗಳನ್ನು ದರ್ಶನಮಾಡಿ ಹೊರಟಾಗ ಶೀಲ ಸ್ಥಳ ಮಹಿಮೆಯನ್ನು ರಾಮುವಿಗೆ ವಿವರಿಸ ತೊಡಗಿದಳು.

ಹಿಂದೆ ಈ ಕ್ಷೇತ್ರಕ್ಕೆ ಭಾಗಮಂಡಲವೆಂದೂ, ಷಣ್ಮುಖಸ್ವಾಮಿಯಿಂದ ಅನುಗ್ರಹ ಪಡೆದು ಈ ಭೂಭಾಗವನ್ನು ಕೊಡುಗೆಯಾಗಿ ಸ್ವೀಕರಿಸಿದುದರಿಂದ ಮಲೆನಾಡಿನ ಈ ಭೂಭಾಗಕ್ಕೆ ಕೊಡಗು ಎಂಬ ಹೆಸರು ಬಂದಿದೆ. ಜೊತೆಗೆ ಕಡಿದಾದ ಬೆಟ್ಟಗಳಲ್ಲಿ ದಟ್ಟವಾದ ಅಡವಿ ಪ್ರದೇಶವನ್ನು ಹೊಂದಿರುವುದರಿಂದ ಇದಕ್ಕೆ 'ಕೊಡಗು' ಎಂಬ ಹೆಸರು ಬಂದಿತ್ತೆಂದು ಹೇಳುವವರು ಇದ್ದಾರೆ. ಒಟ್ಟಿನಲ್ಲಿ ಇದು ಕೋಟೆ ಬೆಟ್ಟಗಳ ನಾಡು.ತಲಕಾವೇರಿಯತ್ತ ಮಲೆನಾಡ ಅಡವಿಯಲ್ಲಿ ಪ್ರಕೃತಿ ತಾಯಿಯ ಮಡಿಲಲ್ಲಿ ಕಾರು ವೇಗವಾಗಿ ಹೋಗುತ್ತಿತ್ತು. ಅತ್ತಕಾಡು, ಇತ್ತಕಾಡು, ದಟ್ಟವಾದ ಅರಣ್ಯಶ್ರೇಣಿ. ಎತ್ತರವಾಗಿದ್ದ ಮರಗಳಿದ್ದೆಡೆ ಆಕಾಶವೇ ಒಂದು ನೀಲಿಯ ಓಣಿ! ನಿಸರ್ಗ ಸೌಂದರ್ಯಕ್ಕೆ ರಮಣೀಯತೆಯನ್ನು ಲೇಪಿಸಿದಂತೆ ಇಲ್ಲಿ ಪ್ರಕೃತಿ ಅವರ್ಣನೀಯವಾಗಿ ಕಂಗೊಳಿಸುತ್ತಿತ್ತು. ಕಣ್ಣು ಹರಿಸಿದಲ್ಲೆಲ್ಲ ಈ ಚೆಲುವು ಚೆಲ್ಲುವರಿದು ಹಬ್ಬಿಕೊಂಡಿತು. ಒಟ್ಟಿನಲ್ಲಿ ಈ ಪ್ರಾಂತ್ಯ ಸೃಷ್ಟಿಸೌಂದರ್ಯದಲ್ಲಿ, ಬೆಟ್ಟ, ಗುಡ್ಡ, ಪರ್ವತ, ನದಿ, ಕೊಳಗಳು, ವನ, ಫಲ - ಪುಷ್ಪ ಹಾಗೂ ಪಕ್ಷಿ -ಪ್ರಾಣಿಗಳಿಂದ ತುಂಬಿದ ಆವಾಸಸ್ಥಾನವೋ ಎಂಬಂತೆ ಶೋಭಿಸುತ್ತಿತ್ತು. ಸ್ವರ್ಗ ಎನ್ನುವುದು ಭೂಮಿಯ ಮೇಲೆ ಎಲ್ಲಿಯಾದರೂ ಇದ್ದರೆ ಕಾಶ್ಮೀರವನ್ನು ಬಿಟ್ಟರೆ ಅದು ಮಲೆನಾಡಿನಲ್ಲಿ ಮಾತ್ರ ಎಂದು ನಿಸ್ಸಂದೇಹವಾಗಿ ಹೇಳಬಹುದಿತ್ತು.

ದಾರಿಯಲ್ಲಿ ಶೀಲ ರಾಮುವಿಗೆ ತಲಕಾವೇರಿಯ ಇತಿಹಾಸವನ್ನು ಹೇಳ ತೊಡಗಿದಳು. ಕಾವೇರನೆಂಬ ಬ್ರಾಹ್ಮಣನು ಬ್ರಹ್ಮಗಿರಿಯಲ್ಲಿ ತನಗೆ ಸಂತತಿಯಾಗಬೇಕೆಂಬ ಬಯಕೆಯಿಂದ ಬ್ರಹ್ಮದೇವನನ್ನು ಕುರಿತು ತಪಸ್ಸು ಮಾಡಿದನಂತೆ. ಬ್ರಹ್ಮನು ತನ್ನ ಮಾನಸ ಪುತ್ರಿಯಾದ ಲೋಪಾಮುದ್ರೆಯನ್ನು ಕಾವೇರನಿಗೆ ದತ್ತು ಪುತ್ರಿಯಾಗಿ ಕಾವೇರಿಯೆಂಬ ನಾಮಾಂಕಿತದಿಂದ ಕೊಟ್ಟನಂತೆ ಅವಳು ಆಶ್ರಮದಲ್ಲಿ ಬೆಳೆದು ದೊಡ್ಡವಳಾದಾಗ ಅಗಸ್ತ್ಯ ಮಹಾಋಷಿಗಳು ಅಲ್ಲಿಗೆ ಬಂದು ದೇವ ದೇವತೆಗಳ ಸಮ್ಮುಖದಲ್ಲಿ ವೇದೋಕ್ತವಾಗಿ ವೈಭವದಿಂದ ವಿವಾಹವಾದರಂತೆ. ಒಂದು ದಿನ ಅಗಸ್ತ್ಯರು ಕಾವೇರಿಯನ್ನು ಜಲರೂಪವಾಗಿ ತನ್ನ ಕಮಂಡಲದಲ್ಲಿ ಆಹ್ವಾನಿಸಿ ಹೋಗುತ್ತಿದ್ದಾಗ, ದೈವ ಸಂಕಲ್ಪದ ಮೇರೆಗೆ ಕಾವೇರಿ ಜಲರೂಪವಾಗಿ ಹರಿದು ಭಾಗಮಂಡಲದ ಕಡೆ ಹೊರಟಳಂತೆ, ಅಲ್ಲಿಂದ ಬಲುಂಬುರಿಯಲ್ಲಿ ರಭಸವಾಗಿ ಹರಿಯ ತೊಡಗಿದಾಗ ಕದಂಬ ರಾಜ ಪುತ್ರ ರಾಜ ಚಂದ್ರವರ್ಮನ ಸಂತತಿಗೆ ಸೇರಿದ ಸ್ತ್ರೀಯರ ಸೀರೆ ನೆರಿಗಿಯು ಹಿಂಬಂದಿಗೆ ಸರಿದು ಹೋಯ್ತಂತೆ, ಆಗ ಕಾವೇರಿಯು ತಾನು ನದಿಯಾಗಿ ಹರಿದಿದುರ ಜ್ಞಾಪಕಾರ್ಥವಾಗಿ ಆ ದಿನ ಹಿಂದೆ ಸರಿದ ಸೆರಗು ಮುಂದೆಯೂ ಹೀಗೆಯೇ ನೆರಿಗೆ ಕ್ರಮವಾಗಿ ಸ್ತ್ರೀಯರಿಂದ ನಿತ್ಯಾಚರಣೆಯಲಲ್ಲಿ ಅನುಸರಿಸುವಂತಾಗಲಿ ಎಂದು ಹರಿಸಿದಳಂತೆ. ಅದಕ್ಕೆ ಮಲೆನಾಡಿನ ಈ ಭಾಗದ ಸ್ತ್ರೀಯರು ಸೀರೆಯ ನೆರಿಗೆಯನ್ನು ಈ ರೀತಿ ಕಟ್ಟುವುದು ಎಂದು ಹೇಳಿ ಕಾರನ್ನು ನಿಲ್ಲಿಸಿ ಲಜ್ಜೆಯಿಂದ ರಾಮುವಿನ ಕಡೆ ನೋಡಿದಳು. ಆ ವೇಳೆಗೆ ಕಾರು ತಲಕಾವೇರಿಯನ್ನು ತಲುಪಿತು.

ತಲಕಾವೇರಿಯು ದಟ್ಟಡವಿಯ ವನದೇವತೆಯ ಸೌಂದರ್ಯದಿಂದ ಕಂಗೊಳಿಸುತ್ತಿತ್ತು. ಅದು ಮನಮೋಹಕ ನಿಸರ್ಗರಮಣೀಯ ಸ್ಥಳ. ಗಾಂಭೀರ್ಯ ಸೌಂದರ್ಯಗಳಿಂದ ಕೂಡಿ ನೆಲೆ ನಿಂತಿರುವ ಬ್ರಹ್ಮಗಿರಿ, ಗಜರಾಜಗಿರಿ, ವಾಯುಗಿರಿ, ಅಗ್ನಿಗಿರಿ ಎಂಬ ನಾಲ್ಕು ಬೆಟ್ಟಗಳ ನಡುವಿನ ಕಣಿವೆಯಲ್ಲಿ "ಶ್ರೀ ಕ್ಷೇತ್ರ ಕಾವೇರಿ"ಯು ಕಂಗೊಳಿಸುತ್ತಿತ್ತು. ಪರ್ವತಶ್ರೇಣಿಯ ಇಡೀ ವಾತಾವರಣ ಬ್ರಹ್ಮತತ್ತ್ವದಿಂದ ಸುಸ್ಪಂದಿಸುತ್ತಿದ್ದಂತೆ ಅನುಭವವಾಗುತ್ತಿತ್ತು. ರಾಮು, ಶೀಲ ಮೆಟ್ಟಿಲುಗಳನ್ನು ಹತ್ತುತ್ತ

ಬ್ರಹ್ಮಗಿರಿಯ ನೆತ್ತಿಗೆ ಹೋದರು. ರಮಣೀಯವೂ, ಶಾಂತವೂ ಆದ ಆ ಸ್ಥಳದಲ್ಲಿ ಭೂಮಿಯೂ ಆಕಾಶವೂ ಒಂದು ಹಾಲ್ಗಡಲಂತೆ ಕಿನ್ನರ ಪ್ರಪಂಚದಲ್ಲಿ ಇದ್ದಂತೆ ತೋರಿತು. ಶೀಲ ರಾಮುವಿನ ಹತ್ತಿರ ಸರಿದು ಕುಳಿತಳು.

ಆ ಕಾಡಿನ ಹಿನ್ನೆಲೆಯಲ್ಲಿ, ಆ ವನ್ಯಪಕ್ಷಿ ಕೂಜನದ ಸಮ್ಮೋಹಕತೆಯಲ್ಲಿ, ಆ ಜಾಗವಿಷ್ಟು ಏಕಾಂತವಾಗಿತ್ತುಎಂದರೆ ಹೊಚ್ಚ ಹೊಸ ಗಂಡಹೆಂಡಿರ ಶೃಂಗಾರ ಜೀವನವನ್ನೂ ಪ್ರಣಯ ಚೇಷ್ಟೆಗಳನ್ನು ಉದ್ದೀಪಿಸಿದಷ್ಟು ಉದಾರವಾಗಿತ್ತು. ಅನೇಕ ಮಧುರ ಸುಮಧುರ ಸಾಹಸಮಯ ಪೂರ್ವಾನುಭಗಳಿಗೆ ಕಾರಣವಾಗಿದ್ದ ಆ ತಾಣದ ಮಹಾತ್ಮೆಯಿಂದಲೊ ಏನೊ ಶೀಲಳ ಭಾವಕೋಶ ತುಂಬಿ ಅರಳಿದಂತಾಗಿತ್ತು.

ಶೀಲ ವಿಭ್ರಮೆ, ವಿಲಾಸ, ಬೆಡಗು, ಬಿನ್ನಾಣಗಳ ಮಾಧುರ್ಯವನ್ನು ಸೂಸುವ ಪ್ರೇಮಕಟಾಕ್ಷವನ್ನು ಬೀರಿದಳು. ಅದೇನೋ ಉದ್ವೇಗ, ಅದೇನೋ ಆತುರ, ವಸಂತ ಕಾಲದ ಇಂಚರ ಬಾನಾಡಿಯ ಹಾರಾಟ, ನವಿಲಿನ ನಲಿದಾಟ, ಹೂದುಂಬಿಯ ಚೆಲ್ಲಾಟಗಳು ಕಾರ್ಗತ್ತಲಲ್ಲಿ ಮಿಣುಕು ಹುಳುಗಳಂತೆ ಅವಳ ಸ್ಮೃತಿಪಟಲದಲ್ಲಿ ಹಾದು ಹೋಗುತ್ತಿದ್ದಂತಾಯಿತು. ಶೀಲ ತನ್ನ ದೇಹವನ್ನು ಬಾಗಿಸಿ ಅವನ ಹೃದಯವನ್ನು ಮೀಟುವಂತಹ ಮೃದುವಾದ ಧ್ವನಿಯಲ್ಲಿ "ಈ ಲಕ್ಷ್ಮಿಗೆ ವಿಷ್ಣುವಿನ ಹೃದಯದಲ್ಲಿ ಶಾಶ್ವತ ಸ್ಥಾನವಿರುವುದು ತಾನೇ ?'' ಎಂದ ಕೇಳಿದಳು, "ಮೌನವೇ ವಿಷ್ಣುವಿನ ಪ್ರೇಮದ ಭಾಷೆ, ಪ್ರೇಮಕ್ಕೆ ಯಾವ ಭಾಷೆಯ ಅಗತ್ಯವಿದೆ ? ಕಣ್ಣು ಪ್ರೇಮದ ಭಾಷೆಯನ್ನಾಡುವ ನಾಲಿಗೆಯಲ್ಲವೇ ಲಕ್ಷ್ಮೀ ?'' ಎಂದು ಹೇಳಿ ಅವನು ಅವಳನ್ನು ರಮಿಸುವಂತೆ ಮಾತನಾಡಿದನು. ಅವನ ಮಾತು ಅವಳ ಹೃದಯದಲ್ಲಿ ಹರಿದಾಡಿತು. ಮಾತಿನ ರಸಿಕತೆಯ ಮೋಡಿಯಿಂದ ಸುರಸುಂದರಿಯಂತೆ ಕಾಣುತ್ತಿದ್ದಳು.

ಕೋಮಲ ಕಪೋಲಗಳ ಮೇಲೆ ಪ್ರೇಮದ ಧ್ವನಿಗಳು ಚೆಲ್ಲುತ್ತಿದ್ದವು. ತನ್ನ ಹೃದಯಾಂತರಾಳದಲ್ಲಿ ತೂರಿ ಬರುತ್ತಿದ್ದ ಸಂತಸಕ್ಕೆ ಶೀಲ ಏನೆಂದು ಹೇಳಬೇಕು ? ಆಕೆಯ ಹೃದಯದ ಹದಿನಾರು ಸಾವಿರ ಬಾಗಿಲುಗಳೆಲ್ಲವೂ ತೆರೆದು ಒಂದೊಂದರಿಂದಲೂ ತನ್ನ ಪ್ರಿಯತಮನನ್ನು ಎದುರುನೋಡಿ ಆತನ ಒಲುಮೆಯನ್ನು ಬರಮಾಡಿಕೊಳ್ಳುತ್ತಿದ್ದವು. ಅಲ್ಲಿ ಪ್ರೇಮದ ರಸ ಜೇನೇ ತುಂಬಿತು. ಮಧುರ ಮನಸ್ಸುಗಳ ಮಿಲನದಲ್ಲಿ ಸುಂದರ ಕನಸುಗಳ ಸ್ವರ್ಗಧಾಮವೇ ಸೃಷ್ಟಿಯಾಗಿತ್ತು. ಶತಕೋಟಿ ತಾರೆಗಳೇ ಚಲಿಸಿದವು. ಪ್ರಪೂರ್ಣ ಚಂದ್ರನೇ ಆಗ ಮುಖ ಲೋಕದಲ್ಲಿ ವಿಜೃಂಭಿಸಿದ್ದ. ರಾಗ - ರಸ - ಭಾವಗಳೇ ಮೈಗೂಡಿ ಬಂದಿದ್ದವು. ಸನ್ನಿವೇಶ ರತಿ - ಮನ್ಮಥರ ಮಧುರ ರಸ ಸಮಯವನ್ನು ನೆನಪಿಗೆ ತರುತ್ತಿತ್ತು. ಪ್ರಕೃತಿ ಪುರುಷನ ಸಂಗಮವಾಗುತ್ತಿರುವಂತೆ ತೋರುತ್ತಿತ್ತು. ಶೀಲಳಿಗೆ ತನ್ನ ಜೀವನ ಸಾರ್ಥಕವೆನ್ನಿಸಿತು. ಆಕೆಯ ಹೃದಯ ಈಗ ಸುಮಧುರವಾಗಿ ಹಾಡುತ್ತಿತ್ತು. ತಾನೆಂದೂ ಪ್ರೀತಿ ಪ್ರೇಮಗಳಿಂದ ತುಂಬಿರುವ ಹೊಸ ಸ್ವರ್ಗೀಯ ಪ್ರಪಂಚಕ್ಕೆ ಬಂದಿದ್ದೇನೆಂದುಕೊಂಡಳು.

ತಲಕಾವೇರಿಯ ದರ್ಶನದಿಂದ ಪುಳಕಿತಳಾಗಿ ಆ ಬನದಲ್ಲಿ ಅವರು ಸ್ವಚ್ಛಂದವಾಗಿ ಅಲೆದು ಓಡಾಡಿ, ಕುಣಿದು ಕುಪ್ಪಳಿಸುತ್ತ ವಿನೋದ, ತಮಾಷೆಗೆ ಅನೇಕ ಚಲನಚಿತ್ರಗಳ ಯುಗಳಗೀತೆ (ಡ್ಯೂಯಲ್‌ಸಾಂಗ್ಸ್)ಗಳ ಪದಪುಂಜಗಳ ಪಂಕ್ತಿಗಳನ್ನು ಒಲವಿನಿಂದ ಹಾಡಿ ನಲಿದಾಡತೊಡಗಿದರು.

ರಾಮು : ಕೊಡಗಿನ ಕಾವೇರಿ .... ಕಾವೇರಿ ನೀ ಬೆಡಗಿನ ವೈಯ್ಯಾರಿ ।
ನೀ ಕನ್ನಡ ಕುಲನಾರಿ ... ಗಂಧದ ಸೀಮೆಯ ಸೌಂದರ್ಯಲಹರಿ ।

ಶೀಲ : ಕಾವೇರಿ ತಾಯಿಯೇ ನಮ್ಮವ್ವ । ನಾವು ಹುಟ್ಟಿದರೆ ಕನ್ನಡನಾಡಿನಲ್ಲಿ ಹುಟ್ಟಬೇಕು ।

ರಾಮು : ಕನ್ನಡ ಭಾಷೇನೆ ನನ್ ಜೀವ । ನಾವು ಮೆಟ್ಟಿದರೆ ಕನ್ನಡ ಮಣ್ಣನ್ ಮೆಟ್ಟಬೇಕು ।

ಶೀಲ : ಈ ಮಲೆನಾಡ ಮಣ್ಣು ಅಂದರೆ ಚಿನ್ನಾ । ಇಲ್ಲಿ ಹೆಣ್ಣು ಬಲು ಚೆನ್ನ ।

ರಾಮು : ಈ ಕನ್ನಡ ನಾಡಿನಲ್ಲಿ ಹುಟ್ಟೋನು ರನ್ನ । ಇಲ್ಲಿ ನಡೆ ಅಂದ ನುಡಿ ಚಂದ ।

ಶೀಲ : ಇಲ್ಲಿ ಬಂಡೆಯ ಕೆತ್ತಿದರೆ ಬೇಲೂರು ಶಿಲಾಬಾಲಿಕೆ । ಪ್ರೇಮಕ್ಕೆ ಸ್ವರ್ಗ ಇದು ।

ರಾಮು : ಇಲ್ಲಿ ಬೆಟ್ಟವ ಸುಲಿದರೆ ಬೆಳಗೊಳದ ಗೊಮ್ಮಟೇಶ್ವರ । ಧ್ಯಾನಕ್ಕೆ ಭೂಮಿ ಇದು ।

ಇಬ್ಬರೂ: ಈ ಭೂಮಿಮ್ಯಾಗೆ ಯಾರೋ ತೋಟಗಾರನು । ಮಲೆನಾಡ ಮಾಡಿಹೋಗ್ಯಾನೆ । ಈ ಹಾಲಿನ ಹೊಳೆಯಾಗಿ ಹರಿಯುವ ನೀರಲ್ಲಿ । ಬೆಳ್ಳಿಯ ಹಕ್ಕಿಯಾಗಿ ಹಾರಿಹೋಗಿ ನಾವು ಸಂಚಾರ ಮಾಡುವ ಬಾರ ॥

ಶೀಲ : ಹೂವು ಚೆಲುವಾಗಿ ಅರಳಿ ದುಂಬಿ ಸೆಳೆಯೋದು ಸಹಜ ।

ರಾಮು : ಹೆಣ್ಣು ಸೊಗಸಾಗಿ ಬೆಳೆದು ಗಂಡು ಬಯಸೋದು ಸಹಜ।

ಶೀಲ : ಯಾವುದೋ ನಂಟು। ನಮ್ಮಿಬ್ಬರ ನಡುವೆ ವಿಧಿ ಬೆಸೆದ ಗಂಟು।

ರಾಮು : ಯಾರಿಗೆ ಯಾರುಂಟು।ಈ ಸಂಸಾರ ನೀರಿನ ಮೇಲಿನ ಗುಳ್ಳೆಗಳ ಗಂಟು।

ಶೀಲ : ಮನವ ಕದ್ದ ರಾಜ ಮನಸ್ಸು ಕೊಡೆನು ಎಂದ। ಅನುಮಾನ ತೊರೆದಾಗ ಅನುರಾಗ ಬೆರೆತಾಗ ಜೀವನವೇ ಅಂದ ಚೆಂದ ಮಕರಂದ।

ರಾಮು : ಈ ನನ್ನ ಜೀವನವೂ ಸಂಘರ್ಷವು। ಇದು ನನ್ನ ಜೀವನ ಮಹಾಸಂಗ್ರಾಮವು।

ಶೀಲ : ಬಾಳ ಬಂಗಾರ ನೀನು। ಹಣೆಯ ಸಿಂಗಾರ ನೀನು। ನಿನ್ನ ಕೈಲಾಡೋ ಬೊಂಬೆ ನಾನಯ್ಯ। ಬೇಡೆಂದು ಜರಿದು ನೀ ದೂರ ಹೋದರೂ। ಬಿಡದಂತೆ ನಿನ್ನ ನೆರಳಾಗಿ ಬರುವೆ। ನೂರಾರು ಜನುಮ ನೀ ತಾಳಿ ಬಂದರೂ। ಸತಿಯಾಗಿ ನಿನ್ನ ಜೊತೆಯಲ್ಲೆ ಇರುವೆ।

ರಾಮು : ಏನ್ ಹುಡ್ಗೀರೋ ಇದ್ಯಾಕಿಂಗಾಡ್ತೀರೋ। ಲವ್ವು, ಲವ್ವು ಅಂತ ಕಣ್ಣೀರಿಡ್ತೀರೋ।

ಶೀಲ : ಪ್ರೀತಿ ಮಾಡು ತಪ್ಪೇನಿಲ್ಲ। ಅಂತಾ ಎಲ್ಲ ಹೇಳ್ತಾರಲ್ಲ। ನಾ ಮೆಚ್ಕೊಂಡಿರೋ ನಾ ಹಚ್ಕೊಂಡಿರೋ ದೇವರು ಕಲ್ಲಾ।

ರಾಮು : ಹೂವು ಎಂದೂ ತಾನಾಗಿ ಅರಳಬೇಕಮ್ಮ ಪ್ರೀತಿ ಎಂದೂ ತಾನಾಗಿ ಹುಟ್ಟಬೇಕಮ್ಮ ಎಡವಿದ ಮೇಲೆ ನೋವುಂಟು। ದುಡುಕಿದ ಮೇಲೆ ವ್ಯಥೆಯುಂಟು।

ಶೀಲ : ಲೋಕವೆ ಹೇಳಿದ ಮಾತಿದು। ವೇದದ ಸಾರವೇ ಕೇಳಿದು। ನಾಳಿನ ಚಿಂತೆಯಲಿ ಬಾಳಬಾರದು। ಬಾಳಿನ ಮೂಲವ ಇಲ್ಲಿ ಕೇಳಬಾರದು।

ರಾಮು : ಅಂತಿಂಥ ಗಂಡು ನಾನಲ್ಲ। ನಾನೇ ಬೇರೆ ನನ್ನ ಸ್ಟೈಲೇ ಬೇರೆ।

ಶೀಲ : ಅಂತಿಂಥ ಹೆಣ್ಣು ನಾನಲ್ಲ। ನನ್ನಂಥ ಹೆಣ್ಣು ಭೂಲೋಕದಲ್ಲಿ ಬೇರಿಲ್ಲ।

ಇಬ್ಬರೂ: ಮನವೇ ಸುಖಸಾಧನ ಅನುದಿನ ನಗುತಿರೆ ಆನಂದಜೀವನ ಆತ್ಮ ಅವಲೋಕನ।

ಶೀಲ : ಚೆಲುವ ಒಂದು ಕೇಳ್ತಿನಿ। ಇಲ್ಲ ಅಂದ್ರೆ ಕೊಡ್ತೀಯ। ನಿನ್ನ ಪ್ರೀತಿ ಮಾಡ್ತಿನಿ। ಮನಸ್ಸು ಹೃದಯ ಕೊಡ್ತೀಯಾ।

ರಾಮು : ನಿನ್ನ ಪ್ರೀತಿ ಮಾಡ್ತಿನಿ। ನಿಜವಾದ ಹೆಣ್ಣೆ ಆದ್ರೆ ನೀನು ಗಂಡನ್ನ ಗೆಲ್ಲೆ ನೀನು। ಮನಸ್ಸನ್ನು ಕದಿಯೇ ನೀನು। ಆಮೇಲೆ ಪ್ರೀತಿ ಅಲ್ಲವೇನು।

ಶೀಲ : ಸ್ವಾಭಿಮಾನದ ನಲ್ಲ ಸಾಕು ಸಂಯಮ ಬಲ್ಲೆ।

ರಾಮು : ತುಂಬು ಹರೆಯದ ಹೊಸ ಹೆಣ್ಣೆ। ಒಲೆಯ ಮೇಲಿನ ಹಸಿ ಬೆಣ್ಣೆ।

ಶೀಲ : ಕೀಟಲೆ ಮಾಡುವ ಹೀರೋ ನಿನ್ನಾಟಕೆ ಗೋಲಿ ಮಾರೋ।

ರಾಮು : ದುಡ್ಡಿನ ಜಂಭದ ಕೋಳಿ। ನಿಲ್ಲಿಸೆ ನಿನ್ನ ಚಾಳಿ।

ಶೀಲ : ಈ ಘಾಟಿ ಹೆಣ್ಣಿನ ಮುಂದೆ ಈ ತುಂಟಾಟವು ಬೇಡಪ್ಪ।

ರಾಮು : ಈ ಭರ್ಜರಿ ಗಂಡಿನ ಮುಂದೆ ಬಂಡಾಟವು ಬೇಡಮ್ಮ।

ಶೀಲ : ನೀನೊಂದು ಸಲ ನಕ್ಕು ಎನ್ನನ್ನೂ ನಗಿಸು। ನಿನ್ನ ನಗು ಮೊಗದಲ್ಲಿ ಎನ್ನ ಮೈ ಮರೆಸು। ಜನುಮ ಜನುಮದಲ್ಲಿ ಈ ಜೀವ ನಿನಗೆ ಮುಡುಪಾಗಿದೆ।

ರಾಮು : ನಿಜವ ನುಡಿಯಲೆ ನನ್ನಾಣೆ ನಲ್ಲೆ। ಪ್ರೀತಿಯ ರಂಗು ನೀ ಚೆಲ್ಲಿದೆ। ಪ್ರೇಮದ ಗುಂಗು ನನ್ನಲ್ಲಿ ಮೂಡಿದೆ।

ಶೀಲ : ನನ್ನೆದೆ ಹೊಸ ನಗೆಯ ಕಂಡಿದೆ। ಬಾಳಿಗೆ ಭರವಸೆ ತಂದಿದೆ। ಆಸೆಯು ಅಲೆ ಅಲೆಯಾಗಿ ಕೂಗಿದೆ।

ರಾಮು : ನನ್ನಲ್ಲಿ ಪ್ರೀತಿ ತಂದೋಳು ನೀನೆ।ಇದು ಪ್ರೀತಿಯ ಸ್ಪಂದನ।ಪ್ರೇಮದ ಬಂಧನ।

ಇಬ್ಬರು: ಬದುಕೆಲ್ಲ ಒಂಟಿಯಾಗಿ ಅಲೆದಾಡಿ । ಇನ್ನೆಂದು ಒಂಟಿಯಿಲ್ಲ ನಮ್ಮ ಜೋಡಿ । ಸ್ವರಗಳ ಮಾಧುರ್ಯ ಮೃಗಗಳ ತಣಿಸೆ।ರಾಗದ ಸೌಂದರ್ಯ ಖಗಗಳ ಸೆಣಸೆ।ಲತೆಗಳು ಓಲಾಡಿವೆ ಹೂಗಳು ತೂಗಾಡಿವೆ। ನಮ್ಮ ನಯನದಿ ನಯನ ಬೆರೆತು ಮನ ತಣಿಯಿತು ಮನ ಕುಣಿಯಿತು ಇದು ಎನೂ ಮಾಯವೋ॥

ಶೀಲ : ಈ ಕಣ್ಣಿಗೂ ಗಂಡಿಗೂ ಏನೂ ಸ್ನೇಹವೋ । ಹೊಸ ಸ್ನೇಹದಲ್ಲಿ ನವಜೀವನ ಸವಿಕಂಡೆ । ಹೊಸ ಪ್ರೇಮದಲ್ಲಿ ಹೊಸ ಬಾಳಿನ ಆನಂದ ಕಂಡೆ।

ರಾಮು : ಈ ಹೆಣ್ಣಿಗೂ ಪ್ರೀತಿಗೂ ಏನೂ ಬಂಧನವೋ। ಜೀವನವೇ ಆಸೆಗಳ ಸರಮಾಲೆ। ಯೌವನವೇ ಆದರೊಳಗೆ ಮುತ್ತಿನ ಮಣಿಮಾಲೆ।

ಎದೆಯಲ್ಲಿ ಸಾವಿರ ವೀಣೆಯ ನಾದ ಇದೇ ತಾನೇ ಅನುರಾಗ।

ಶೀಲ : ಇಂಪಾಗಿ ಹಾಡಿದೆ ಪ್ರೇಮದ ಮೃದಂಗ ಇದೇ ತಾನೇ ಶುಭಯೋಗ।

ರಾಮು : ಸುಳಿ ಮಿಂಚೊಂದು ಬಾನಿಂದ ಜಾರಿ ನಿನ್ನ ಮೈಯಲ್ಲಿ ಹರಿದಾಡಿತೇನು।

ಶೀಲ : ನನ್ನ ಉಸಿರಾಟ ಬಿಗಿಯಾಗಿ ಹೋಗಿ ತನು ಅರಳುತ್ತ ಹೂವಾಯಿತೇನು।

ರಾಮು : ಹೆಣ್ಣಿನ ಗಮ್ಮತ್ತು ನಿನಗೇರಿದೆ ಇವತ್ತು।

ಶೀಲ : ಅದೆ ಗಂಡನ್ನು ಮೈ ಮರೆಸುವ ಮ್ಯಾಜಿಕ್ಕು।

ರಾಮು : ಹೃದಯ ಪ್ರೀತಿಯ ಹಾಡನು ಹಾಡಿದೆ।ನಯನ ಪ್ರೇಮದ ಬಯಕೆ ಹೇಳಿದೆ।

ಶೀಲ : ಬಾಳು ಸಂಗಾತಿಯ ಜೊತೆ ಬೇಕೆಂದಿದೆ।ಮನವು ನಲ್ಲನ ಕೂಡಲು ಕಾದಿದೆ।

ರಾಮು : ರಾಗ ತಾಳ ಬೆರೆತ ಹಾಗೆ ಇನ್ನೆಷ್ಟು ಜನುಮ ಈ ಪ್ರೀತಿ ಕೊಡುವೆ।

ಶೀಲ : ಜೀವಭಾವ ಸೇರಿದ ಹಾಗೆ ಈ ನಿನ್ನ ಸ್ನೇಹಕೆ ಮರುಜನ್ಮ ಪಡೆವೆ।

ಇಬ್ಬರೂ: ನಮ್ಮ ಆಸೆ ಅನುರಾಗದ ಆನಂದ ಬೇಕೆಂದಿದೆ।ಸಂಸಾರ ಸತ್ಯ ಅರಿತಾಗ ಬಾಳು ಬಂಗಾರವು ದಾಂಪತ್ಯ ಆದರ್ಶವು॥

ರಾಮು : ಸರಸಿ ಚೆಲುವಿನ ಆರಿಸಿ ಬಂದಳು ನನ್ನರಸಿ।ಕವನ ಕಾವ್ಯ ನಾಟ್ಯ ಗಮಕ ಕಲೆಗಳ ಸಿಂಗರಿಸಿ।ನೋಡಲು ಮೋಹಕ ಕೂಡಲು ಪ್ರೇರಕ ಏನೂ ಮಾಯವೋ।

ಶೀಲ : ಲಲಿತೇ ಶ್ರೀ ಲಲಿತೆ ನೀ ನನ್ನ ಸೌಭಾಗ್ಯಧಾತೆ ದೇವಿ।ಶಂಕರಿ ಶುಭಕರಿ ಸೌಂದರ್ಯ ಲಹರಿ ಕೈ ಹಿಡಿದು ನಡೆಸೆನ್ನ ಸರ್ವೇಶ್ವರಿ।

ಇಬ್ಬರೂ: ಪ್ರೇಮಲೋಕದಿಂದ ಬಂದ ಪ್ರೇಮದ ಸಂದೇಶ ಭೂಮಿಯಲ್ಲಿ ಹಾಡಿ ತಿಳಿಸೋಣ।ಪ್ರೀತಿ ಹಂಚೋಣ ಆನಂದ ಪಡೆಯೋಣ ಪ್ರೇಮದ ರಹಸ್ಯ ಹೇಳೋಣ॥

ಶೀಲ : ಕನ್ನಡಾಂಬೆಗೆ ಜಯವೆನ್ನಿ ಕನ್ನಡ ಕುಲಕೆ ಶುಭವೆನ್ನಿ।

ಕನ್ನಡ ನುಡಿಯ ಬೆಳಗಲು ಒಂದು ಗೂಡಿ ಬನ್ನೀ।

ರಾಮು : ಹಚ್ಚೇವು ಕನ್ನಡದ ದೀಪ ಕರುನಾಡ ದೀಪ ಸಿರಿನುಡಿಯ ದೀಪ।

ಚಿರಕಾಲ ಬೆಳಗಲಿ ಕನ್ನಡದ ದೀಪ।

ಶೀಲ : ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು।

ರಾಮು : ಸಂಗೀತ ಕನ್ನಡ, ಸಾಹಿತ್ಯ ಕನ್ನಡ।

ಸಂಸ್ಕೃತಿ ಕನ್ನಡ, ಜಾಗೃತಿ ಕನ್ನಡ।
ಧಾರ್ಮಿಕ ಚೇತನ ನಿಲುವೆಲ್ಲ ಕನ್ನಡ।
ಎಂದೆಂದು ಮೆರೆಯಲಿ ಈ ನಮ್ಮ ಕನ್ನಡ।

ಇಬ್ಬರೂ: ನಡೆ ಮುಂದಕೆ ನಡೆ ಮುಂದಕೆ ಬಂದಿದೆ ವೇಳೆ।
ಈ ವೈಭವ ವಿಜಯೋನ್ನತಿ ರಾಜೇಶ್ವರಿ ಲೀಲೆ।
ಬೆಳಗಲಿ ಬೆಳಗಲಿ ಸುವರ್ಣ ಕರ್ನಾಟಕ ಸಾಮ್ರಾಜ್ಯ।
ಧ್ವಜ ಪತಾಕೆ ಬೆಳಗಲಿ। ಕನ್ನಡ ಕೀರ್ತಿ ಕಹಳೆ ಎಲ್ಲೆಡೆಯು ಮೊಳಗಲಿ।

ಶೀಲ : ಹಾಡು ಬಾ ಕೋಗಿಲೆ ನಲಿದಾಡು ಬಾರೆ ನವಿಲೆ।
ಸಿರಿಗನ್ನಡಾಂಬೆಯ ಜಯಧ್ವನಿ ಮೊಳಗಲೇ ಹಾಡು ಬಾ ಕೋಗಿಲೆ।
ಕನ್ನಡದ ಕಸ್ತೂರಿ ತಿಲಕವಿಟ್ಟು।
ಹಾಡು ಬಾ ಕೋಗಿಲೆ ನಲಿದಾಡು ಬಾರೆ ನವಿಲೆ।

ರಾಮು : ಕನ್ನಡ ಕಾವ್ಯಗಳ ಮಾಲೆ ತೊಟ್ಟು।
ಕನ್ನಡದ ಕಾಲ್ಗೆಜ್ಜೆ ನಾದ ತೊಟ್ಟು।
ಹೊನ್ನೊಡೆ ಭೂಮಿಯಲಿ ಹೆಜ್ಜೆಯಿಟ್ಟು।
ಹಾಡು ಬಾ ಕೋಗಿಲೆ ನಲಿದಾಡು ಬಾರೆ ನವಿಲೆ।
ಸಿರಿಗನ್ನಡಾಂಬೆಯ ಜಯಧ್ವನಿ ಮೊಳಗಲೇ ಹಾಡು ಬಾ ಕೋಗಿಲೆ।

ಶೀಲ : ಇದೇ ಹೊಸ ಹಾಡು। ಹೃದಯ ಸಾಕ್ಷಿ ಹಾಡು।
ಹೃದಯಾಸೆ ಭಾಷೆ ಈ ಹಾಡು।
ಚಂದ್ರಕಾಂತಿ ಚಿಮ್ಮಿದ ಹಾಡು ಜನ್ನ ಜನ್ನದ ಪುಣ್ಯದ ಹಾಡು
ಕನ್ನಡಾಂಬೆ ಕಲಿಸಿದ ಹಾಡು ಎಂದು ಯಾರು ಮರೆಯದ ಹಾಡು।

ರಾಮು : ಸತ್ಯ ಧರ್ಮಗಳೆರಡು ನಮ್ಮ ಬಾಳಿನ ಕಣ್ಣಾಗಿರಲಿ।
ಶಾಂತಿಯೆ ಉಸಿರಾಗಿರಲಿ। ಸೇವೆಯೆ ಗುರಿಯಾಗಿರಲಿ।

ಶೀಲ : ಒಂದೇ ನಾಡು ಒಂದೇ ಕುಲವು ಒಂದೇ ದೈವವು।
ಒಮ್ಮನದಿಂದ ಎಲ್ಲರು ದುಡಿದರೆ ಜಗವನೆ ಗೆಲ್ಲುವೆವು।

ರಾಮು : ಹುಟ್ಟಿದ್ದರೇ ಕನ್ನಡ ನಾಡಿಲ್ಲಿ ಹುಟ್ಟಬೇಕು।
ಮೆಟ್ಟಿದರೇ ಕನ್ನಡ ಮಣ್ಣನು ಮೆಟ್ಟಬೇಕು।

ಬದುಕಿದು ಜಟಕೀ ಬಂಡೀ। ಇದು ವಿಧಿ ಓಡಿಸುವ ಬಂಡೀ।
ಇದು ವಿಧಿ ಅಲೆದಾಡಿಸುವಾ ಬಂಡೀ। ಇದು ವಿಧಿ ದಡ ಸೇರಿಸುವಾಬಂಡೀ।

ಇಬ್ಬರೂ: ಆ.. ಆಹ... ಆಹ.. ಆಹಹಾ.... ಓಹೋಹೋ... ಒಹೋ.. ನಾವಾಡುವ ನುಡಿಯೇ ಕನ್ನಡ ನುಡಿ ಚಿನ್ನದ ನುಡಿ ಸಿರಿಗನ್ನಡ ನುಡಿ। ನಾವಿರುವಾ ತಾಣವೆ ಗಂಧದ ಗುಡಿ.. ಅಂದದಗುಡಿ.. ಚಂದದಗುಡಿ..।

ಶೀಲ : ಇದು ಯಾರ ತಪಲಿನ ಫಲವೋ ಈ ಕಂಗಳು ಮಾಡಿದ ಪುಣ್ಯವೋ। ನಾವಿರುವಾ ತಾಣವೆ ಗಂಧದಗುಡಿ.. ಅಂದದಗುಡಿ.. ಚಂದದಗುಡಿ.. ।

ರಾಮು : ಕನ್ನಡದ ರವಿ ಮೂಡಿಬಂದ ಮುನ್ನಡೆವ ಬೆಳಕನ್ನು ತಂದಾ।ಕನ್ನಡ ರಾಜ್ಯೋತ್ಸವ ನಮ್ಮ ಕರ್ನಾಟಕ ರಾಜ್ಯೋತ್ಸವ ।

ಶೀಲ : ಶ್ರೀಗಂಧ ಸೌಗಂಧ ತುಂಬಿರುವ ನಾಡಿದು । ಶಿಲ್ಪಕಲೆಯ ಜೀವಂತ ಸ್ವರ್ಗವಾದ ಗೂಡಿದು ।

ರಾಮು : ಕರ್ನಾಟಕ ಸಂಗೀತ ಸಮ್ಮೋಹಿನಿ । ಕನ್ನಡದ ಸಾಹಿತ್ಯ ಸುಧೆ ವಾಹಿನಿ ।

ಕನ್ನಡದ ಕಣ ಕಣವು ಸಂಜೀವಿನಿ । ರಸಜೀವಿ ನೀನಾಗು ಬಾ.ಬಾ.ಬಾ.ಬಾ.

ಶೀಲ : ಜೇನಿನ ಹೊಳೆಯೋ ಹಾಲಿನ ಮಳೆಯೋ ।
ಸುಧೆಯೋ ಕನ್ನಡ ಸವಿ ನುಡಿಯೋ ।

ರಾಮು : ಕವಿ ನುಡಿ ಕೋಗಿಲೆ ಹಾಡಿದ ಹಾಗೆ ।
ಮಲ್ಲಿಗೆ ಹೂಗಳು ಅರಳಿದ ಹಾಗೆ ।
ಸುಮಧುರ ಸುಂದರ ಈ ಕನ್ನಡ ನುಡಿಯೋ ।

ಶೀಲ : ಅಪಾರ ಕೀರ್ತಿಗಳಿಸಿ ಮೆರವ ಭವ್ಯನಾಡಿದು ।
ಕರ್ನಾಟಕ ವಿದುವೇ ನೃತ್ಯ ಶಿಲ್ಪ ಕಲೆಯ ಬೀಡಿದು ।

।ರಾಮು: ಸಿರಿಗನ್ನಡಂ ಗೆಲ್ಗೆ, ಸಿರಿಗನ್ನಡಂ ಬಾಳ್ಗೆ ।
ಬಾ ಕನ್ನಡಿಗ, ಲೋಕ ಸನ್ಮಾನಿತ ಹೊಸ ಚರಿತ್ರೆ ಬರೆಯುವ ।
ಭಾರತಾಂಬೆ ಮುಕುಟಮಣಿ ಕನ್ನಡಿಗನೆ ಎನ್ನಿಸುವ ।

ಇಬ್ಬರೂ: ಜಯ ಭಾರತ ಜನನಿಯ ತನುಜಾತೆ ।
ಜಯಹೇ ಕರ್ನಾಟಕ ಮಾತೆ ।
ಸರ್ವಜನಾಂಗದ ಶಾಂತಿಯ ತೋಟ ।
ಜಯಹೇ ಕರ್ನಾಟಕ ಮಾತೆ ।

ಪ್ರೇಮ ಕರುಣೆಯ ಕಲಿಸಿ ಶಾಂತಿ ಸಹನೆಯ ಬೆಳೆಸಿ ।

ಜಯಹೇ ಕರ್ನಾಟಕ ಮಾತೆ । ಜಯಹೇ ಕರ್ನಾಟಕ ಮಾತೆ ।

।ರಾಮು: ಕನ್ನಡ ಹೊನ್ನುಡಿ ದೇವಿಯನು ನಾ ಪೂಜಿಸುವೆ ಆರಾಧಿಸುವೆ ।
ನಾ ಎಂದು ಬರೆಯುತ ಬಾಳುವೆ ನಾ ಕನ್ನಡ ಡಿಂಡಿಮ ಬಾರಿಸುವೆ

ಶೀಲ : ಸಿರಿಗನ್ನಡದ ಚರಿತೆಯ ನಾವು ಸ್ವರ್ಣಾಕ್ಷರದಲ್ಲಿ ಬರೆಯೋಣ ।
ಕರ್ನಾಟಕ ಮಾತೆಯ ಹರಕೆಯ ಹೊತ್ತು ರಚಿಸುವ ನವಯುಗ ನಿರ್ಮಾಣ।

ಅವರ ಪರಿಹಾಸ್ಯದಿಂದ ಸುತ್ತಣ ಅರಣ್ಯ ಅವರ ನಗೆಯ ಅಲೆಯಿಂದ ನಲಿಯಿತು. ನವಯೌವ್ವನ, ರೂಪುಲಾವಣ್ಯ ಭೂಷಿತರಾಗಿ ಶೋಭಿಸುತ್ತ, ಆ ಉಪವನದ ಸರೋವರದಲ್ಲಿ ರಾಮು ಶೀಲ ಆಡುತ್ತಿದ್ದ ಜಲಕೇಳಿ ರಸಿಕ ಮನವನ್ನು ಭ್ರಾಂತಿಗೊಳಿಸುತ್ತ ಮೋಹಗೊಳಿಸುತ್ತಿತ್ತು.

ಕಣ್ಣುಗಳೋ ಮರಿಮೀನುಗಳೋ, ಮುಖವೋ, ತಾವರೆ ಹೂವೋ, ತ್ರಿವಲಿಗಳೋ ನೀರಿನ ಅಲೆಗಳೋ, ಕುತ್ತಿಗೆಯೋ ದಕ್ಷಿಣಾವರ್ತದ ಶಂಖವೋ, ಕುಚಗಳೋ ತಾವರೆಯ ಮೊಗ್ಗುಗಳೋ, ನಿತಂಬ ಪ್ರದೇಶವೋ ಮರುಳು ದಿಣ್ಣೆಗಳೋ, ಮೈ ಬಣ್ಣವೋ ತಿಳಿನೀರೋ, ಸೊಂಟವೋ ತಾವರೆದಂಟೋ ಎಂಬಂತೆ ಶೀಲ ಜಲಕ್ರೀಡೆ ಆಡುತ್ತಿರಲು ರಾಮು ಸರಸ

ಸಲ್ಲಾಪವನ್ನಾಡುತ್ತ, ಶೃಂಗಾರ ರಸಭಾವಗಳನ್ನು ಪ್ರಕಟಿಸುತ್ತ ವಿನೋದದಿಂದ ಓಕುಳಿಯಾಟವಾಡುತ್ತ, ಶೀಲಳೊಡನೆ ಕಾಲಕಳೆಯ ತೊಡಗಿದನು. ಅವರು ಮೇಲಕ್ಕೆ ಎಸೆದ ತಿಳಿನೀರು ಕೆಳಕ್ಕೆ ತುಂತುರು ತುಂತುರು ಹನಿಗಳಾಗಿ ಬೀಳುತ್ತಿರುವ ನೋಟವು ಹೃದಯಂಗಮವಾಗಿತ್ತು. ನೋಟಕರ ಕಣ್ಮನಗಳನ್ನು ತಣಿಸುತ್ತಿತ್ತು.

ಶೀಲ ಸೌಂದರ್ಯದ ಸೌರಭವನ್ನು ಮೀರಿಸುವ ಅಂಗಾಂಗಗಳನ್ನು ಪಡೆದು ರೂಪ ಸಾಮ್ರಾಜ್ಞಿಯಾಗಿ ಆಗ ತೋರತೊಡಗಿದಳು. ಅವಳ ಪ್ರೀತಿ ಉಕ್ಕುವಂತಿತ್ತು. ಎವೆಯಿಕ್ಕದೆ, ಪ್ರಶಂಸನೀಯ ದೃಷ್ಟಿಯಿಂದ ರಾಮುವನ್ನೇ ನೋಡಿದಳು. "ಇಂಥ ಚೆಲುವರು ಇನ್ನಿದ್ದಾರೆಯೇ ?" ನಾನೆಂಥ ಪುಣ್ಯವಂತೆ ಎಂದು ಕೊಂಡಳು. ಕಾಡಿನ ಹಸಿರು ಅಲ್ಲಲ್ಲಿ ಹೊಂಬಿಸಿಲಿನ ರಂಗಿನಲ್ಲಿ ಸುಮನೋಹರ ವಾಗಿ ಮನಮೋಹಿಸುವಂತಿತ್ತು. ಅಲ್ಲೇ ತೋಟ ಒಂದರ ಮೂಲೆಯಲ್ಲಿ ಇದ್ದ ಒಂದು ಪಾರಿಜಾತದ ಹೂವಿನ ಮರದಲ್ಲಿ ಕೋಟಿ ಕೋಟಿ ಮಿಣುಕು ಹುಳುಗಳು ಕಿಕ್ಕಿರಿದು ಮುತ್ತಿ ಬೆಳಕನ್ನು ಚಿಮ್ಮಿ ಚಿಮ್ಮಿ ಚಿಮುಕಿಸುತ್ತಿದ್ದುದು ಚಿತೋಹಾರಿ ದೃಶ್ಯವಾಗಿತ್ತು! ಅದನ್ನು ನೋಡಿ ನೋಡಿ ರಾಮು ಶೀಲ ಮೈ ಮರೆತು ತಣಿದರು. ಆ ದಿವ್ಯ ವಾತವರಣದ ದೃಶ್ಯದ ಆಸ್ವಾದನೆಯಲ್ಲಿ ಬಹಳ ಹೊತ್ತು ಮಗ್ನರಾದರು. ಹಗಲಿಗೂ, ಇರುಳಿಗೂ ನಡುವಣ ಸಂಧಿಸಮಯದ ಸೌಂದರ್ಯ ಕಾಂತಿ ಮಲೆನಾಡನ್ನು ಅಪ್ಪಿಕೊಂಡಂತಿತ್ತು. ಯಾರ ಪರಿವೆಯೂ ಇಲ್ಲದೆಅವರಿಬ್ಬರೂ ಆಟ, ನೋಟ, ಓಟಗಳಲ್ಲಿ ಸ್ವಚ್ಛಂದವಾಗಿ ವಿಹರಿಸುತ್ತ ಹಾಡತೊಡಗಿದರು.

ಆ ರಾತ್ರಿ ಎಸ್ಟೇಟ್‌ನಲ್ಲೇ ಅವರು ತಂಗಿದ್ದರು. ರಾತ್ರಿಯೆಲ್ಲ ಮಳೆಯೋ ಮಳೆ! "ಭೋ" ರೆಂಬ ಗಾಳಿಯ ಸದ್ದು! ಬೆಳಗ್ಗೆ ಮಂಜು, ಮೋಡ, ಗಾಳಿ, ಛಳಿ ! ಬಾಗಿಲು ತೆರೆದರೆ ಸಾಕು ಮೋಡ ಕೊಠಡಿಯೊಳಗೆ ಬೆಳ್ಳಿಯ ಹೊಗೆಯಂತೆ ನುಗ್ಗುತಿತ್ತು. ಹೊರಗೆ ಬಂದ ರಾಮು ಶೀಲ ಆ ಮಂಜಿನಲ್ಲಿ, ಮೋಡದ ಮಂಜಿನಲ್ಲಿ, ಆ ಚಳಿ ಉಡುರಿನಲ್ಲಿ, ಆ ಗಾಳಿಯಲ್ಲಿ ಗಡಗಡ ನಡುಗಿದರು. ಆಗ ಅವರ ಬಾಯಿಂದ 'ಹಾ ಸೃಷ್ಟಿಯೇ ! ಹಾ ಜೀವನವೇ !' ಎಂಬ ಉದ್ಗಾರದ ಮಾತು ಹೊರಬಂತು.

ಮಾರನೆಯ ದಿನ ಬೆಳಗ್ಗೆ ಕಾರು ಕ್ರೂರ ಮೃಗಗಳಿಂದ ಕೂಡಿದ ಕಾಡು ಕಣಿವೆ ಮಲೆಗಳಲ್ಲಿ ಸಂದಿಗೊಂದಿಗಳಲ್ಲಿ, ಹಳ್ಳ, ಕೊಳ್ಳ ಹೊಳೆಗಳನ್ನು ದಾಟಿ ದುರ್ಗಮವಾದ ದಾರಿಯಲ್ಲಿ ಹಾದು ಶೃಂಗೇರಿಯ ಕಡೆಗೆ ಹೊರಟಿತು. ರಾಮು ಮಲೆಯ ಕಣಿವೆಗಳ ಕಡೆ ಕಣ್ಣು ಹಾಯಿಸಿ, ಕಣ್ಣರಳಿಸಿ ಹಿಗ್ಗಿ ವಿಸ್ಮಯದಿಂದ ನೊರೆ ನೊರೆ ಹಾಲು ನಿಂತ್ಹಾಂಗೆ ನಿಂತ ಕಾವಣ ಕಂಡು ಅದು ಕಾಡನ್ನೆಲ್ಲ ಮುಚ್ಚಿರುವುದನ್ನು ಮೆಚ್ಚಿ "ಏನು ಚೆಂದವಾಗಿ ಕಾಣುತ್ತದೆ ಶೀಲ! ನಾನು ಇಂಥಹ ಪ್ರಕೃತಿ ಸೌಂದರ್ಯದ ಸೊಬಗಿನ ಸೌರಭವನ್ನು ನೋಡೇ ಇರಲಿಲ್ಲ. ಸವಿದೂ ಇರಲಿಲ್ಲ!" ಎಂದು ಅಚ್ಚರಿಗೊಂಡು ಹೇಳಿದನು.

"ಬರೀ ಬೆಂಗಳೂರಿನಲ್ಲೇ ಕೂತುಕೊಂಡಿದ್ರೆ ಇದೆಲ್ಲ ಹೇಗೆ ಕಾಣುತ್ತದೆ. ಎಲ್ಲಿ ಕಾಣುತ್ತದೆ. ನೋಡಿದಿರಾ ನನ್ನ ಜೊತೆ ಬಂದಿದಕ್ಕೆ ಏನೇನ್ನೆಲ್ಲ ಕಾಣುತ್ತದೆ? ಎಂದು ವೈಯಾರದಿಂದ ಕೇಳಿದಳು. ಆ ವೇಳೆಗೆ ಪೂರ್ವ ದಿಂಗತದಿಂದಕೆಂಡದುಂಡೆಯಾಗಿ ಕಿರಣವಿಲ್ಲದ ಸೂರ್ಯ ಮೇಲೇಳುತ್ತಿದ್ದನು. ಆಗ ಕಣಿವೆಗಳನ್ನು ತುಂಬಿದ ಆ ಮಂಜಿನ ನೊರೆ ನೊರೆಯ ಸಮುದ್ರ, ಹಸಿರು ದ್ವೀಪಗಳಂತೆ, ನಡುನಡುವೆ ತಲೆಯೆತ್ತಿದ್ದ ಮಲೆನೆತ್ತಿಗಳು ಮೂಡು ಬಾನಿನಲ್ಲಿ ಸಾಗುತ್ತಿದ್ದ ಆ ಮೋಡಗಳ ವರ್ಣಲೀಲೆ ರಾಮುವಿನ ಹೃದಯದಲ್ಲಿ ಭೂಮಾನುಭೂತಿ ಸಂಚಾರವಾಗುವಂತೆ ಮಾಡಿತು.

ಆಗ ರಾಮು "ಎಂತಹ ದೃಶ್ಯ ಸ್ವರ್ಗವಿರುವುದು ! ಇದನ್ನು ನೋಡಲು ತಕ್ಕ ಕಣ್ಣಿರಬೇಕು" ಎಂದನು.ಆಗಶೀಲ "ನಮಗಾಗಿಯೇ ಪ್ರಕೃತಿ ಮಾತೇ ದೃಶ್ಯ ಸೌಂದರ್ಯಗಳನ್ನು ಮಂಜಿನ ಪರದೆಗಳ ಸಹಾಯದಿಂದ ವಿರಚಿಸಿ ತೋರಿಸುತ್ತಿದ್ದಾಳೆಯೋ ಏನೋ" ಎಂದು ವಿಸ್ಮಯ ಆನಂದದಿಂದ ನಲಿದು ನಕ್ಕು ಹೇಳಿದಳು. "ಇರಬಹುದು" ಎಂದು ಒಪ್ಪಿ ಹೇಳಿದ ರಾಮು.

ದಾರಿಯಲ್ಲಿ ಶೀಲ ರಾಮುವಿಗೆ ಶೃಂಗೇರಿಯ ಇತಿಹಾಸವನ್ನು ಹೇಳ ತೊಡಗಿದಳು. "ಶೃಂಗೇರಿಯ ನಿಜವಾದ ಹೆಸರು ಋಷ್ಯಶೃಂಗಗಿರಿ. ದಿನ ಬಳಕೆಯ ಉಪಯೋಗದಲ್ಲಿ ಶೃಂಗೇರಿಯಾಯಿತಂತೆ. ಹಿಂದೆ ಅಲ್ಲಿ ತಪಸ್ಸು ಮಾಡುತ್ತಿದ್ದ ವಿಭಾಂಡಕನೆಂಬ ಋಷಿಗೆ ಋಷ್ಯಿಶೃಂಗನೆಂಬ ಮಗನಿದ್ದನಂತೆ. ಅವನು ಕಾಡಿನಲ್ಲಿ ಮನುಷ್ಯ ಸಂಪರ್ಕವಿಲ್ಲದೇ ಬೆಳೆದು ಯೌವ್ವನಕ್ಕೆ ಬಂದಿದ್ದರೂ ಒಬ್ಬ ಹೆಂಗಸನ್ನೂ ನೋಡಿರಲಿಲ್ಲವಂತೆ. ಆಗ ಅಂಗ ರಾಜ್ಯದಲ್ಲಿ ಮಳೆ ಇಲ್ಲದೆ ಕ್ಷಾಮಡಾಮರಗಳು ಉಂಟಾದಂತೆ. ಋಷ್ಯಿಶೃಂಗನನ್ನು ಹೇಗಾದರೂ ಮಾಡಿ ಅಂಗರಾಜ್ಯಕ್ಕೆ ಕರೆತಂದರೆ ಆ ರಾಜ್ಯದಲ್ಲಿ ಸುಭಿಕ್ಷವಾಗುವುದೆಂದು ದೊರೆ ಲೋಮಪಾದನಿಗೆ ಅವನ ಗುರುಗಳು ಸಲಹೆ ಮಾಡಿದರಂತೆ. ದೊರೆಯ ಮಗಳು ರಾಜಪುತ್ರಿ ಶಾಂತಾ ಋಷ್ಯಶೃಂಗನನ್ನು ಹೇಗಾದರೂ ಮೋಹಿಸಿ ಕರತರಬೇಕೆಂದು ನಿರ್ಣಯವಾಯಿತಂತೆ. ಒಮ್ಮೆ ಶಾಂತ ಮತ್ತು ಆಕೆಯ ಗೆಳತಿಯರು ತಪೋವನವಾಸಿಗಳಂತೆ ವೇಷಧರಿಸಿ ಋಷಿ ವಿಭಾಂಡಕ ನಿಲ್ಲದ ವೇಳೆಯಲ್ಲಿ ಋಷ್ಯಶೃಂಗನಲ್ಲಿಗೆ ಹೋಗಿ ತಮ್ಮ ಕ್ರೀಡಾ ವಿನೋದಗಳಿಂದ ಅವನ ಗಮನವನ್ನು ಸೆಳೆದರಂತೆ. ಆಗ ಅವನು ಅವರನ್ನು ತನ್ನ ಆಶ್ರಮಕ್ಕೆ ಕರೆದೊಯ್ದು ಎಲ್ಲರಿಗೂ ಆತಿಥ್ಯ ನೀಡಿದನಂತೆ. ಮರುದಿನ ಅವರು ತಮ್ಮ ಆಶ್ರಮಕ್ಕೆ ಬರಬೇಕೆಂದು ಋಷ್ಯಶೃಂಗನನ್ನು ಆಕರ್ಷಣೆಯಿಂದ ಮರುಳುಮಾಡಿ ಮನ ವೊಲಿಸಿದರಂತೆ. ಮಾರನೇಯ ದಿನ ತನ್ನ ಸುಂದರ ಸಹಯಾತ್ರಿಕರೊಂದಿಗೆ ನದಿಯಲ್ಲಿ ಹೂವಿನ ತೆಪ್ಪ

ಏರಿ ಅಂಗ ರಾಜ್ಯಕ್ಕೆ ತೆರಳಿದನಂತೆ. ಅವನು ಅಂಗ ರಾಜ್ಯದಲ್ಲಿ ಕಾಲಿರಿಸಿದೊಡನೆಯೇ ಅಲ್ಲಿ ಮಳೆ ಸುರಿದು ಮರಳಿ ಸುಭಿಕ್ಷ ಉಂಟಾಯಿತಂತೆ. ಸಂತಸಗೊಂಡ ಲೋಮಪಾದ ಮಗಳನ್ನು ಋಷ್ಯಶೃಂಗನಿಗೆ ಕೊಟ್ಟು ಮದುವೆ ಮಾಡಿದನಂತೆ. ಇದೇ ಋಷ್ಯಶೃಂಗ. ಅಯೋಧ್ಯೆಯರಾಜ ದಶರಥನ ಆಚಾರ್ಯನಾಗಿ ಅಶ್ವಮೇಧ ಯಾಗವನ್ನು ನೆರವೇರಿಸಿದನಂತೆ. ಅದರ ಫಲವಾಗಿ ದಶರಥನಿಗೆ ಸಂತಾನ ಪ್ರಾಪ್ತಿಯಾಗಿ ರಾಮಾಯಣಕ್ಕೆ ಕಾರಣವಾಯಿತಂತೆ'' ಎಂದು ಶೀಲ ಸ್ಥಳದ ಇತಿಹಾಸದ ಹಿನ್ನಲೆಯನ್ನು ತಿಳಿಸಿದಳು.

ಆ ನಿಬಿಡಾರಣ್ಯಗಳ ಮಧ್ಯೆ ನೀರವ ನಿರ್ಜನವಾದ ರಸ್ತೆಯಲ್ಲಿ ಕತೆ ಹೇಳುವ ಮತ್ತು ಕತೆ ಕೇಳುವ ಸ್ವಾರಸ್ಯದಲ್ಲಿ ಮಗ್ನರಾಗಿ ಅದುವರೆಗೆ ಕುಳಿತ್ತಿದ್ದ ಶೀಲ ಮತ್ತು ರಾಮು ಸ್ವಲ್ಪ ಹೊತ್ತು ಏನನ್ನೂ ಮಾತನಾಡದೆ ಕಾಡಿನ ದಾರಿಯ ಆಜುಬಾಜುಗಳನ್ನು ವಿಕ್ಷೀಸುತ್ತಿದ್ದರು. ನವಿಲ ಹಿಂಡು ಗುಡ್ಡದ ಇಳಿಜಾರಿನಲ್ಲಿ ಮೇಯುತ್ತಿದ್ದು ಇವರನ್ನು ಕಂಡು ಓಡಿ ಹೋದವು. ಕಾಡೆಲ್ಲಾ ಗಿಲಿಗಿಚ್ಚಿ ಆಡಿಸಿದ ಹಾಗೆ ತರತರದ ಹಕ್ಕಿಗಳು ಒಂದೊಂದರ ಕೂಗು ಒಂದೊಂದು ತರವಾಗಿ ಧ್ವನಿಸುತ್ತಿದ್ದವು. ಆಗ ರಾಮು ಎಷ್ಟು ಹಕ್ಕಿಗಳಿವೆ? ಎಷ್ಟು ಬಣ್ಣಬಣ್ಣದವು ? ಎಂದು ಕೊಂಡನು.

ಕಾಡಿನ ಅಂಚುಗಳಲ್ಲಿ ಗೂಡಿಗೊ ಗೊತ್ತಿಗೊ ಹಾರಿ ಹೋಗುವ ವಿವಿಧ ಹಕ್ಕಿಗಳ ನಾನಾಕಲರವ ಸುಮಧುರವಾಗಿತ್ತು. ಹೋರಿಮಿಗವೊಂದು ತನ್ನ ಕೊಂಬುಗಳನ್ನು ನಿಮಿರಿ ಹಿಂಡಿನ ಜೊತೆ ನೆಗೆದು ಚಿಮ್ಮಿ ಮಿಂಚಿ ಹೋಗುತ್ತಿತ್ತು. ದಾರಿಯ ಪಕ್ಕದಲ್ಲೇ ಇದ್ದ ಒಂದು ಮೊಲ ಎದ್ದು ಬಾಣದ ಮೇಗದಿಂದ ಬಳುಕಿ, ಚಿಮ್ಮಿ ಚಂಗಚಂಗನೆ ಓಡಿಹೋಯಿತು. ಒಂದೆರಡು ಕಡೆ ಹಾವುಗಳು ಹಾದಿಗಡ್ಡ ಓಡಿಹೋದವು. ರಸ್ತೆಯ ಅಂಚಿನಿಂದಲೆ ಆಕಾಶಮುಟ್ಟುವಂತೆ ಬೆಳೆದು ನಿಂತಿದ್ದ ಮರಗಳಿಂದ ದಟ್ಟವಾದ ಆ ಕಗ್ಗಾಡಿಗೆ ಒಂದು ಭವ್ಯ ಭೂಷಣೆಯ ಭಂಗಿ ಒದಗಿತ್ತು. ಸೂರ್ಯನ' ರಶ್ಮಿಗಳು ಆ ಮರಗಳ ಸಂಧಿಯಲ್ಲಿ ತೂರಿ ಬಂದು ಕೋಲು ಕೋಲಾಗಿದ್ದ ದೃಶ್ಯ ಸುಮನೋಹರವಾಗಿತ್ತು. ಅಲ್ಲಲ್ಲಿ ಜೀರುಂಡೆಗಳ ಕರೆಕರೆಯ ಜೀರ್ದನಿ ಆ ನೀರವತೆಯನ್ನು ತನ್ನ ಗರಗಸದಿಂದ ಕೊಯ್ಯುವಂತಾಗಿ ಕಿವಿಗೆ ಕರ್ಕಶವಾಗಿತ್ತು. ಗಾಳಿ ಜೋರಾಗಿ ಬೀಸಿದಾಗ ಗಗನಚುಂಬಿಗಳಾದ ವೃಕ್ಷ ಶಿಖರಗಳು ಬಳ್ಳಿಗಳಂತೆ ಬಳುಕಿ ಭಯಂಕರವಾಗಿ ತಲೆದೂಗಿದುವು. ಬೆಟ್ಟವಿಳಿದು ಕಾರು ತಗ್ಗಿನ ಪ್ರದೇಶಕ್ಕೆ ಬಂದಾಗ ಒಂದು ಕಾಮಳ್ಳಿಯ ಹಿಂಡು ಉಲಿಯುತ್ತಾ ರೆಕ್ಕೆ ಸದ್ದೂ ಕಿವಿಗೆ ಬರುವಷ್ಟು ಸಮೀಪದಲ್ಲಿ ಹಾರಿ ಹೋಯಿತು. ದೂರದಿಂದ ಕೋಗಿಲೆಗಳ ಇಂಚರ ಗಾಳಿಯಲ್ಲಿ ಅಲೆ ಅಲೆಯಾಗಿ ತೇಲಿ ಬರುತ್ತಿತ್ತು. ಮತ್ತೊಂದು ತಾಣದಲ್ಲಿ ಹೂವು ತುಂಬಿ ಅಲಂಕೃತವಾದ ಮರಗಳ ಸಾಲೂ ಸಜೀವ ಸಂತೋಷದಂತಿದ್ದ ವಾಯು ಮಂಡಳದ ವೈಭವ ಪ್ರದರ್ಶಿಸುತ್ತಿದ್ದವು. ಹಕ್ಕಿಗಳು ಬಾನಿನಲ್ಲಿ ತೇಲಾಟವಾಡುತ್ತಿದ್ದುವು. ದಾರಿಯಲ್ಲಿ ಸಿಕ್ಕ ಒಂದು ಪುಟ್ಟ ಹಳ್ಳಿಯಲ್ಲಿ ಏನೇನೋ ತಿನಸುಗಳನ್ನು ತೆಗೆದುಕೊಂಡು ಜಗಿಯುತ್ತಾ ಹೊರಟರು. ಅಲ್ಲಿ ಮನೆಗಳ ಮೇಲೆ ಪುಟ್ಟ ಗುಬ್ಬಚ್ಚಿಗಳು ಚಿಲಿಪಿಲಿ ಗುಟ್ಟುತ್ತಾ ಗುಂಪು ಗುಂಪಾಗಿ ಹಾರಾಡುತ್ತಿದ್ದವು. ದಾರಿಯಲ್ಲಿ ಸಿಕ್ಕ ಕೋಟಿ ಪಕ್ಷಿಗಳ ಮಧುರಗಾನವನ್ನು ಕೇಳಿದರು. ಪುಷ್ಪಾನ್ವಿತ ವೃಕ್ಷಗಳನ್ನು ನೋಡಿ ಮೆಚ್ಚಿದರು. ಆ ದೃಶ್ಯಗಳು ಅದ್ಭುತವಾಗಿದ್ದುವು. ಕಾಡು ಬೆಟ್ಟಗಳು ಮನಮೋಹಕ. ಅಲ್ಲಲ್ಲಿ ಕಾಣಿಸುತ್ತಿದ್ದ ಕಾಡು ಪ್ರಾಣಿಗಳ ಹಿಂಡು ಹಿಂಡುಗಳಲ್ಲಿ ವೈವಿಧ್ಯಮನ್ನು ನೋಡಿ ನೋಡಿ ರೋಮಾಂಚಿತರಾದರು.

ತೆರೆ ಮೇಲೆ ತೆರೆಯೆದ್ದು ಹರಿದಂತೆ ದೂರ ದೂರಕೆ ಹಬ್ಬಿದ ಪರ್ವತ ದಿಗಂತ ಶೈಲಿ, ದೃಷ್ಟಿ ದಿಗಂತದ ಮೇಲ್ಮೆಯ ದಾಟಿ ಮಲೆನಾಡಿನ ಕಾಡು ಕಣಿವೆಯ ಮಂಜಿನ ಲೀಲೆಗಳು ಹೃದ್ಗೋಚರವಾಗುವ ಸ್ವರ್ಗೀಯ ಸೌಂದರ್ಯಸ್ವಾದನೆ ಜೊತೆಗೆ ಹಕ್ಕಿಗಳಿಂಚರವನ್ನಾಲಿಸುತ್ತಾ ಅವರು ಹೊರಟರು. ರಾಮು ಈ ಕಾಡು ಬೆಟ್ಟ ಕಣಿವೆಗಳ ವೈಚಿತ್ರ ಸೌಂದರ್ಯಗಳನ್ನು ನೋಡಿ''ಕಾಡು ಮುತ್ತು ಕೊಡುತ್ತಲಿರುವ ಸೊಬಗಿನ ಬೀಡು'' ಎಂದು ಉದ್ಗರಿಸಿದನು. ದಾರಿ ಉದ್ದಕ್ಕೂ ಅವರ ಸುಸಂಸ್ಕೃತಿಯ ಹಾಸ್ಯ ಪರಿಹಾಸ್ಯದ ನಗೆ, ಮಾತು ಮನಸ್ಸನ್ನು ವಿನೋದಕರವಾಗಿಸಿತು.

ಮಹೋನ್ನತವೂ, ಸುರಸುಂದರವೂ, ಚಿರಶ್ಯಾಮಲವೂ ಆಗಿರುವ ಮಲೆನಾಡಿನ ಪರ್ವತಶ್ರೇಣಿಗಳಲ್ಲಿ, ಹಸುರು ಮುದ್ದೆಮುದ್ದೆಯಾಗಿ ಎದ್ದಿರುವ ಮಲೆಗಳಲ್ಲಿ, ಮಧುರವಾಗಿ ಯಾವುದೋ ಒಂದು ಘನೀಭೂತವಾದ ಸಾಕಾರ ಆನಂದವೇ ಅವರ ಹೃದಯ ಪ್ರವೇಶ ಮಾಡಿ ಇಡೀ ಜಗತ್ತೇ ಬದಲಾಯಿಸಿದಂತೆ ಭಾಸವಾಗುತ್ತಿತ್ತು. ಅವರ ಸಮಸ್ತ ಚೇತನವನ್ನು ಒಂದು ಅಲೌಕಿಕತೆ ಆಕ್ರಮಿಸಿ ಕೊಂಡಿತು. ನಿಸರ್ಗದ ವಿವಿಧ ಮುಖಪಿಗಳಲ್ಲಿ ಸೌಂದರ್ಯ ಸ್ವಾದನೆ ಮಾಡುವ ಶೀಲ ಮತ್ತು ರಾಮುವಿನ ಚೇತನಗಳಿಗೆ ಬ್ರಹ್ಮ ಸಂಸ್ಪರ್ಶವಾಯಿತು.

ಆ ವೇಳೆಗೆ ಕಾರು ಶೃಂಗೇರಿ ತಲುಪಿತು. ಶೃಂಗೇರಿಯ ಆಕರ್ಷಣೆಯ ಸುಮನೋಹರವಾಗಿ ಅಲ್ಲಿಗೆಹೋಗುವುದೆಂದರೆ ಎಲ್ಲರಿಗೂ ಖಷಿ, ಸಂಭ್ರಮ. ರಾಮು ಶೀಲ ಶೃಂಗೇರಿಯ ತುಂಗಾ ನದಿಯಲ್ಲಿ ಸ್ನಾನವನ್ನು ಮುಗಿಸಿ ಶಾರದ ದೇವಸ್ಥಾನಕ್ಕೆ ಹೋಗಿ ದೇವಿಯನ್ನು ಪೂಜಿಸಿ ಪುನೀತರಾದರು. ತುಂಬಗೆಯ ನದಿಯ ದೊಡ್ಡ ದೊಡ್ಡ ಮೀನುಗಳಿಗೆ ಕಳ್ಳೇಪುರಿ ಹಾಕಿ ಸಂತಸಗೊಂಡರು. ನದಿಯ ಎರಡು ದಡಗಳಲ್ಲಿ ದಟ್ಟವಾಗಿ ಬೆಳೆದಿದ್ದ ಅರಣ್ಯ ಶ್ರೇಣಿಗಳ ವೃಕ್ಷ ಮಾಲೆಯ ಸುಂದರ ದೃಶ್ಯ ನೋಡಿ ಮೋಹಗೊಂಡರು. ಮಂಜುಳನಾದದಿಂದ ಮಂದಗಮನೆಯಾಗಿ ಮಂಗಳ ತುಂಗೆ ಪ್ರವಹಿಸುತ್ತಿದ್ದಳು. ಮಿಂಚಿನ ಚಟುವಟಿಕೆಯಿಂದ

ಕೂಡಿದ ಮಿಂಚುಳ್ಳಿಗಳಿಂದ, ವಸಂತೋನ್ಮತ್ತ ಕೋಗಿಲೆಗಳ ಹುಚ್ಚು ಹಿಡಿಸುವ ಚೀರಿಂಚರದಿಂದ ಕೂಡಿದ ನದಿಯ ಮೇಲುಗಡೆಯ ದೇವಾಲಯ ಸ್ವರ್ಗೀಯವಾಗಿ ಶೋಭಿಸುತ್ತಿತ್ತು.

ಹಿಂದೂ ಧರ್ಮಕ್ಕೆ ಪುನರ್ಜನ್ಮ ನೀಡಿದ ರಸಿಕ ತತ್ವಜ್ಞ ಆದಿಶಂಕರಾಚಾರ್ಯರ ಮನಸ್ಸನ್ನು ಪ್ರತಿಬಿಂಬಿಸುತ್ತಿದ್ದ ಶೃಂಗೇರಿಯಈ ಮನೋಹರವಾದ ಕ್ಷೇತ್ರ ನೋಡಿ ಅವರು ಆನಂದದಿಂದ ಪುಳಕಿತರಾದರು.

ದಾರಿಯಲ್ಲಿ ಮುಳುಗುತ್ತಿರುವ ಸೂರ್ಯನ ಮನೋಹರತೆಯನ್ನು ಸವಿಯಲು ಸ್ವಲ್ಪ ಹೊತ್ತು ನಿಂತರು. ಆ ಸುಂದರ ದೃಶ್ಯ ನಿಜವಾಗಿಯೂ ಚೇತೋಹಾರಿಯಾಗಿತ್ತು. ಅತ್ಯದ್ಭುತವಾಗಿತ್ತು. ಸ್ವಲ್ಪ ಹೊತ್ತು ನಿಂತ ಮೇಲೆ ಮಿಣುಕು ಹುಳುಗಳು ಬನದ ಕಗ್ಗತ್ತಲಲ್ಲಿ ಚಿಮಿಕಿಸಿ ಚೆಲ್ಲಿ ಸೂಸುತ್ತಿದ್ದ ಮಿಂಚಿನ ಹನಿಗಳನ್ನು ನೋಡಿ ನೋಡಿ ಮೈಮರೆತರು.

ಅಷ್ಟರಲ್ಲೇ ಇದ್ದಕ್ಕಿಂದ್ದಂತೆ ರಾಮು ಶೀಲ ಇಬ್ಬರಿಗೂ ಮಿಂಚು ಮುಟ್ಟಿದಂತಾಗಿ ಎದೆ ಧಿಗ್ಗೆಂದಿತು. ಕಾಡು ಕಂಪಿಸಿತು. ಹೆಮ್ಮರಗಳು ತರತರನೆ ನಡುಗಿದವು. ಇಡೀ ಕಾಡು ಬೆಟ್ಟ ಗುಡ್ಡ ಭೂಮಿಯೆಲ್ಲ ಕಂಪಿಸುತ್ತಿರುವ ಪ್ರತ್ಯಕ್ಷಕ್ಕಿಂತಲೂ ಪ್ರತ್ಯಕ್ಷವಾದ ಅನುಭವದೊಡನೆ ಕಿವಿ ಬಿರಿಯುವಂತೆ ತರಂಗ ತರಂಗವಾಗಿ ಎದೆ ನಡುಗಿಸುವ ಹೆಬ್ಬುಲಿಯ ಅಬ್ಬರಿಕೆಯ ಆರ್ಭಟ ಕಿವಿಗೆ ಅಪ್ಪಳಿಸತೊಡಗಿತು. ವಾಸ್ತವವಾಗಿಅದು ಎಲ್ಲ ದಿಕ್ಕುಗಳಿಂದಲೂ ಏಕ ಪ್ರಕಾರವಾಗಿ ಹೊಮ್ಮಿ ಬಂದ ಅಪ್ಪಳಿಸುತ್ತಿತ್ತು.ಅವರಿಬ್ಬರ ಇಡೀ ದೇಹ ಭಾವಿಕವಾಗಿ ಭೌತಿಕವಾಗಿ ಅದುರುತ್ತಿತ್ತು. ಮೈ ಬಿಸಿಯೇರಿ ಉಸಿರಾಟ ಸೋದ್ವಿಗ್ನವಾಯಿತು. ಬಾಯಿಗಿಂತಲೂ ಹೆಚ್ಚಾಗಿ ಅವರ ಕಣ್ಣುಗಳೇ ಮಾತಾಡಿಕೊಂಡವು. 'ಹುಲಿಯ ಅಬ್ಬರಿಕೆಗೆ ಕಾಡು ನಡುಗುತ್ತದೆ' ಎಂಬರ್ಥದ ವಾಕ್ಯ ಕಾವ್ಯದ ರೀತಿಯ ಅಲಂಕಾರ ಉಕ್ತಿ ಎಂದು ತಿಳಿದಿದ್ದ ರಾಮು ಶೀಲರಿಗೆ ಈಗ ಅದು ಅಲಂಕಾರದಲ್ಲ.ಅತ್ಯಂತ ಲೋಕ ನಿಷ್ಠವಾದ ವೈಜ್ಞಾನಿಕ ಸತ್ಯದ್ದು ಎಂಬುದು ಅನುಭವಕ್ಕೆ ಬಂದಿತು. ಅಷ್ಟರಲ್ಲೇ ರಸ್ತೆಯ ಪಕ್ಕದ ಪೊದೆಯ ಹತ್ತಿರದಲ್ಲಿ ನಿಂತಿದ್ದ ಹೆಬ್ಬುಲಿಯ ಕಣ್ಣುಗಳು ಗೋಲಿಯ ಗಾತ್ರದ ಮಿಣುಕು ಹುಳುಗಳಂತೆ ಹೊಳೆಯುತ್ತಿರುವುದನ್ನು ನೋಡಿ ಶೀಲ ಪಿಳಪಿಳನೆ ಕಣ್ಣುಬಿಟ್ಟು ಭೀತಿಯಿಂದ ರಾಮುವಿನ ಕಡೆಗೆ ನೋಡಿದಳು. ''ಹೆದರಬೇಡ ಶೀಲ ಕಾರಿನ ವೇಗ ಬೇಗ ಏರಿಸು'' ಎಂದು ಹೇಳಿದ, ಕಾರು ಶರವೇಗದಲ್ಲಿ ಚಲಿಸ ತೊಡಗಿತು. ಅಷ್ಟರಲ್ಲೇ ಢಾಂ ! ಎಂದು ಒಂದು ತೋಟಾ ಕೋವಿಯ ಈಡು ಕಾಡನ್ನೇ ಕಲಕಿಬಿಟ್ಟಿತು. ನಡೆದ ಘಟನೆಯ ಭೀಷಣ ಭವ್ಯಾನುಭವಕ್ಕೆ ಸ್ತಂಭೀಭೂತವಾದಂತೆ ರಾಮು ಶೀಲಕೆಲವು ನಿಮಿಷ ಮೌನವಾಗಿದ್ದರು.

ಆ ರಮಣೀಯವಾದ ವನ ನಿರ್ಝರಿಣಿಯ ಸೃಷ್ಟಿ ಸೌಂದರ್ಯದ ರಸಲೋಕದಲ್ಲಿ ದೂರ ಬಹುದೂರ ವಿವರಿಸತೊಡಗಿದರು. ರಾಮು ಶೀಲರಿಗೆ ಅದೇನೋ ಉಲ್ಲಾಸ ! ಅದೇನೋ ಉತ್ಸಾಹ! ಅದೇನೋ ಉನ್ಮೇಷ ! ಏನೋ ಸ್ನೇಹ ಮಾಧುರ್ಯ ! ಅದೆಷ್ಟೋ ಬಾಂಧವ್ಯ ! ಅವರ ಮೈನಿವಿರುನಿಮಿರಿ ಅಂಗಾಂಗ ಸೆಡೆತು ನಿಂತವು. ಆ ಅರಣ್ಯ ಸನ್ನಿವೇಶದಲ್ಲಿ ಆ ಪ್ರಕೃತಿದಾರಿ ಅಷ್ಟು ಸ್ವಾದನೀಯ. ಅಷ್ಟು ಹಿತವಾಗಿತ್ತು. ಅವರಿಬ್ಬರಿಗೂ ಅದೊಂದು ಭಾಷಾತೀತವಾದ ಭಾವಮಯವಾದ ಮಹಾನಂದದ ದಿವ್ಯ ಮೂಹೂರ್ತವಾಗಿತ್ತು. ಮಹಾಕವಿ ಮಹಾಛಂದಸ್ಸಿನ ನಾದ ವಿನ್ಯಾಸವನ್ನು ಸವಿಯುವಂತೆ ಸವಿದು ಸುಖಿಸುತ್ತಲೂ ಇದ್ದರು.

ಕಾರು ಶೃಂಗೇರಿ ಹತ್ತಿರದ ''ಮಧುಧಾಮ ಎಸ್ಟೇಟ್'' ತಲುಪಿದಾಗ ಸುರಸುಂದರಿಯರೂ, ಸುಸಂಸ್ಕೃತರೂ, ನಯಜೀವಿಗಳೂ ಅತಿಥಿ ಸತ್ಕಾರ ಲೋಲುಪೆಯರೂ ಆದ ಮಲೆನಾಡಿನ ಲಲನೆಯರೂ ರಾಮು ಶೀಲರಿಗೆ ಅದ್ಭುತ ಸ್ವಾಗತ ನೀಡಿದರು.

ಅದ್ದೂರಿಯಿಂದ, ಆಡಂಬರದಿಂದ ಬೆಡಗಿನಿಂದ, ಮದುವೆಯ ಶಾಸ್ತ್ರಗಳು ಮಂಗಳ ವಾದ್ಯಗಳಿಂದ ಪ್ರಾರಂಭವಾದವು. ಪುರೋಹಿತರು ದೊಡ್ಡ ಧ್ವನಿಯಲ್ಲಿ ಮಂತ್ರಗಳನ್ನು ಹೇಳುತ್ತಿದ್ದರು. ಹೆಣ್ಣು ತನ್ನ ಸುಕೋಮಲವಾದ ಕೈಗಳನ್ನೆತ್ತಿ ಹೂಮಾಲೆಯನ್ನು ಗಂಡಿನ ಕೊರಳಿಗೆ ಹಾಕಿದಳು. ಬ್ರಾಹ್ಮಣೋತ್ತಮರು ಉಚ್ಚರಿಸುವ ಮಂತ್ರ ವಿಧಾನಗಳಿಗೆ ಅನುಸಾರವಾಗಿ ಅಗ್ನಿದೇವನ ಸಮ್ಮುಖದಲ್ಲಿ ಹೆಣ್ಣು ಗಂಡಿನ ಕೈ ಹಿಡಿದಳು. ಆಗ ವೈದಿಕ ಸಂಪ್ರದಾಯದಂತೆ ಪಾಣಿಗ್ರಹಣ, ಸಪ್ತಪದಿ, ಲಾಜಾ ಹೋಮ, ಆಜ್ಯಹೋಮ ಮೊದಲಾದ ವಿವಾಹ ಮಹೋತ್ಸವದ ವಿವಿಧ ಕಾರ್ಯಕಲಾಪಗಳು ವೇದ ಘೋಷದೊಂದಿಗೆ ನಡೆದುವು. ಆ ಮಂಗಳ ಮುಹೂರ್ತದಲ್ಲಿ ಮಂಗಳವಾದ್ಯಗಳನ್ನು ಮೃದುವಾಗಿ, ಮನೋಹರವಾಗಿ, ಮಂಜುಳವಾಗಿ ಭಾರಿಸಿ ಧ್ವನಿ ಮಾಡಿದರು. ಮುತ್ತೈದೆಯರು ಮಂಗಳಕರವಾದ ಶೋಭಾನ ಹಾಡುಗಳನ್ನು ಹಾಡುತ್ತ ಮದುವೆಗೆ ಕಳೆಯೇರುವಂತೆ ಮಾಡಿದರು. ಗಂಡು ಹೆಣ್ಣು ರತಿಮನ್ಮಥರಂತೆ ಶೋಭಾಯಮಾನವಾಗಿ ಕಂಗೊಳಿಸುತ್ತಿದ್ದರು. ಮಕ್ಕಳಿಗೆ ಸಂಭ್ರಮವೋ ಸಂಭ್ರಮವಾಗಿ ಹೋಯ್ತು. ಅವರು ಇಂಥ ಅದ್ದೂರಿಯ ಮದುವೆಯನ್ನು ಎಂದೂ ನೋಡಿಯೂ ಇರಲಿಲ್ಲ. ಕೇಳಿಯೂ ಇರಲಿಲ್ಲ. ಈ ಸಂದರ್ಭಕ್ಕಾಗಿ ಹೆಣ್ಣಿನ ಹೃದಯ ಅದೆಷ್ಟು ಕನಸುಗಳನ್ನು ಕಂಡಿತ್ತೋ ? ಅದೆಷ್ಟು ಹಿಗ್ಗಿನಿಂದ ಆ ಮಂಗಳ ಮುಹೂರ್ತಕ್ಕೆ ಕ್ಷಣವೊಂದು

ಯುಗವಾಗಿ ಕಾಯುತ್ತಿತ್ತೋ ? ಅವಳ ಹೃದಯದ ಹಿಗ್ಗನು ಅಳಿಯುವವರಾರು ? ಅವಳ ಹೃದಯದಲ್ಲಿ ಮಿಡಿಯುತ್ತಿರುವ ಭಾವನೆಗಳನ್ನು ಹಿಡಿದಿಡುವಷ್ಟು ಶಬ್ದ ಸಾಮಗ್ರಿಗಳು ಯಾವ ಕವಿ ಸಾಮ್ರಾಟನಲ್ಲಿವೆ ?

ನೆರೆದಿದ್ದವರೆಲ್ಲರೂ ಚಿರೋಟಿ, ಹೋಳಿಗೆ, ಲಾಡು, ಪಾಯಸ, ಚಿತ್ರಾನ್ನ, ಮೊಸರನ್ನ, ಹಣ್ಣುಹಂಪಲು ಇತ್ಯಾದಿ ಭಕ್ಷ ಭೋಜ್ಯಗಳ ಔತಣವನ್ನು ಗಡ್ಡದಾಗಿ ಉಂಡರು. ಆಳುಕಾಳುಗಳೆಲ್ಲ ತಿಂದು ಕುಡಿದು ತಣಿದು ತೇಗುತ್ತಾ ಹೋದರು.

ಮದುವೆಯ ಭೋಜನದಿಂದ ಸಂತೃಪ್ತರಾದ ರಾಮು ಶೀಲ ಕೂಡ ಮದುಮಗಳಿಗೂ, ಮದುಮಗನಿಗೂ ಉಡುಗೊರೆ ನೀಡಿ, ಶುಭ ಹಾರೈಸಿ ಬೆಂಗಳೂರಿಗೆ ಹೊರಟು ನಿಂತಾಗ ಬಹುದೂರದಿಂದ ಬಂದಿದ್ದ ರಾಮು ಶೀಲರಿಗೆ ಡಾ. ವ್ಯಾಸರಾಯರು ಮತ್ತು ಕುಟುಂಬದವರೆಲ್ಲರೂ ಕೂಡಿ ಕೃತಜ್ಞತೆ ವ್ಯಕ್ತಪಡಿಸಿದರು. ಅವರನ್ನು ಇನ್ನೂ ನಾಲ್ಕು ದಿನ ತಮ್ಮ ಎಸ್ಟೇಟ್‌ನಲ್ಲಿ ತಂಗಿದ್ದು ಅತಿಥಿ ಸತ್ಕಾರ ಸ್ವೀಕರಿಸಬೇಕೆಂದು ಒತ್ತಾಯಿಸಿದರು.

ಹಾಸ್ಪಿಟಲ್‌ನಿಂದ ತೆಗೆದುಕೊಂಡ ರಜಾ ನಾಳೆಯೇ ಮುಗಿಯುವುದರಿಂದ ಅನಿವಾರ್ಯವಾಗಿ ತಾವು ಹೋಗಲೇಬೇಕೆಂದು ತಿಳಿಸಿ, ಕಾರಿನಲ್ಲಿ ರಾಮು ಶೀಲ ಕುಳಿತರು, ಗುಡ್‌ಬೈ ಹೇಳಿ ಕಾರು ಬೆಂಗಳೂರಿನತ್ತ ಹೊರಟಾಗ ಡಾ. ವ್ಯಾಸರಾಯರು ರಾಮು ಶೀಲಳ ಕರ್ತವ್ಯ ನಿಷ್ಠೆಯನ್ನು ನೆನೆದು ಈ ರೀತಿ ಉದ್ಗರಿಸಿದರು. **'' Duty is God - ಕರ್ತವ್ಯವೇ ದೇವರು ''.**



## " Duty is God - ಕರ್ತವ್ಯವೇ ದೇವರು ".

# ವಿಶ್ವಮಾನವ ಸಂಸ್ಕೃತಿಯನ್ನು ಬೆಳಗಿಸೋಣ ಬನ್ನಿ

# Reincarnation Research Centre

**To**

**Establish World Peace and Resuscitate Humanity**

**Founder and Director :**

**Dr. C. Rama Swamy**
**M.B.B.S Ph.D. ( U.S.A )**
**General Medical Practitioner**
**Medical Stage Hypnotist**
**Researcher on Reincarnation**
**and Mental Diseases.Karnataka**

**No. 101**
**Shree apartments**
**6/03, Krishna Road Cross**
**Basavanagudi**
**Bangalore – 560 004**
**I N D I A**


**Former Editor : Punarjanma ( English )**
**Sarthakathe ( Kannada ) Monthly Journals**

**Web : http://www.reincarnationresearchcentre.org/**

**ಪ್ರಿಯ ಓದುಗರೇ,**

ನನ್ನ 40 ವರ್ಷಗಳ ಸಾಧನೆ - ಶೋಧನೆ - ಸಂಶೋಧನೆಗಳ ; ಜ್ಞಾನ - ವಿಜ್ಞಾನ - ಸುಜ್ಞಾನ - ದಿವ್ಯಜ್ಞಾನ ಸಾರವನ್ನು, ಧಾರ್ಮಿಕ ಪ್ರಜ್ಞೆ, ಧರ್ಮ ಸಹಿಷ್ಣುತೆಯನ್ನು ಎತ್ತಿಹಿಡಿದಿರುವ ಕನ್ನಡ ಸಂಸ್ಕೃತಿನ್ನು ಬೆಳಗಿಸುವ ಉದ್ದೇಶದಿಂದ ಕಸ್ತೂರಿಯಾದ ಕನ್ನಡ ಭಾಷೆಯಲ್ಲಿ, ಮಕರಂದವಾದ ಕನ್ನಡ ಸಾಹಿತ್ಯದಲ್ಲಿ ಈ ಕೆಳಕಂಡ ಕೃತಿಗಳನ್ನು ಹೃದಯ ತುಂಬಿ ರಚಿಸಿದೆ.

1. ಸಂಗೀತ – ಸಾಕ್ಷರತೆಯ ಭಾಗ - 1 – True Education
2. ಸಾಹಿತ್ಯ – ಸಾಕ್ಷರತೆಯ ಭಾಗ - 2 – True Education
3. ಸಂಸ್ಕೃತಿ – ಸಾಕ್ಷರತೆಯ ಭಾಗ - 3 – True Education
4. ಸಾ ರ್ಥ ಕ ತೆ – ನಿಜಜೀವನ ದರ್ಶನ - ಸಂದರ್ಶನ - ಸಮ್ಮಿಲನ – Right Living
5. ಸಾ ಕ್ಷಾತ್ಕಾ ರ – ದಿವ್ಯ ಆತ್ಮಜ್ಞಾನ ಸಾಕ್ಷಾತ್ಕಾರ – Self Realization
6. ಮನಸ್ಸಿನ ರಹಸ್ಯ ಮತ್ತು ಮನೋರೋಗಗಳ ರಹಸ್ಯ – Secret of Mind & Secret of Mental diseases
7. ಪುನರ್ಜನ್ಮ ಸಂಶೋಧನೆ ಮತ್ತು ಆತ್ಮದ ಅಸ್ತಿತ್ವ – Research on Reincarnation and Survival of Soul
8. ವಿಶ್ವಶಾಂತಿ ಸ್ಥಾಪನೆ ಮತ್ತು ಮಾನವ ಜನಾಂಗದ ಪುನರುತ್ಥಾನ
   Establish World Peace and Resuscitate Humanity




# ವಿಶ್ವಶಾಂತಿ ಸ್ಥಾಪನೆ
# ಮತ್ತು
# ಮಾನವ ಜನಾಂಗದ ಪುನರುತ್ಥಾನ

**ಕತ್ತಲಿನಿಂದ ಬೆಳಕಿನೆಡೆಗೆ,**
**ಅಸತ್ಯದಿಂದ ಸತ್ಯದ ಕಡೆಗೆ**
**ಅಜ್ಞಾನದಿಂದ ಜ್ಞಾನದಕಡೆಗೆ**
**ಮೃತ್ಯುವಿನಿಂದ ಅಮೃತತ್ವದೆಡೆಗೆ**

# ಆಧ್ಯಾತ್ಮಿಕ ಕ್ರಾಂತಿಯಿಂದ ವಿಶ್ವಶಾಂತಿ




ಕೃತಯುಗದಲ್ಲಿ ಧ್ಯಾನ ತಪಸ್ಸುಗಳು ಶ್ರೇಷ್ಠ
ತ್ರೇತಾಯುಗದಲ್ಲಿ ಯಜ್ಞಯಾಗಾದಿಗಳು ಶ್ರೇಷ್ಠ
ದ್ವಾಪರಯುಗದಲ್ಲಿ ಧರ್ಮಯಜ್ಞಾದಿಗಳು ಶ್ರೇಷ್ಠ
ಕಲಿಯುಗದಲ್ಲಿ ಭಗವಂತನ ನಾಮ ಸಂಕೀರ್ತನೆ ಶ್ರೇಷ್ಠ
ಇಂದಿನ
ಈ ಕಲಿಯುಗದ ಅಂತ್ಯ ಮತ್ತು ಕೃತಯುಗದ ಈ ಆರಂಭದಲ್ಲಿ
ಅಂದಿನ
ಕಾಲಗರ್ಭದ ಕೃತಯುಗದ ಸುವರ್ಣ ಕರ್ನಾಟಕದ
ವಿಶ್ವಮಾನವ ಸಂಸ್ಕೃತಿಯ

1. ಸಂಗೀತ – ಸಾಕ್ಷರತೆಯ ಭಾಗ - 1
2. ಸಾಹಿತ್ಯ – ಸಾಕ್ಷರತೆಯ ಭಾಗ - 2
3. ಸಂಸ್ಕೃತಿ – ಸಾಕ್ಷರತೆಯ ಭಾಗ - 3
4. ಸಾ ರ್ಥ ಕ ತೆ – ನಿಜಜೀವನ ದರ್ಶನ - ಸಂದರ್ಶನ - ಸಮ್ಮಿಲನ
5. ಸಾ ಕ್ಷಾತ್ಕಾ ರ – ದಿವ್ಯ ಆತ್ಮಜ್ಞಾನ ಸಾಕ್ಷಾತ್ಕಾರ
6. ಮನಸ್ಸಿನ ರಹಸ್ಯ ಮತ್ತು ಮನೋರೋಗಗಳ ರಹಸ್ಯ
7. ಪುನರ್ಜನ್ಮ ಸಂಶೋಧನೆ ಮತ್ತು ಆತ್ಮದ ಅಸ್ತಿತ್ವ
8. ವಿಶ್ವಶಾಂತಿ ಸ್ಥಾಪನೆ ಮತ್ತು ಮಾನವ ಜನಾಂಗದ ಪುನರುತ್ಥಾನ

ಈ ಕೃತಿಗಳ ಜ್ಞಾನ ಸತ್ಸಂಗ-ಸದ್ವಿಚಾರಗಳ ಧ್ಯಾನ ತಪಸ್ಸುಗಳು ಸರ್ವ ಶ್ರೇಷ್ಠ.
ಏಕೆಂದರೆ
ಜ್ಞಾನ ಸತ್ಸಂಗತ್ವಃ ನಿಸ್ಸಂಗತ್ವಃ
ನಿಸ್ಸಂಗತ್ವಃ ನಿರ್ಮೋಹತ್ವಃ
ನಿರ್ಮೋಹತ್ವಃ ನಿಶ್ಚಲತತ್ವಃ
ನಿಶ್ಚಲತತ್ವಃ ಜೀವನ್ಮುಕ್ತಿಃ

**ಕಾರಣ**

**ಕಲಿಯುಗದ ಮಂತ್ರ-ಯಂತ್ರ-ತಂತ್ರಗಳ**
**ಭಗವಂತನ ನಾಮ ಸಂಕೀರ್ತನೆ**
**ಕೃತಯುಗದಲ್ಲಿ ಜೀವನ್ಮುಕ್ತಿಗೆ ಮಾರ್ಗವಲ್ಲವೆಂದು**
**ವೇದ ಉಪನಿಷತ್‌ಗಳೇ ಸಾರಿ ಹೇಳಿ ನಿಷೇಧಿಸಿವೆ.**

**ಹಾಗೂ**

**ಕಲಿಯುಗದ ಮಂತ್ರ-ಯಂತ್ರ-ತಂತ್ರಗಳ**
**ಮಾರಾಟದ ನಾಮ ಸಂಕೀರ್ತನೆಯಂತೆ**
**ಕೃತಯುಗದಲ್ಲಿ ವಿಶ್ವಮಾನವ ಸಂಸ್ಕೃತಿಯ**
**ಈ ಜ್ಞಾನಗಳ ಸಂದೇಶ - ಪ್ರಸಾರ - ಪ್ರಕಟಣೆಗಳು**
**ಮಾರಾಟದ ವಸ್ತುವಲ್ಲ**
**ಮನುಕುಲಕ್ಕೆ ಉಚಿತವಾಗಿ ದೊರಕಬೇಕು**

**ಕಾರಣ**

**ಜ್ಞಾನ ಎಂದೆಂದು ದಾನವಾಗಿಯೇ ದೊರಕಬೇಕು**
**ಜ್ಞಾನ ಮಾರಾಟದ ವಸ್ತುವಲ್ಲವೆಂಬ ಸತ್ಯವನ್ನೂ**
**ವೇದ ಉಪನಿಷತ್‌ಗಳೇ ಸಾರಿ ಹೇಳಿವೆ.**
**ಆದುದರಿಂದ**
**ನಮ್ಮ ಪುನರ್ಜನ್ಮ ಸಂಶೋಧನ ಕೇಂದ್ರ**
**ದಾನದಾನಗಳಲ್ಲಿ ಶ್ರೇಷ್ಠವಾದ**
**ಜ್ಞಾನ - ವಿಜ್ಞಾನ - ಸುಜ್ಞಾನ - ದಿವ್ಯಜ್ಞಾನ ಸಂದೇಶವನ್ನೂ**

ಮಾನವ ಜನಾಂಗದಲ್ಲಿ ಪ್ರಸರಿಸಲು
ಈ ಸತ್ಕೃತಿಗಳನ್ನು ಈಗ ಪ್ರಕಟಿಸಿ ಉಚಿತವಾಗಿ
ಮನುಕುಲಕ್ಕೆ ನೀಡುತ್ತಿದೆ.

ಈ ಸತ್ಕೃತಿಗಳ ಪಿಡಿಎಫ್ ಗಳನ್ನು
**Web : http://www.reincarnationresearchcentre.org/**
**DOWN LOAD**
ಡೌನ್ ಲೋಡ್ ಮಾಡಿ ಓದಿರಿ.

ನೀವು ಪ್ರೇರೇಪಿತರಾದರೆ
ನಿಮ್ಮ ಹತ್ತು - ನೂರು - ಸಾವಿರ
ಬಂಧು - ಮಿತ್ರ- ಸಹೋದ್ಯೋಗಿಗಳಿಗೆ
ಈ ಪಿಡಿಎಫ್ ಗಳನ್ನು ಈ ಮೇಲ್ ಮಾಡಿದರೆ
**( PDF E-Mail )**

ಆಗ ಅವರಿಗೆ
ಸಂಗೀತ, ಸಾಹಿತ್ಯ, ಸಂಸ್ಕೃತಿ,
ಸಾರ್ಥಕತೆ, ಸಾಕ್ಷಾತ್ಕಾರ,
ಮನಸ್ಸಿನ ರಹಸ್ಯ ಮತ್ತು ಮನೋರೋಗಗಳ ರಹಸ್ಯ,
ಪುನರ್ಜನ್ಮ ಸಂಶೋಧನೆ ಮತ್ತು ಆತ್ಮದ ಅಸ್ತಿತ್ವ,
ವಿಶ್ವಶಾಂತಿ ಸ್ಥಾಪನೆ ಮತ್ತು ಮಾನವ ಜನಾಂಗದ ಪುನರುತ್ಥಾನದ

ಜ್ಞಾನವನ್ನು, ವಿಶ್ವಮಾನವ ಸಂಸ್ಕೃತಿಯನ್ನು, ವಿಶ್ವಶಾಂತಿ ಮತ್ತು
ಮಾನವ ಜನಾಂಗದ ಪುನರುತ್ಥಾನ ದಿವ್ಯಜ್ಞಾನ ಸಂದೇಶವನ್ನೂ
ಪರಿಚಯಿಸಿದ ಪುಣ್ಯಕಾರ್ಯಕ್ಕೆ ನೀವು ಪಾತ್ರರಾಗಿ ಪುನೀತರಾಗುತ್ತೀರಿ.

- ಲೇಖಕರು

# O God !
# Lead this Human society

# From

## Darkness to light

## Ignorance to knowledge

## Untruth to truth,

## Death to immortality

# World War
# to
# World PEACE